# ಅಧ್ಯಾಯ-೧೪

# ಕರ್ನಾಟಕ ಪ್ರವಾಸಿಗರ ಸ್ವರ್ಗ



**ಜಾ**ಗತಿಕ ಮಟ್ಟದಲ್ಲಿ ಭಾರತಕ್ಕೆ ವಿಶಿಷ್ಟ ಸ್ಥಾನವನ್ನು ಕಲ್ಪಿಸುವಲ್ಲಿ ಕರ್ನಾಟಕದ ಕೊಡುಗೆ ಅಪಾರ. ಅದರಲ್ಲೂ ರಾಜಧಾನಿ ಬೆಂಗಳೂರು ಮಾಹಿತಿ ತಂತ್ರಜ್ಞಾನ ರಂಗದಲ್ಲಿ ತನ್ನದೇ ಛಾಪನ್ನು ಮೂಡಿಸಿದೆ. ಹೀಗೆ ಹಲವಾರು ವೈಶಿಷ್ಟ್ಯಗಳ ಆಧಾರವಾಗಿರುವ ಕರ್ನಾಟಕವನ್ನು ಪ್ರವಾಸಿಗರ ಸ್ವರ್ಗವಾಗಿಸುವಲ್ಲಿ ಪ್ರಕೃತಿ ಮತ್ತು ಮನುಷ್ಯ ಪ್ರಯತ್ನಗಳೆರಡೂ ಜೊತೆಗೂಡಿವೆ. ಅದರ ನಿಡಿದಾದ ಸಮುದ್ರತೀರವು ಸಮತಟ್ಟಾದ ಕಿನಾರೆಗಳಿಂದ ಕೂಡಿದೆ. ಎತ್ತರವಾದ ಪಶ್ಚಿಮ ಘಟ್ಟಗಳು ನಿತ್ಯಹರಿದ್ವರ್ಣದ ಕಾಡು ಹಾಗೂ ಪ್ರಾಣಿ ಸಂಪತ್ತನ್ನು ಹೊಂದಿರುವುದಲ್ಲದೆ ಅನೇಕ ನದಿಗಳು ಅಲ್ಲಿ ಹುಟ್ಟಿ ಪೂರ್ವ ಮತ್ತು ಪಶ್ಚಿಮದ ಕಡೆ ಹರಿದು ನೆಲದ ಫಲವತ್ತನ್ನು ಹೆಚ್ಚಿಸಿ ಕೃಷಿ ಉತ್ಪನ್ನದ ಅಭಿವೃದ್ಧಿಗೆ ಕಾರಣವಾಗಿವೆ.

ಈ ನದಿಗಳು ನೋಡುಗರ ಕಣ್ಣಿಗೆ ಹಬ್ಬವನ್ನುಂಟುಮಾಡುವ ಅನೇಕ ಜಲಪಾತಗಳನ್ನು ಉಂಟುಮಾಡಿವೆ. ಸಮತಟ್ಟಾದ ಬಯಲು ಪ್ರದೇಶ ಸುಂದರವಾದ ನದಿದಂಡೆಗಳಿಂದ ಕೂಡಿದ್ದು ಹಸಿರುವಾಸಿಯಾಗಿವೆ. ಕಲ್ಲುಗುಡ್ಡಗಳು ಸಹಜ ಸುಂದರ ಕಲ್ಲಿನ ವನದಂತೆ ಕಂಗೊಳಿಸುತ್ತವೆ. ಘಟ್ಟ ಪ್ರದೇಶವು ವಿವಿಧ ಪ್ರಾಣಿಗಳಿಗೆ ಆಶ್ರಯತಾಣವಾಗಿದೆ.

ಈ ನಾಡಿನ ಶಿಲಾಯುಗ ಸಂಸ್ಕೃತಿಯನ್ನು ಬಿಂಬಿಸುವ ಅಸಂಖ್ಯಾತ ನೆಲೆಗಳು ರಾಜ್ಯದುದ್ದಗಲಕ್ಕೂ ಕಾಣಸಿಗುತ್ತವೆ. ಈ ನಾಡನ್ನಾಳಿದ ಶಾತವಾಹನರು, ಕದಂಬರು, ಗಂಗರು, ಬಾದಾಮಿ ಚಾಲುಕ್ಯರು, ಆಲುಪರು, ರಾಷ್ಟ್ರಕೂಟರು, ಕಲ್ಯಾಣದ ಚಾಳುಕ್ಯರು, ಹೊಯ್ಸಳರು, ಸೇವುಣರು, ವಿಜಯನಗರದ ಅರಸರು, ಕಲಬುರ್ಗಿ ಮತ್ತು ಬೀದರಿನ ಬಹಮನಿಯರು, ವಿಜಾಪುರ (ವಿಜಯಪುರ)ದ ಆದಿಲ್‌ಷಾಹಿಗಳು, ಬೀದರಿನ ಬರೀದ್‌ಷಾಹಿಗಳು, ಮೈಸೂರಿನ ಒಡೆಯರು, ಕೆಳದಿ ಅರಸರು, ಚಿತ್ರದುರ್ಗ, ಮಾಗಡಿ, ಸುರಪುರ ಮಧುಗಿರಿ, ಬಿಜ್ಜಾವರ, ಗುಮ್ಮನಾಯಕನಹಳ್ಳಿ ಮೊದಲಾದ ಪಾಳೆಪಟ್ಟುಗಳನ್ನಾಳಿದ ಪಾಳೆಯಗಾರರು, ಬೆರಗುಮೂಡಿಸುವ ಕೋಟೆಕೊತ್ತಲಗಳು, ಕುಸುರಿಕೆಲಸಗಳಿಂದ ಕೂಡಿದ ವಾಸ್ತುಶಿಲ್ಪಗಳು, ಭವ್ಯ ಮಸೀದಿಗಳು ಹಾಗೂ ಹಿಂದೂ-ಮುಸ್ಲಿಂ ಶೈಲಿಯ ಸ್ಮಾರಕಗಳನ್ನು ನಿರ್ಮಿಸಿದ್ದಾರೆ. ಪೋರ್ಚುಗೀಸ್ ಮತ್ತು ಇಂಗ್ಲೀಷರ ಆಗಮನ, ಯೂರೋಪಿನ ಪುನರುತ್ಥಾನ ವಾಸ್ತುಶಿಲ್ಪವನ್ನು ಪರಿಚಯಿಸುವುದರ ಜೊತೆಗೆ ಆಕರ್ಷಕ ಚರ್ಚ್‌ಗಳಲ್ಲದೆ ಮನ ಸೆಳೆಯುವ ಸಾರ್ವಜನಿಕ ಕಟ್ಟಡಗಳ ನಿರ್ಮಾಣಕ್ಕೂ ಕಾರಣವಾಯಿತು. ರಾಷ್ಟ್ರೀಯ ಉದ್ಯಾನ, ವನ್ಯಜೀವಿ ಪಕ್ಷಿಧಾಮಗಳಲ್ಲಿ ಪ್ರೇಕ್ಷಕರಿಗೆ ಆನೆ, ಹುಲಿ, ಕಾಡುಕೋಣ, ಜಿಂಕೆ, ಹಂಸ, ನವಿಲು ಮೊದಲಾದ ಕಾಡುಪ್ರಾಣಿಗಳು ಸಹಜರೀತಿಯಲ್ಲಿ ನೋಡಲು ಸಿಗುತ್ತವೆ. ಈ ರಾಷ್ಟ್ರೀಯ ಉದ್ಯಾನಗಳು ಸಂದರ್ಶಕರಿಗೆ ಎತ್ತರವಾದ ಮರ, ಪೊದೆ, ಬಳ್ಳಿಗಳೇ ಮೊದಲಾದ ಸಮೃದ್ಧ ಸಸ್ಯಸಂಪತ್ತನ್ನು ಆದರಪೂರ್ವಕವಾಗಿ ಪರಿಚಯಿಸುತ್ತವೆ. ಕರ್ನಾಟಕವು ಶ್ರೀಗಂಧದ ಸುಗಂಧಯುಕ್ತ ವೃಕ್ಷಗಳಿಗೆ, ವಿಶಾಲವಾದ ತಣ್ಣೆಳಲನ್ನು ನೀಡುವ ಅರಳಿ, ಆಲ, ಅಶ್ವತ್ಥ ಮೊದಲಾದ ಮರಗಳಿಗೆ ಪ್ರಸಿದ್ಧವಾಗಿದೆ.

ಆಧ್ಯಾತ್ಮಿಕ ಆಸಕ್ತಿ ಇರುವವರಿಗೆ ಸ್ಫೂರ್ತಿ ಪಡೆಯಲು ಅವಶ್ಯವಾದ ಮನಃಶಾಂತಿ ನೀಡುವಂತಹ ವಿವಿಧ ಧರ್ಮಕ್ಕೆ ಸೇರಿದ ಸಾಧು ಮುಂತಾದ ಸಂತರು ಇಲ್ಲಿರುವರು. ಹಾಗೆಯೇ ಹಿಂದೂ, ಮುಸ್ಲಿಂ, ಕ್ರೈಸ್ತ, ಜೈನ ಅಥವಾ ವೀರಶೈವ ಧಾರ್ಮಿಕ ಗುರುಗಳ ಸಮಾಧಿಗಳಿವೆ. ಯಾತ್ರಿಕರಿಗೆ ಆಧ್ಯಾತ್ಮಿಕ ಪರಿಸರವನ್ನು ಈ ಸಮಾಧಿ-ಮಂದಿರಗಳು ಸೃಷ್ಟಿಸಿದ್ದು ಅವಶ್ಯಕವಾದ ಮನಃಶಾಂತಿಯನ್ನೂ ನೀಡುತ್ತವೆ.

**ಜಲಪಾತ:** ಕರ್ನಾಟಕವು ಅನೇಕ ಜಲಪಾತಗಳನ್ನು ಹೊಂದಿದ್ದು, ಭಾರತದ ಅತಿ ಎತ್ತರವಾದ ಜಲಪಾತವು ಶಿವಮೊಗ್ಗ ಜಿಲ್ಲೆ, ಸಾಗರ ತಾಲೂಕಿನ ಜೋಗದಲ್ಲಿದೆ. ಅಲ್ಲಿ ಶರಾವತಿ ನದಿಯು ಸುಮಾರು ೯೦೦ ಅಡಿ ಎತ್ತರದಿಂದ ನಾಲ್ಕು ಸೀಳುಗಳಾಗಿ ಧುಮ್ಮಿಕ್ಕುತ್ತಾ ಮರೆಯಲಾಗದ ಚೆಲುವನ್ನು ಮೂಡಿಸುವ ಮೂಲಕ ಅವಿಸ್ಮರಣೀಯ ಅನುಭವವನ್ನು ನೀಡುತ್ತದೆ. ಜೋಗು ಜುಲೈನಿಂದ ಅಕ್ಟೋಬರ್‌ವರೆಗೆ (ಮಳೆಗಾಲದಲ್ಲಿ) ವಿಶೇಷವಾಗಿ ಪ್ರವಾಸಿಗರನ್ನು ಸೂಜಿಗಲ್ಲಿನಂತೆ ಆಕರ್ಷಿಸುತ್ತದೆ.

ಕಾವೇರಿನದಿಯು ಮಂಡ್ಯ ಜಿಲ್ಲೆಯ ಶಿವಸಮುದ್ರದಲ್ಲಿ ಒಂದು ಕಿಲೋಮೀಟರ್ ಅಂತರದಲ್ಲಿ ಅವಳಿ ಪಾತವಾಗಿ ಧುಮುಕುತ್ತಿದ್ದು, ಗಗನಚುಕ್ಕಿ ಮತ್ತು ಭರಚುಕ್ಕಿ ಜಲಪಾತ ಎಂದು ಕರೆಸಿಕೊಂಡಿವೆ.

ಈ ನೀರನ್ನು ೧೯೦೨ ರಿಂದಲೇ ವಿದ್ಯುತ್ ಉತ್ಪಾದಿಸಲು ಬಳಸಲಾಗುತ್ತಿದೆ. ಶಿವಸಮುದ್ರದ ವಿದ್ಯುದಾಗಾರವಿರುವ ಬ್ಲಫ್‌ನಿಂದ ೧೪ ಕಿಲೋ ಮೀಟರ್ ದೂರದಲ್ಲಿ ಶಿಂಷಾ ನದಿಯ ಜಲಪಾತವಿದ್ದು, ಈ ನದಿಯು ಕಾವೇರಿಯ ಉಪನದಿಯಾಗಿದೆ. ಸರ್ವಋತು ಗಿರಿಧಾಮವೆನಿಸಿದ ಕೊಡಗು ಜಿಲ್ಲೆಯ ಜಿಲ್ಲಾಕೇಂದ್ರವಾದ ಮಡಿಕೇರಿಯ ಸಮೀಪ (ಐದು ಕಿ.ಮೀ) ಸುಂದರವಾದ ಅಬ್ಬಿ ಜಲಪಾತವಿದೆ. ವೀರರಾಜಪೇಟೆಯಿಂದ ೪೫ ಕಿಲೋಮೀಟರ್ ದೂರದಲ್ಲಿ (ಇರ್ಪು) ಜಲಪಾತವಿದ್ದು, ಬಳಿಯಲ್ಲೇ ಪ್ರಾಚೀನ ರಾಮೇಶ್ವರ ದೇವಸ್ಥಾನವಿದೆ. ಚಿಕ್ಕಮಗಳೂರು ಜಿಲ್ಲೆಯಲ್ಲೂ ಅನೇಕ ಜಲಪಾತಗಳಿವೆ. ಕೆಮ್ಮಣ್ಣುಗುಂಡಿ ಗಿರಿಧಾಮದಲ್ಲಿ ಭದ್ರಾನದಿಯನ್ನು ಸೇರುವ ಹಳ್ಳದಿಂದ ಧುಮ್ಮಿಕ್ಕುವ 'ಹೆಬ್ಬೆ' ಜಲಪಾತವು ೫೦೦ ಅಡಿ ಎತ್ತರದಿಂದ ಕೆಳಕ್ಕೆ ಧುಮುಕುತ್ತದೆ. ಪ್ರಸಿದ್ಧ ಯಾತ್ರಾಸ್ಥಳವಾದ ಬಾಬಾಬುಡನ್ ಗಿರಿಯ ದತ್ತಾತ್ರೇಯ ಪೀಠದ ಬಳಿ ಇರುವ ಜಲಪಾತವೇ ಮಾಣಿಕ್ಯಧಾರಾ. ಇಲ್ಲಿ ನೀರು ಹನಿ ಹನಿಯಾಗಿ ಸುರಿಯುತ್ತಿದ್ದು ಪ್ರವಾಸಿಗರಿಗೆ ಮರೆಯಲಾಗದ ತುಂತುರು ಸ್ನಾನದ ಸವಿಯನ್ನು ಒದಗಿಸುತ್ತದೆ. ಬೆಡ್ತಿಹೊಳೆಯು ರೂಪಿಸಿರುವ ಮಾಗೋಡು ಜಲಪಾತವನ್ನು ಸಿದ್ದಾಪುರ ಹಾಗೂ ಯಲ್ಲಾಪುರಗಳಿಂದ ತಲುಪಬಹುದಾಗಿದೆ. ಕಲಬುರಗಿ ಜಿಲ್ಲೆಯ ಸುರಪುರ ತಾಲೂಕಿನಲ್ಲಿರುವ ಛಾಯಾಭಗವತಿ ಜಲಪಾತ ನಾರಾಯಣಪುರ ಅಣೆಕಟ್ಟೆಯಿಂದ ಸುಮಾರು (ಐದು ಕಿ.ಮೀ) ಗಮನಾರ್ಹವಾಗಿದೆ. ಇದೇ ಚಿಂಚೋಳಿ ಸಮೀಪದ ಎತ್ತಿಪೋತ ಜಲಪಾತ, ಯಾದಗಿರಿ ತಾಲೂಕಿನ ಗುರುಮಿಡಕಲ್ ಬಳಿಯ ಜಲಪಾತ, ಬಾದಾಮಿ ಬಳಿಯ ಕೋಟಿಕಲ್ ಜಲಪಾತ, ಕೊಪ್ಪಳ ಜಿಲ್ಲೆಯಲ್ಲಿರುವ ಕಬ್ಬರಗಿ ಜಲಪಾತ ಮುಂತಾದವು ಉಲ್ಲೇಖಾರ್ಹ.

ತರೀಕೆರೆ ತಾಲೂಕಿನ ಕಲ್ಲತ್ತಿಪುರದ ಕಲ್ಲತ್ತಿ ಜಲಪಾತವು ಕೆಮ್ಮಣ್ಣುಗುಂಡಿಗೆ ೧೦ ಕಿ.ಮೀ. ದೂರದಲ್ಲಿದೆ. ಇಲ್ಲಿ ನೀರು ಸುಮಾರು ४೦೦ ಅಡಿ ಎತ್ತರದಿಂದ ಬೀಳುತ್ತದೆ. ಇದರ ಹತ್ತಿರದಲ್ಲೇ ವೀರಭದ್ರನ ಪ್ರಾಚೀನ ದೇವಾಲಯವಿದೆ. ಮೈಸೂರು ಜಿಲ್ಲೆಯಲ್ಲಿ ಸುಂದರವಾದ ಚುಂಚನಕಟ್ಟೆ ಜಲಪಾತವಿದ್ದು, ಅಲ್ಲೇ ಶ್ರೀರಾಮನ ದೇವಸ್ಥಾನವಿದೆ. ಉತ್ತರ ಕನ್ನಡ ಜಿಲ್ಲೆಯ ಪ್ರಸಿದ್ಧ ಉಂಚಳ್ಳಿ ಜಲಪಾತವು (ಲುಷಿಂಗ್‌ಟನ್) ೪೫೦ ಅಡಿ ಎತ್ತರದಿಂದ ಧುಮುಕುತ್ತದೆ. ಅಘನಾಶಿನೀ ನದಿಯ ಈ ನೀರ್ಬೀಳು ಯಲ್ಲಾಪುರದಿಂದ ೧೯ ಕಿ.ಮೀ ದೂರದಲ್ಲಿದೆ. 'ಕೆಪ್ಪಜೋಗ' ಎಂದು ಕರೆಯಲ್ಪಡುವ ಇದನ್ನು ೧೨ ಕಿ.ಮೀ ದೂರದಲ್ಲಿರುವ ಸಿದ್ಧಾಪುರದಿಂದ ಕೊಲಶಿರಸಿ, ಹೆಗ್ಗರಣೆ ಉಂಚಳ್ಳಿ ಮಾರ್ಗವಾಗಿಯೂ ತಲುಪಬಹುದಾಗಿದೆ. ಜಲಪಾತದ ಎದುರಲ್ಲೇ ಲೂಷಿಂಗ್‌ಟನ್ ಅತಿಥಿ ಗೃಹದ ಕುರುಹನ್ನು ಕಾಣಬಹುದಾಗಿದೆ. ಬೆಳಗಾವಿ ಜಿಲ್ಲೆಯ ಗೋಕಾಕಿನಿಂದ ಎಂಟು ಕಿ.ಮೀ. ದೂರದಲ್ಲಿ ಪ್ರಸಿದ್ಧ ಗೋಕಾಕ್ ಜಲಪಾತವಿದೆ. ಇದು ೧೭೦ ಅಡಿ ಎತ್ತರದಿಂದ ಧುಮುಕುತ್ತಿದ್ದು, ವಿಸ್ತಾರ ಮತ್ತು ನಿಸರ್ಗ ರಮಣೀಯ ಸಾದೃಶ್ಯಗಳಿಂದಾಗಿ ಇದನ್ನು 'ಮಿನಿ ನಯಾಗರಾ' ಎಂದೂ ಕರೆಯಲಾಗುತ್ತದೆ. ಈ ಜಲಪಾತದಿಂದ ೧೮೮೭ ರಿಂದಲೇ ಜಲವಿದ್ಯುತ್ತನ್ನು ಉತ್ಪಾದಿಸಲಾಗುತ್ತಿದ್ದು, ಸಮೀಪವಿರುವ ಹತ್ತಿಗಿರಣಿಗೆ ವಿದ್ಯುತ್ ಒದಗಿಸಲಾಗುತ್ತಿದೆ. ಗೋಕಾಕ್ ಜಲಪಾತದ ಎರಡೂ ದಡಗಳಲ್ಲಿ ಸುಂದರ ವಾದ ಅನೇಕ ಪ್ರಾಚೀನ ದೇವಸ್ಥಾನಗಳಿದ್ದು, ಘಟಪ್ರಭಾ ನದಿಗೆ ಅಡ್ಡಲಾಗಿ ತೂಗುಸೇತುವೆಯಿದೆ. ಗೋಕಾಕ್ ಜಲಪಾತವು ಜುಲೈ-ಆಗಸ್ಟ್‌ಗಳಲ್ಲಿ ಪೂರ್ಣ ಪ್ರಮಾಣದಲ್ಲಿ ಧುಮುಕುತ್ತದೆ. ಖಾನಾಪುರ ತಾಲೂಕಿನ ದಟ್ಟಡವಿ ಜಂಬೋಟಿಯಲ್ಲಿ ಮಹದಾಯಿ ನದಿಯು ವಜ್ರಪೋಹ ಜಲಪಾತವನ್ನುಂಟು ಮಾಡಿದ್ದು, ನದಿಯು ಮುಂದೆ ಗೋವಾದತ್ತ ಸಾಗುತ್ತದೆ. ಅಲ್ಲಿ ಇದನ್ನು ಮಾಂಡೋವಿ ಎಂದು ಕರೆಯುತ್ತಾರೆ. ಅಲ್ಲಿಯ ದೂಧ್‌ಸಾಗರ್ ಜಲಪಾತ ರೋಮಾಂಚನವನ್ನುಂಟು ಮಾಡುತ್ತದೆ.

ಬೆಂಗಳೂರಿನಿಂದ ೩೦ ಕಿ.ಮೀ. ದೂರದಲ್ಲಿ ಆನೇಕಲ್ಲಿಗೆ ಅನತಿ ದೂರದಲ್ಲಿ ಮುತ್ಯಾಲಮಡುವಿದೆ. ಈ ಜಲಪಾತವನ್ನು ಸಂದರ್ಶಿಸಲು ಸೆಪ್ಟಂಬರ್‌ನಿಂದ ಜನವರಿ ಸಕಾಲವಾಗಿರುತ್ತದೆ.

**ಮಸೀದಿಗಳು:** ಧಾರ್ಮಿಕ ಮನೋಭಾವದವರಿಗೆ, ಎಲ್ಲ ವಯಸ್ಸಿನ ಭಕ್ತರಿಗೆ ಸಂದರ್ಶನ ಯೋಗ್ಯವಾದ ಸ್ಥಳಗಳು ರಾಜ್ಯದಲ್ಲಿವೆ. ಮುಸಲ್ಮಾನರಿಗೆ ಕರ್ನಾಟಕದ ಪ್ರಾಚೀನ ಮಸೀದಿಯೆಂದರೆ ಕಲಬುರಗಿ ಕೋಟೆಯಲ್ಲಿ ಬಹಮನಿದೊರೆ ಮಹಮ್ಮದ್ ಷಾ ೧೩೬೭ರಲ್ಲಿ ಕಟ್ಟಿಸಿದ ಮಸೀದಿ. ಇದು ಇಡೀ ಕರ್ನಾಟಕದಲ್ಲಿಯೇ ಬಹಳ ದೊಡ್ಡ ಮಸೀದಿಯಾಗಿದೆ. ಅದು ರಚನೆ ಮತ್ತು ಆಕಾರದಲ್ಲಿ ಸ್ಪೇನ್‌ನ ಕಾರ್ಡೋವಾದ ಮಸೀದಿಯನ್ನು ಹೋಲುತ್ತದೆ. ವಿಜಯಪುರದಲ್ಲಿ ಆಲಿ ಆದಿಲ್ ಷಾ (೧೬ನೆಯ ಶತಮಾನ) ಕಟ್ಟಿಸಿದ ಆಕರ್ಷಕ ಬೃಹತ್ ಸ್ಮಾರಕವೆಂದರೆ ಜಾಮಿಯಾ ಮಸೀದಿ. ಅದಕ್ಕೆ ಅಷ್ಟೇ ದೊಡ್ಡ ಗುಮ್ಮಟವಿದೆ. ಅದನ್ನು ವೈಭವೋಪೇತವಾಗಿ ವರ್ಣಮಯಗೊಳಿಸಲಾಗಿದೆ. ವಿಜಯಪುರದಲ್ಲಿರುವ ಕಪ್ಪು ಶಿಲೆಯ ಮಲ್ಲಿಕಾ ಜಹಾನ್ ಮಸೀದಿ ಇನ್ನೊಂದು ಗಮನಾರ್ಹ ಕಟ್ಟಡವೆನಿಸಿದೆ. ಬೀದರಿನ ಕೋಟೆಯಲ್ಲಿ ೧೪೨೩ರಲ್ಲಿ ಕಟ್ಟಿದ ದುಂಡಾಕಾರದ ೧೬ ಕಂಬಗಳುಳ್ಳ ಪ್ರಖ್ಯಾತ ಸೋಲ್ಹಾಕಂಬ್ ಮಸೀದಿಯಿದೆ. ರಾಯಚೂರಿನಲ್ಲಿ ಏಕ್‌ಮಿನಾರ್ ಮಸೀದಿ ಇದೆ. ಧಾರವಾಡ ಜಿಲ್ಲೆ ಲಕ್ಷ್ಮೇಶ್ವರದಲ್ಲಿ ಆದಿಲ್‌ಷಾಹಿ ಕಾಲದ ಹಿಂದೂ ದೇವಸ್ಥಾನದ ಮಾದರಿಯಲ್ಲಿ ಕಲಾತ್ಮಕವಾಗಿ ನಿರ್ಮಿಸಿರುವ ಮಸೀದಿಯಿದೆ. ಭಟ್ಕಳದ ಭವ್ಯವಾದ ಚಿನ್ನದ ಪಲ್ಲಿ ಮಸೀದಿ ಮತ್ತು ಮಂಗಳೂರಿನ ಬಂದರ್ ಮಸೀದಿಗಳು ತುಂಬಾ ಕಲಾತ್ಮಕವಾದ ಮರದ ಕೆತ್ತನೆ ಕೆಲಸದಿಂದ ಕೂಡಿವೆ. ಎತ್ತರವಾದ ಎರಡು ಮೀನಾರುಗಳಿಂದ ಕೂಡಿದ ಶ್ರೀರಂಗಪಟ್ಟಣದ ಜಾಮಿಯಾ ಮಸೀದಿಯನ್ನು ಟಿಪ್ಪು ಸುಲ್ತಾನ್ ಕಟ್ಟಿಸಿದ್ದು. ಶಿರಾದಲ್ಲಿ ಮೊಘಲರ ಕಾಲದ ಮಸೀದಿ ಇದೆ. ಲಕ್ಷ್ಮೇಶ್ವರದಲ್ಲಿರುವ ಜುಮ್ಮಾಮಸೀದಿ ಅಷ್ಟೇ ಆಕರ್ಷಕವಾಗಿದೆ. ಬೆಂಗಳೂರು ಸಿಟಿ ಮಾರ್ಕೆಟ್ ಬಳಿಯ ಮಸೀದಿಯು ಅಮೃತಶಿಲೆಯ ಸಾಲುಸಾಲದ ಕುಸುರಿ ಕೆಲಸದ ಕಮಾನು ಹಾಗೂ ಸ್ತಂಭ ಗೋಪುರಗಳಿಂದ ಕೂಡಿದ ಆಧುನಿಕ ಬೃಹತ್ ಕಟ್ಟಡವಾಗಿದ್ದು, ಆಕರ್ಷಕವಾಗಿದೆ. ಸಿಂದಘಟ್ಟದ ಕಲ್ಲು ಮಸೀದಿ ಸುಮಾರು ೧೯ನೆ ಶತಮಾನದ ರಚನೆಯಾಗಿದೆ.

**ದರ್ಗಾಗಳು:** ಮುಸ್ಲಿಂ ಸಾಧು-ಸಂತರ ಮತ್ತು ದೊರೆಗಳ ದರ್ಗಾಗಳೂ ಅಷ್ಟೇ ಪ್ರಸಿದ್ಧವಾಗಿವೆ. ಕಲಬುರಗಿಯಲ್ಲಿರುವ ಬಂದೇ ನವಾಜ್ ದರ್ಗಾವು ವಿಸ್ತಾರವಾದ ಪ್ರಾಚೀನ ಸಂಕೀರ್ಣವಾಗಿದ್ದು ಅಲ್ಲಿ ಮೊಘಲರ ಕಾಲದ ಮಸೀದಿಗಳೂ ಕಂಡುಬರುತ್ತವೆ. ಬೀದರ್ ಬಳಿಯ, ಅಷ್ಟೂರಿನಲ್ಲಿರುವ ಅಹಮದ್ ಷಾ ವಲಿಯ ಸಮಾಧಿಯು ಎತ್ತರದ ರಚನೆಯಾಗಿದ್ದು, ಆಕರ್ಷಕ ರೀತಿಯಲ್ಲಿ ವರ್ಣಾಲಂಕೃತಗೊಂಡಿರುವುದನ್ನು ಕಾಣುತ್ತೇವೆ. ಈತನು ಸಂತನೆಂದು ಹಿಂದೂ ಮತ್ತು ಮುಸ್ಲಿಂಮರಿಂದ ಆರಾಧಿಸಲ್ಪಟ್ಟಿದ್ದಾನೆ. ವಿಜಯಪುರದಲ್ಲಿ ಆದಿಲ್ ಷಾ ಹಾಗೂ ಅವನ ರಾಣಿಯ ಸಮಾಧಿಗಳುಳ್ಳ ಇಬ್ರಾಹಿಂ ರೋಜಾವು ಎತ್ತರದ ವೇದಿಕೆಯ ಮೇಲೆ

ನಿರ್ಮಿಸಲ್ಪಟ್ಟಿರುವ ಅವಳ ರಚನೆಯಾಗಿದೆ. ವೇದಿಕೆಯ ಒಂದು ಕಡೆ ಗೋರಿಯಿದೆ. ಇನ್ನೊಂದು ತುದಿಯಲ್ಲಿ ಮಸೀದಿಯಿದೆ. ಎರಡೂ ಕಟ್ಟಡಗಳಗಿರುವ ಗುಮ್ಮಟಗಳು, ಕಮಲದಳಗಳ ನಡುವೆ ಮೂಡಿದಂತಿದ್ದು, ತುದಿಯಲ್ಲಿ ಲೋಹದ ಅಲಂಕಾರಿಕ ಕಿರು ಗೊಮ್ಮಟಗಳಿವೆ. ಗೋಳಗುಮ್ಮಟವು ಮೂರನೇಯ ಮಹ್ಮದ್ ಆದಿಲ್‌ಷಾಹಿ ಅರಸನ ಸುಪ್ರಸಿದ್ಧ ಗೋರಿ. ವಿಜಯಪುರದ ಆಸರ್‌ಮಹಲ್ ಅರಮನೆಯಲ್ಲಿ ಪ್ರವಾದಿಯ ಕೂದಲನ್ನು (ಹಜರತ್ ಬಾಲ್) ರಕ್ಷಿಸಿಡಲಾಗಿದೆಯೆಂದು ಹೇಳಲಾಗಿದೆ. ಮೊಘಲರ ರಚನೆಯಾದ ಶಿರಾದ ಪೀರ್ ಮಲಿಕ್ ರಿಹಾನ್ ದರ್ಗಾವು ವೈವಿಧ್ಯಮಯ ವಿನ್ಯಾಸದಿಂದಾಗಿ ಹೆಚ್ಚು ಗಮನಾರ್ಹವೆನಿಸಿದೆ. ಶ್ರೀರಂಗಪಟ್ಟಣದಲ್ಲಿರುವ ಹೈದರ್ ಮತ್ತು ಟಿಪ್ಪು ಅವರ ಸಮಾಧಿ ರಚನೆಯು ಎತ್ತರದ ಕಟ್ಟಡದ ಮೇಲೆ ಬೃಹತ್ತಾದ ಗುಮ್ಮಟವನ್ನು ಹೊಂದಿದೆ. ಅದರ ಬಾಗಿಲುಗಳಲ್ಲಿ ಒಳ್ಳೆಯ ಕುಸುರಿ ಕೆತ್ತನೆಯಿದೆ. ಮಂಗಳೂರಿನ ಬಳಿಯ ಉಳ್ಳಾಲದಲ್ಲಿರುವ ಸೈಯದ್ ಮದನಿ ದರ್ಗಾವು ಪುನರ್ ನಿರ್ಮಿತ ಆಧುನಿಕ ಕಟ್ಟಡವಾಗಿದೆ. ಕೆರೆ ತೊಣ್ಣೂರಿಗ ಸಯ್ಯದ್ ಸಾಲಾರ್ ಮಸೂದ್ ದರ್ಗಾಕ್ಕೆ ಹೈದರಾಲಿ ದತ್ತಿ ನೀಡಿದ್ದಾನೆ. ಯಾದಗಿರಿಯ ಯಾಕುಬ್ ದರ್ಗಾ ಸಾಗರದ ಸರ್ಮಸ್ತ ದರ್ಗಾ, ಆಳಂದದ ಎಕ್ಲೆಮುಷಾಕ್ ದರ್ಗಾ, ಇಜೇರಿಯ ಅಮೀನ್ ಸಾಬ್ ದರ್ಗಾ, ಗೋಗಿಯ, ಚಾಂದ ಹುಸೇನಿನ ಸಾಬ್ ದರ್ಗಾ, ಹೀಯಾಪುರದ ಸಯ್ಯದ್ ಅಬೀಬ್ ಷಾವಲ ದರ್ಗಾ, ಚಿಂಚೋಳಿಯ ಖುದಾನ್ನ ಹುಸೇನಿ ದರ್ಗಾ, ಚಿತ್ತಾಪುರದ ಚಿತಷಾವಲ್ಲಿ ದರ್ಗಾ, ಕರ್ಜಗಿಯ ಖಾಜಿ ಷಾಬುದ್ದೀನ್ ದರ್ಗಾ, ತಾಳಿಕೋಟೆಯ ಪಂಜೆ ದರ್ಗಾ, ತಿಕೋಟದಾ ಹಾಜಿಸಾಬ್ ಮತ್ತು ಬಡಕಲ್ ಸಾಬ್ ದರ್ಗಾ, ಬೀಳಗಿಯ ಹಸನ್ ಡೋಗ್ರಿ ದರ್ಗಾ ಮುಂತಾದವು ಉಲ್ಲೇಖಾರ್ಹವಾಗಿದೆ. ಬೆಳಗಾವಿಯಲ್ಲಿ ಅಸದ್‌ಖಾನ್ ಲಾಹಿರಿಯು ಕಟ್ಟಿಸಿದ ಕೋಟೆಯಲ್ಲಿ ಆದಿಲ್‌ಷಾಹಿ ಕಾಲದ ಚೆಲುವಾದ ಸಫಾ ಮಸೀದಿಯಿದೆ. ಕೋಟೆಯಲ್ಲಿರುವ ಇನ್ನೊಂದು ಮಸೀದಿಯೆಂದರೆ ವಿಜಯಪುರದ ಶೇರ್‌ಖಾನ್ ೧೫೮೬–೮೭ರಲ್ಲಿ ಕಟ್ಟಿಸಿದ ಜಾಮೀಯಾ ಮಸೀದಿ. ಎಲ್ಲಿ ಮುಸಲ್ಮಾನರ ಜನಸಂಖ್ಯೆ ಹೆಚ್ಚಿರುತ್ತದೋ ಅಲ್ಲಿ ಮೆಹಬೂಬ್ ಸುಬಾನಿಯ (ಬಾಗ್‌ದಾದಿನ ಪ್ರಸಿದ್ಧ ಸಂತ) ಮತ್ತು ಚಮನ್ ಷಾ ವಲಿಯಾ ದರ್ಗಾಗಳನ್ನು (ಚಿಲ್ಲಾ) ನಿರ್ಮಿಸುತ್ತಿದ್ದು, ಆ ಸ್ಥಳಗಳಲ್ಲಿ ಉರುಸ್ ನಡೆಯುತ್ತವೆ. ಈ ಉರುಸ್‌ಗಳಲ್ಲಿ ಹಿಂದೂಗಳೂ ಸಹ ಪಾಲ್ಗೊಳ್ಳುತ್ತಿದ್ದು ದೊಡ್ಡ ಜಾತ್ರೆಯಂತೆ ಇರುತ್ತದೆ. ಇವು ನವಲಗುಂದದ ಬಳಿಯ ಯಮನೂರಿನ ರಾಜಾಬಾಗ್ ಸವಾರ್ ಉರುಸ್, ಬೀದರ್ ಬಳಿಯ ಅಷ್ಟೂರಿನ ಅಹಮದ್ ಷಾ ವಲಿ ಉರುಸ್‌ಗಳನ್ನು ಹೋಲುತ್ತವೆ. ಅದರಲ್ಲೂ ಅಷ್ಟೂರಿನ ಉರುಸು, ವೀರಶೈವ ಸಂತ ಅಲ್ಲಮಪ್ರಭುವಿನ ಜಾತ್ರೆಯೆಂದೇ ಪರಿಗಣಿತವಾಗಿದ್ದು ಓರ್ವ ವೀರಶೈವ ಪೂಜಾರಿಯಿಂದ ಧರ್ಮಕಾರ್ಯವನ್ನು ಆರಂಭವಾಗುತ್ತದೆ.

**ಚರ್ಚುಗಳು:** ಕ್ರಿಶ್ಚಿಯನ್ನರ ಧಾರ್ಮಿಕ ಮಹತ್ವದ ಚರ್ಚುಗಳಿಗೆ ಭೇಟಿ ನೀಡಬೇಕೆನ್ನುವ ಆಸಕ್ತರಿಗೆ ಬೆಂಗಳೂರು ಮತ್ತು ಮಂಗಳೂರುಗಳಲ್ಲಿ ಉತ್ತಮವಾದವು ನೋಡಸಿಗುತ್ತವೆ. ಕೆನರಾದಲ್ಲಿ (ಕರಾವಳಿ ಪ್ರದೇಶ) ಪೋರ್ಚುಗೀಸರು ಕ್ರೈಸ್ತಮತವನ್ನು ಹರಡಲು ಬಹಳ ಹಿಂದೆಯೇ ಯತ್ನಿಸಿದ್ದು, ೧೬ನೇ ಶತಮಾನದಿಂದ ೧೮ನೇ ಶತಮಾನದವರೆಗೆ ಅನೇಕ ಚರ್ಚ್‌ಗಳನ್ನು ನಿರ್ಮಿಸಿದರು. ಆದರೆ, ೧೭೯೦ರ ದಶಕದಲ್ಲಿ ಅವು ನೆಲಸಮಗೊಂಡವು. ಮಂಗಳೂರಿನಲ್ಲಿ ಉನ್ನತ ಗೋಪುರವುಳ್ಳ ಭವ್ಯ ಸೇಂಟ್ ರೊಜಾರಿಯೋ ಕೆಥೆಡ್ರಲ್ ಚರ್ಚ್ ಇದೆ. ಅದರ ಮೂಲ ಕಟ್ಟಡ ನಿರ್ಮಾಣವಾದದ್ದು ೧೫೬೨ ರಲ್ಲಿ. ೧೯೧೦ ರಲ್ಲಿ ಅದನ್ನು ಪುನರ್‌ನಿರ್ಮಿಸಲಾಯಿತು. ಮಿಲಗ್ರೇಸ್ ಚರ್ಚ್‌ನ ಮುಂಭಾಗವು ಸುಂದರವಾದ, ಕಲಾತ್ಮಕ ಪ್ರತಿಮೆಗಳನ್ನು ಹೊಂದಿದ್ದು, ರೋಮಿನ ಸೇಂಟ್ ಪೀಟರ್‌ನ ಬ್ಯಾಸಲಿಕವನ್ನು ನೆನಪಿಗೆ ತರುತ್ತದೆ. ಕೊಡಿಯಾಲ ಬೈಲಿನಲ್ಲಿ ನಿರ್ಮಿಸಿದ 'ಲೇಡಿ ಆಫ್ ಸಾರೋ' ಚರ್ಚ್ ಅಷ್ಟೇ ಮಹತ್ವದ್ದು. ಅದರ ಎತ್ತರವಾದ ಮುಂಭಾಗವನ್ನು ನಾಲ್ಕು ಸಮನಾದ ಆಯಾಕಾರದ ಭಾಗಗಳಾಗಿ ವಿಭಜಿಸಲಾಗಿದೆ. ಮಂಗಳೂರಿನಲ್ಲಿ ೧೮೬೨ರಲ್ಲಿ ಕಟ್ಟಿದ ಬ್ಯಾಸೆಲ್ ಮಿಷನ್‌ನ(ಈಗ ಸಿ.ಎಸ್.ಬಿ) ಶಾಂತಿ ಕೆಥೆಡ್ರಲ್ ಸಂಕೀರ್ಣವು ಸಂಯೋಜಿತವಾದ ರೂಪು ರೇಷೆಗಳಿಂದ ಸುಂದರವೆನಿಸಿದೆ. ಕೊಡಗಿನ ವಿರಾಜಪೇಟೆಯಲ್ಲಿರುವ ಕ್ಯಾಥೊಲಿಕ್ ಚರ್ಚ್ ಗಾಥಿಕ್ ಶೈಲಿಯಲ್ಲಿದೆ. ಅದು ೧೯೯೩ರಲ್ಲಿ ತನ್ನ ದ್ವಿಶತಮಾನೋತ್ಸವವನ್ನು ಆಚರಿಸಿತು. ಕೊಡಗಿನ ಮಡಿಕೇರಿಯಲ್ಲಿರುವ ಚಿಕ್ಕ ಆ್ಯಂಗ್ಲಿಕನ್ ಚರ್ಚ್, ಗಾಜಿನ ಮೇಲೆ ರಚಿಸಿದ ಸುಂದರ ವರ್ಣಚಿತ್ರಗಳನ್ನು ಹೊಂದಿದ್ದು, ಈಗ ಪುರಾತತ್ವ ಇಲಾಖೆಯ ವಸ್ತು ಸಂಗ್ರಹಾಲಯವಾಗಿದೆ. ಮೈಸೂರು ಜಿಲ್ಲೆಯ ಕೃಷ್ಣರಾಜನಗರ ತಾಲೂಕಿನ ದೋರನಹಳ್ಳಿಯಲ್ಲಿರುವ ಸಂತ ಆಂಥೋಣಿ ಪ್ರಾಚೀನ ಇಗರ್ಜಿ (೧೭೮೦) ಅಷ್ಟೇ ಮಹತ್ವದಾಗಿದ್ದು, ಪ್ರತಿ ವರ್ಷ ಜೂನ್ ತಿಂಗಳಲ್ಲಿ ನಡೆಯುವ ಮೂರು ದಿನದ ಜಾತ್ರೆಯಲ್ಲಿ ಲಕ್ಷಾಂತರ ಜನ ಸೇರುತ್ತಾರೆ.

ಬೆಳಗಾವಿಯ ಸೇಂಟ್ ಮೇರಿ ಚರ್ಚ್ ೧೮೬೯ರಲ್ಲಿ ನಿರ್ಮಿತಗೊಂಡಿರುವ ಬೃಹತ್ ಗ್ರಾನೈಟ್ ಕಟ್ಟಡವಾಗಿದ್ದು, ಪ್ರಾರ್ಥನಾ ಮಂದಿರವು ಸುಂದರ ಕಂಬಗಳು ಮತ್ತು ಉಜ್ವಲ ವರ್ಣದ ಕಿಟಕಿ ಗಾಜುಗಳಿಂದ ಕೂಡಿದೆ. ಮೈಸೂರಿನ ಸೇಂಟ್ ಫಿಲೋಮಿನಾ ಚರ್ಚ್ ತನ್ನ ಎತ್ತರವಾದ ಆಕರ್ಷಕ ದ್ವಿಗೋಪುರಗಳಿಂದಾಗಿ ಯಾವುದೇ ನಗರ ಹೆಮ್ಮೆ ಪಟ್ಟುಕೊಳ್ಳಬಹುದಾದ ಕಟ್ಟಡವಾಗಿದೆ. ಈ ಭವ್ಯ ಕಟ್ಟಡಕ್ಕೆ ನೆಲಮಾಳಿಗೆಯಿದೆ.

ಬೆಂಗಳೂರಿನ ಶಿವಾಜಿನಗರದ ಸೇಂಟ್ ಮೇರಿ ಬ್ಯಾಸಲಿಕವು ೧೬೦೦ ರಲ್ಲಿ ಕಟ್ಟಲ್ಪಟ್ಟಿದ್ದು ೧೯೩೨ರಲ್ಲಿ ಪುನಾರಚನೆಗೊಂಡಿದೆ. ಅದರ ಪ್ರವೇಶದಲ್ಲಿ ಎತ್ತರವಾದ ಗಾಥಿಕ್ ಶೈಲಿಯ ಗೋಪುರವಿದೆ. ಸೇಂಟ್ ಮಾರ್ಕ್ಸ್ ಕೆಥೆಡ್ರಲ್ ೧೯೨೭ರಲ್ಲಿ ಇಂದಿನ ರೂಪವನ್ನು ಪಡೆದು ಚರ್ಚ್ ಆಫ್ ಸೌತ್ ಇಂಡಿಯಾ ಎನಿಸಿದ್ದು ದಂಡು ಪ್ರದೇಶದ ಗಮನಾರ್ಹ ಕಟ್ಟಡವೆನಿಸಿದೆ. ಉತ್ತರ–ದಕ್ಷಿಣವಾಗಿರುವ ಸೆಂಟ್ ಪ್ಯಾಟ್ರಿಕ್ ಚರ್ಚ್ ಗ್ರೀಕೋ–ರೋಮನ್ ಶೈಲಿಯಿಂದ ಕೂಡಿದ್ದು, ಮೊದಲಿಗೆ ೧೮೪೪ರಲ್ಲಿ ಐರಿಷ್ ಸೈನಿಕರಿಗಾಗಿ ಕಟ್ಟಲ್ಪಟ್ಟಿತ್ತು. ಅದನ್ನು ೧೮೯೮ರಲ್ಲಿ ಪುನರ್ ರಚಿಸಲಾಯಿತು. ಮಹಾತ್ಮಗಾಂಧೀ ರಸ್ತೆಯ ಟ್ರಿನಿಟಿ ಚರ್ಚ್ ಬ್ರಿಟಿಷರ ಕಾಲದ ನಿವಾಸಿಗಳು ಮತ್ತು ಇತರ ಅಧಿಕಾರಿಗಳು ಹೋಗುತ್ತಿದ್ದ ಅಧಿಕೃತ ಆ್ಯಂಗ್ಲಿಕನ್ ಚರ್ಚ್ ಆಗಿತ್ತು. ಅದು ೧೯೦೮ರಲ್ಲಿ ಈಗಿರುವ ಆಕಾರವನ್ನು ಪಡೆಯಿತು. ಅದು ಸುಂದರ ಅಯೋನಿಕ್ ಶೈಲಿಯ ಕಂಬಗಳಲ್ಲದೆ ಭವ್ಯ ಮುಖಮಂಟಪವನ್ನೂ ಹೊಂದಿದೆ. ಪ್ರಾರ್ಥನಾ ಮಂದಿರುವು ಸುಮಾರು ೯೦ ಅಡಿ ಉದ್ದವಿದ್ದು, ಹಿಂಭಾಗದ ಗೋಡೆಯು ಮರದ ಆಕರ್ಷಕ್ ಕೆತ್ತನೆಗಳಿಂದ ಕೂಡಿದೆ.

**ಬೌದ್ಧಕ್ಷೇತ್ರ:** ಶಿವಮೊಗ್ಗ ಜಿಲ್ಲೆಯ ಶಿರಾಳಕೊಪ್ಪ ಬಳಿಯ ಬಳ್ಳಿಗಾವಿ, ಗದಗ್ ಜಿಲ್ಲೆಯ ಕೋಳಿವಾಡ ಡಂಬಳಗಳಲ್ಲಿ ಹಿಂದೆ

ಬೌದ್ಧರ ತಾರಾಭಗವತಿ ದೇವಸ್ಥಾನಗಳಿದ್ದವು. ಕಲಬುರಗಿ ಜಿಲ್ಲೆಯ ಸನ್ನತಿ ಹಾಗೂ ಬಳಿಯ ಕನಗನಹಳ್ಳಿಯಲ್ಲಿ ನೆಲಸಮವಾಗಿರುವ ಬೌದ್ಧ ಸ್ತೂಪಗಳು ಮತ್ತು ಅಲಂಕಾರಿಕ ಫಲಕಗಳು ಇತ್ತೀಚೆಗೆ ಉತ್ಖನನದ ಪರಿಣಾಮವಾಗಿ ಬೆಳಕಿಗೆ ಬಂದಿವೆ ಮಂಗಳೂರಿನ ಕದರಿಯ ಮಂಜುನಾಥ ದೇವಸ್ಥಾನದಲ್ಲಿ ಕಂಚಿನ ಮೂರು ಬೌದ್ಧ ವಿಗ್ರಹಗಳಿವೆ. ಅವುಗಳಲ್ಲಿ ಒಂದಾದ ಅವಲೋಕಿತೇಶ್ವರ ವಿಗ್ರಹವು ಐದು ಅಡಿ ಎತ್ತರವಿದ್ದು, ಒಂಬತ್ತನೇ ಶತಮಾನದ್ದಾಗಿದೆ. ಕಲಬುರಗಿ ನಗರದ ಹೊರವಲಯದಲ್ಲಿ ಇತ್ತೀಚಿನ ದಶಕದಲ್ಲಿ ನಿರ್ಮಾಣಗೊಂಡಿರುವ ಬೌದ್ಧ ವಿಹಾರವೂ ಚಿತ್ತಾಕರ್ಷಕವಾಗಿದೆ. ಉತ್ತರ ಕನ್ನಡ ಜಿಲ್ಲೆಯ ಮುಂಡಗೋಡು ಮತ್ತು ಮೈಸೂರು ಜಿಲ್ಲೆಯ ಬೈಲುಕುಪ್ಪೆಯ ಟಿಬೇಟಿಯನ್ನರ ವಸಾಹತುಗಳು ವರ್ಣಮಯ ಸ್ತೂಪಗಳಿಂದ, ಕಲಾತ್ಮಕ ಪ್ರಾರ್ಥನಾ ಮಂದಿರಗಳಿಂದ ಮಿನಿ ಟಿಬೆಟ್‌ನಂತೆ ಕಾಣುತ್ತವೆ. ಚಾಮರಾಜನಗರ ಜಿಲ್ಲೆಯ ಕೊಳ್ಳೆಗಾಲ ತಾಲೂಕಿನ ಒಡೆಯರ ಪಾಳ್ಯದ ಬಳಿಯಿರುವ ಟಿಬೇಟಿಯನ್ ವಸಾಹತಿನ ಆಕರ್ಷಕವಾದ ಬೌದ್ಧ ವಿಹಾರವಿದೆ. ಬೆಂಗಳೂರಿನ ಮಹಾಬೋಧಿ ಸೊಸೈಟಿಯ ವೈಭವಪೂರ್ಣ ಸ್ತೂಪ ಮತ್ತು ಒಳಗಡೆ ಬುದ್ಧಗಯಾದ ದೇವಸ್ಥಾನವನ್ನು ಹೋಲುವ ದೊಡ್ಡ ದೇವಸ್ಥಾನ ಉಲ್ಲೇಖಾರ್ಹ.

**ಜೈನಕ್ಷೇತ್ರ:** ಜೈನಧರ್ಮವು ಕರ್ನಾಟಕದ ಅತ್ಯಂತ ಪ್ರಾಚೀನ ಧರ್ಮವಾಗಿದೆ. ಹಾಸನ ಜಿಲ್ಲೆಯ ಶ್ರವಣಬೆಳಗೊಳವು ಎರಡೂ ಗುಡ್ಡಗಳ ಮೇಲಿನ ಅನೇಕ ಜೈನ ಬಸದಿ ಹಾಗೂ ಸುಮಾರು ೯೮೧–೮೨ರಲ್ಲಿ ಸ್ಥಾಪಿಸಿದ ಸುಮಾರು ೫೮ ಅಡಿ ಎತ್ತರದ ಗೊಮ್ಮಟ ಮೂರ್ತಿಗಳಿಂದಾಗಿ ಪ್ರಮುಖ ಜೈನ ಕೇಂದ್ರವೆನಿಸಿದೆ. ಮದ್ದೂರು ತಾಲೂಕು ಅರೆತಿಪ್ಪೂರಿನ ಬಳಿಯ ಗುಡ್ಡದಲ್ಲಿ ಸುಮಾರು ೧೦ ಅಡಿ ಎತ್ತರದ (೯೧೩) ಬಾಹುಬಲಿ ಮೂರ್ತಿ ಇದೆ. ಬಸ್ತಿ ಹೊಸಕೋಟೆ (ಕೃ.ರಾ.ಪೇಟೆ ತಾ.), ಗೊಮ್ಮಟಗಿರಿ(ಹುಣಸೂರು ತಾ.)ಗಳಲ್ಲಿ ಹೊಯ್ಸಳರ ಕಾಲದ ಗೊಮ್ಮಟ ಮೂರ್ತಿಗಳಿವೆ. ಮೈಸೂರು ಬಳಿಯ ಗೊಮ್ಮಟಗಿರಿಯಲ್ಲಿರುವ ಏಕಶಿಲಾ ಗೊಮ್ಮಟಮೂರ್ತಿಯು ೨೦ ಅಡಿ ಎತ್ತರವಿದೆ.

ಯಕ್ಷಿ ಪದ್ಮಾವತಿಯ ಪೂಜೆಗೆ ಪ್ರಸಿದ್ಧವಾದ ಹುಂಚವು ಶಿವಮೊಗ್ಗ ಜಿಲ್ಲೆಯಲ್ಲಿದೆ. ಚಿಕ್ಕಮಗಳೂರು ಜಿಲ್ಲೆಯ ನರಸಿಂಹರಾಜಪುರ ತಾಲೂಕಿನ ಸಿಂಹನಗದ್ದೆಯಲ್ಲಿ ಪ್ರಾಚೀನ ಜೈನಮಠವಿದೆ. ದಕ್ಷಿಣ ಕನ್ನಡ ಜಿಲ್ಲೆಯೂ ಸಹ ಅನೇಕ ಜೈನ ಕೇಂದ್ರಗಳನ್ನು ಹೊಂದಿದೆ. ಮೂಡಬಿದರೆಯಲ್ಲಿ ಸಾವಿರ ಕಂಬದ ಬಸದಿ ಎಂದು ಕರೆಯಲಾಗುವ ದೊಡ್ಡ ಬಸದಿಯಿದ್ದು, ಅದರಲ್ಲಿ ಲೋಹದ ಮತ್ತು ಮರದ ಉತ್ತಮ ಜಿನಪ್ರತಿಮೆಗಳಿವೆ. ಅದರಲ್ಲೂ ೧೬ನೇ ಶತಮಾನದ ರಚನೆಗಳಾದ ಕಂಬಗಳು ಹೆಚ್ಚು ಕಲಾತ್ಮಕವಾಗಿವೆ. ಇಲ್ಲಿ ಇನ್ನೂ ಅನೇಕ ಜೈನ ಸ್ಮಾರಕಗಳಿವೆ. ಪಕ್ಕದ ಕಾರ್ಕಳದಲ್ಲಿ ಮುಮ್ಮಡಿ ವೀರಪಾಂಡ್ಯ ದೇವನು ೧೪೩೨ರಲ್ಲಿ ಪ್ರತಿಷ್ಠಾಪಿಸಿದ ೪೨ ಅಡಿ ಎತ್ತರದ ಏಕಶಿಲಾ ಗೊಮ್ಮಟ ಮೂರ್ತಿ, ಮತ್ತು ಸುಂದರ ಚತುರ್ಮುಖ ಬಸದಿಗಳಿವೆ. ಹತ್ತಿರದ ವೇಣೂರಿನಲ್ಲಿ ಅಜಿಲ ವೀರ ತಿಮ್ಮರಸನು ೧೬೦೪ರಲ್ಲಿ ನಿಲ್ಲಿಸಿದ ೩೫ ಅಡಿ ಎತ್ತರದ ಏಕಶಿಲಾ ಗೊಮ್ಮಟ ಮೂರ್ತಿ ಹಾಗೂ ಶಾಂತಿನಾಥನ ಬಸದಿಗಳಿವೆ. ಪ್ರಸಿದ್ಧ ಶೈವಕ್ಷೇತ್ರವಾದ ಧರ್ಮಸ್ಥಳದಲ್ಲಿ ೩೯ ಅಡಿ ಎತ್ತರದ ಗೊಮ್ಮಟನ ಏಕಶಿಲಾಮೂರ್ತಿಯನ್ನು ೧೯೮೨ರಲ್ಲಿ ಪ್ರತಿಷ್ಠಾಪಿಸಲಾಗಿದೆ. ಬೆಳಗಾವಿಯ ಕೋಟೆಯಲ್ಲಿರುವ ಕಲ್ಯಾಣದ ಚಾಳುಕ್ಯ ಶೈಲಿಯ ಕಮಲ ಬಸದಿ ಆಕರ್ಷಕವಾಗಿದೆ. ನಿಪ್ಪಾಣಿ ಬಳಿಯ 'ತವನಿಧಿ' ಒಂದು ಪ್ರಾಚೀನ ಸ್ಥಳ. ಅದರಂತೆ ಹೊಸದಾಗಿ ರೂಪುಗೊಂಡ ಶೇಡಬಾಳದಲ್ಲಿ ೨೪ ತೀರ್ಥಂಕರರ ಶಿಲ್ಪವು ಅಮೃತಶಿಲೆಯಲ್ಲಿ ಆಕರ್ಷಕವಾಗಿ ರೂಪುಗೊಂಡಿದೆ. ಧಾರವಾಡ ಜಿಲ್ಲೆಯ ಲಕ್ಕುಂಡಿಯಲ್ಲಿ ಅತ್ತಿಮಬ್ಬೆ ಕಟ್ಟಿಸಿದ ಚಾಳುಕ್ಯ ಶೈಲಿಯ ಬೃಹತ್ ಬ್ರಹ್ಮಜಿನಾಲಯವಿದೆ. ಚಾಮರಾಜನಗರ ತಾಲೂಕು ಮಲೆಯೂರಿನ ಬೆಟ್ಟದ ತುದಿಯಲ್ಲಿ ಆಕರ್ಷಕ ಪಾರ್ಶ್ವನಾಥ ಬಸದಿ ಹಾಗೂ ಜೈನ ಸಂತ ಪೂಜ್ಯಪಾದರ ಸಮಾಧಿಗಳು ಪ್ರಶಾಂತ ವಾತಾವರಣದಲ್ಲಿವೆ.

**ಶೈವಕ್ಷೇತ್ರ:** ಶಂಕರರು ಎತ್ತಿ ಹಿಡಿದ ಅದ್ವೈತಮತದ ಪ್ರಸಿದ್ಧ ಮೂಲ ಮಠ ಚಿಕ್ಕಮಗಳೂರು ಜಿಲ್ಲೆ ಶೃಂಗೇರಿಯಲ್ಲಿದೆ. ಶಿವಮೊಗ್ಗ ಜಿಲ್ಲೆ ಕೂಡ್ಲಿಗಿಯಲ್ಲಿ ಇನ್ನೊಂದು ಮಠವಿದೆ. ಕೋಲಾರ ಜಿಲ್ಲೆ ಆವನಿ, ತುಮಕೂರು ಜಿಲ್ಲೆ ಶಿವಗಂಗೆ, ಬೆಳಗಾವಿಯ ಸಂಕೇಶ್ವರಗಳಲ್ಲಿ ಈ ಸಂಪ್ರದಾಯದ ಮಠಗಳಿವೆ. ಇವುಗಳಲ್ಲಿ ಧಾರವಾಡ ಜಿಲ್ಲೆಯ ಹುಬ್ಬಳ್ಳಿಯಲ್ಲಿರುವ ಸಿದ್ಧಾರೂಢ ಮಠ ಮತ್ತು ಗದುಗಿನ ಶಿವಾನಂದ ಮಠ ಪ್ರಸಿದ್ಧವಾಗಿವೆ. ಬಾಗಲಕೋಟೆ ಜಿಲ್ಲೆಯ ಪಟ್ಟದಕಲ್ಲಿನ ವಿರೂಪಾಕ್ಷ ಮತ್ತು ಮಲ್ಲಿಕಾರ್ಜುನ ದೇವಸ್ಥಾನಗಳು ಅಪೂರ್ವ ಶಿಲ್ಪಕಲಾಕೃತಿಗಳು. ಕಾವೇರಿ ತಡಿಯಲ್ಲಿರುವ ತಲಕಾಡು ಮತ್ತು ಮುಡುಕುತೊರೆಯ ಬೆಟ್ಟದ ಮಲ್ಲಿಕಾರ್ಜುನ ಲಿಂಗವೂ ಸೇರಿ ಐದು ಪವಿತ್ರ ಲಿಂಗಗಳು ಪ್ರಸಿದ್ಧವಾಗಿವೆ. ಈ ಸ್ಥಳಗಳಲ್ಲಿ ಶಿವರಾತ್ರಿಯಂದು ಜಾತ್ರೆ ನಡೆಯುತ್ತದೆ. ಗೋಕರ್ಣವು ಅಖಿಲ ಭಾರತ ಮಟ್ಟದ ಶೈವಕ್ಷೇತ್ರ. ಅಲ್ಲಿ ರಾವಣನು ಕೈಲಾಸದಿಂದ ತಂದ ಆತ್ಮಲಿಂಗವು ಪ್ರತಿಷ್ಠಾಪನೆಗೊಂಡು ಮಹಾಬಲೇಶ್ವರನೆಂಬ ಹೆಸರು ಪಡೆಯಿತೆಂದು ನಂಬಲಾಗಿದೆ. ಸಮೀಪದ ಮುರುಡೇಶ್ವರದಲ್ಲಿದ್ದ ಹಳೆಯ ದೇವಸ್ಥಾನವನ್ನು ದ್ರಾವಿಡ ಶೈಲಿಯಲ್ಲಿ ಆಧುನೀಕರಿಸಿ, ವಿಸ್ತರಿಸಿ ಪುನಃ ರಚಿಸಲಾಗಿದೆ. ಇವೆರಡೂ ಸಮುದ್ರ ತೀರದ ಉತ್ತರ ಕನ್ನಡ ಜಿಲ್ಲೆಯಲ್ಲಿವೆ. ಕವಿಗಳು, ವಿದ್ವಾಂಸರು, ದೊರೆಗಳು ಮತ್ತು ಜನಸಾಮಾನ್ಯರೂ ಹಾಡಿ ಹೊಗಳಿದ ವಿರೂಪಾಕ್ಷ ದೇವಸ್ಥಾನ ಹಂಪೆಯಲ್ಲಿದೆ. ಬೆಂಗಳೂರಿನಲ್ಲಿ ೧೬ನೇ ಶತಮಾನದ ಎತ್ತರವಾದ ಆಕರ್ಷಕ ರಾಯಗೋಪುರವುಳ್ಳ ಅಲಸೂರು ಸೋಮೇಶ್ವರ ದೇವಸ್ಥಾನವನ್ನು ಕೆಂಪೇಗೌಡ ಕಟ್ಟಿಸಿರುವನು. ಮಡಿಕೇರಿಯಲ್ಲಿ ಕೊಡಗಿನ ದೊರೆಗಳು ೧೯ನೇ ಶತಮಾನದಲ್ಲಿ ಕಟ್ಟಿಸಿದ ಓಂಕಾರೇಶ್ವರ ದೇವಸ್ಥಾನವಿದೆ. ಕಮಾನು ಮತ್ತು ಗುಮ್ಮಟಗಳಿಂದಾಗಿ ಅದು ಹಿಂದೂ–ಮುಸ್ಲಿಂ ಮಾದರಿ ಕಟ್ಟಡದಂತೆ ಕಾಣುತ್ತದೆ. ದಕ್ಷಿಣ ಕನ್ನಡದ ಧರ್ಮಸ್ಥಳವು ಕರ್ನಾಟಕದಲ್ಲೇ ಜನಪ್ರಿಯ ಶೈವ ಕೇಂದ್ರ. ಮೈಸೂರು ಜಿಲ್ಲೆಯ ನಂಜನಗೂಡು ದೊಡ್ಡದಾದ, ಸಾವಿರ ವರ್ಷಕ್ಕೂ ಹಳೆಯ ಶ್ರೀಕಂಠೇಶ್ವರ ದೇವಸ್ಥಾನವನ್ನು ಹೊಂದಿದೆ ನಂಜನಗೂಡು ದೇವಸ್ಥಾನವು ಸುಂದರ ಶಿಲಾಮೂರ್ತಿಗಳನ್ನೂ ಹೊಂದಿದ್ದು ಶೈವ ಪ್ರತಿಮಾ ಶಾಸ್ತ್ರದ ಅಧ್ಯಯನಕ್ಕೆ ಒಂದು ವಸ್ತುಪ್ರದರ್ಶನದಂತಿದೆ. ಚಾಮರಾಜನಗರದ ಚಾಮರಾಜೇಶ್ವರ ದೇವಸ್ಥಾನವನ್ನು ೧೯ ನೇ ಶತಮಾನದಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರು ತಮ್ಮ ತಂದೆ ಚಾಮರಾಜರ ನೆನಪಿಗಾಗಿ ಕಟ್ಟಿಸಿದರು. ಈ ಎರಡೂ ಬೃಹತ್ ಕಟ್ಟಡಗಳು ಅಚ್ಚುಗಾರೆಯ ಅನೇಕ ಸುಂದರ ಮೂರ್ತಿಗಳನ್ನು ಹೊಂದಿದೆ.

**ವೀರಶೈವ ಕ್ಷೇತ್ರ:** ಬಾಗಲಕೋಟೆ ಜಿಲ್ಲೆಯ ಕೂಡಲಸಂಗಮದಲ್ಲಿರುವ ಸಂಗಮೇಶ್ವರ ದೇವಾಲಯವು

ಬಸವೇಶ್ವರರ ಸಂಪರ್ಕದಿಂದಾಗಿ ಪ್ರಖ್ಯಾತವಾಗಿದೆ. ವೀರಶೈವರಿಗೆ ಬಸವೇಶ್ವರ ಅಥವಾ ಆತನ ಸಮಕಾಲೀನ ಶರಣರ ಸಂಪರ್ಕವಿರುವ ಅನೇಕ ಪವಿತ್ರ ನೆಲೆಗಳಿವೆ. ವಿಜಯಪುರ ಜಿಲ್ಲೆಯ ಬಸವನ ಬಾಗೇವಾಡಿ ಬಸವಣ್ಣ ಹುಟ್ಟಿದ ಸ್ಥಳ. ಸಮೀಪದ ಇಂಗಳೇಶ್ವರ ಅವನ ತಾಯಿಯ ತವರೂರು ಬಾಗಲಕೋಟೆ ಜಿಲ್ಲೆಯ ಕೂಡಲ ಸಂಗಮವು ಆತನ ಆಧ್ಯಾತ್ಮ ಸಾಧನಾ ಕೇಂದ್ರವಾಗಿದ್ದು, ಕೃಷ್ಣಾ ಮತ್ತು ಮಲಪ್ರಭಾ ನದಿಗಳ ಸಂಗಮ ಸ್ಥಳದಲ್ಲಿದೆ. ಇತ್ತೀಚೆಗೆ ಕೂಡಲಸಂಗಮ ಅಭಿವೃದ್ಧಿ ಪ್ರಾಧಿಕಾರವನ್ನು ನಿರ್ಮಿಸುವ ಮೂಲಕ ಕೂಡಲ ಸಂಗಮವನ್ನು ಪ್ರವಾಸೋದ್ಯಮ ಕೇಂದ್ರವನ್ನಾಗಿ ಅಭಿವೃದ್ಧಿಪಡಿಸಲಾಗಿದೆ.

ಬೀದರ್ ಜಿಲ್ಲೆಯ ಬಸವ ಕಲ್ಯಾಣ, ನಂತರದ ಚಾಳುಕ್ಯರ ರಾಜಧಾನಿಯಾಗಿತ್ತು. ಅಲ್ಲಿ ಬಸವಣ್ಣ ಸಮಾಜೋಧಾರ್ಮಿಕ ಆಂದೋಲನ ನಡೆಸಿದ್ದರು. ಉತ್ತರ ಕನ್ನಡದ ಉಳವಿಯು ಅರಣ್ಯದ ನಡುವೆ ಪ್ರಶಾಂತ ಸ್ಥಳದಲ್ಲಿದ್ದು, ಬಸವಣ್ಣನ ಅಕ್ಕನ ಮಗ ಚನ್ನಬಸವಣ್ಣನ ಸಮಾಧಿ ಅಲ್ಲಿದೆ. ಶಿವಮೊಗ್ಗೆಯ ಬಳ್ಳಿಗಾವಿ, ಕಲ್ಯಾಣದ ಚಾಳುಕ್ಯರ ಕಾಲದ ಪ್ರಸಿದ್ಧ ಕಲಾಕೇಂದ್ರ. ಇದನ್ನು ಅಲ್ಲಮಪ್ರಭುವಿನ ಹುಟ್ಟೂರು ಎಂದೂ ಗುರುತಿಸಲಾಗಿದೆ. ಸಮೀಪದ ಉಡುತಡಿಯು ಅಕ್ಕಮಹಾದೇವಿಯ ಊರೆಂದು ದಾಖಲೆಗಳಿಂದ ತಿಳಿದು ಬರುತ್ತದೆ. ಆನಂತರದ ವೀರಶೈವ ಸಂತರಿಗೆ ಸಂಬಂಧಿಸಿದ ಅನೇಕ ಸ್ಥಳಗಳು ಇಲ್ಲಿವೆ. ಮೈಸೂರು ಜಿಲ್ಲೆಯ ಮಹದೇಶ್ವರ ಬೆಟ್ಟವು ಪವಾಡಪುರುಷ ಮಹದೇಶ್ವರನಿಗೆ ಸಂಬಂಧಿಸಿದ ಕ್ಷೇತ್ರ. ತುಮಕೂರು ಜಿಲ್ಲೆಯ ಎಡೆಯೂರು ಇನ್ನೊಬ್ಬ ಪ್ರಖ್ಯಾತ ಶಿವಯೋಗಿ ತೋಂಟದ ಸಿದ್ಧಲಿಂಗರ ಗದ್ದುಗೆಯನ್ನು ಹೊಂದಿದೆ. ಚಿಕ್ಕಮಗಳೂರು ಜಿಲ್ಲೆಯ ಬಾಳೆಹೊನ್ನೂರು ಮತ್ತು ಬಳ್ಳಾರಿ ಜಿಲ್ಲೆಯ ಉಜ್ಜನಿ, ಭಾರತದ ವೀರಶೈವ ಪಂಚಪೀಠಗಳಲ್ಲಿ ಕರ್ನಾಟಕದಲ್ಲಿರುವ ಎರಡು ಪೀಠಗಳಾಗಿವೆ. ಅಥಣಿಯಲ್ಲಿ ಶಿವಯೋಗಿ ಸಂತರ ಸಮಾಧಿಯು ಗಚ್ಚಿನ ಮಠದಲ್ಲಿದೆ. ಬೈಲಹೊಂಗಲದ ಬಳಿಯ ನಾಗನೂರು ಮಠ, ಬೆಳಗಾವಿಯ ಕಲ್ಮಠ, ಅರಭಾವಿಯ ದುರುದುಂಡೇಶ್ವರ ಮಠ, ಮುರಗೋಡಿನ ಮಹಾಂತಸ್ವಾಮಿಮಠ, ಸಾವಳಗಿಯ ಶಿವಲಿಂಗೇಶ್ವರಮಠ, ಧಾರವಾಡದ ಮುರುಘಾಮಠ, ಮುಂಡರಗಿಯ ಅನ್ನದಾನೇಶ್ವರಮಠ, ಗದುಗಿನ ಡಂಬಳದ ತೋಂಟದಾರ್ಯಮಠ, ಹುಬ್ಬಳ್ಳಿಯ ಮೂರು ಸಾವಿರಮಠ, ಹಾವೇರಿಯ ಮುರುಘಾಮಠ ಮತ್ತು ಹುಕ್ಕೇರಿಮಠ, ಸಿರಿಗೆರೆಯ ತರಳಬಾಳು ಮಠ, ಚಿತ್ರದುರ್ಗದ ಮುರುಘರಾಜೇಂದ್ರಮಠ, ಚಡಚಣದ ಬಂಥನಾಳ ಶಿವಯೋಗಿಮಠ, ಇಳಕಲ್ಲಿನ ಮಹಾಂತಸ್ವಾಮಿಮಠ ಮೊದಲಾದುವು ಪ್ರಸಿದ್ಧವಾಗಿವೆ. ಕಲಬುರಗಿದ ಶರಣಬಸಪ್ಪ ಅಪ್ಪಗಳ ಸಮಾಧಿ, ಬೆಂಗಳೂರಿನ ಬೇಲಿಮಠ, ತುಮಕೂರು ಬಳಿಯ ಶಿವಕುಮಾರಸ್ವಾಮಿಗಳ ಸಿದ್ಧಗಂಗಾಮಠ, ಮೈಸೂರಿನ ಸುತ್ತೂರು ದೇಶಿಕೇಂದ್ರ ಜಗದ್ಗುರುಗಳ ಶಿವರಾತ್ರೇಶ್ವರಮಠ, ಕೋಲಾರ ಜಿಲ್ಲೆಯ ನಿಡುಮಾಮಿಡಿಮಠ ಮುಂತಾದ ವೀರಶೈವ ಮಠಗಳಿರುವ ಸುಕ್ಷೇತ್ರಗಳಿಗೆ ಸಾವಿರಾರು ಪ್ರವಾಸಿಗರು ಭೇಟಿ ಕೊಡುತ್ತಾರೆ. ನಿತ್ಯ ಮೈಸೂರು ಸಮೀಪದ ಗದ್ದಿಗೆ, ಕೆಂಡಗಣ್ಣಸ್ವಾಮಿಯ ಸಮಾಧಿಯಿಂದಾಗಿ ಖ್ಯಾತಿ ಪಡೆದಿದೆ.

**ದತ್ತಾತ್ರೇಯ ಆರಾಧನೆ:** ಕರ್ನಾಟಕದಲ್ಲಿ ದತ್ತಾತ್ರೇಯ ಆರಾಧನೆಯೂ ಜನಪ್ರಿಯವಾಗಿದೆ. ಕಲಬುರ್ಗಿ ಜಿಲ್ಲೆಯ ದೇವಲ ಗಾಣಗಾಪುರದಲ್ಲಿ ಕರ್ನಾಟಕದ ಪ್ರಸಿದ್ಧ ಸಂತ ನರಸಿಂಹ ಸರಸ್ವತಿ ಬಹಳ ಕಾಲ ಇದ್ದರು. ಇಲ್ಲಿಗೆ ದೂರದೂರಿಂದ ದತ್ತಾತ್ರೇಯ ಭಕ್ತರು ಬರುತ್ತಾರೆ. ರಾಯಚೂರು ಜಿಲ್ಲೆಯ ಕೃಷ್ಣಾನದಿಯ ದ್ವೀಪ ಕುರುಗಡ್ಡೆಯಲ್ಲಿ ದತ್ತಾತ್ರೇಯ ಭಕ್ತರೂ, ನರಸಿಂಹ ಸರಸ್ವತಿಗಳ ಗುರುವೂ ಆದ ಶ್ರೀಪಾದವಲ್ಲಭರ ಸಮಾಧಿಯಿದೆ. ಬೆಳಗಾವಿಯ ಬಳಿಯ ಬಾಳೆಕುಂದ್ರಿಯಲ್ಲಿ ದತ್ತಾತ್ರೇಯ ಭಕ್ತರಾದ ಸಂತಬಾಳೆಕುಂದ್ರಿ ಮಹಾರಾಜರ ಸಮಾಧಿಯಿದೆ. ಬೆಳಗಾವಿ ಮುರಗೋಡ ಮತ್ತು ಹಾವೇರಿ ಜಿಲ್ಲೆಯ ಅಗಡಿಗಳಲ್ಲಿ ಅಂಥದೇ ಕೇಂದ್ರಗಳಿವೆ. ಚಿಕ್ಕಮಗಳೂರು ಜಿಲ್ಲೆಯ ಬಾಬಾ ಬುಡನಗಿರಿಯಲ್ಲಿ ದತ್ತಾತ್ರೇಯ ಪೀಠವಿದೆ. ಇದಕ್ಕೆ ಹಿಂದೂ-ಮುಸ್ಲಿಮರಿಬ್ಬರೂ ನಡೆದುಕೊಳ್ಳುತ್ತಾರೆ. ಇಲ್ಲಿ ದತ್ತಾತ್ರೇಯನ ಮುಸ್ಲಿಂ ಭಕ್ತನಾದ ದಾದಾ ಹಯಾತ್ ಖಲಂದರ್ ಇದ್ದು ದತ್ತಾತ್ರೇಯನನ್ನು ಪೂಜಿಸಿದ್ದು, ಅವರ ಸಮಾಧಿ ಇಲ್ಲಿದೆ. ಹುಮ್ನಾಬಾದ್ ಬಳಿಯ ಮಾಣಿಕನಗರವು ಮತ್ತೊಂದು ದತ್ತಾತ್ರೇಯ ಕ್ಷೇತ್ರ. ಇಲ್ಲಿ ಮಾಣಿಕ್ಯಪ್ರಭು ಎಂಬ ಸಂತರು ಆಗಿ ಹೋಗಿದ್ದಾರೆ.

**ನಾಥಪಂಥ:** ಶೈವರಲ್ಲಿ ನಾಥಪಂಥೀಯರಿದ್ದಾರೆ. ಖಾನಾಪುರ ತಾಲೂಕಿನ ಹಂಡಿ ಬಡಗನಾಥ, ನಿಪ್ಪಾಣಿ ಬಳಿಯ ಅಪ್ಪಚಿವಾಡಿ ಮತ್ತು ಮಂಗಳೂರಿನ ಕದರಿ-ಇವು ಪ್ರಸಿದ್ಧ ಕೇಂದ್ರಗಳು.

ಶಿವನ ಅವತಾರವೆನಿಸಿದ ಭೈರವ ಅನೇಕ ಕಡೆ ಆರಾಧಿಸಲ್ಪಡುತ್ತಾನೆ. ಮಂಡ್ಯ ಜಿಲ್ಲೆಯ ಆದಿಚುಂಚನಗಿರಿ ಮತ್ತು ಕೋಲಾರ ಜಿಲ್ಲೆಯ ಸೀತಿಬೆಟ್ಟ ಇದಕ್ಕೆ ತುಂಬಾ ಪ್ರಸಿದ್ಧವಾಗಿವೆ. ಆದಿಚುಂಚನಗಿರಿಯಲ್ಲಿ ಒಕ್ಕಲಿಗ ಜನಾಂಗದ ಪ್ರಸಿದ್ಧ ಮಠವಿದೆ.

**ಮೈಲಾರ ಆರಾಧನೆ:** ಮೈಲಾರ ಮಾರ್ತಾಂಡ ಅಥವಾ ಮಾಲತೇಶ ಅಥವಾ ಖಂಡೋಬ ಕೂಡ ಶಿವನ ಅವತಾರವೇ. ಅವನ ದೇವಸ್ಥಾನಗಳು ರಾಣಿಬೆನ್ನೂರು ತಾಲೂಕಿನ ದೇವರಗುಡ್ಡ, ಬಳ್ಳಾರಿ ಜಿಲ್ಲೆಯ ಮಣ್ಣೆತ್ತು ಮೈಲಾರ, ಬೀದರ್ ಜಿಲ್ಲೆಯ ಖಾನಾಪುರ, ಬೆಳಗಾವಿ ಜಿಲ್ಲೆಯ ಮಂಗಸೂಳಿ ಮತ್ತು ಮಂಡ್ಯ ಜಿಲ್ಲೆಯ ಬೆಳ್ಳೂರು ಮತ್ತು ಭೈರಾಪಟ್ಟಣ-ಇವೆಲ್ಲವೂ ಯಾತ್ರಿಕರಿಗೆ ಮೈಲಾರನ ಮುಖ್ಯ ತೀರ್ಥಕ್ಷೇತ್ರಗಳೆನಿಸಿವೆ.

**ವೀರಭದ್ರ:** ವೀರಭದ್ರನು ವೀರಶೈವಧರ್ಮದ ಮತ್ತೊಬ್ಬ ಜನಪ್ರಿಯ ಮೂರ್ತಸ್ವರೂಪ. ಆತನನ್ನು ಶಿವನ ಸುಪುತ್ರನೆನ್ನಲಾಗಿದೆ. ಅವನ ಆರಾಧನಾ ಸ್ಥಳಗಳು ವಿಜಯನಗರ ಕಾಲದಿಂದ ಕರ್ನಾಟಕದಾದ್ಯಂತ ಜನಪ್ರಿಯವಾಗಿವೆ. ಕೃಷ್ಣಾದಂಡೆಯ ಯೆಡೂರು ಮತ್ತು ಬೆಳಗಾವಿ ಜಿಲ್ಲೆಯ ಗೊಡಚಿ, ಬೆಂಗಳೂರು ಜಿಲ್ಲೆಯ ಮೊಗಬಾಳು ಮತ್ತು ಸಾವನದುರ್ಗ, ಮೈಸೂರು ಜಿಲ್ಲೆಯ ಚನ್ನಪ್ಪನಪುರ ಮತ್ತು ಹಂಪೆಯ ಉದ್ಧಾನ ವೀರಭದ್ರ ದೇವಸ್ಥಾನಗಳು ಈ ದೈವದ ಗಮನಾರ್ಹ ಯಾತ್ರಾಸ್ಥಳಗಳೆನಿಸಿವೆ.

**ಶಕ್ತಿ ದೇವತಾ ಉಪಾಸನೆ:** ಶಕ್ತಿ ದೇವತೆಯ ಉಪಾಸನೆ ಅನೇಕರಲ್ಲಿದೆ. ಗ್ರಾಮದೇವತೆಯರಾದ ಮಾರಮ್ಮ, ದುರ್ಗಮ್ಮ, ಪಟಾಲಮ್ಮ, ಮಾತಂಗಮ್ಮ ಇತ್ಯಾದಿ ದೇವತೆಗಳನ್ನು ಆಕೆಯೊಡನೆ ಸಮೀಕರಿಸಲಾಗಿದೆ. ಶಕ್ತಿಕ್ಷೇತ್ರಗಳಲ್ಲಿ ಖ್ಯಾತವಾದುವು, ಸನ್ನತಿಯ (ಕಲಬುರ್ಗಿ) ಚಂದ್ರಲಾಂಬ, ಛಾಯಾಭಗವತಿ, ಬಳ್ಳಾರಿಯ ಬಳಾರಮ್ಮ, ಚಿಂಚಲಿಯ ಮಾಯವ್ವ, ಸೌದತ್ತಿ ಎಲ್ಲಮ್ಮ, ಬಾದಾಮಿ (ಬಾಗಲಕೋಟೆ) ಬಳಿಯ ಬನಶಂಕರಿ, ಇಟಗಿ

ಭೀಮಾಂಬಿಕಾ, ಹಂಪೆಯ ಭುವನೇಶ್ವರಿ, ಸಿರಸಿ (ಉತ್ತರ ಕನ್ನಡ) ಯ ಮಾರಿಕಾಂಬ, ಕುಕ್ಕನೂರಿನ ಮಹಾಮಾಯಿ, ಮೈಸೂರಿನ ಚಾಮುಂಡೇಶ್ವರಿ, ಮೈಸೂರು ಜಿಲ್ಲೆ ಬನ್ನೂರಿನ ಹೇಮಾದ್ರಮ್ಮ, ಮದ್ದೂರಿನ ಮದ್ದೂರಮ್ಮ, ಹಾಸನ ಬಳಿಯ ದೊಡ್ಡಗದ್ದವಳ್ಳಿಯ ಮಹಾಲಕ್ಷ್ಮಿ, ಹಾಸನದ ಹಾಸನಾಂಬ, ಶಿವಗಂಗೆಯ ಹೊನ್ನಮ್ಮ, ಬೆಂಗಳೂರಿನ ಅಣ್ಣಮ್ಮ, ಕೊಲ್ಲೂರು ಮೂಕಾಂಬಿಕಾ, ಕಟೀಲು ದುರ್ಗಾಪರಮೇಶ್ವರಿ, ಪೊಳಲಿ ರಾಜರಾಜೇಶ್ವರಿ, ಮಂಗಳೂರಿನ ಮಂಗಳಾದೇವಿ, ಬೆಂಗಳೂರು ಬಳಿಯ ಹುಸ್ಕೂರಿನ ಮರಿಯಮ್ಮ, ಕೋಲಾರದ ಕೋಲಾರಮ್ಮ ಮುಂತಾದ ದೇವಸ್ಥಾನಗಳು ಶಾಕ್ತ ಉಪಾಸಕರು ಹೋಗುವ ಪ್ರಮುಖ ಯಾತ್ರಾಸ್ಥಳಗಳಾಗಿವೆ.

**ಕರಗ:** ಶಕ್ತಿ ಆರಾಧನೆ ನಿದರ್ಶನವಾಗಿ ದೇವಿಯನ್ನು ಆರಾಧಿಸುವ ಕರಗೋತ್ಸವವು ಬೆಂಗಳೂರು ನಗರ, ನಗರದ ಕೆಲವು ಬಡಾವಣೆ, ಮಾಲೂರು, ಕೋಲಾರ, ಕೆಂಗೇರಿ, ರಾಮನಗರ, ಮೈಸೂರು ಮುಂತಾದೆಡೆ ಬಹಳ ವಿಜೃಂಭಣೆಯಿಂದ ಮೂರರಿಂದ ಐದು ದಿನಗಳು ಜರುಗುತ್ತದೆ.

**ವೈಷ್ಣವ ಕ್ಷೇತ್ರಗಳು:** ವೈಷ್ಣವ ಕ್ಷೇತ್ರಗಳಲ್ಲಿ ಉಡುಪಿ ಮುಂಚೂಣಿಯಲ್ಲಿದೆ. ಉಡುಪಿಯಲ್ಲಿ ಮಧ್ವಚಾರ್ಯರು ಶ್ರೀಕೃಷ್ಣನ ಮೂರ್ತಿಯನ್ನು ಸ್ಥಾಪಿಸಿದರು. ಕೃಷ್ಣನ ಸೇವೆಗೆಂದು ಅವರು ಎಂಟು(ಅಷ್ಟ) ಮಠಗಳನ್ನು ಸ್ಥಾಪಿಸಿದರು. ಮಾಧ್ವ ವೈಷ್ಣವರಿಗೆ ವಾದಿರಾಜರ ಬೃಂದಾವನವಿರುವ ಉತ್ತರ ಕನ್ನಡದ ಸೋಂದಾ ಮೊದಲಾದ ಕ್ಷೇತ್ರಗಳಿವೆ. ಮಳಖೇಡದಲ್ಲಿ (ಕಲಬುರ್ಗಿ ಜಿಲ್ಲೆ) ಜಯತೀರ್ಥ ಯತಿಗಳ ಬೃಂದಾವನವಿದೆ. ಹೊಸಪೇಟೆಯಲ್ಲಿ ಈ ಪರಂಪರೆಯ ಉತ್ತರಾದಿ ಮಠವಿದೆ. ಹಂಪೆಯ ಸಮೀಪ ಆನೆಗೊಂದಿಯ ಬಳಿ ತುಂಗಭದ್ರೆಯ ನಡುಗಡ್ಡೆಯಲ್ಲಿ ಮಾಧ್ವಸಂಪ್ರದಾಯದ ಒಂಬತ್ತು ದಾರ್ಶನಿಕರ ನವ ಬೃಂದಾವನಗಳಿವೆ. ಕೋಲಾರ ಜಿಲ್ಲೆ ಮುಳಬಾಗಿಲಿನಲ್ಲಿ ಶ್ರೀಪಾದರಾಜರ ಬೃಂದಾವನವಿದೆ. ನಂಜನಗೂಡು, ಸೋಸಲೆ, ತಿರುಮಕೂಡಲು, ಹೊಳೆನರಸೀಪುರ, ಅಬ್ಬೂರು ಮತ್ತು ಸವಣೂರು ಮಾಧ್ವರ ಇತರ ಪ್ರಮುಖ ತೀರ್ಥಕ್ಷೇತ್ರಗಳು. ಸವಣೂರಿನಲ್ಲಿ ಹೈದರನಿಂದ ಸನ್ಮಾನಿತರಾದ ಉತ್ತರಾಧಿಮಠದ ಸತ್ಯಬೋಧತೀರ್ಥರ ಬೃಂದಾವನವಿದೆ. ಧಾರವಾಡ ಜಿಲ್ಲೆ ಕಾಗಿನೆಲೆಯಲ್ಲಿ ವೈಷ್ಣವ ಸಂತ ಕನಕದಾಸರ ಸಮಾಧಿಯಿದ್ದು, ಈಚೆಗೆ ಕನಕಗುರುಪೀಠವೆಂಬ ಹೆಸರಿನ ಮಠ ಸ್ಥಾಪನೆಯಾಗಿದೆ.

**ಶ್ರೀವೈಷ್ಣವ ಕ್ಷೇತ್ರಗಳು:** ಶ್ರೀವೈಷ್ಣವ ಧರ್ಮವನ್ನು ೧೨ನೇ ಶತಮಾನದಲ್ಲಿ ರಾಮಾನುಜಾಚಾರ್ಯರು ಪ್ರಚುರಪಡಿಸಿದರು. ಅವರು ಮೈಸೂರು ಜಿಲ್ಲೆಯ ಮಿರ್ಲೆ, ಸಾಲಿಗ್ರಾಮ, ಮಂಡ್ಯ ಜಿಲ್ಲೆಯ ತೊಣ್ಣೂರು ಮತ್ತು ಮೇಲುಕೋಟೆಗಳಲ್ಲಿ ಸ್ವಲ್ಪ ಕಾಲ ನೆಲೆಸಿದ್ದರು. ಅವರು ಮೇಲುಕೋಟೆ ಚೆಲುವರಾಯ ಸ್ವಾಮಿಯ ದೇವಸ್ಥಾನವನ್ನು ನವೀಕರಿಸಿದರೆನ್ನಲಾಗಿದೆ. ಮೈಸೂರಿನಲ್ಲಿ ಪರಕಾಲ ಮಠವೂ, ಬೆಂಗಳೂರು ಮಲ್ಲೇಶ್ವರಂನಲ್ಲಿ ಜೀಯರ್ ಯತಿರಾಜ ಮಠಗಳೂ ಇವೆ. ಶ್ರೀವೈಷ್ಣವರಿಗೆ ಪವಿತ್ರವೆನ್ನಲಾದ ಮೇಲಿನ ಸ್ಥಳಗಳಲ್ಲದೆ ರಾಜ್ಯದಾದ್ಯಂತ ಶ್ರೀವಿಷ್ಣುವಿನ ೨೪ (ಚತುರ್ ವಿಂಶತಿ) ಅವತಾರ ಮೂರ್ತಿಗಳ ದೇವಸ್ಥಾನಗಳೂ ಇವೆ. ಮೇಲುಕೋಟೆ, ಬಿಳಿಗಿರಿರಂಗನಬೆಟ್ಟ ಮತ್ತು ಹಿಮವತ್ ಗೋಪಾಲಸ್ವಾಮಿ ಬೆಟ್ಟಗಳ ಬಗ್ಗೆ ಈಗಾಗಲೇ ಉಲ್ಲೇಖಿಸಲಾಗಿದೆ.

**ನರಸಿಂಹನ ಆರಾಧನೆ:** ನರಸಿಂಹನ ಆರಾಧನೆಯ ಪ್ರಸಿದ್ಧ ಸ್ಥಳಗಳಾದ ಬೆಳಗಾವಿ ಜಿಲ್ಲೆಯ ರಾಯಬಾಗ, ಸತ್ತಿ ಮತ್ತು ಹಲಸಿ; ಹಂಪೆಯ ಲಕ್ಷ್ಮೀನರಸಿಂಹ; ಮಂಡ್ಯ ಜಿಲ್ಲೆಯ ನಾಗಮಂಗಲ ಮತ್ತು ಮದ್ದೂರು; ಬೀದರ್‌ನ ಬಳಿಯ ಝರಣಿ ನರಸಿಂಹ, ತುಮಕೂರು ಜಿಲ್ಲೆಯ ದೇವರಾಯನದುರ್ಗ ಮತ್ತು ಸಿಬಿ; ರಾಯಚೂರು ಜಿಲ್ಲೆಯ ಕೊಪ್ಪ, ಬಾಗಲಕೋಟೆ ಜಿಲ್ಲೆಯ ಸಾವಳಗಿ, ವಿಜಯಪುರದ ಬಳಿಯ ತೊರವಿ, ಮೈಸೂರು ಜಿಲ್ಲೆಯ ಟಿ.ನರಸೀಪುರ ಶ್ರೀರಂಗಪಟ್ಟಣದ ನರಸಿಂಹನ ಪ್ರಮುಖ ಆರಾಧನೆಯ ಪ್ರಸಿದ್ಧ ಕ್ಷೇತ್ರಗಳಾಗಿವೆ.

**ರಂಗನಾಥನ ಆರಾಧನೆ:** ಕರ್ನಾಟಕದಲ್ಲಿರುವ ಕಾವೇರಿಯ ದ್ವೀಪಗಳಾದ ಶ್ರೀರಂಗಪಟ್ಟಣ ಮತ್ತು ಶಿವಸಮುದ್ರಗಳು ರಂಗನಾಥನ ಸುಪ್ರಸಿದ್ಧ ಆರಾಧನಾ ಸ್ಥಳಗಳಾಗಿದ್ದು, ಚಿಕ್ಕಬಳ್ಳಾಪುರ ಜಿಲ್ಲೆಯ ರಂಗಸಲ ಹಾಗೂ ರಾಯಚೂರು ಜಿಲ್ಲೆಯ ಆನೆಗೊಂದಿಯ ರಂಗನಾಥ ಸ್ವಾಮಿ ದೇವಸ್ಥಾನವೂ ಅಷ್ಟೇ ಪ್ರಖ್ಯಾತವಾಗಿದೆ. ಬೇಲೂರಿನ ಚೆನ್ನಕೇಶವ, ತಲಕಾಡಿನ ಕೀರ್ತಿನಾರಾಯಣ, ಗದುಗಿನ ವೀರನಾರಾಯಣ ದೇವಸ್ಥಾನಗಳು ಪ್ರಸಿದ್ಧ ಶ್ರೀವೈಷ್ಣವ ಯಾತ್ರಾ ಸ್ಥಳಗಳು. ಮೈಸೂರು ಜಿಲ್ಲೆಯ ಚುಂಚನಕಟ್ಟೆ, ಚಿಕ್ಕಮಗಳೂರು ಬಳಿಯ ಹಿರೇಮಗಳೂರು ಮತ್ತು ಕೃಷ್ಣರಾಜನಗರಗಳಲ್ಲಿ ಶ್ರೀರಾಮನ ದೇವಸ್ಥಾನಗಳಿವೆ. ವಿಷ್ಣುವನ್ನು ವರಾಹ ರೂಪದಲ್ಲಿ ಆರಾಧಿಸುವ ದೇವಾಲಯಗಳು ಹಲಸಿ (ಬೆಳಗಾವಿ ಜಿಲ್ಲೆ), ವರಾಹನಾಥ ಕಲ್ಲಹಳ್ಳಿ (ಮಂಡ್ಯ ಜಿಲ್ಲೆ) ಹಾಗೂ ಮೈಸೂರು ನಗರದಲ್ಲಿವೆ.

**ಹನುಮಂತನ ಆರಾಧನೆ:** ಇವನು ಜನಪ್ರಿಯ ವೈಷ್ಣವ ದೇವರು. ಹನುಮಂತನ ದೇವಸ್ಥಾನಗಳು ಹಂಪೆ, ಬನ್ನೂರು (ಮೈಸೂರು), ಬಾಣಸವಾಡಿ (ಬೆಂಗಳೂರು) ಯಲಗೂರು (ವಿಜಯಪುರ), ಮುಳಬಾಗಿಲು (ಕೋಲಾರ), ಕದರ ಮಂಡಲಗಿ (ಹಾವೇರಿ ಜಿಲ್ಲೆ), ಕೆಂಗಲ್ ಆಂಜನೇಯ (ಚನ್ನಪಟ್ಟಣ ಬಳಿ) ಮುಂತಾಗಿ ಹತ್ತಾರು ಇವೆ. ಮಂಡ್ಯ ಜಿಲ್ಲೆಯ ಕಾವೇರಿ ನದಿ ತಟದ ಮುತ್ತತ್ತಿಯಲ್ಲಿ ಹನುಮಂತನ (ಮುತ್ತತ್ತಿರಾಯ) ಪ್ರಸಿದ್ಧವಾದ ದೇವಸ್ಥಾನವಿದೆ.

**ಸುಬ್ರಹ್ಮಣ್ಯನ ಉಪಾಸನೆ:** ರಾಜ್ಯದಲ್ಲಿ ಸುಬ್ರಹ್ಮಣ್ಯನ ಹಲವಾರು ಉಪಾಸನಾ ಕೇಂದ್ರಗಳಿವೆ. ಬಳ್ಳಾರಿ ಜಿಲ್ಲೆಯ ನೈಸರ್ಗಿಕ ಬೆಟ್ಟ ಪ್ರದೇಶದ ಸಂಡೂರು, ಬೆಂಗಳೂರು ಜಿಲ್ಲೆಯ ಘಾಟಿ ಸುಬ್ರಹ್ಮಣ್ಯ, ದಕ್ಷಿಣ ಕನ್ನಡದ ಕುಕ್ಕೆ ಸುಬ್ರಹ್ಮಣ್ಯ ಇಂಥ ಕೆಲವು ಪ್ರಮುಖ ಕ್ಷೇತ್ರಗಳಾಗಿವೆ.

ಕೆಲವು ಕಡೆ ಕಾರ್ತಿಕೇಯನನ್ನು ನಾಗಪೂಜೆಯೊಂದಿಗೆ ಸಮೀಕರಿಸಲಾಗಿದ್ದು, ವಿಶಾಲವಾದ ಪ್ರದೇಶದಲ್ಲಿ ಹೂ ಹಾಗೂ ಬಣ್ಣಗಳಿಂದ ನಾಗಮಂಡಲ ರಚಿಸಿ ಆರಾಧಿಸಲಾಗುತ್ತದೆ. ಇದರ ಸುತ್ತ ನುರಿತ ಪೂಜಾರಿಗಳು ವಿಶೇಷ ನೃತ್ಯಾಚರಣೆಯಲ್ಲಿ ತೊಡಗುತ್ತಾರೆ. ನಾಗಮಂಡಲ ಪೂಜೆ, ಯಕ್ಷಗಾನಗಳು ಕರಾವಳಿಗೆ ಬರುವ ಯಾತ್ರಿಕರಿಗೆ ವಿಶಿಷ್ಟ ಅನುಭವವನ್ನು ಒದಗಿಸುತ್ತವೆ. ಜೊತೆಗೆ ಭೂತಾರಾಧನೆಯೂ ಸಹ ವಿನೂತನ ಅನುಭವವನ್ನು ನೀಡುತ್ತದೆ. ಇನ್ನೊಂದು ಜನಪದ ಕಲೆಯಾದ ವೀರಗಾಸೆ ಕುಣಿತ ವೀರಭದ್ರನನ್ನು ಸಂತೃಪ್ತಿಪಡಿಸಲು ಇರುವಂಥದ್ದು. ಇದೂ ಸಹ ವೀಕ್ಷಕರನ್ನು ಮಂತ್ರಮುಗ್ಧಗೊಳಿಸುತ್ತದೆ. ಬೀರೆ ದೇವರನ್ನು ತೃಪ್ತಿಗೊಳಿಸಲು ಡೊಳ್ಳು ಬಾರಿಸುತ್ತಾ ಮಾಡುವ ಕುಣಿತ ಹಾಗೂ ಮೈಸೂರು ಭಾಗದಲ್ಲಿ ಹೆಸರಾಗಿರುವ ಪಟ್ಟದ

ಕುಣಿತವೂ ಸಹ ಮೈನವಿರೇಳಿಸುವ ಕಲೆ. ಮುಖವಾಡ ಧರಿಸಿ ವಾದ್ಯದ ಗತ್ತಿಗೆ ನರ್ತಿಸುವ ಸೋಮನ ಕುಣಿತವೂ ಕೂಡ ವಿನೂತನ ಅನುಭವವನ್ನು ಕೊಡುತ್ತದೆ. ಮಹದೇಶ್ವರನ ಭಕ್ತರಾದ ದೇವರಗುಡ್ಡರು ಪ್ರದರ್ಶಿಸುವ ಕಂಸಾಳೆ ನೃತ್ಯವೂ ಸಹ ಅತ್ಯಂತ ಆಕರ್ಷಕ. ನಾಡಿನ ಇಂಥ ಅನೇಕ ಜನಪದ ಕಲೆಗಳು ಪ್ರೇಕ್ಷಕರ ನೆನಪಿನಲ್ಲಿ ಬಹುಕಾಲ ಉಳಿಯುವಂಥ ವೈಶಿಷ್ಟ್ಯತೆಯನ್ನು ಹೊಂದಿವೆ.

ಜಾನಪದ ವಿದ್ವಾಂಸ ಎಚ್.ಎಲ್.ನಾಗೇಗೌಡರ, ಕರ್ನಾಟಕ ಜಾನಪದ ಪರಿಷತ್ತಿನ ವತಿಯಿಂದ ಮೈಸೂರು–ಬೆಂಗಳೂರು ರಸ್ತೆಯ ರಾಮನಗರದ ಬಳಿ ಸ್ಥಾಪಿಸಿರುವ ಜಾನಪದ ಲೋಕ, ಉಡುಪಿಯ ಎಂ.ಜಿ.ಎಂ. ಕಾಲೇಜಿನಲ್ಲಿರುವ ಪ್ರಾಂತೀಯ ಸಂಶೋಧನಾ ಕೇಂದ್ರಗಳು, ದೃಶ್ಯ–ಶ್ರವಣ ಸುರುಳಿಗಳನ್ನು (Audio-Visual Tapes) ಒದಗಿಸುತ್ತಿದ್ದು, ಮೈಸೂರು ವಿಶ್ವವಿದ್ಯಾಲಯದಲ್ಲಿ ಬೃಹತ್ತಾದ ಜಾನಪದ ವಸ್ತು ಸಂಗ್ರಹಾಲಯವಿದೆ. ಇತ್ತೀಚೆಗೆ ಪ್ರತ್ಯೇಕ ಜಾನಪದ ವಿಶ್ವವಿದ್ಯಾಲಯವನ್ನೂ ರಾಜ್ಯದಲ್ಲಿ ಸ್ಥಾಪಿಸಲಾಗಿದೆ.

**ಸಿಖ್ ಪಂಥ್ಯ:** ಸಿಖ್ಖರಿಗೆ ಬೀದರ್‌ನಲ್ಲಿ ಪ್ರಸಿದ್ಧ ನಾನಕ್ ಝಿರಾ ಇದ್ದು, ಗುರುನಾನಕರು ಈ ಸ್ಥಳಕ್ಕೆ ಬಂದಿದ್ದರೆನ್ನಲಾಗಿದೆ. ಬೆಂಗಳೂರಿನ ಹಲಸೂರಿನಲ್ಲಿ ಅಮೃತಶಿಲೆಯಲ್ಲಿ ಇತ್ತೀಚೆಗೆ ಕಟ್ಟಿರುವ ಗುರುದ್ವಾರವಿದೆ. ಬೆಂಗಳೂರಿನ ಪಾರ್ಸಿಗಳು ತಮಗೆಂದೇ ಅಗ್ನಿದೇವಸ್ಥಾನವನ್ನು ನಿರ್ಮಿಸಿಕೊಂಡಿದ್ದಾರೆ.

**ರಾಷ್ಟ್ರೀಯ ಉದ್ಯಾನಗಳು:** ರಾಜ್ಯದಲ್ಲಿ ಅನೇಕ ರಾಷ್ಟ್ರೀಯ ಉದ್ಯಾನವನ ಮತ್ತು ವನ್ಯಜೀವಿ ಧಾಮಗಳಿವೆ. ಬೆಂಗಳೂರು ಬಳಿ ಬನ್ನೇರುಘಟ್ಟದಲ್ಲಿರುವ ರಾಷ್ಟ್ರೀಯ ಉದ್ಯಾನವು ೧೦೦ ಚ.ಕಿ.ಮೀ. ವಿಸ್ತಾರವಿದ್ದು, ಅಲ್ಲಿ ಪ್ರಾಣಿಗಳ ಸಫಾರಿ ಕೂಡ ಇದೆ. ಮೈಸೂರು ಜಿಲ್ಲೆಯ ಬಂಡಿಪುರ ಅಭಯಾರಣ್ಯ ೮೦೦ ಚ.ಕಿ.ಮೀ. ಪ್ರದೇಶವನ್ನು ಒಳಗೊಂಡಿದ್ದು, ಕಾಡಾನೆಗಳಿಗೆ ಪ್ರಸಿದ್ಧವಾಗಿದೆ. ಕುದುರೆಮುಖ ರಾಷ್ಟ್ರೀಯ ಉದ್ಯಾನವನವು ಪಶ್ವಿಮ ಘಟ್ಟದಲ್ಲಿದ್ದು ೬೦೦ ಚ.ಕಿ.ಮೀ. ಪ್ರದೇಶವನ್ನು ಹೊಂದಿದ್ದು ಎಲ್ಲಾ ಬಗೆಯ ಪ್ರಾಣಿ ಮತ್ತು ಸಸ್ಯವರ್ಗಗಳಿಂದ ಕೂಡಿದೆ. ಕುದುರೆಮುಖ ಕಬ್ಬಿಣ ಕಂಪನಿ ಈ ಉದ್ಯಾನದ ನಡುವೆ ಮಲ್ಲೇಶ್ವರದಲ್ಲಿದ್ದು, ತನ್ನದೇ ಉಪನಗರ ಹಾಗೂ ಅತಿಥಿಗೃಹಗಳನ್ನು ಹೊಂದಿದೆ. ಕೊಡಗು ಮತ್ತು ಮೈಸೂರು ಜಿಲ್ಲೆಗಳನ್ನು ಒಳಗೊಂಡು ನಾಗರಹೊಳೆ ರಾಷ್ಟ್ರೀಯ ಉದ್ಯಾನವು ಹುಲಿಗಳ ವಾಸದಿಂದಾಗಿ ಪ್ರಸಿದ್ಧವಾಗಿದೆ. ಇಲ್ಲಿ ಪ್ರವಾಸಿಗಳಿಗೆ ಅನುಕೂಲವಾಗುವಂತೆ ವಸತಿ ಸೌಲಭ್ಯವಿದೆ. ಕೊಡಗಿನ ಬ್ರಹ್ಮಗಿರಿ (ಕಾವೇರಿ) ವನ್ಯಜೀವಿ ಧಾಮದಲ್ಲಿ ಪ್ರಾಣಿಗಳು ತಮ್ಮ ಸ್ವೇಚ್ಛಾ ಚಟುವಟಿಕೆಗಳೊಂದಾಗಿರುವುದನ್ನು ಕಾಣಬಹುದಾಗಿದೆ. ಇದು ಸಮುದ್ರಮಟ್ಟಕ್ಕಿಂತ ೨೦೦೦ ದಿಂದ ೬೦೦೦ ಅಡಿ ಎತ್ತರದಲ್ಲಿದೆ. ಧಾರವಾಡ ಜಿಲ್ಲೆಯ ರಾಣಿಬೆನ್ನೂರು ವನ್ಯಜೀವಿ ಧಾಮ ಕೂಡ ಸುಮಾರು ೧೦೦ ಚ.ಕಿ.ಮೀ. ವಿಸ್ತಾರವಾಗಿದ್ದು ಚಂಚಲತೆಯಿಂದ ಕೂಡಿದ ಕಪ್ಪು ಸಾರಂಗಗಳ ಬೀಡಾಗಿದೆ. ಆದಿಚುಂಚನಗಿರಿಯಲ್ಲಿ ನವಿಲುಧಾಮವಿದೆ ಅದೊಂದು ಗುಡ್ಡಪ್ರದೇಶವಾಗಿದ್ದು ಅಲ್ಲಿ ಭೈರವ ದೇವಸ್ಥಾನ ಮತ್ತು ಒಕ್ಕಲಿಗರ ಮಠವಿದೆ. ಬೆಳಗಿನ ಹೊತ್ತು ನಲಿದಾಡುವ ನವಿಲ ಹಿಂಡುಗಳನ್ನು ಅಲ್ಲಿ ಕಾಣಬಹುದು. ಉತ್ತರ ಕನ್ನಡ ಜಿಲ್ಲೆಯ ದಾಂಡೇಲಿ ವನ್ಯಜೀವಿ ಧಾಮವು ಕಾಡುಕೋಣ, ಜಿಂಕೆ ಮತ್ತು ಇತರ ಕಾಡು ಪ್ರಾಣಿಗಳಿಗೆ ಪ್ರಸಿದ್ಧವಾಗಿದೆ. ಶ್ರೀರಂಗಪಟ್ಟಣದ ಬಳಿಯ ರಂಗನತಿಟ್ಟು ಕಾವೇರಿ ತೀರದ ಒಂದು ಸಣ್ಣ ದ್ವೀಪವಾಗಿದ್ದು ಪಕ್ಷಿಧಾಮವೆನಿಸಿದೆ. ಎಲ್ಲ ಬಗೆಯ ವಲಸೆ ಹಕ್ಕಿಗಳು ಅಧಿಕ ಸಂಖ್ಯೆಯಲ್ಲಿ ಇಲ್ಲಿಗೆ ಬಂದು ಮರಗಳ ಮೇಲೆ, ಪೊದೆಗಳಲ್ಲಿ ಗೂಡುಕಟ್ಟಿ ಮೊಟ್ಟೆಯಿಟ್ಟು, ಮರಿ ಮಾಡಿ ಅವಕ್ಕೆ ಗುಟುಕು ಕೊಡುವುದನ್ನು ಕಾಣಬಹುದು. ಅಲ್ಲೇ ಸಮೀಪವಿರುವ ಗೆಂಡೆ ಹೊಸಹಳ್ಳಿ ಇನ್ನೊಂದು ಪಕ್ಷಿಧಾಮವಾಗಿ ರೂಪುಗೊಳ್ಳುತ್ತಿದೆ. ಶಿವಮೊಗ್ಗ ಜಿಲ್ಲೆ ಸೊರಬ ತಾಲೂಕಿನ ಗುಡವಿ ಪಕ್ಷಿಧಾಮ ಹಾಗೂ ತೀರ್ಥಹಳ್ಳಿ ತಾಲೂಕಿನ ಮಂಡಗದ್ದೆ ಪಕ್ಷಿಧಾಮಗಳು ಪ್ರಸಿದ್ಧವಾಗಿವೆ. ಮಂಡ್ಯ ಜಿಲ್ಲೆಯ ಮದ್ದೂರು ಬಳಿಯ ಕೊಕ್ಕರೆ ಬೆಳ್ಳೂರು ಇನ್ನೊಂದು ಪ್ರಸಿದ್ಧ ಪಕ್ಷಿಧಾಮವಾಗಿದೆ. ಕಾಡುಪ್ರಾಣಿಗಳ ಜೀವನ ಹಾಗೂ ಕಾಡಿನ ನೈಸರ್ಗಿಕ ಸೊಬಗನ್ನು ಪ್ರೀತಿಸುವ ಪ್ರವಾಸಿಗಳು, ಘಟ್ಟದಾರಿಯಲ್ಲಿ ಗುಡ್ಡ ಏರಬೇಕೆಂಬ ಉತ್ಸಾಹಿಗಳು ಇಂಥ ಸ್ಥಳಗಳನ್ನು ಸಂದರ್ಶಿಸಿ ಕರ್ನಾಟಕದ ನೈಸರ್ಗಿಕ ಚೆಲುವನ್ನು ನೋಡಿ ಆನಂದಿಸಬಹುದಾಗಿದೆ. ಇಲ್ಲಿನ ಕೆರೆಗಳು, ಹೊಳೆಗಳು ಮತ್ತು ನೀರ್ಬೀಳುಗಳು ಪ್ರವಾಸಿಗರ ಆಯಾಸವನ್ನು ಹೋಗಲಾಡಿಸುತ್ತವೆ. ಪಕ್ಷಿಗಳ ಕಲರವ, ಕಾಡಿನಕೀಟಗಳ ಗುಯ್‌ಕಾರ ಸ್ವಾಭಾವಿಕವಾದ ಸಂಗೀತವನ್ನು ಒದಗಿಸಿ ಪ್ರವಾಸಿಗರ ಮನಸ್ಸನ್ನು ಉಲ್ಲಾಸಗೊಳಿಸುತ್ತವೆ. ಕರ್ನಾಟಕದಲ್ಲಿ ಯಾಣ, ಕವಲೆದುರ್ಗ, ಗೊಟ್ಮಂಗೊಟಿ, ಬಿಳಿಗಿರಿರಂಗನಬೆಟ್ಟ, ಕಬ್ಬಾಳದುರ್ಗ, ಭೀಮನಬೆಟ್ಟ, ಬಸವನಬೆಟ್ಟ, ಮಹದೇಶ್ವರ ಬೆಟ್ಟ, ಸಿದ್ಧರ ಬೆಟ್ಟ, ಮಧುಗಿರಿ, ನಂದಿ, ಶಿವಗಂಗೆ, ಸಿದ್ಧಗಂಗೆ, ಕೋಲಾರ ಮುಂತಾದೆಡೆಯ ಬೆಟ್ಟಗಳು ಚಾರಣ ಪ್ರಿಯರಿಗೆ ಹೇಳಿ ಮಾಡಿಸಿದ ತಾಣಗಳಾಗಿವೆ.

**ಗಿರಿಧಾಮಗಳು:** ಕರ್ನಾಟಕದಲ್ಲಿ ತಂಪಾದ ಅನೇಕ ಗಿರಿಧಾಮಗಳಿದ್ದು, ಕುದುರೆಮುಖ ಅಂಥದೊಂದಾದರೆ ಚಿಕ್ಕಮಗಳೂರು ಜಿಲ್ಲೆಯ ಕೆಮ್ಮಣ್ಣುಗುಂಡಿಯು ಸುಂದರಕಾಡಿನ ನಡುವೆ ತೋಟಗಾರಿಕೆ ಇಲಾಖೆಯವರು ನಿರ್ಮಿಸಿರುವ ವಸತಿ ಸೌಕರ್ಯ ಹೊಂದಿರುವ ಇನ್ನೊಂದು ಗಿರಿಧಾಮವಾಗಿದೆ. ಮೈಸೂರು ಜಿಲ್ಲೆಯ ಬಿಳಿಗಿರಿ ರಂಗನ ಬೆಟ್ಟವು ಅಲ್ಲಿರುವ ಪ್ರಾಚೀನ ಶ್ರೀನಿವಾಸ ದೇವಸ್ಥಾನದಿಂದಾಗಿ ಪ್ರಸಿದ್ಧವಾಗಿದ್ದು, ಗುಡಿಯ ಸುತ್ತಲೂ ಅಭಯಾರಣ್ಯವಿದೆ. ಈ ಪ್ರದೇಶದ ಸುತ್ತಮುತ್ತ ಕಾಡಾನೆಗಳು ಕಂಡು ಬರುತ್ತವೆ. ಬುಡಕಟ್ಟು ಜನಾಂಗಕ್ಕೆ ಸೇರಿದ ಸೋಲಿಗರು ಇಲ್ಲಿ ವಾಸಿಸುತ್ತಾರೆ. ಗುಂಡ್ಲುಪೇಟೆ ಬಳಿಯ (ಚಾಮರಾಜನಗರ ಜಿಲ್ಲೆ) ಹಿಮವತ್ ಗೋಪಾಲಸ್ವಾಮಿಬೆಟ್ಟವು ಮತ್ತೊಂದು ಸುಂದರ ಗಿರಿಧಾಮವಾಗಿದೆ. ಬೆಟ್ಟದ ತುದಿಯಲ್ಲಿ ವೇಣುಗೋಪಾಲಸ್ವಾಮಿ ದೇವಸ್ಥಾನವಿದೆ. ಅಲ್ಲಿ ವಿಶ್ರಾಂತಿಗೃಹವಿದ್ದು ಊಟ ತಿಂಡಿ ಅನುಕೂಲವೂ ಇದೆ. ತುಮಕೂರು ಜಿಲ್ಲೆಯ ದೇವರಾಯನ ದುರ್ಗದ ಮೇಲೆ ಭೋಗ ಲಕ್ಷ್ಮೀನರಸಿಂಹ ಮತ್ತು ಯೋಗಾನರಸಿಂಹನ ದೇವಸ್ಥಾನಗಳಿವೆ. ಅದೊಂದು ತಂಪಾದ ಗಿರಿಧಾಮ. ಈ ಬೆಟ್ಟವನ್ನು ಕಲ್ಲಿನ ಕೋಟೆ ಬಳಸಿ ನಿಂತಿದೆ. ಕೋಲಾರ ಜಿಲ್ಲೆಯ ನಂದಿದುರ್ಗ ಒಂದು ಪ್ರಾಚೀನ ಸ್ಥಳವಾಗಿದ್ದು, ಬೆಟ್ಟದ ಮೇಲೆ ಚೋಳರ ಕಾಲದ ಯೋಗನಂದೀಶ್ವರ ದೇವಸ್ಥಾನವಿದೆ. ಸುತ್ತಲೂ ಹೈದರ್ ಮತ್ತು ಟಿಪ್ಪು ನಿರ್ಮಿಸಿದ ಕೋಟೆಯಿದೆ. ಅಲ್ಲಿ ವಸತಿ ಸೌಕರ್ಯವಿದೆ. ತೋಟಗಾರಿಕೆ ಇಲಾಖೆಯವರು ಬೆಟ್ಟದ ಮೇಲೆ ಉದ್ಯಾನವನ್ನು ನಿರ್ಮಿಸಿದ್ದಾರೆ. ಇಲ್ಲಿಗೆ ಮಹಾತ್ಮಾಗಾಂಧಿಯವರು ತಮ್ಮ ಆರೋಗ್ಯ ಚೇತರಿಕೆಗಾಗಿ ಎರಡೂ ಸಲ ಬಂದು ಕೆಲದಿನದ ಮಟ್ಟಿಗೆ ತಂಗಿದ್ದರು. ಶಿವಮೊಗ್ಗ ಜಿಲ್ಲೆಯ ಆಗುಂಬೆಯು ಬೆಟ್ಟ ಪ್ರದೇಶವಲ್ಲದಿದ್ದರೂ ಬೆಟ್ಟದ

ದಾರಿಯಲ್ಲಿ ಸೂರ್ಯಾಸ್ತದ ಅವರ್ಣನೀಯ ಸೊಬಗನ್ನು ಕಾಣಿಸುವ ತಾಣವೆಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ತುಮಕೂರು ಜಿಲ್ಲೆಯ ಸಿದ್ಧರ ಬೆಟ್ಟ, ಬಳ್ಳಾರಿ ಜಿಲ್ಲೆಯ ರಾಮದುರ್ಗ, ಚಿತ್ರದುರ್ಗ ಜಿಲ್ಲೆಯ ಜೋಗಿಮಟ್ಟಿಯಲ್ಲೂ ಗಿರಿದುರ್ಗಗಳಿವೆ.

**ಅಣೆಕಟ್ಟೆಗಳು:** ಕೃಷ್ಣರಾಜ ಸಾಗರ (ಕನ್ನಂಬಾಡಿ ಕಟ್ಟೆ ಮಂಡ್ಯ ಜಿಲ್ಲೆ), ನಾರಾಯಣಪುರ ಹಾಗೂ ಆಲಮಟ್ಟಿ (ವಿಜಯಪುರ ಜಿಲ್ಲೆ) ಚಂದ್ರಪಳ್ಳ (ಕಲಬುರಗಿ ಜಿಲ್ಲೆ), ನವಿಲು ತೀರ್ಥ (ಬೆಳಗಾವಿ ಜಿಲ್ಲೆ), ಮುನಿರಾಬಾದ್, ಲಕ್ಕವಳ್ಳಿ, ಬೀಚನಹಳ್ಳಿ, ಮಾರಿಕಣಿವೆ, ಗಾಜನೂರು, ಹಿಕಕಲ್, ವಾರಂಜಾ, ವಾರಾಹಿ, ಸೂಫಾ, ಮುಂತಾದವು ರಾಜ್ಯದಲ್ಲಿರುವ ಪ್ರಮುಖ ಅಣೆಕಟ್ಟೆಗಳಾಗಿದ್ದು, ಪ್ರವಾಸಿಗರಿಗೆ ಮುದ ನೀಡುತ್ತದೆ.

**ಕಡಲ ಕಿನಾರೆಗಳು:** ಸಮುದ್ರ ತಡಿಯ ಸೂರ್ಯಸ್ನಾನ, ಸಮುದ್ರದ ಅಲೆಯ ಸ್ಪರ್ಶ ಒದಗಿಸುವ ಚೆಲುವಿನ ಕಡಲ ಕಿನಾರೆಗಳಿವೆ. ಮಂಗಳೂರು ಬಳಿಯ ಒಂದು ದ್ವೀಪದಂತಿರುವ ಬೆಂಗ್ರೆ ಮತ್ತು ಉಲ್ಲಾಳಗಳು ಗಮನಾರ್ಹ ಕಡಲತೀರಗಳು. ಉಲ್ಲಾಳದಲ್ಲಿ ಕುಟೀರಗಳಿದ್ದು, ಆಹಾರ ಸೌಕರ್ಯವಿದೆ. ಮಂಗಳೂರಿನಿಂದ ಅನತಿ ದೂರದಲ್ಲಿರುವ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಸೂರತ್ಕಲ್ ರೀಜನಲ್ ಎಂಜಿನಿಯರಿಂಗ್) ಕಾಲೇಜಿನ ಬಳಿಯ ಲೈಟ್‌ಹೌಸ್ ತೀರ, ತಣ್ಣೀರುಬಾವಿಯ ಕಡಲತೀರ, ಉಡುಪಿಯ ಬಳಿಯ ಮಲ್ಪೆಗಳಲ್ಲಿ ನೀಡಿದಾದ ಕಡಲಕಿನಾರೆಯಿದೆ, ಸಮೀಪವೇ ದ್ವೀಪವೂ ಇದೆ. ಕರಾವಳಿ ಕರ್ನಾಟಕದ ಎರಡು ಜಿಲ್ಲೆಗಳ ಗಡಿಯಲ್ಲಿರುವ ಕುಂದಾಪುರ ತಾಲೂಕಿನ ಮರವಂತೆಯು ಒಂದು ಕಡೆ ಸುಂದರ ಕಡಲಂಚನ್ನು ಇನ್ನೊಂದು ಕಡೆ ನದಿಯನ್ನು ಹೊಂದಿದ್ದು, ನಡುವೆ ರಸ್ತೆಯು ಸಾಗಿದೆ. ಇಲ್ಲಿಯ ಸೂರ್ಯಾಸ್ತದ ಸುಂದರ ದೃಶ್ಯ ಮನಮೋಹಕ. ಉತ್ತರ ಕನ್ನಡದ ಪಾವನಕ್ಷೇತ್ರ ಗೋಕರ್ಣವೂ ಸಹ ಉದ್ದನೆಯ ಕಡಲ ತೀರವನ್ನು ಹೊಂದಿದೆ. ಗೋವೆಗೆ ಭೇಟಿ ಕೊಡುವ ಜನರಿಗೆ ಇದು ಎರಡನೆಯ ತಂಗುದಾಣವಾಗಿದೆ. ಕಾರವಾರವು ತನ್ನ ಸುತ್ತ ಅನೇಕ ಕಿನಾರೆಗಳನ್ನು ಹೊಂದಿದ್ದು ರವೀಂದ್ರನಾಥ ಠಾಗೋರರು ಕಾರವಾರದ ಕಡಲ ತೀರದ ಮರೆಯಲಾಗದ ಅನುಭವಗಳನ್ನು ೧೮೮೩ರಲ್ಲಿ ತಮ್ಮ ಅಣ್ಣ ನ್ಯಾಯಾಧೀಶ ಸತ್ಯೇಂದ್ರನಾಥರೊಂದಿಗೆ ಕಾರವಾರದಲ್ಲಿದ್ದಾಗ ಪಡೆದಿದ್ದು, ಅವರ ಕಾವ್ಯಗಳಲ್ಲಿ ಅದು ವ್ಯಕ್ತಗೊಂಡಿದೆ. ಅವರು ತಮ್ಮ ಪ್ರಥಮ ಕವನವನ್ನು ಇಲ್ಲಿಯೇ ರಚಿಸಿದರೆಂದು ನಂಬಲಾಗುತ್ತದೆ. ಇವು ಇಂಥ ಹಲವಾರು ಸ್ಥಳಗಳಲ್ಲಿ ಕೆಲವು ಮಾತ್ರ. ಇವು ಪ್ರವಾಸಿಗಳಿಗೆ ಸಮುದ್ರದ ನಂಟನ್ನು ಒದಗಿಸುವುದರ ಜೊತೆಗೆ ಸಮುದ್ರ ಆಹಾರದ ರುಚಿ ನೋಡುವ ಅವಕಾಶವನ್ನೂ ಒದಗಿಸುತ್ತವೆ.

**ದ್ವೀಪಗಳು:** ಕಡಲತೀರವು ಮನಮೋಹಕವಾದ ಕೆಲವು ದ್ವೀಪಗಳನ್ನು ಹೊಂದಿದೆ. ಅವುಗಳಲ್ಲಿ ಮಲ್ಪೆ ಬಳಿಯ ಸೇಂಟ್ ಮೇರಿ ದ್ವೀಪ ಅಥವಾ ತೊನ್ಸೆಪಾರು ವಿಶಿಷ್ಟವಾದ ಕಂಬ ಮಾದರಿಯ ಸ್ತಂಭಾಕೃತಿಯ ಸಂದುಗಳು ನಿಸರ್ಗದತ್ತವಾದ ಶಿಲಾರಚನೆಯಾಗಿವೆ. ಮುರುಡೇಶ್ವರದ ಬಳಿಯ ನೇತ್ರಾಣಿದ್ವೀಪ ಮತ್ತೊಂದು ಆಕರ್ಷಕ ಸ್ಥಳ. ಹೊನ್ನಾವರದ ಬಳಿಯ ಬಸವರಾಜದುರ್ಗ ಇನ್ನೊಂದು ಜಲದುರ್ಗವಾಗಿದ್ದು ಇದನ್ನು ಕಟ್ಟಿಸಿದ್ದು ಕೆಳದಿ ಅರಸರು (ಸುಮಾರು ೧೬ ಮತ್ತು ೧೭ನೇ ಶತಮಾನ). ಇದು ಬೃಹತ್‌ಶಿಲೆಗಳ ಸುಭದ್ರ ಕೋಟೆಯಿಂದ ಆವೃತವಾಗಿದ್ದು, ಗುಡ್ಡದ ಮೇಲೆ ಸಮತಟ್ಟಾದ ಸ್ಥಳವಿದೆ. ಕಾರವಾರದ ಬಳಿ ದೇವಗಡ ಮತ್ತು ಕೂರ್ಮಗಡ ಎಂಬ ಎರಡು ದ್ವೀಪಗಳಿವೆ. ಕೂರ್ಮಗಡದಲ್ಲಿ ನರಸಿಂಹನ ದೇವಾಲಯವಿದೆ. ಇವನ್ನು ಸಂದರ್ಶಿಸುವುದೇ ಒಂದು ಅಪೂರ್ವ ಅನುಭವ. ಆದರೆ ಪ್ರವಾಸಿಗಳಿಗೆ ಹೋಗಿಬರಲು ಸೂಕ್ತ ವಾಹನ ವ್ಯವಸ್ಥೆ ಆಗಬೇಕಿದೆ. ಪ್ರವಾಸಿಗರು ಸಮುದ್ರವನ್ನು ದಾಟಿ ಹೋಗಲು ತಾವೇ ಅನುಕೂಲಗಳನ್ನು ಮಾಡಿಕೊಳ್ಳಬೇಕಾಗಿದ್ದು ಹಾಗೆ ಶ್ರಮಪಟ್ಟು ಹೋದವರು ವಿಶಿಷ್ಟ ಅನುಭವವನ್ನು ಪಡೆದು ಹಿಂತಿರುಗುತ್ತಾರೆ.

**ಚಿತ್ರಕಲೆ:** ಸಂದರ್ಶಕರು ವಿಜಯನಗರ ಕಾಲದ ಹಳೆಯ ವರ್ಣಚಿತ್ರ, ಭಿತ್ತಿಚಿತ್ರಗಳ ಬಗ್ಗೆ ಆಸಕ್ತಿಯುಳ್ಳವರಾದರೆ ಹಂಪೆಯ ವಿರೂಪಾಕ್ಷ ದೇವಸ್ಥಾನ ಮತ್ತು ಮೈಸೂರು ಜಿಲ್ಲೆಯ ಹರದನಹಳ್ಳಿಗಳಲ್ಲಿ ಅಂತಹವನ್ನು ನೋಡಬಹುದಾಗಿದೆ. ಬಾದಾಮಿಯ ಮೂರನೇ ಗವಿಯಲ್ಲಿ ಏಳನೆಯ ಶತಮಾನದ ವರ್ಣ ಚಿತ್ರಗಳನ್ನು ಕಾಣಬಹುದು. ಆದರೆ ಅವುಗಳ ವರ್ಣ ಈಗ ಮಸುಕಾಗಿದೆ. ಶ್ರವಣಬೆಳಗೊಳದ ಜೈನ ಮಠದಲ್ಲಿ ಪ್ರಾಚೀನ ಕಾಲದ ಹಳೆಯ ವರ್ಣ ಚಿತ್ರಗಳಿವೆ. ವಿಜಯಪುರದ ಆಸರ್ ಮಹಲ್ ಅರಮನೆಯಲ್ಲಿ ೧೭ನೇ ಶತಮಾನದ ವರ್ಣ ಚಿತ್ರಗಳನ್ನು ಕಾಣಬಹುದಾಗಿದೆ. ಆದರೆ ಅವೂ ಸಹ ಈಗ ಮಸುಕಾಗಿವೆ. ವಿಜಯಪುರದ ವಸ್ತು ಸಂಗ್ರಹಾಲಯದಲ್ಲಿ ರಾಗಮಾಲಾ ವರ್ಣಚಿತ್ರಗಳು, ಚಾಂದಬೀಬಿ ಮತ್ತು ರಾಜ-ರಾಣಿಯರ ಚಿತ್ರಗಳನ್ನು ಸಂರಕ್ಷಿಸಿಡಲಾಗಿದೆ. ವಿಜಯಪುರದ ಕುಮಟಗಿಯ ಈಜುಕೊಳದ ಸುತ್ತಣ ಗೋಡೆಯಲ್ಲಿ ವರ್ಣಚಿತ್ರಗಳಿವೆ. ಬೀದರ್ ಬಳಿಯ ಅಷ್ಟೂರಿನಲ್ಲಿರುವ ಬಹಮನಿ ಅರಸರ ಗುಮ್ಮಟಗಳೂ ವರ್ಣಾಲಂಕೃತವಾಗಿದೆ. ಶ್ರೀರಂಗಪಟ್ಟಣದ ದರಿಯ ದೌಲತ್ ಅರಮನೆಯಲ್ಲಿ ೧೮ನೇ ಶತಮಾನದ ವರ್ಣಚಿತ್ರಗಳು ಕಾಣಸಿಗುತ್ತವೆ. ಅವುಗಳಲ್ಲಿ ಕೆಲವು ಯುದ್ಧ ದೃಶ್ಯಗಳಿದ್ದು, ಉಳಿದವು ಭಾವಚಿತ್ರಗಳಾಗಿವೆ. ತುಮಕೂರು ಬಳಿಯ ಸಿಬಿಯ ನರಸಿಂಹಸ್ವಾಮಿ ದೇವಸ್ಥಾನವು ೧೮ನೇ ಶತಮಾನದ ಕೆಲವು ವರ್ಣಚಿತ್ರಗಳನ್ನು ಹೊಂದಿದೆ. ಅದೇ ಶತಮಾನದ ವರ್ಣಚಿತ್ರಗಳನ್ನು ಚಾಮರಾಜನಗರದ ದೇವಾಲಯ, ಕೊಳ್ಳೇಗಾಲದ ಹಳೇ ಪರಿವಾರದವರ ಚಾವಡಿಯಲ್ಲಿ ಮತ್ತು ಕೊಡಗಿನ ನಾಲ್ಕು ನಾಡು ಅರಮನೆಗಳಲ್ಲಿ ಕಾಣಬಹುದಾಗಿದೆ. ಕಿತ್ತೂರಿನ ಅರಮನೆಯ ಮರದ ತೊಲೆಗಳ ಮೇಲಿದ್ದ ವರ್ಣಚಿತ್ರಗಳನ್ನು ಧಾರವಾಡ ಜಿಲ್ಲೆಯ ಅಮ್ಮಿನಭಾವಿ ಹಿರೇಮಠಕ್ಕೆ ವರ್ಗಾಯಿಸಲಾಗಿದೆ. ೧೯ನೇ ಶತಮಾನದ ವರ್ಣಚಿತ್ರಗಳು ನಿಪ್ಪಾಣಿ (ಬೆಳಗಾವಿ ಜಿಲ್ಲೆ), ನರಗುಂದ (ಧಾರವಾಡ ಜಿಲ್ಲೆ) ಅರಮನೆಗಳಲ್ಲಿ ಮತ್ತು ಮೈಸೂರು ಅರಮನೆಯ ಆವರಣದ ಎರಡು ದೇವಸ್ಥಾನಗಳಲ್ಲಿವೆ. ಬೆಂಗಳೂರಿನ ಚಿತ್ರಕಲಾ ಪರಿಷತ್ತಿನಲ್ಲಿ ಮೈಸೂರಿನ ಸಾಂಪ್ರದಾಯಿಕ ವರ್ಣಚಿತ್ರಗಳನ್ನು ಸಂರಕ್ಷಿಸಿಡಲಾಗಿದೆ. ಅವು ಬಹುಮಟ್ಟಿಗೆ ಮೈಸೂರು ಶೈಲಿಯ ದೇವಾನುದೇವತಾ ವರ್ಣಮಯ ಚಿತ್ರಗಳಾಗಿವೆ. ೧೯ನೇ ಶತಮಾನದ ದುಂಡನೆಯ ಸಣ್ಣ ಗಂಜೀಫ ಕಾರ್ಡುಗಳು ಮತ್ತು ಹಾವು-ಏಣಿ ತರಹದ ಆಟದ ಪಟ್ಟಿಕೆಗಳಲ್ಲಿ ಒಳ್ಳೆಯ ವರ್ಣಚಿತ್ರಗಳಿವೆ. ಇವು ಮೈಸೂರು ಅರಸರ ಆಸ್ಥಾನದಲ್ಲಿ ತಯಾರಾದವು.

ಕೆಲವು ಕಲಾಶಾಲೆಗಳು ಆಧುನಿಕ ವರ್ಣಚಿತ್ರಗಳ ಸಂಗ್ರಹವನ್ನು ಹೊಂದಿವೆ. ಅವುಗಳಲ್ಲಿ ಕಲಬುರ್ಗಿದ ಅಂದಾನಿ

ಕಲಾಶಾಲೆ, ಗದಗಿನ ಅಕ್ಕಿ ಕಲಾಶಾಲೆ, ಧಾರವಾಡದ ಹಾಲಭಾವಿ ಕಲಾಶಾಲೆ, ಹುಬ್ಬಳ್ಳಿಯ ಮಿಣಜಿಗಿ ಕಲಾಶಾಲೆ, ಹಡಪದ್‌ರ ಬೆಂಗಳೂರಿನ ಕೆನ್ ಕಲಾಶಾಲೆ, ದಾವಣಗೆರೆಯ ವಿಶ್ವವಿದ್ಯಾಲಯ ಕಲಾಶಾಲೆ, ಚಿತ್ರಕಲಾ ಪರಿಷತ್ತು ಹಾಗೂ ಕಲಾ ಮಂದಿರಗಳನ್ನು ವಿಶೇಷವಾಗಿ ಉಲ್ಲೇಖಿಸಬಹುದು. ಸಾಮಾನ್ಯವಾಗಿ ಕಲಾ ಪ್ರದರ್ಶನಗಳು ಬೆಂಗಳೂರು, ದಾವಣಗೆರೆ, ಉಡುಪಿ ಮತ್ತು ಇತರ ಸ್ಥಳಗಳಲ್ಲಿ ನಡೆಯುತ್ತವೆ. ಮೈಸೂರಿನಲ್ಲಿರುವ ಚಾಮರಾಜೇಂದ್ರ ದೃಶ್ಯಕಲಾ ಅಕಾಡೆಮಿಯನ್ನು ರಾಜ್ಯ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ನಿರ್ವಹಿಸುತ್ತಿದೆ.

**ಕರಕುಶಲಕಲೆ:** ಕರ್ನಾಟಕದ ಕರಕುಶಲಕಲೆಗಳಲ್ಲಿ ಕಿಂಕಾಪು ನೇಯ್ಗೆಯನ್ನು ಬೆಂಗಳೂರು, ಹುಬ್ಬಳ್ಳಿ ಮತ್ತು ಇತರ ಕಡೆಗಳಲ್ಲಿ ನೋಡಬಹುದಾಗಿದೆ. ಮರದ ಕುಸುರಿ ಕೆತ್ತನೆ ಕೆಲಸ ಮೈಸೂರಿನಲ್ಲಿ ನಡೆದಿದ್ದು, ಇದೊಂದು ಅಪೂರ್ವ ಕಲೆಯಾಗಿದೆ. ಮೆರುಗಿನ ಸಾಮಾನುಗಳ ತಯಾರಿಕೆಯು ಚನ್ನಪಟ್ಟಣ, ಕಿನ್ನಾಳ ಮತ್ತು ಕಲಘಟಗಿಗಳಲ್ಲಿವೆ. ಕೊಪ್ಪಳ ಜಿಲ್ಲೆಯ ಕಿನ್ನಾಳದಲ್ಲಿ ವಿಶೇಷ ರೀತಿಯ ಕರಕುಶಲ ಕೆಲಸಕ್ಕೆ ಹೆಸರಾಗಿದೆ. ಕಲ್ಲಿನಿಂದ ವಿಗ್ರಹಗಳನ್ನು ಕೆತ್ತುವ ಶಿಲ್ಪಕಾರ್ಯ ಮೈಸೂರು, ಶಿವಾರಪಟ್ಟಣ, ಬೆಂಗಳೂರು ಮತ್ತು ಇತರ ಸ್ಥಳಗಳಲ್ಲಿ ನಡೆದಿದೆ. ಗುಡಿಕಾರರು ಶ್ರೀಗಂಧದ ಕೆತ್ತನೆಯನ್ನು ಸಾಗರ, ಸೊರಬ, ಕುಮಟಾ ಮತ್ತು ಹೊನ್ನಾವರಗಳಲ್ಲಿ ಸಣ್ಣ ಮತ್ತು ದೊಡ್ಡ ಪ್ರಮಾಣದಲ್ಲಿ ಮಾಡುತ್ತಿದ್ದಾರೆ. ಶ್ರೀಗಂಧವು ತುಟ್ಟಿಯಾದ್ದರಿಂದ ಅವರು ಇತರ ಮೃದು ಮತ್ತು ಒರಟು ಮರವನ್ನು ಕೆತ್ತನೆಗೆ ಬಳಸುವುದೂ ಉಂಟು. ಅವರ ಸೂಕ್ಷ್ಮ ಕೆತ್ತನೆಗೆ ಸರಿಸಾಟಿಯಿಲ್ಲ. ಕಪ್ಪು ಲೋಹದ ಮೇಲ್ಮೈ ಮೇಲೆ ಬೆಳ್ಳಿ ಅಥವಾ ಚಿನ್ನದ ವಿನ್ಯಾಸಗಳನ್ನು ಕಲಾತ್ಮಕವಾಗಿ ಉಬ್ಬಚ್ಚು ಮಾಡುತ್ತಾರೆ. ಲಂಬಾಣಿಗಳು ತಮ್ಮ ವಿಶೇಷ ಕಸೂತಿ ಕೆಲಸಕ್ಕೆ ಹೆಸರಾಗಿದ್ದಾರೆ.

ಕರ್ನಾಟಕದಲ್ಲಿ ಬೊಂಬೆ ತಯಾರಿಕೆಯೂ ಸಹ ವಿಶೇಷ ಪ್ರತಿಭೆಯದಾಗಿದ್ದು, ಚನ್ನಪಟ್ಟಣವು ಇದಕ್ಕೆ ಪ್ರಸಿದ್ಧವಾಗಿದೆ. ಮಂಡ್ಯ ಜಿಲ್ಲೆಯ ನಾಗಮಂಗಲ, ಬೆಂಗಳೂರು ಜಿಲ್ಲೆ ರಾಮೋಹಳ್ಳಿ ಬಳಿಯ ಗೊಲ್ಲರದೊಡ್ಡಿ, ಉಡುಪಿ ಮತ್ತು ಬೆಳಗಾವಿ ಜಿಲ್ಲೆಯ ಚಿಕ್ಕೋಡಿಗಳಲ್ಲಿ ಅದ್ಭುತವಾದ ಹಿತ್ತಾಳೆ ಕೆಲಸಗಾರರು ಇದ್ದಾರೆ. ಬೆತ್ತ ಅಥವಾ ಬಿದಿರುಗಳ ಮೇಲೆ ಬೆರಳು ಅಥವಾ ಉಳಿಯಿಂದ ಕೆಲಸ ಮಾಡುವುದು ರೋಮಾಂಚಕಾರಿ ಅನುಭವ ತರುವಂಥದ್ದು. ಜೋಗರದೊಡ್ಡಿಯಲ್ಲಿ ಕೆನರಾಬ್ಯಾಂಕು ಮತ್ತು ಸಂಡೂರಿನಲ್ಲಿ ಸಂಡೂರು ಕೈಗಾರಿಕೆಗಳು ಅನೇಕ ಕುಶಲಕರ್ಮಿಗಳು ಒಂದು ಕಡೆ ಕೂಡಿ ಕೆಲಸ ಮಾಡಲು ಕಾರ್ಯಾಗಾರವನ್ನು ತೆರೆದಿದ್ದು, ಅವರು ತಯಾರಿಸಿದ ವಸ್ತುಗಳಿಗೆ ಸರಿಯಾದ ಬೆಲೆ ದೊರಕಿಸಲು ಮಾರಾಟ ಮಳಿಗೆಗಳನ್ನೂ ತೆರೆಯಲಾಗಿದೆ. ಕರ್ನಾಟಕದಲ್ಲಿ ಬೆಂಗಳೂರು ಮತ್ತು ಮೈಸೂರಿನಲ್ಲಿ ಕಾವೇರಿ ಎಂಪೋರಿಯಂ ಮತ್ತು ಇತರ ಕೇಂದ್ರಗಳು ಕರಕುಶಲ ವಸ್ತುಗಳ ಮಾರಾಟ ಮಳಿಗೆಯನ್ನು ಹೊಂದಿದೆ.

**ವಸ್ತುಸಂಗ್ರಹಾಲಯ:** ರಾಜ್ಯದ ವಸ್ತು ಸಂಗ್ರಹಾಲಯಗಳಲ್ಲಿ ಮೈಸೂರಿನ ಹಳೆಯ ಭವ್ಯ ಅರಮನೆಯೊಂದರಲ್ಲಿ ಸಂಯೋಜಿಸಿರುವ ಜಗನ್ಮೋಹನ ಕಲಾಶಾಲೆಯು ಕಲಾಪ್ರೇಮಿಗಳಿಗೆ ಮುಖ್ಯವಾದದ್ದಾಗಿದೆ. ಅಲ್ಲಿ ರಾಜಾ ರವಿವರ್ಮನವೂ ಸೇರಿದಂತೆ ಅನೇಕ ಆಕರ್ಷಕ ವರ್ಣಚಿತ್ರ, ಲೋಹ, ದಂತ ಮತ್ತು ಮರದ ಕೆತ್ತನೆಗಳೇ ಅಲ್ಲದೆ, ವಿವಿಧ ರಾಜ್ಯಗಳ ಪ್ರಾಚೀನವಾದ ಕಲಾಕೃತಿಗಳ ದೊಡ್ಡ ಸಂಗ್ರಹವೂ ಇದೆ. ಮೈಸೂರು ಅರಮನೆಯಲ್ಲಿಯೂ ವಿವಿಧ ದೇಶಗಳ ಕಲಾಕುಶಲ ವಸ್ತುಸಂಗ್ರಹವಿದೆ. ಜೊತೆಗೆ ಸೊಂಟಕ್ಕೆ ಪಟ್ಟಿಯಂತೆ ಸುತ್ತಿಕೊಳ್ಳಬಹುದಾದ ಖಡ್ಗವೂ ಸೇರಿದಂತೆ ಪೂರ್ವಕಾಲದ ಆಯುಧಗಳ ಗ್ಯಾಲರಿಯೂ ಇದೆ.

ಬೆಂಗಳೂರು ಸರ್ಕಾರಿ ವಸ್ತುಸಂಗ್ರಹಾಲಯ (೧೮೮೦) ಕೂಡ ಪ್ರಾಚೀನ ಕಾಲದ ವೀರಗಲ್ಲು, ಆಯುಧ ಮತ್ತು ಶಿಲ್ಪಗಳ ಗ್ಯಾಲರಿಯನ್ನು ಹೊಂದಿದೆ. ವಿಶೇಷ ಕೋರಿಕೆಯ ಮೇರೆಗೆ ಹಳೆಯ ನಾಣ್ಯಗಳ ಸಂಗ್ರಹವನ್ನು ತೋರಿಸುತ್ತಾರೆ. ಕಲಾಶ್ರೇಷ್ಠರಾದ ಕೆ.ವೆಂಕಟಪ್ಪ, ಕೆ.ಕೆ.ಹೆಬ್ಬಾರ್ ಅವರ ವಿಶೇಷ ಸಂಗ್ರಹಗಳು ಹಾಗೂ ಕೆ. ವೆಂಕಟಪ್ಪನವರ ಪ್ಲಾಸ್ಟರ್ ಆಫ್ ಪ್ಯಾರಿಸ್ ಸುಡಾ ಮಣ್ಣಿನ ಪ್ರತಿಮೆ ಶಿಲ್ಪಗಳೂ ಇಲ್ಲಿವೆ. ಶಿವಮೊಗ್ಗ ನಗರದ ಕೆಳದಿ ಶಿವಪ್ಪ ನಾಯಕನ ಅರಮನೆಯಲ್ಲಿರುವ ಜಿಲ್ಲಾ ವಸ್ತುಸಂಗ್ರಹಾಲಯದಲ್ಲಿ ಕೆಳದಿರಾಜರ ವಿವಿಧ ವಸ್ತುಗಳನ್ನು ರಕ್ಷಿಸಿಡಲಾಗಿದೆ. ಕಲಬುರಗಿ ಪ್ರಾಚ್ಯ ವಸ್ತು ಪ್ರದರ್ಶನಾಲಯವು ಬಹಮನಿಗಳ ಕಾಲದ ವಸ್ತುಗಳನ್ನಷ್ಟೇ ಅಲ್ಲದೇ ಸನ್ನತಿಯಿಂದ ತಂದ ಬೌದ್ಧ ಶಿಲ್ಪಗಳ (ಅಲಂಕಾರಿಕ ಫಲಕ) ದೊಡ್ಡ ಸಂಗ್ರಹವನ್ನೂ ಹೊಂದಿದೆ. ಚಿತ್ರದುರ್ಗದ ವಸ್ತು ಸಂಗ್ರಹಾಲಯ(೧೯೫೭) ಆ ಪ್ರಾಂತದ ಪಾಳೆಯಗಾರರಿಗೆ ಸಂಬಂಧಿಸಿದ ವೀರಗಲ್ಲು, ಆಯುಧಗಳೇ ಮೊದಲಾದ ಪ್ರಾಚೀನ ಅವಶೇಷಗಳನ್ನು ಹೊಂದಿದೆ. ಕಿತ್ತೂರು, ಹಾಸನ, ಕೆಳದಿ, ಶ್ರೀರಂಗಪಟ್ಟಣ, ಶಿವಮೊಗ್ಗ, ಬಾಗಳ, ರಾಯಚೂರು,ಹೂವಿನ ಹಡಗಲಿ, ಬಸವಕಲ್ಯಾಣ, ಮಂಗಳೂರು, ಬೀದರ್, ಮೈಸೂರು, ಮಡಕೇರಿ, ಗದಗುಗಳಲ್ಲಿ ರಾಜ್ಯ ಸರ್ಕಾರದ ಪ್ರಾಚ್ಯವಸ್ತು ಸಂಗ್ರಹಾಲಯಗಳಿವೆ.

ಕೇಂದ್ರ ಸರ್ಕಾರ (ಪುರಾತತ್ವ ಸರ್ವೇಕ್ಷಣ)ದ ವಿಜಯಪುರದ ಗೋಳಗುಮ್ಮಟದ ಬಳಿ ಇರುವ 'ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆಯ ಪ್ರಾಚ್ಯವಸ್ತು ಸಂಗ್ರಹಾಲಯದಲ್ಲಿ ಆಯುಧಗಳು, ಹಸ್ತಪ್ರತಿಗಳು ಮತ್ತು ವರ್ಣಚಿತ್ರಗಳನ್ನು ವ್ಯವಸ್ಥಿತವಾಗಿ ಇಡಲಾಗಿದೆ. ಹಂಪಿ(ಕಮಲಾಪುರ)ಯಲ್ಲಿ ಕೂಡ ವಿಜಯನಗರ ಕಾಲದ ಅವಶೇಷಗಳ ಇಂಥದೇ ಪ್ರದರ್ಶನಾಲಯವಿದೆ. ಹಂಪೆಯಲ್ಲಿ ಈಚೆಗೆ ನಡೆದ ಉತ್ಖನನದಲ್ಲಿ ದೊರೆತ ಅನೇಕ ವಸ್ತುಗಳು ಅದರಲ್ಲಿವೆ. ಶ್ರೀರಂಗಪಟ್ಟಣದ ದರಿಯಾ ದೌಲತ್ ಅರಮನೆಯಲ್ಲಿ ಟಿಪ್ಪು ವಸ್ತುಸಂಗ್ರಹಾಲಯವೂ(೧೯೫೯) ಇದ್ದು, ಅದರಲ್ಲಿ ಆತನ ಕಾಲದ ಹಸ್ತಪ್ರತಿ, ವಸ್ತುವಿನ್ಯಾಸ, ನಾಣ್ಯಗಳು, ಆಯುಧಗಳು ಮತ್ತು ವರ್ಣಚಿತ್ರಗಳು ಇವೆ. ಹಳೇಬೀಡು, ಶ್ರೀರಂಗಪಟ್ಟಣ, ಬನವಾಸಿ, ಲಕ್ಕುಂಡಿ, ಬಾದಾಮಿ, ಐಹೊಳೆ, ಪಟ್ಟದಕಲ್ಲು ಮೊದಲಾದ ಸ್ಥಳಗಳಲ್ಲಿ ಕೇಂದ್ರ ಪುರಾತತ್ವ ಇಲಾಖೆಯ ವಸ್ತುಸಂಗ್ರಹಾಲಯಗಳಿವೆ.

ಕರ್ನಾಟಕದಲ್ಲಿರುವ ಅತ್ಯಂತ ಸುಂದರ ಹಾಗೂ ಅತ್ಯುತ್ತಮ ವಸ್ತುಸಂಗ್ರಹಾಲಯವೆಂದರೆ ಪ್ರಸಿದ್ಧ ಯಾತ್ರಾ ಸ್ಥಳವಾದ ಧರ್ಮಸ್ಥಳದಲ್ಲಿರುವ 'ಮಂಜೂಷಾ' ಸಂಗ್ರಹಾಲಯ. ಇಲ್ಲಿ ಬಹಳ ಹಿಂದಿನ ಪಾತ್ರೆ, ದಿನಬಳಕೆಯ ವಸ್ತು, ಒಡವೆ, ಕೈ ಹಾಗೂ ಗೋಡೆ ಗಡಿಯಾರ, ಕಲಾವಸ್ತು, ಟೈಪ್‌ರೈಟರ್‌ಗಳು, ಕಾರು, ನಾಣ್ಯ, ಆಯುಧ, ಪ್ರತಿಮೆ, ಹಸ್ತಪ್ರತಿ, ತಾಮ್ರದ ತಟ್ಟೆ, ಕುತೂಹಲಕಾರಿ ವಸ್ತುಗಳು, ವಸ್ತ್ರ ವಿನ್ಯಾಸಗಳು, ಕಾರು ವಿಮಾನ

ಇತ್ಯಾದಿಗಳು ಇವೆ. ರಾಮನಗರ ಬಳಿ ಇರುವ ಜಾನಪದ ಲೋಕ ಅಷ್ಟೇ ಮಹತ್ವದ್ದಾಗಿದೆ.

ಬೆಂಗಳೂರು ಎನ್.ಎಂ.ಕೆ.ಆರ್.ವಿ.ಕಾಲೇಜಿನ 'ಶಾಶ್ವತಿ', ಹೆಣ್ಣುಮಕ್ಕಳ ಅಪರೂಪದ ಒಂದು ವಸ್ತುಸಂಗ್ರಹಾಲಯ. ಅವರು ಬಳಸುವ, ರಚಿಸುವ, ಧರಿಸುವ ವಸ್ತುಗಳು ಒಟ್ಟಾರೆ ಅವರ ಜೀವನದ ಸಂಪೂರ್ಣ ಚಿತ್ರ ಕೊಡುವ ವಸ್ತುಗಳು ಅಲ್ಲುಂಟು.

ಭರತಖಂಡದಲ್ಲಿಯೇ ಅತ್ಯುತ್ತಮ ಶಾರೀರಿಕ ಲಕ್ಷಣಾ ವಿಧಾನ ಶಾಸ್ತ್ರದ ವಸ್ತು ಸಂಗ್ರಹಾಲಯವು ಕರ್ನಾಟಕದಲ್ಲಿದೆ ಎಂಬುದು ಅಭಿಮಾನದ ಮಾತು. ಅಂಥದ್ದು ಬೆಳಗಾವಿಯ ಜವಾಹರಲಾಲ್ ನೆಹರು ಸ್ಮಾರಕ ವೈದ್ಯಕೀಯ ಕಾಲೇಜಿನಲ್ಲಿದೆ. ಇದು ಶ್ರೀಸಾಮಾನ್ಯ ಮತ್ತು ವೈದ್ಯಕೀಯ ವ್ಯಕ್ತಿಗಳಿಗೆ ಶೈಕ್ಷಣಿಕ ಹಾಗೂ ಮನರಂಜಕ ಪ್ರದರ್ಶನವಾಗಿದೆ. ಏಕೆಂದರೆ ಮನುಷ್ಯನ ದೇಹದ ಎಲ್ಲ ಅಪಸರಣಗಳನ್ನು ಅದರ ಎಲ್ಲಾ ಸಾಧ್ಯತೆಗಳನ್ನು ವಿವರವಾದ ಶೈಕ್ಷಣಿಕ ಟಿಪ್ಪಣಿಯೊಡನೆ ತೆರೆದಿಡುವ ಪ್ರಯತ್ನವನ್ನು ಈ ವಸ್ತುಸಂಗ್ರಹಾಲಯದಲ್ಲಿ ಮಾಡಲಾಗಿದೆ.

ಕರ್ನಾಟಕವು ದೇಶದಲ್ಲೇ ವೈವಿಧ್ಯತೆಯಿಂದ ಕೂಡಿದ ಆಕರ್ಷಕವಾದ ಮೃಗಾಲಯವನ್ನು ಮೈಸೂರಿನಲ್ಲಿ ಹೊಂದಿದೆ. ಶ್ರೀ ಚಾಮರಾಜೇಂದ್ರ ಮೃಗಾಲಯವನ್ನು ನೂರು ಎಕರೆ ಪ್ರದೇಶದಲ್ಲಿ ೧೮೯೨ರಲ್ಲಿ ಸ್ಥಾಪಿಸಲಾಗಿದ್ದು, ೧೯೦೨ ರಿಂದ ಸಾರ್ವಜನಿಕ ವೀಕ್ಷಣೆಗೆ ಅವಕಾಶ ಕಲ್ಪಿಸಲಾಗಿದೆ. ಪ್ರಸ್ತುತ ಈ ಮೃಗಾಲಯವು ೨೨೦ ಹೆ. ಪ್ರದೇಶವನ್ನು ವ್ಯಾಪಿಸಿದ್ದು, ಎಲ್ಲಾ ಬಗೆಯ ಸುಮಾರು ಒಂದು ಸಾವಿರ ಪ್ರಾಣಿಗಳು ಇಲ್ಲಿವೆ. ಈ ಪೈಕಿ ವಿಶಿಷ್ಟವೆನಿಸಿರುವ ಹೊರದೇಶದ ಪ್ರಾಣಿಗಳಾದ ಕರಡಿ, ಚಿಂಪಾಂಜಿ ಒರಾಂಗೊಟಾ ಮುಂತಾದ ಪ್ರಾಣಿಗಳದ್ದು ಬಿಳಿ ಹುಲಿಯೂ ಸೇರಿದೆ. ಇತ್ತೀಚೆಗೆ, ಮೃಗಾಲಯದಲ್ಲಿ ಪ್ರಾಣಿವೀಕ್ಷಣೆಗೆ ವಾಹನ ಸೌಕರ್ಯವನ್ನು ಕಲ್ಪಿಸಲಾಗಿದೆ. ಬೆಂಗಳೂರು ಸಮೀಪದ ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನದಲ್ಲಿ ಪ್ರಾಣಿಗಳ ಅಭಯಾರಣ್ಯ(ಸಫಾರಿ)ವೂ ಇದೆ.

**ಕೋಟೆಗಳು:** ಕರ್ನಾಟಕದಲ್ಲಿರುವ ಚರಿತ್ರಾರ್ಹ ಕೋಟೆಗಳ ಬಗ್ಗೆ ತಿಳಿಸದೇ ಹೋದರೆ ಪ್ರವಾಸಿಗರ ದೃಷ್ಟಿಯಿಂದ ಕರ್ನಾಟಕದ ಸಮೀಕ್ಷೆಯು ಪೂರ್ಣವಾಗುವುದಿಲ್ಲ. ಕೋಟೆಗಳ ಪ್ರಾಚೀನತೆಯನ್ನು ನೂತನ ಶಿಲಾಯುಗ-ಬೃಹತ್ ಶಿಲಾಯುಗ ಸಂಸ್ಕೃತಿಯಷ್ಟು ಹಿಂದಕ್ಕೆ ಗುರುತಿಸಬಹುದಾದರೂ, ಚಾರಿತ್ರಿಕವಾಗಿ ಸನ್ನತಿಯು ಅತ್ಯಂತ ಪ್ರಾಚೀನ ಕೋಟೆಯ ಕುರುಹನ್ನು ಹೊಂದಿದ್ದರೆ, ಮೈಸೂರಿನ ಕೋಟೆ ಅರ್ವಾಚೀನ ಕಾಲದ ನಿರ್ಮಾಣವಾಗಿದೆ. ಸಮೀಕ್ಷೆಯೊಂದರ ಪ್ರಕಾರ ಕರ್ನಾಟಕದಲ್ಲಿ ಸುಮಾರು ೫೦೦ ಕೋಟೆಗಳಿವೆಯೆಂದು ಅಂದಾಜಿಸಲಾಗಿದೆ. ಪ್ರಾಚೀನ ರಾಜಧಾನಿಗಳಾದ ಬನವಾಸಿ, ಬಾದಾಮಿ, ಐಹೊಳೆ, ತಲಕಾಡು, ಮಳಕೇಡ, ಮಧ್ಯಕಾಲೀನ ರಾಜಧಾನಿಗಳಾದ ಬಸವಕಲ್ಯಾಣ, ವಿಜಯನಗರ(ಹಂಪೆ), ಕಲಬುರಗಿ, ಬೀದರ್, ವಿಜಯಪುರ, ಶ್ರೀರಂಗಪಟ್ಟಣ, ಕೆಳದಿ, ಚಿತ್ರದುರ್ಗ, ಮೈಸೂರು ಇತ್ಯಾದಿ ಸ್ಥಳಗಳಲ್ಲಿ ಕೋಟೆಗಳಿವೆ. ಆಯಕಟ್ಟಾದ ಸ್ಥಳಗಳಲ್ಲಿ ಕೋಟೆಗಳನ್ನು ನಿರ್ಮಿಸಲಾಗುತ್ತಿದ್ದು, ಗಿರಿದುರ್ಗ, ವನದುರ್ಗ, ಜಲದುರ್ಗ, ನೆಲದುರ್ಗ ಮುಂತಾದ ಕೋಟೆಗಳನ್ನು ವಿದ್ವಾಂಸರು ಈಗಾಗಲೇ ನಾನಾ ರೀತಿಯಲ್ಲಿ ವರ್ಗೀಕರಿಸಿದ್ದಾರೆ. ನಂದಿ ಬೆಟ್ಟ (ಚಿಕ್ಕಬಳ್ಳಾಪುರ ಜಿಲ್ಲೆ), ಸಾವನದುರ್ಗ (ರಾಮನಗರ ಜಿಲ್ಲೆ), ಮಧುಗಿರಿ, ಪಾವಗಡ, ಮಿಡಿಗೇಶಿ(ತುಮಕೂರು ಜಿಲ್ಲೆ), ದಾವಣಗೆರೆ ಬಳಿಯ ಉಚ್ಚಂಗಿ ಮತ್ತು ಬಳ್ಳಾರಿ ಜಿಲ್ಲೆಯ ಬಳ್ಳಾರಿ, ಸಂಡೂರು, ದಕ್ಷಿಣ ಕನ್ನಡ ಜಿಲ್ಲೆಯ ಜಮಲಾಬಾದ್, ಉತ್ತರ ಕನ್ನಡ ಜಿಲ್ಲೆಯ ಮಿರ್ಜ್ಯಾಣ, ಹಾಸನ ಜಿಲ್ಲೆಯ ಸಕಲೇಶಪುರದ ಬಳಿ ಇರುವ ಮಂಜರಾಬಾದ್ ; ಶಿವಮೊಗ್ಗ ಜಿಲ್ಲೆಯ ಕವಲೇದುರ್ಗ, ಚಿತ್ರದುರ್ಗ, ರಾಯಚೂರು, ಮಲ್ಲಾಬಾದ್, ಕುಮ್ಮಟದುರ್ಗ, ಕೊಪ್ಪಳ, ಯಾದಗಿರಿ ಜಿಲ್ಲೆಯ ಯಾದಗಿರಿ; ಶಹಾಪುರ ಮತ್ತು ಸುರಪುರಗಳಲ್ಲಿ ಗಿರಿದುರ್ಗಗಳಿವೆ. ಗದಗ ಜಿಲ್ಲೆಯ ನರಗುಂದ ಹಾಗೂ ಗಜೇಂದ್ರಗಢದ ಕೋಟೆಯನ್ನು ಶಿವಾಜಿಯು ಕಟ್ಟಿಸಿದನು. ಅಷ್ಟೇ ಅಲ್ಲ, ಬೆಳಗಾವಿ ಜಿಲ್ಲೆಯ ಪರಸಗಡ ಮತ್ತು ಹರಗಾಪುರ ಕೋಟೆಗಳನ್ನೂ ಸಹ ಶಿವಾಜಿಯೇ ಕಟ್ಟಿಸಿದ್ದಾನೆ. ಬೆಂಗಳೂರು, ದೇವನಹಳ್ಳಿ, ಮಾಗಡಿ, ಐಮಂಗಲ (ಚಿತ್ರದುರ್ಗಜಿಲ್ಲೆ), ಚಿಕ್ಕಬಾಣಾವರ (ಹಾಸನ ಜಿಲ್ಲೆ) ಮತ್ತು ಬೆಳಗಾವಿ ಪಟ್ಟಣದ ಕೆಲವು ಭಾಗಗಳನ್ನು ಬಳಸಿ ಕೋಟೆಗಳೂ ಇರುವುದನ್ನು ಈಗಲೂ ಕಾಣಬಹುದಾಗಿದೆ. ಹಳೆಯ ಕೋಟೆಗಳನ್ನು ಭಾರೀ ಪ್ರಮಾಣದ ಗ್ರಾನೈಟ್ ಕಲ್ಲುಗಳಿಂದ ನಿರ್ಮಿಸಲಾಗಿದ್ದು, ಈ ನಿರ್ಮಾಣದಲ್ಲಿ ಯಾವುದೇ ಪ್ಲಾಸ್ಟರಿಂಗ್ ಸಾಮಗ್ರಿಯನ್ನೂ ಬಳಸಿಲ್ಲ. ಶ್ರೀರಂಗಪಟ್ಟಣದ ಕೋಟೆಯು ಕಾವೇರಿಯ ತೋಳುಗಳಿಂದ (ಕವಲಿಂದ) ರಕ್ಷಿಸಲ್ಪಟ್ಟಿದೆ. ಕರಾವಳಿಯ ದ್ವೀಪ ಕೋಟೆಗಳಾದ ಬಹದ್ದೂರ್‌ಗಡ್, ಬಸವರಾಜದುರ್ಗ, ದೇವಗಡ ಮತ್ತು ಕೂರ್ಮಗಡಗಳನ್ನು ಈಗಾಗಲೇ ಹೆಸರಿಸಲಾಗಿದೆ. ಕರ್ನಾಟಕದಲ್ಲಿ ನೂರಾರು ಕೋಟೆಗಳನ್ನೂ ಉಳಿದುಕೊಂಡಿವೆ. ಇವುಗಳನ್ನು ಸಂದರ್ಶಿಸಿದರೆ ನಮ್ಮ ಪ್ರಾಚೀನ ವಾಸ್ತುಶಿಲ್ಪಿಗಳ, ನಿರ್ಮಾಣಗಾರರ, ಮಿಲಿಟರಿಯವರ, ತಂತ್ರಜ್ಞರ ಕುಶಲತೆ ಮತ್ತು ದೂರದೃಷ್ಟಿಯ ಪರಿಚಯ ನಮಗಾಗುತ್ತದೆ. ಇವುಗಳನ್ನು ನೋಡುತ್ತಾ ಹೋದಂತೆ ನಮ್ಮ ಮನಸ್ಸು ಗತ ಕಾಲದತ್ತ ಓಡುತ್ತದೆ. ಆ ಕಾಲದ ಜನ ಅವುಗಳನ್ನು ರಕ್ಷಿಸಿಕೊಳ್ಳಲು ಹೋರಾಟ ಮಾಡಿದ್ದು, ರಕ್ತ ಹರಿಸಿದ್ದು, ವಶಪಡಿಸಿಕೊಳ್ಳಲು ಅನುಸರಿಸಿದ ವಿಧಾನಗಳೇ ಮುಂತಾದ ಗತಕಾಲದ ಘಟನೆಗಳ ಹೆಜ್ಜೆ ಗುರುತುಗಳನ್ನು ಕಾಲವೆಂಬ ಮರಳಿನ ಮೇಲೆ ಗುರುತಿಸಲು ನೆರವಾಗುತ್ತವೆ.

ಸಂದರ್ಶಕರು ಮತ್ತು ಪ್ರವಾಸಿಗರ ದೃಷ್ಟಿಯಿಂದ ಕರ್ನಾಟಕ ದಲ್ಲಿರುವ ಕೆಲವು ಮುಖ್ಯವಾದ ಹಾಗೂ ವಿಶಿಷ್ಟವೆನಿಸುವ ಪ್ರವಾಸೀ ಕೇಂದ್ರಗಳನ್ನು ಪರಿಚಯಿಸುವ ಕೆಲಸವನ್ನು ಈ ಮುಂದೆ ಮಾಡಲಾಗಿದೆ. ಪ್ರತೀ ವರ್ಷ ಬೆಂಗಳೂರಿಗೆ ಬೇರೆ ಬೇರೆ ಕಾರಣಗಳಿಂದ ೨-೩ ಕೋಟಿ ಜನ ಭೇಟಿ ನೀಡುತ್ತಾರೆ ಎಂದು ಅಂದಾಜು ಮಾಡಲಾಗಿದೆ. ಈ ಪೈಕಿ ಬಹುಪಾಲು ಜನ ಮೈಸೂರಿಗೂ ಭೇಟಿ ಕೊಡುತ್ತಾರೆ. ಹೀಗೆ ಭೇಟಿ ನೀಡುವ ಜನರಿಗೆ ಕರ್ನಾಟಕದ ಪ್ರಮುಖ ಪ್ರವಾಸೀ ಕೇಂದ್ರಗಳ ಬಗ್ಗೆಯಾಗಲೀ, ಆ ಕೇಂದ್ರಗಳಲ್ಲಿ ತಂಗಲು ಇರುವ ಉತ್ತಮ ಸೌಲಭ್ಯಗಳ ಬಗ್ಗೆಯಾಗಲಿ ತಿಳುವಳಿಕೆ ಇರುವುದಿಲ್ಲ. ಟ್ರೆಕ್ಕಿಂಗ್, ಜಲಕ್ರೀಡೆ, ಗಾಲ್ಫ್, ಸ್ನೂಕರ್ ಮತ್ತಿತರ ಸೂಕ್ಷ್ಮ ಆಟಗಳಿಗೆ ಇಲ್ಲಿ ಸಾಕಷ್ಟು ಸೌಲಭ್ಯಗಳಿವೆ. ಬೆಂಗಳೂರು ಮತ್ತು ಮೈಸೂರಿನಲ್ಲಿ ಕುದುರೆ ಪಂದ್ಯಗಳೂ ನಡೆಯುತ್ತವೆ. ಮೈಸೂರು ದಸರಾ ಪ್ರಮುಖ ಹಬ್ಬವಾಗಿದೆ. ಮೇಲುಕೋಟೆಯ ವೈರಮುಡಿ ಉತ್ಸವ ಇನ್ನೊಂದು ಅಪೂರ್ವ ಸಂದರ್ಭವಾಗಿದ್ದು, ಚೆಲುವನಾರಾಯಣನ ಉತ್ಸವ ಮೂರ್ತಿಯನ್ನು ರತ್ನಖಚಿತ ಕಿರೀಟದೊಂದಿಗೆ ಮೆರವಣಿಗೆಯಲ್ಲಿ ಕೊಂಡೊಯ್ಯಲಾಗುವುದು. ಚೈತ್ರ ಪೂರ್ಣಿಮೆ ರಾತ್ರಿ ಜರುಗುವ ಬೆಂಗಳೂರು ಕರಗ ಕೂಡ ವರ್ಣರಂಜಿತ ಉತ್ಸವವಾಗಿದೆ. ಈ ಹಿನ್ನೆಲೆಯಲ್ಲಿ

ಪ್ರಮುಖ ಸ್ಥಳಗಳನ್ನು 'ಅ'ಕಾರದಿ ಕ್ರಮದಲ್ಲಿ ನೋಡಬಹುದು. ಹೆಚ್ಚಿನ ವಿವರಗಳಿಗೆ ಆಯಾ ಜಿಲ್ಲಾ ಗ್ಯಾಸೆಟಿಯರ್‌ನ ಸದರಿ ಅಧ್ಯಾಯವನ್ನು ನೋಡಬಹುದು.

**ಅಣ್ಣಿಗೇರಿ:** ಇದು ಧಾರವಾಡ ಜಿಲ್ಲೆಯ ನವಲಗುಂದ ತಾಲೂಕಿನಲ್ಲಿದ್ದು ಹುಬ್ಬಳ್ಳಿಯಿಂದ ೩೦ ಕಿ.ಮೀ. ದೂರದಲ್ಲಿ ಹುಬ್ಬಳ್ಳಿ-ಗದಗ ರಸ್ತೆಯಲ್ಲಿದೆ. ಇಲ್ಲಿ ಕಲ್ಯಾಣ ಚಾಳುಕ್ಯರ ಕಾಲದ ಪ್ರಸಿದ್ಧ ಅಮೃತೇಶ್ವರ ದೇವಾಲಯವಿದೆ. ಇದು ಒಂದು ಕಾಲದಲ್ಲಿ ಶ್ರೀಮಂತ ಪ್ರಾಂತವಾಗಿದ್ದು, ಬೆಳ್ವೊಲ-೩೦೦ರ ಆಡಳಿತ ಕೇಂದ್ರವಾಗಿದ್ದು, ಚಾಲುಕ್ಯ ನಾಲ್ಕನೆಯ ಸೋಮೇಶ್ವರನ (೧೧೮೪-೮೯) ಕೊನೆಯ ರಾಜಧಾನಿ ಆಗಿತ್ತು. ಅಲ್ಲದೆ ಕನ್ನಡದ ಪ್ರಸಿದ್ಧ ಕವಿ ಪಂಪನ ಜನ್ಮಭೂಮಿ ಆಗಿತ್ತು. ಇಲ್ಲಿ ಪಾರ್ಶ್ವನಾಥ ಬಸದಿ (ತಾಯಿಯ ತವರೂರ) ಎರಡು ವೀರಶೈವ ಮಠ, ಅರ್ಧ ಹಾಳುಬಿದ್ದ ಬನಶಂಕರಿ ದೇವಸ್ಥಾನ ಹಾಗೂ ಏಳು ಮಸೀದಿಗಳೂ ಇವೆ. ರೈಲ್ವೇನಿಲ್ದಾಣದ ಬಳಿ ವೀರಭದ್ರನ ಪ್ರಾಚೀನ ದೇವಾಲಯವಿದ್ದು, ಇಲ್ಲಿ ಕಂಡುಬರುವ ಮಿಥುನ ಶಿಲ್ಪಗಳು ಕಲಾತ್ಮಕವಾಗಿ ರೂಪುಗೊಂಡಿವೆ. ಇತ್ತೀಚಿನ ವರ್ಷಗಳಲ್ಲಿ ಇಲ್ಲಿ ದೊರೆತ ನೂರಾರು ತಲೆಬುರುಡೆಗಳಿಂದಾಗಿ ಇಂದು ಸುದ್ದಿಯಲ್ಲಿದ್ದು, ತಲೆಬುರುಡೆಗಳ ಪ್ರಾಚೀನತೆಯ ಬಗ್ಗೆ ಸಂಶೋಧನೆಗಳು ನಡೆದಿವೆಯಾದರೂ ಖಚಿತತೆ ಹೊರ ಮೂಡಬೇಕಿದೆ.

**ಅಮೃತಾಪುರ:** ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ತಾಲೂಕಿನಲ್ಲಿರುವ ಅಮೃತಾಪುರವು, ಬೆಂಗಳೂರಿನಿಂದ ೨೪೭ ಕಿ.ಮೀ. ದೂರದಲ್ಲಿದೆ. ಕ್ರಿ.ಶ. ೧೨ನೆಯ ಶತಮಾನದಲ್ಲಿ ಅಮೃತ ದಂಡನಾಯಕನು ಕಟ್ಟಿಸಿರುವ, ಹೊಯ್ಸಳ ಶೈಲಿಯ ಅಮೃತೇಶ್ವರ ದೇವಸ್ಥಾನದಿಂದಾಗಿ ಈ ಸ್ಥಳವು ಪ್ರಸಿದ್ಧವಾಗಿದೆ. ಇದು ನಕ್ಷತ್ರಾಕಾರದ ತಳವಿನ್ಯಾಸ ಹೊಂದಿದ್ದು, ಇತರ ಅನೇಕ ಹೊಯ್ಸಳ ದೇವಾಲಯಗಳಂತೆ ಬಳಪದ ಕಲ್ಲಿನ ಅಲಂಕೃತ ಶಿಲ್ಪಗಳಿಂದ ನೋಡುಗರ ಮನವನ್ನು ಸೂರೆಗೊಳ್ಳುವ ಅತ್ಯಂತ ಸುಂದರವಾದ ದೇವಾಲಯವಾಗಿದೆ. ೧೧೯೬ರ ಶಾಸನವು ಈ ದೇವಾಲಯದಲ್ಲಿದ್ದು, ಆಳೆತ್ತರದ ಆಸೀನ ಸರಸ್ವತಿಯ ಆಕರ್ಷಕ ವಿಗ್ರಹವಿಲ್ಲಿದೆ. ಈ ದೇವಾಲಯದ ನವರಂಗದಲ್ಲಿ ಕಲ್ಯಾಣ ಚಾಳುಕ್ಯರ ಕಾಲದ ಭೂಮಾಪನಕೋಲಿನ ಪ್ರಾತಿನಿಧಿಕ ರೇಖಾ ಕೆತ್ತನೆ ಪತ್ತೆಯಾಗಿದೆ.

**ಅರಸೀಕೆರೆ:** ಹಾಸನ ಜಿಲ್ಲೆಯಲ್ಲಿರುವ ತಾಲೂಕು ಕೇಂದ್ರ ಪ್ರಾಚೀನ ವ್ಯಾಪಾರ ಕೇಂದ್ರವಾಗಿದ್ದು, ಪ್ರಮುಖ ರೈಲ್ವೇ ಜಂಕ್ಷನ್ ಆಗಿದೆ. ಇದು ಹಾಸನದಿಂದ ೪೧ ಕಿ.ಮೀ. ಹಾಗೂ ಬೆಂಗಳೂರಿನಿಂದ ೧೭೬ ಕಿ.ಮೀ. ದೂರದಲ್ಲಿದ್ದು, ತೆಂಗಿನಿಂದಾಗಿ ಪ್ರಸಿದ್ಧವಾಗಿದೆ. ಇಲ್ಲಿರುವ ಕಟ್ಟಮೇಶ್ವರ ದೇವಾಲಯ (ಚಂದ್ರಮೌಳೇಶ್ವರ ದೇವಾಲಯ) ಕ್ರಿ.ಶ. ೧೨೨೦ರ ಶಾಸನದಲ್ಲಿ ಕಲ್ಮೇಶ್ವರ ಎಂದೂ ಕರೆಯಲ್ಪಟ್ಟಿದೆ. ಇದು ಸುಂದರ ಹೊಯ್ಸಳ ದೇವಾಲಯವಾಗಿದ್ದು, ಅಪರೂಪದ ವಿಶೇಷ ವಿನ್ಯಾಸವುಳ್ಳ ಬಹುಕೋನಾಕಾರದ ಮುಖಮಂಟಪವನ್ನು ಹೊಂದಿದೆ. ಇಲ್ಲಿ ಹೊಯ್ಸಳ ಎರಡನೇ ಬಲ್ಲಾಳನ ಮಂತ್ರಿ ರಾಚರಸ ೧೨೨೦ ರಲ್ಲಿ ಹೊಯ್ಸಳ ಶೈಲಿಯಲ್ಲಿ ಕಟ್ಟಿಸಿದ ಸಹಸ್ರಕೂಟ ಜಿನಾಲಯವೂ ಇದೆ. ಇಲ್ಲೇ ಇನ್ನೊಂದು ಸುಂದರವಾದ ಹಾಳುಪೊಕ್ಲು ದೇವಾಲಯವಿದೆ. ಅರಸೀಕೆರೆಯ ಬಳಿ ಮೊಳೆಕಲ್ ತಿರುಪತಿಯ ಸಣ್ಣ ಗುಡ್ಡದ ಮೇಲೆ ವೆಂಕಟರಮಣ ದೇವಸ್ಥಾನವಿದೆ. ಇಲ್ಲಿಗೆ ರಾಜ್ಯದ ಎಲ್ಲಾ ಕಡೆಯಿಂದಲೂ ಭಕ್ತರು ಬರುತ್ತಾರೆ.

**ಅರಳಗುಪ್ಪೆ:** ಇದು ತುಮಕೂರು ಜಿಲ್ಲೆಯ ತಿಪಟೂರು ತಾಲೂಕಿನಲ್ಲಿದ್ದು, ಬಾಣಸಂದ್ರ ರೈಲ್ವೇ ನಿಲ್ದಾಣದಿಂದ ಏಳು ಕಿ.ಮಿ ಹಾಗೂ ಕಿಬ್ಬನಹಳ್ಳಿ ನಾಲ್ಕು ಕಿ.ಮೀ.ದೂರದಲ್ಲಿದೆ. ಇಲ್ಲಿ ಗಂಗ-ನೊಳಂಬ ಶೈಲಿಯ ಸುಮಾರು ೧೦ನೇ ಶತಮಾನದ ಪ್ರಸಿದ್ಧವಾದ ಕಲ್ಲೇಶ್ವರ ಪಂಚಾಂಗ, ದೇವಾಲಯವಿದ್ದು, ಸುಂದರವಾದ ಗರ್ಭಗೃಹ, ನವರಂಗ ಅರ್ಧಮಂಟಪ ಹಾಗೂ ಮುಖಮಂಟಪಗಳನ್ನು ಹೊಂದಿದೆ. ಇತ್ತೀಚೆಗೆ ಸಂರಕ್ಷಿಸಲ್ಪಟ್ಟಿದೆ. ನವರಂಗದ ಛತ್ತಿನಲ್ಲಿ, ಅದ್ಭುತವಾದ ನಾಟ್ಯಶಿವನ ಮೂರ್ತಿಯಿದ್ದು ಸುತ್ತಲೂ ಸಂಗೀತ ವಾದ್ಯಗಳನ್ನು ನುಡಿಸುವ ಗಂಧರ್ವರ ಶಿಲ್ಪಗಳಿವೆ. ಅಲ್ಲದೇ, ಅಷ್ಟ ದಿಕ್ಪಾಲಕರು ತಮ್ಮ ಎಲ್ಲಾ ಪರಿಕರಗಳೊಂದಿಗೆ ಇದ್ದಾರೆ. ಅಲ್ಲದೆ ಇಲ್ಲಿಯ ಹೊಯ್ಸಳರ ಕಾಲದ ಚೆನ್ನಕೇಶವ ಗುಡಿ ಸುಮಾರು ಕ್ರಿಶ ೧೯೫೦ರಲ್ಲಿ ನಿರ್ಮಾಣಗೊಂಡಿರುವ ಏಕಕೂಟ ದೇವಾಲಯವಾಗಿದೆ. ಗರ್ಭಗುಡಿಯಲ್ಲಿರುವ ವಿಷ್ಣುವಿನ ಮೂರ್ತಿಯು ಅದ್ಭುತವಾಗಿದೆ. ಈ ದೇವಾಲಯವು ಚಿತ್ತಾಕರ್ಷಕವಾಗಿ ಉಬ್ಬು ಶಿಲ್ಪಗಳಿಂದಾಗಿ ಉಲ್ಲೇಖಾರ್ಹವಾಗಿದ್ದು, ಹೊಯ್ಸಳ ಶಿಲ್ಪಿಗಳ ಹೆಸರನ್ನು ಅಲ್ಲಲ್ಲಿ ಕಾಣಬಹುದಾಗಿದೆ.

**ಆವನಿ:** ಇದು ಕೋಲಾರ ಜಿಲ್ಲೆಯಲ್ಲಿದ್ದು ತಾಲೂಕು ಕೇಂದ್ರ ಮುಳಬಾಗಿಲಿನಿಂದ ಸುಮಾರು ೧೩ ಕಿ.ಮಿ ದೂರದಲ್ಲಿದೆ. ಇಲ್ಲಿ ಶೃಂಗೇರಿ ಸಂಪ್ರದಾಯದ ಶಂಕರಮಠವಿದೆ. ಅಲ್ಲದೆ, ನೊಳಂಬರ ಕಾಲದ ದೇವಾಲಯಗಳ ಸುಂದರ ಸಂಕೀರ್ಣವಿದೆ. ಆಂಧ್ರ ಪ್ರದೇಶದ ಮಡಕಶಿರಾ ತಾಲೂಕಿನ ಹೇಮಾವತಿ ಅಥವಾ ಹೆಂಜೇರು ನೊಳಂಬರು ರಾಜಧಾನಿಯಾಗಿತ್ತು. ಶಾಸನವೊಂದು ಈ ಸ್ಥಳವನ್ನು 'ದಕ್ಷಿಣದ ಗಯಾ' ಎಂದೇ ಹೆಸರಿಸಿದೆ. ಇಲ್ಲೊಂದು ಆಶ್ರಮವಿದ್ದು, ಸೀತೆಯು ಅವಳ ಮಕ್ಕಳಿಗೆ ಇಲ್ಲೇ ಜನ್ಮ ನೀಡಿದಳೆಂದು ಹೇಳಲಾಗುತ್ತದೆ. ಇಲ್ಲಿ ರಾಮೇಶ್ವರ, ಲಕ್ಷ್ಮಣೇಶ್ವರ, ಭರತೇಶ್ವರ, ಶತ್ರುಘ್ನೇಶ್ವರ ಹಾಗೂ ಸೀತಾ ಮತ್ತು ಸುಬ್ರಹ್ಮಣ್ಯ ದೇವಸ್ಥಾನಗಳಿವೆ. ಅದರಲ್ಲೂ ಲಕ್ಷ್ಮಣೇಶ್ವರ ದೇವಸ್ಥಾನ ಶಿಲ್ಪಗಳಿಂದ ತುಂಬಿದೆ. ಇಲ್ಲಿರುವ, ಸಣ್ಣ ಬೆಟ್ಟದ ಮೇಲೆ ಅಗ್ನಿತೀರ್ಥ ಎಂಬ ಕೆರೆ ಹಾಗೂ ಏಕಾಂತ ರಾಮಸ್ವಾಮಿ ದೇವಾಲಯವೂ ಇದೆ.

**ಆದಿಚುಂಚನಗಿರಿ:** ಇದು ಮಂಡ್ಯಜಿಲ್ಲೆಯಲ್ಲಿ ತಾಲೂಕು ಕೇಂದ್ರ, ನಾಗಮಂಗಲದಿಂದ ೨೧ ಕಿ.ಮೀ ಹಾಗೂ ಮಂಡ್ಯದಿಂದ ೬೬ ಕಿ.ಮೀ. ದೂರದಲ್ಲಿದ್ದು, ಗುಡ್ಡದ ಮೇಲಿರುವ ಭೈರವ ದೇವಸ್ಥಾನಕ್ಕೆ ಪ್ರಸಿದ್ಧವಾಗಿದೆ. ಮೊದಲಿಗೆ ಇದು ನಾಥಪಂಥಿಯರ ಕೇಂದ್ರವಾಗಿದ್ದು ಈಗ ಒಕ್ಕಲಿಗ ಸಮಾಜದ ಸ್ವಾಮೀಜಿಯ ಗದ್ದುಗೆಯಾಗಿದೆ. ಈ ಸ್ಥಳವು ರಾಮಾಯಣ ಕಾಲದಿಂದಲೂ ಅಸ್ತಿತ್ವದಲ್ಲಿದೆಯೆಂದು ಸ್ಥಳೀಯವಾಗಿ ಹೇಳಲಾಗುತ್ತದೆ. ಶಾಸನಗಳಲ್ಲಿ ಈ ಸ್ಥಳವನ್ನು ಚುಂಚನ ಕೋಟೆ (ಕ್ರಿ.ಶ.೧೨೦೫), ಚುಂಚನಹಳ್ಳಿ (ಕ್ರಿ.ಶ.೧೪೮೪), ಆದಿಚುಂಚನಗಿರಿ (ಕ್ರಿ.ಶ.೧೮೯೬) ಎಂದು ಹೆಸರಿಸಲಾಗಿದ್ದು, ಈ ಸ್ಥಳವು ಹಿಂದೆ ಕಲ್ಕುಣಿ ನಾಡಿನ ಸರಹದ್ದಿನಲ್ಲಿತ್ತೆಂದು, ಶಾಸನಗಳಿಂದ ವೇದ್ಯವಾಗುತ್ತದೆ. ದ್ರಾವಿಡ ಶೈಲಿಯ ಬೃಹದಾಕಾರದ ಕಾಲಭೈರವ ದೇವಾಲಯವನ್ನು ಆದಿಚುಂಚನಗಿರಿ ಮಠವು ಸುಮಾರು ೩೦ ಕೋಟಿ ರೂಪಾಯಿಗಳಿಗೂ ಅಧಿಕ ವೆಚ್ಚದಲ್ಲಿ ಇತ್ತೀಚೆಗೆ ನಿರ್ಮಿಸಿರುತ್ತದೆ. ಈ ದೇವಾಲಯವು ವಿಶಾಲವಾದ ಒಳ ಮತ್ತು ಹೊರ ಪ್ರಾಕಾರಗಳನ್ನು ಹೊಂದಿದ್ದು. ಈ ದೇವಾಲಯದ ಪ್ರಾಕಾರದಲ್ಲಿ ಹಲವು ಸಣ್ಣ ಪುಟ್ಟ

ಶೈವ ದೇವಾಲಯಗಳನ್ನು ನಿರ್ಮಿಸಲಾಗಿದ್ದು, ಈ ದೇವಾಲಯ ಸಂಕೀರ್ಣವು ಚಿತ್ತಾಕರ್ಷಕವಾಗಿ ಮೂಡಿಬಂದಿದೆ. ಮಠದ ಆವರಣದಲ್ಲಿ ಕಂಡು ಬರುವ ಇತರೆ ದೇವಾಲಯಗಳೆಂದರೆ ಚಂದ್ರಮೌಳೇಶ್ವರ, ಅನ್ನಪೂರ್ಣೇಶ್ವರಿ ಮತ್ತು ಭೈರವ. ಮಠದ ದಕ್ಷಿಣ ಭಾಗದಲ್ಲಿ ವಿಶಾಲವಾದ ಕಲ್ಯಾಣಿ ಇದ್ದು ಇದನ್ನು ಸ್ಥಳೀಯವಾಗಿ ಬಿಂದು ಸರೋವರ ಎಂದು ಕರೆಯಲಾಗುತ್ತದೆ. ಇದರ ಬಳಿಯಲ್ಲಿರುವ ಜ್ವಾಲಾಪೀಠವನ್ನು ಹೊಂದಿರುವ ಅನ್ನದಾನಿ ಮಠವು ವಿಶೇಷ ಆಕರ್ಷಣೆಯಾಗಿ ಬೆಟ್ಟಕ್ಕೆ ಹೋಗುವ ಮಾರ್ಗದಲ್ಲಿ ಮೇದರ ಮಂಟಪ, ಒಕ್ಕಲ್ಲು ಬಸವ, ಗಂಗಾಧರೇಶ್ವರ ಮೊದಲಾದ ದೇವಾಲಯಗಳು ಕಂಡು ಬರುತ್ತವೆ. ಆದಿಚುಂಚನಗಿರಿಯಲ್ಲಿ ತೆಪ್ಪೋತ್ಸವ, ಮಾಸೋತ್ಸವ ಮತ್ತು ವರ್ಷೋತ್ಸವಗಳು ಶೈವಾಗಮ ಸಂಪ್ರದಾಯದಂತೆ ಜರುಗುತ್ತವೆ. ಇಲ್ಲಿರುವ ಗಂಗಾಧರೇಶ್ವರ ದೇವಸ್ಥಾನ ಜಾತ್ರೆಯ ಸಮಯದಲ್ಲಿ ಸಾವಿರಾರು ಜನರನ್ನು ಆಕರ್ಷಿಸುತ್ತದೆ. ಇಲ್ಲಿ ನವಿಲಿನ ಅಭಯಾರಣ್ಯವಿದೆ. ಮಠದ ಅತಿಥಿಗೃಹದಲ್ಲಿ ಪ್ರವಾಸಿಗರಿಗೆ ಇರಲು ವ್ಯವಸ್ಥೆಯನ್ನು ಕಲ್ಪಿಸಲಾಗಿದ್ದು, ಈ ಸ್ಥಳವು ಉತ್ತಮ ಸಾರಿಗೆ ಸಂಪರ್ಕವನ್ನೂ ಹೊಂದಿದೆ.

**ಆನೆಗುಂದಿ:** ಕೋಟೆಯಿಂದ ಆವೃತ್ತವಾಗಿರುವ ಇದು ಹಂಪೆಯ ಉತ್ತರಕ್ಕಿದ್ದು, ವಿಜಯನಗರ ಸಾಮ್ರಾಜ್ಯ ಸ್ಥಾಪಕರ ಮೂಲ ಕೇಂದ್ರವೆಂದು ಪ್ರಸಿದ್ಧವಾಗಿದೆ. ಇದನ್ನು ಸುಲಭವಾಗಿ ತಲುಪಲು ತುಂಗಭದ್ರಾ ನದಿಯನ್ನು ತಳವಾರ ಘಟ್ಟದಿಂದ ತೆಪ್ಪದಲ್ಲಿ ದಾಟಬೇಕಾಗುತ್ತದೆ. ಅಲ್ಲದೆ ತಾಲೂಕು ಕೇಂದ್ರ ಗಂಗಾವತಿಯಿಂದ ರಸ್ತೆಯ ಮೂಲಕವೂ ಇಲ್ಲಿಗೆ ಬರಬಹುದು. ಇಲ್ಲಿ ಈಗ ಹಾಳುಬಿದ್ದಿರುವ ಪ್ರಸಿದ್ಧವಾದ ಹುಚ್ಚಪ್ಪಯ್ಯನ ಮಠವಿದೆ. ಈ ಮಠದಲ್ಲಿ ಚಾಲುಕ್ಯಶೈಲಿಯ ನುಣುಪಾದ ಕಂಬಗಳಿದ್ದು, ಛತ್ತಿನಲ್ಲಿ ಮಸುಕು ಮಸುಕಾದ ಚಿತ್ರಗಳಿವೆ. ಅರವೀಡು ರಾಜವಂಶದ ಅರಸರ ಪಾಳುಬಿದ್ದ ಅರಮನೆಯೂ ಇಲ್ಲಿದ್ದು, ಅವರ ವಂಶಸ್ಥರು ಈಗಲೂ ಆನೆಗುಂದಿಯಲ್ಲಿ ನೆಲೆಸಿದ್ದಾರೆ. ಇಲ್ಲಿ ತುಂಗಭದ್ರಾ ನದಿಯ ನಡುಗಡ್ಡೆಯಾದ ಕುರುಗಡ್ಡೆಯಲ್ಲಿ ಮಾಧ್ವ ಸಂಪ್ರದಾಯದ ಒಂಬತ್ತು ಯತಿಗಳ ನವಬೃಂದಾವನಗಳು (ಸಮಾಧಿಗಳು) ಕಂಡುಬರುತ್ತವೆ. ಈ ಬೃಂದಾವನಗಳನ್ನು ಪದ್ಮನಾಭತೀರ್ಥ, ವ್ಯಾಸರಾಜತೀರ್ಥ, ಕತೇಂದ್ರತೀರ್ಥ, ವಾಗೀಶತೀರ್ಥ, ರಘುವರ್ಯತೀರ್ಥ, ರಾಮಚಂದ್ರತೀರ್ಥ, ಸುಧೀಂದ್ರತೀರ್ಥ, ಶ್ರೀನಿವಾಸ ಒಡೆಯರು ಹಾಗೂ ಗೋವಿಂದ ಒಡೆಯರದೆಂದು ಗುರುತಿಸಲಾಗಿದೆ. ಇವಲ್ಲದೇ ಇಲ್ಲಿ ಶೇಷಶಾಯಿ ಗುಹಾ ದೇವಾಲಯ, ರಂಗನಾಥ ದೇವಾಲಯ, ಗಗನ ಮಹಲ್ (ಹವಾ ಮಹಲ್), ಕುತೂಹಲಕಾರಿಯಾದ ಇಂಡೋ-ಸಾರ್ಸೆನಿಕ್ ಕಟ್ಟಡ, ಹಾಗೂ ಕಲ್ಯಾಣದ ಚಾಲುಕ್ಯರ ಶೈಲಿಯ ಸುಂದರವಾದ ಅಲಂಕೃತ ಬಾಗಿಲು ಚೌಕಟ್ಟುಳ್ಳ ಜೈನಬಸದಿಗಳಿವೆ. ೧೯೪೯ರ ವರೆಗೆ ಆನೆಗೊಂದಿ ಸಂಸ್ಥಾನವನ್ನು ಅರವೀಡು ವಂಶದ, ಅರಸರು ಆಳುತ್ತಿದ್ದರು. ಇಂದಿಗೂ ಇಲ್ಲಿ ಅವರಿಗೆ ಸಂಬಂಧಿಸಿದ, ಹಳೆಯ ವಾಡೆ ಇದ್ದು ಈಗಲೂ ಅವರ ವಂಶಸ್ಥರು ವಾಸಿಸುತ್ತಿದ್ದಾರೆ.

**ಇಕ್ಕೇರಿ:** ಇಕ್ಕೇರಿಯು ಶಿವಮೊಗ್ಗ ಜಿಲ್ಲೆಯಲ್ಲಿ ತಾಲೂಕು ಕೇಂದ್ರ ಸಾಗರದ ಸಮೀಪವಿದ್ದು ೧೫೧೨ರಿಂದ ಕೆಳದಿ ನಾಯಕರ ರಾಜಧಾನಿಯಾಗಿತ್ತು. ಇಲ್ಲಿರುವ ಅಘೋರೇಶ್ವರ ದೇವಾಲಯವು ಕಾಳಾಮುಖ ಸಂಪ್ರದಾಯದ ಕ್ರಿ.ಶ.೧೬ನೇ ಶತಮಾನದ ಆಕರ್ಷಕ ಸ್ಮಾರಕವಾಗಿದೆ. ಸಮೀಪದಲ್ಲಿಯೇ ಪಾರ್ವತೀ ದೇವಾಲಯವೂ ಇದೆ. ೧೬೨೩ರಲ್ಲಿ ಭೇಟಿಕೊಟ್ಟ ಇಟಲಿಯ ಪ್ರವಾಸಿ ಪಿಯತ್ರೊ ಡೆಲ್ಲಾವೆಲಿಯು ಈ ಊರಿನ ಬಗ್ಗೆ ಬಹಳಷ್ಟು ವಿವರಗಳನ್ನು ಬರೆದಿದ್ದಾನೆ. **ಕೆಳದಿ**ಯು ಮೂಲ ರಾಜಧಾನಿಗೆ ಸಮೀಪದಲ್ಲಿರುವ ನಾಯಕರಇನ್ನೊಂದು ಪ್ರಮುಖ ರಾಜಧಾನಿ ಪಟ್ಟಣ. ಇಲ್ಲಿ ರಾಮೇಶ್ವರ ಮತ್ತು ವೀರಭದ್ರ ದೇವಾಲಯಗಳಿವೆ. ಇದಲ್ಲದೆ ಅನೇಕ ಶಿಲ್ಪ ಮತ್ತು ಹಸ್ತಪ್ರತಿಗಳ ಸಂಗ್ರಹವಿರುವ ವಸ್ತು ಸಂಗ್ರಹಾಲಯವಿದ್ದು, ಐತಿಹಾಸಿಕ ಮಹತ್ವದ ವಿವಿಧ ವಿಷಯಗಳ ಕುರಿತಾಗಿ ಅನೇಕ ಅಮೂಲ್ಯ ಪುಸ್ತಕಗಳನ್ನು ಇದು ಪ್ರಕಟಿಸಿದೆ.

**ಇಟಗಿ:** ಯಲಬುರ್ಗಾ ತಾಲೂಕಿನಲ್ಲಿರುವ ಇಟಗಿಯನ್ನು ಗದಗಿನಿಂದ (ಸುಮಾರು ೪೦ ಕಿ.ಮೀ.) ಸುಲಭವಾಗಿ ತಲುಪಬಹುದು. ಗದಗ-ಹೊಸಪೇಟೆ ರೈಲು ಮಾರ್ಗದಲ್ಲಿ ಬಾಣಾಪುರ ರೈಲ್ವೇ ಸ್ಟೇಶನ್‌ಗೆ ಬಲು ಹತ್ತಿರದಲ್ಲಿದೆ. ಇಲ್ಲಿ ಕಲ್ಯಾಣ ಚಾಳುಕ್ಯರ ಕಾಲದ ಬಹು ಸುಂದರವಾದ ಮಹಾದೇವ ದೇವಾಲಯವಿದೆ. ಶಾಸನದಲ್ಲಿ 'ದೇವಾಲಯ ಚಕ್ರವರ್ತಿ' ಎಂದು ವರ್ಣಿಸಲ್ಪಟ್ಟಿರುವ ಈ ದೇವಾಲಯವನ್ನು ೧೧೧೨ ರಲ್ಲಿ ಚಾಳುಕ್ಯ ಆರನೇ ವಿಕ್ರಮಾದಿತ್ಯನ ಸೇನಾಧಿಪತಿಯಾಗಿದ್ದ ಮಹಾದೇವ ದಂಡನಾಯಕನು ನಿರ್ಮಿಸಿದನು. ಈ ಬೃಹತ್ ದೇವಾಲಯದಲ್ಲಿ ಹೊಳಪುಳ್ಳ ಕಂಬಗಳು, ಕುಶಲ ಕೆತ್ತನೆಯ ವಿಶಾಲ ದ್ವಾರಬಂಧಗ ಹಾಗೂ ಸೂಕ್ಷ್ಮ ಕೆತ್ತನೆಯ ಆಳವಾದ ಛತ್ತಿನ ಕೆತ್ತನೆಗಳು ಇದನ್ನು ಭವ್ಯ ದೇವಾಲಯವನ್ನಾಗಿಸಿವೆ. ಇದರ ಸುತ್ತಲೂ ಇನ್ನಿತರ ದೇವಾಲಯಗಳಿದ್ದು ಹಾಗೂ ಎದುರುಗಡೆ ವಿಶಾಲವಾದ ಪುಷ್ಕರಣಿ ಇದೆ. ವಿದ್ಯಾರ್ಥಿಗಳಿಗಾಗಿ ಸರಸ್ವತಿ ಮಠವಿದೆ. ಪರ್ಸಿಬ್ರೌನ್ ಈ ದೇವಾಲಯವನ್ನು ವರ್ಣಿಸುತ್ತಾ ಹಳೇಬಿಡು ದೇವಾಲಯವನ್ನು ಬಿಟ್ಟರೆ ಅತ್ಯುತ್ತಮವಾದವುಗಳಲ್ಲಿ ಇದೂ ಒಂದೆಂದು ಹೇಳಿದ್ದಾನೆ. ಇಲ್ಲಿಂದ ೧೦ ಕಿ.ಮೀ ದೂರದಲ್ಲಿರುವ **ಕುಕ್ಕನೂರಿ**ನಲ್ಲಿ ರಾಷ್ಟ್ರಕೂಟರ ಕಾಲದ ನವಲಿಂಗೇಶ್ವರ ದೇವಾಲಯ ಸಂಕೀರ್ಣ ಹಾಗೂ ಕಲ್ಯಾಣ ಚಾಳುಕ್ಯರ ಕಾಲದ ಮಹಾಮಾಯಾ, ಕಲ್ಲೇಶ್ವರ ಮತ್ತು ಮಲ್ಲಿಕಾರ್ಜುನ ದೇವಾಲಯಗಳಿವೆ.

**ಉಡುಪಿ:** ಜಿಲ್ಲಾ ಕೇಂದ್ರವಾಗಿದ್ದು, ಬೆಂಗಳೂರಿನಿಂದ ೪೧೫ ಕಿ.ಮೀ. ದೂರದಲ್ಲಿರುವ ಪವಿತ್ರ ಸ್ಥಳ. ಇಲ್ಲಿಯ ಶ್ರೀಕೃಷ್ಣ ದೇವಾಲಯವು ೧೩ನೇ ಶತಮಾನದ್ದಾಗಿದ್ದು, ಅಲ್ಲಿರುವ ಶ್ರೀಕೃಷ್ಣ ವಿಗ್ರಹವು ಆಚಾರ್ಯ ಮಧ್ವರಿಂದ (ಕ್ರಿ.ಶ. ೧೨೦೦-೧೨೮೦) ಪ್ರತಿಷ್ಠಾಪಿಸಲ್ಪಟ್ಟಿದೆ ಎಂದು ಸ್ಥಳೀಯವಾಗಿ ನಂಬಲಾಗುತ್ತದೆ. ಆಚಾರ್ಯ ಮಧ್ವರು ಶ್ರೀ ಕೃಷ್ಣನ ಪೂಜೆ ನಡೆಸುವುದಕ್ಕಾಗಿ ಅಷ್ಟ ಮಠಗಳನ್ನು ಸ್ಥಾಪಿಸಿದರು. ನಂತರ ಸೋದೇಮಠದ ವಾದಿರಾಜತೀರ್ಥರ ಕಾಲದಲ್ಲಿ ಎರಡು ವರ್ಷಗಳಿಗೊಮ್ಮೆ ಜನವರಿ ತಿಂಗಳಲ್ಲಿ ನಡೆಯುವ ಪರ್ಯಾಯ ಉತ್ಸವದಲ್ಲಿ ಅನುಕ್ರಮವಾಗಿ ಒಂದೊಂದು ಮಠದ ಯತಿಗಳು ಶ್ರೀಕೃಷ್ಣನ ಪೂಜೆಯ ಜವಾಬ್ದಾರಿಯನ್ನು ಎರಡು ವರ್ಷಗಳವರೆಗೆ ವಹಿಸಿಕೊಳ್ಳುವುದು ರೂಢಿಗೆ ಬಂದಿತು. ಕೃಷ್ಣಮಠದ ಎದುರು ಭಾಗದಲ್ಲಿರುವ ಅನಂತೇಶ್ವರ ದೇವಾಲಯ ಅಥವಾ ಮಠವು ಮಧ್ವಾಚಾರ್ಯರ ಕಾಲಕ್ಕೂ ಹಿಂದೆಯೇ ನಿರ್ಮಿತವಾಗಿದ್ದು, ಆಚಾರ್ಯರಿಗೆ ಧಾರ್ಮಿಕ ಶಿಕ್ಷಣ ನೀಡಿದ ಅಚ್ಯುತಪ್ರೇಕ್ಷಾಚಾರ್ಯರು ಅಲ್ಲೇ ನೆಲಸಿದ್ದರೆಂಬ ವಿಚಾರವು ಧಾರ್ಮಿಕ ಗ್ರಂಥಗಳಿಂದ ವ್ಯಕ್ತವಾಗುತ್ತದೆ. ಅಂತಿಮವಾಗಿ ಮಧ್ವಾಚಾರ್ಯರು ಬದರಿಗೆ ಅದೃಶ್ಯರಾಗಿ ಹೋದ

ಗುಹೆಯ ದ್ವಾರವನ್ನು ಈಗಲೂ ತೋರಿಸುತ್ತಾರೆ. ಕಡಿಯಾಳಿಯ ದುರ್ಗಾ ದೇವಾಲಯ, ಅಂಬಲಪಾಡಿಯ ಶಕ್ತಿ ದೇವಾಲಯ, ರಾಘವೇಂದ್ರ ಮಠ, ವೆಂಕಟರಮಣಸ್ವಾಮಿ ದೇವಾಲಯ, ಇವು ಇಲ್ಲಿರುವ ಇತರ ದೇವಾಲಯಗಳು. ಸಮೀಪದಲ್ಲಿರುವ ಮಲ್ಪೆ ಬಂದರಿನಲ್ಲಿ ಆಕರ್ಷಕ ಹಾಗೂ ಮನೋಲ್ಲಾಸ ನೀಡುವ ಕಡಲತೀರವಿದ್ದು, ವಡಭಂಡೇಶ್ವರ ಹಾಗೂ ಬಲರಾಮನ ದೇವಾಲಯಗಳಿವೆ. ಉಡುಪಿಯ ಸಮೀಪದಲ್ಲಿರುವ ಮಣಿಪಾಲ ಖ್ಯಾತ ವಿದ್ಯಾಕೇಂದ್ರವಾಗಿದ್ದು, ನವೀನ ಅನುಕೂಲತೆಗಳುಳ್ಳ, ಅಂತರರಾಷ್ಟ್ರೀಯ ಮಾನ್ಯತೆ ಹೊಂದಿರುವ ಆಸ್ಪತ್ರೆ ಹಾಗೂ ಪೆಥಾಲಾಜಿಕಲ್ ವಸ್ತು ಸಂಗ್ರಹಾಲಯವನ್ನೂ ಹೊಂದಿದೆ. ಇಲ್ಲಿ 'ಮಣಿಪಾಲ ಉನ್ನತಶಿಕ್ಷಣ ಅಕಾಡೆಮಿ' ಅಥವಾ"ಮಾಹೆ" (MAHE) ಎಂಬ ಹೆಸರಿನ ಪ್ರಸಿದ್ಧ ಸ್ವತಂತ್ರ ವಿಶ್ವವಿದ್ಯಾಲಯವಿದೆ.

**ಉಳವಿ:** ಉತ್ತರ ಕನ್ನಡ ಜಿಲ್ಲೆಯಲ್ಲಿ ತಾಲೂಕು ಕೇಂದ್ರ ಯಲ್ಲಾಪುರದಿಂದ ೩೨ ಕಿ.ಮೀ. ದೂರದಲ್ಲಿರುವ ಈ ಸ್ಥಳವನ್ನು ಹಳಿಯಾಳದಿಂದಲೂ ತಲುಪಬಹುದು. ದಟ್ಟ ಅರಣ್ಯದ ಮಧ್ಯದಲ್ಲಿರುವ ಈ ಸ್ಥಳದಲ್ಲಿ ಶರಣ ಬಸವೇಶ್ವರನ ಸೋದರಳಿಯ ಚನ್ನಬಸವಣ್ಣನ ಸಮಾಧಿ ಇದೆ. ಬಿಜ್ಜಳನ ಮರಣದ ತರುವಾಯ ಆತನ ಸೇನೆಯು ಚನ್ನಬಸವಣ್ಣನನ್ನು ಬೆನ್ನಟ್ಟಿದಾಗ ಕಲ್ಯಾಣವನ್ನು ತೊರೆದು ಇಲ್ಲಿಗೆ ಬಂದು ಆಶ್ರಯ ಪಡೆದಿದ್ದರು. ಇಲ್ಲಿಯ ಗವಿಮಠದಲ್ಲಿರುವ ಗುಹೆಗಳಲ್ಲಿ ಶರಣರು ವಾಸಿಸುತ್ತಿದ್ದರೆಂಬ ನಂಬಿಕೆಯಿದೆ. ಒಂದು ಗುಹೆಯನ್ನು ಚನ್ನಬಸವಣ್ಣನ ತಾಯಿ ಅಕ್ಕನಾಗಮ್ಮನ ಹೆಸರಿನಿಂದ ಕರೆಯಲಾಗುತ್ತದೆ. ಇಲ್ಲಿರುವ ಅತಿ ದೊಡ್ಡ ಕಟ್ಟಡದ ಗರ್ಭಗೃಹದಲ್ಲಿ ನಂದಿಯನ್ನು ಪ್ರತಿಷ್ಠಾಪಿಸಲಾಗಿದ್ದು, ಚನ್ನಬಸವಣ್ಣನ ಸಮಾಧಿ ಇದೆ. ಗರ್ಭಗೃಹದ ಶಿಖರದಲ್ಲಿ ಶರಣರ ಗಾರೆಯ ಶಿಲ್ಪಗಳಿವೆ. ಈ ದೇವಾಲಯವನ್ನು ನಂತರದಲ್ಲಿ ಸೋದೆ ಅರಸರು ವಿಸ್ತರಿಸಿದರು. ಪ್ರತೀ ತಿಂಗಳ ಹುಣ್ಣಿಮೆಯಂದು ಇಲ್ಲಿ ಜಾತ್ರೆ ನಡೆಯುತ್ತಿದ್ದು, ವಾರ್ಷಿಕ ಜಾತ್ರೆಯು ಶಿವರಾತ್ರಿಯ ಸಂದರ್ಭದಲ್ಲಿ ನಡೆಯುತ್ತದೆ. ನೂರಾರು ಜನರು ಪ್ರತಿದಿನವು ಈ ಸ್ಥಳವನ್ನು ಸಂದರ್ಶಿಸುತ್ತಾರೆ. ಯಾತ್ರಾರ್ಥಿಗಳಿಗೆ ಅನುಕೂಲ ಒದಗಿಸುವ ವಿಶ್ರಾಂತಿಗೃಹಗಳೂ ಇಲ್ಲಿವೆ. ಇದಲ್ಲದೇ ಜೀರ್ಣಾವಸ್ಥೆಯಲ್ಲಿರುವ ಬಾಬುರಾಯನ ಕೋಟೆಯೂ ಇಲ್ಲಿದೆ.

**ಐಹೊಳೆ:** ಬಾಗಲಕೋಟೆ ಜಿಲ್ಲೆಯ ಹುನಗುಂದ ತಾಲೂಕಿನಲ್ಲಿರುವ ಇದು ಬಾದಾಮಿ ಚಾಲುಕ್ಯರ ವಾಸ್ತುಶಿಲ್ಪಕಲಾ ಕೇಂದ್ರವಾಗಿದೆ. ಕ್ರಿ.ಶ. ಆರರಿಂದ ೧೨ನೇ ಶತಮಾನದವರೆಗೆ ಇಲ್ಲಿ ವಿಭಿನ್ನ ಶೈಲಿಯ ೧೦೦ಕ್ಕೂ ಅಧಿಕ ದೇವಸ್ಥಾನಗಳನ್ನು ನಿರ್ಮಿಸಲಾಗಿದ್ದು, ದೇವಾಲಯ ನಿರ್ಮಾಣದಲ್ಲಿ ವಿಧವಿಧವಾದ ವಾಸ್ತುಪ್ರಯೋಗಗಳನ್ನು ಮಾಡಿದ್ದಾರೆ. ಹಾಗಾಗಿ ಪರ್ಸಿಬ್ರೌನ್ ಐಹೊಳೆಯನ್ನು 'ದೇವಾಲಯ ವಾಸ್ತುಶಿಲ್ಪದ ತೊಟ್ಟಿಲು' ಎಂದು ಕರೆದಿದ್ದಾನೆ. ಐಹೊಳೆಯನ್ನು 'ಅಯ್ಯಾಹೊಳೆ', ಅಯ್ಯಪುರ, ಆರ್ಯಪುರ, ಅಯ್ಯಪೊಳಲ್ (ಅಗ್ರಹಾರ) ಎಂದು ವಿವಿಧ ಶಾಸನಗಳಲ್ಲಿ ಬಣ್ಣಿಸಲಾಗಿದೆ. ಪುರಾಣ ಕಥೆಯ ಪ್ರಕಾರ ಪರಶುರಾಮ ತನ್ನ ತಂದೆಯ ಕೊಲೆಯ ಪ್ರತೀಕಾರ ಮುಗಿಸಿದ ಮೇಲೆ ಮಲಪ್ರಭಾ ನದಿಯಲ್ಲಿ ಕೊಡಲಿಯನ್ನು ತೊಳೆದಾಗ ನೀರು ಕೆಂಪಾಗಿದ್ದನ್ನು ಕಂಡು ಜನ 'ಅಯ್ ಅಯ್ ಹೊಳೆ' ಎಂದು ಉದ್ಗರಿಸಿದರೆಂದು ಹೇಳಲಾಗಿದೆ. ಇದೇ ಮುಂದೆ ಅಯ್ಯಾಹೊಳೆ ಎಂದಾಗಿದೆ ಎಂದು ಸ್ಥಳೀಯವಾಗಿ ಭಾವಿಸಲಾಗುತ್ತದೆ. ಇನ್ನೊಂದು ಕಥೆಯ ಪ್ರಕಾರ ಅಗಸ್ತ್ಯಮುನಿಯು, ವಾತಾಪಿಯ ಸೋದರ ಇಲ್ವಲನನ್ನು ಇಲ್ಲಿ ಕೊಂದದ್ದರಿಂದ ಇಲ್ವಲಪುರ ಎಂದು ಹೆಸರು ಬಂತೆಂದು ಹೇಳಲಾಗಿದೆ. ಐಹೊಳೆ ಬೆಂಗಳೂರಿನಿಂದ ೫೧೦ ಕಿ.ಮೀ. ದೂರದಲ್ಲಿ ಹಾಗೂ ತಾಲೂಕು ಕೇಂದ್ರ ಹುನಗುಂದದಿಂದ ೨೪ ಕಿ.ಮೀ. ದೂರದಲ್ಲಿದ್ದು, ಇಲ್ಲಿಗೆ ಬಾಗಲಕೋಟೆಯಿಂದಲೂ ತಲುಪಬಹುದು. ಇಲ್ಲಿ ಆರನೇ ಶತಮಾನಕ್ಕೆ ಸೇರಿದ ಜೈನ ಹಾಗೂ ಹಿಂದೂ ಗುಹಾಲಯಗಳಿವೆ. ಜೈನಗುಹಾಲಯದಲ್ಲಿ ಜೈನ ತೀರ್ಥಂಕರರ ಸುಂದರ ಮೂರ್ತಿಗಳಿವೆ. ಶೈವ ಗುಹಾಲಯದಲ್ಲಿ ನಾಟ್ಯಭಂಗಿಯಲ್ಲಿರುವ ಸಪ್ತಮಾತೃಕೆಯರ ಸಹಿತ ನಟರಾಜ ಮೂರ್ತಿ ಇದೆ. ಇಲ್ಲಿ ಗಜಪೃಷ್ಠಾಕಾರದ ಪ್ರಸಿದ್ಧ ದುರ್ಗಾ ದೇವಾಲಯ ಹಾಗೂ ಚೌಕಾಕಾರದ ತಳವಿನ್ಯಾಸ ಇರುವ ಲಾಡಖಾನ ದೇವಾಲಯಗಳಿವೆ. ಹುಚ್ಚಿಮಲ್ಲಿ ಗುಡಿ, ಗೌಡರಗುಡಿ, ಚಕ್ರಗುಡಿ ಮುಂತಾದವು ಇಲ್ಲಿರುವ ವಿಭಿನ್ನ ಶೈಲಿಯ ಇತರ ದೇವಾಲಯಗಳು. ಗುಡ್ಡದ ಮೇಲೆ ಮೇಗುತಿ ಜೈನಬಸದಿ ಇದ್ದು, ಇಲ್ಲಿ ಎರಡನೇಯ ಪುಲಕೇಶಿಯ ಪ್ರಸಿದ್ಧ ಐಹೊಳೆ ಪ್ರಶಸ್ತಿ ಶಾಸನವಿದೆ. ಇಲ್ಲೇ ಕೆಳಗಡೆ ಎರಡು ಅಂತಸ್ತಿನ ಬಂಡೆಯಲ್ಲಿ ಕೊರೆದ ಬೌದ್ಧ ಚೈತ್ಯಾಲಯವಿದೆ. ಈ ದೇವಾಲಯಗಳು ಸುಂದರವಾದ ಶಿಲ್ಪಗಳನ್ನು ಹೊಂದಿವೆ. ದೇವಾಲಯಗಳ ಶಿಲ್ಪಕಲೆಯನ್ನು ಅಭ್ಯಸಿಸುವ ವಿದ್ಯಾರ್ಥಿಗಳು ಐಹೊಳೆಯನ್ನು ಕಡ್ಡಾಯವಾಗಿ ಸಂದರ್ಶಿಸಬೇಕು. ಅಲ್ಲಿಯೇ ಸಮೀಪದಲ್ಲಿರುವ ಸಿದ್ಧನಕೊಳ್ಳದಲ್ಲಿ ಲಜ್ಜಾಗೌರಿಯ ಮೂರ್ತಿ ಇದ್ದು ಬಳಿಯಲ್ಲಿಯೇ ಬಾದಾಮಿ ಚಾಲುಕ್ಯರ ಕಾಲದ ಸಿದ್ಧೇಶ್ವರ ದೇವಾಲಯವಿದೆ.

**ಕಂಬದಹಳ್ಳಿ:** ಪ್ರಮುಖ ಜೈನ ಕೇಂದ್ರವಾದ ಕಂಬದಹಳ್ಳಿ, ಶ್ರವಣಬೆಳಗೊಳ ರಸ್ತೆಯಲ್ಲಿ ನಾಗಮಂಗಲದಿಂದ ೧೬ ಕಿ. ಮೀ. ಪಶ್ಚಿಮಕ್ಕಿದೆ. ಇಲ್ಲಿ ಗಂಗರ ಕಾಲದ ಬಸದಿಯ ಸಂಕೀರ್ಣವಿದೆ. ಶಾಸನಗಳಲ್ಲಿ ಈ ಸ್ಥಳವನ್ನು ಬಿಂಡಿಗನವಿಲೆಯ ತೀರ್ಥಬಸದಿ ಎಂದು ಉಲ್ಲೇಖಿಸಲಾಗಿದೆ. ಇಲ್ಲಿರುವ ಎತ್ತರದ ಮಾನಸ್ತಂಭದಿಂದಾಗಿ ಇದನ್ನು ಕಂಬದಹಳ್ಳಿ ಎಂದು ಕರೆಯಲಾಗುತ್ತಿದೆ. ಇಲ್ಲಿ ಮೂರು ವಿವಿಧ ಹಂತಗಳಲ್ಲಿ ಕಟ್ಟಲ್ಪಟ್ಟಿರುವ ಅದ್ಭುತವಾದ ಏಳು ಬಸದಿಗಳ ಸಂಕೀರ್ಣವಿದೆ. ಅದರಲ್ಲಿ ಆದಿನಾಥ ತ್ರಿಕೂಟ ಹಾಗೂ ದ್ವಿಕೂಟ ಬಸದಿಗಳ ಉತ್ತರಕ್ಕೆ ಇನ್ನೊಂದು ದ್ವಿಕೂಟ (ಶಾಂತಿನಾಥ) ಬಸದಿ ಇದೆ. ಆದಿನಾಥ ತ್ರಿಕೂಟ ಬಸದಿಯಲ್ಲಿ ಆದಿನಾಥ ತೀರ್ಥಂಕರನ ಮೂರ್ತಿ ಉತ್ತರಕ್ಕೆ ಮುಖಮಾಡಿ ಇದ್ದು, ಇಕ್ಕೆಲಗಳಲ್ಲಿ ಪೂರ್ವ ಹಾಗೂ ಪಶ್ಚಿಮಕ್ಕೆ ಮುಖಮಾಡಿರುವ ನೇಮಿನಾಥ ಹಾಗೂ ಶಾಂತಿನಾಥರ ವಿಗ್ರಹಗಳಿವೆ. ಮಧ್ಯದ ಗರ್ಭಗುಡಿಯ ಅಂತರಾಳದಲ್ಲಿ ಎರಡು ಮೀಟರ್ ಎತ್ತರದ ಪಾರ್ಶ್ವನಾಥ ಹಾಗೂ ಯಕ್ಷ-ಯಕ್ಷಿ ವಿಗ್ರಹಗಳಿವೆ. ನವರಂಗದ ವಾಯವ್ಯ ಮೂಲೆಯಲ್ಲಿ ಶಾಂತಿನಾಥನ ಯಕ್ಷ-ಯಕ್ಷಿಯರ ವಿಗ್ರಹಗಳಿವೆ. ಇದಲ್ಲದೇ ಧರಣೇಂದ್ರ, ಗೋಮುಖ, ಕೂಷ್ಮಾಂಡಿನಿ, ಪದ್ಮಾವತಿ ಹಾಗೂ ಜ್ವಾಲಾಮಾಲಿನಿಯರ ವಿಗ್ರಹಗಳಿವೆ. ನವರಂಗದ ಮಧ್ಯದ ಭುವನೇಶ್ವರಿಯಲ್ಲಿ ಅಷ್ಟದಿಕ್ಪಾಲಕರಿಂದ ಹಾಗೂ ಕ್ಷೇತ್ರಪಾಲರಿಂದ ಸುತ್ತುವರಿಯಲ್ಪಟ್ಟ ಪಾರ್ಶ್ವನಾಥನ ಸುಂದರ ಕೆತ್ತನೆಯಿದೆ.

ನವರಂಗದ ಮುಂಭಾಗದಲ್ಲಿರುವ ಮಂಟಪವು ನಂತರದ ಸೇರ್ಪಡೆಯಾಗಿದೆ. ಇಲ್ಲಿ ಅಷ್ಟದಿಕ್ಪಾಲಕರಿರುವ ಅಷ್ಟಕೋನಾಕೃತಿಯ ಪೀಠವಿದೆ. ನಾಲ್ಕು ಹಂತಗಳಿರುವ ಅಧಿಷ್ಠಾನದ ಅರೆಗಂಬಗಳ ಮೇಲಿರುವ ಅಲಂಕೃತ ಬೋದಿಗೆ ಹಾಗೂ ದೇವಕೋಷ್ಠಗಳಲ್ಲಿ

ತೀರ್ಥಂಕರರ ಶಿಲ್ಪಗಳಿವೆ. ಕಪೋತವನ್ನು ಹಂಸಗಳ ಸಾಲಿನಿಂದ ಅಲಂಕರಿಸಲಾಗಿದೆ. ಗರ್ಭಗುಡಿಗಳ ಮೇಲೆ ಮೂರು ತಳಗಳಿರುವ ದ್ರಾವಿಡ ವಿಮಾನಗಳಿವೆ. ಪೂರ್ವದ ಶಿಖರದ ಸ್ತೂಪಿಯು ಗೋಲಾಕಾರವಾಗಿದ್ದು, ಪಶ್ಚಿಮ ಹಾಗೂ ದಕ್ಷಿಣದ ಶಿಖರಗಳ ಸ್ತೂಪಿಯು ಚೌಕಾಕಾರ ಹಾಗೂ ಅಷ್ಟ ಕೋನಾಕಾರವಾಗಿವೆ. ಇದು ಎಲ್ಲಿಯೂ ಕಾಣಸಿಗದ ವಿಶಿಷ್ಟ ಲಕ್ಷಣವಾಗಿದೆ. ತ್ರಿಕೂಟ ಬಸದಿಯಿಂದ ಸುಮಾರು ೧೦ ಅಡಿ ಉತ್ತರಕ್ಕೆ ಒಂದಕ್ಕೊಂದು ಮುಖಮಾಡಿರುವ ಎರಡು ಗರ್ಭಗೃಹಗಳಿದ್ದು, ಅವುಗಳಿಗೆ ಪ್ರತ್ಯೇಕವಾದ ಶುಕನಾಸಿ ಹಾಗೂ ನವರಂಗಗಳಿವೆ. ಈ ಎರಡು ಗರ್ಭಗೃಹಗಳ ನಡುವಿನ ಜಾಗದಲ್ಲಿ ತೆರೆದ ಮಂಟಪವಿದೆ. ಈ ಗರ್ಭಗೃಹಗಳಲ್ಲಿ ಆಸೀನ ತೀರ್ಥಂಕರರ ವಿಗ್ರಹಗಳಿವೆ. ಪಂಚಕೂಟ ಬಸದಿಯ ಉತ್ತರಕ್ಕಿರುವ ಶಾಂತಿನಾಥ ಬಸದಿಯನ್ನು ನೂರು ೧೨ನೇ ಶತಮಾನದಲ್ಲಿ ಹೊಯ್ಸಳ ಸೇನಾಪತಿ ಗಂಗರಾಜನ ಮಗ ಬೊಪ್ಪನು ಕಟ್ಟಿಸಿದ್ದನು. ಈ ಬಸದಿಯ ಅಧಿಷ್ಠಾನದಲ್ಲಿ ಸುಂದರವಾದ ಆನೆ, ಸಿಂಹ, ಕುದುರೆ, ಯಾಳಿ, ಎತ್ತು ಮುಂತಾದ ಶಿಲ್ಪಗಳಿವೆ. ನವರಂಗದಲ್ಲಿ ನೇಮಿನಾಥ, ಧರಣೇಂದ್ರ, ಗೋಮುಖ ಹಾಗು ಪದ್ಮಾವತಿ ಯಕ್ಷಿಯ ಶಿಲ್ಪಗಳಿವೆ. ಭುವನೇಶ್ವರಿಯಲ್ಲಿ ಅಷ್ಟದಿಕ್ಪಾಲಕರಿಂದ ಸುತ್ತುವರಿಯಲ್ಪಟ್ಟಿರುವ ಆಸೀನ ತೀರ್ಥಂಕರ ವಿಗ್ರಹವಿದೆ. ಪಶ್ಚಿಮದ ಗರ್ಭಗೃಹದಲ್ಲಿ ಶಾಂತಿನಾಥ ತೀರ್ಥಂಕರನ ವಿಗ್ರಹವಿದ್ದು, ಇದು ೩.೫ ಮೀಟರ್ ಎತ್ತರವಿದೆ. ಪೂರ್ವದ ಗರ್ಭಗೃಹವನ್ನು ಈಗ ಪ್ರವೇಶದ್ವಾರವನ್ನಾಗಿ ಉಪಯೋಗಿಸಲಾಗುತ್ತಿದೆ. ಪಂಚಕೂಟ ಬಸದಿಯ ಮುಂಭಾಗದಲ್ಲಿ ಸ್ವಲ್ಪ ಉತ್ತರಕ್ಕೆ ೧೫ ಮೀಟರ್ ಎತ್ತರದ ಬ್ರಹ್ಮಸ್ತಂಭವಿದ್ದು, ಇದನ್ನು ಕರ್ನಾಟಕದಲ್ಲಿಯೇ ಅತ್ಯಂತ ಸುಂದರವಾದ ಬ್ರಹ್ಮಸ್ತಂಭವೆಂದು ಪರಿಗಣಿಸಲಾಗಿದೆ. ಈ ಬ್ರಹ್ಮಸ್ತಂಭದಿಂದಾಗಿಯೇ ಈ ಸ್ಥಳಕ್ಕೆ ಕಂಬದಹಳ್ಳಿ ಎಂದು ಹೆಸರು ಬಂದಿದೆ.

**ಕನ್ನಂಬಾಡಿ:** ಕನ್ನಂಬಾಡಿಯು ಕಾವೇರಿ ನದಿಗೆ ಕಟ್ಟಿರುವ ಕೃಷ್ಣರಾಜಸಾಗರ ಅಣೆಕಟ್ಟಿನ ಹಿನ್ನೀರಿನಲ್ಲಿರುವ ಬೇಚಿರಾಕ್ ಗ್ರಾಮ. ಇಲ್ಲಿ ಕ್ರಮವಾಗಿ ಗಂಗ ಮತ್ತು ಹೊಯ್ಸಳರ ಕಾಲದ ಹತ್ತು ಮತ್ತು ಹದಿಮೂರನೇ ಶತಮಾನದ ಕನ್ನೇಶ್ವರ ಹಾಗೂ ಗೋಪಾಲಕೃಷ್ಣ ದೇವಾಲಯಗಳು ಹಿಂದೆ ಇದ್ದವು. ಈಗ ಹಿನ್ನೀರಿನಲ್ಲಿ ಅವು ಮುಳುಗಡೆಯಾಗಿವೆ. ಈಚೆಗೆ ಗೋಪಾಲಕೃಷ್ಣ ದೇವಾಲಯವನ್ನು ಬೆಂಗಳೂರಿನ ಲೋಕೋಪಕಾರಿಯೊಬ್ಬರ ಪ್ರಯತ್ನದಿಂದಾಗಿ ಸಮೀಪದ ಹೊಸಕನ್ನಂಬಾಡಿ ಗ್ರಾಮದ ವ್ಯಾಪ್ತಿಯಲ್ಲಿರುವ ಎತ್ತರದ ಸ್ಥಳಕ್ಕೆ ಸ್ಥಳಾಂತರಿಸಿ ಪುನರ್ ನಿರ್ಮಿಸಲಾಗಿದ್ದು, ದೊಡ್ಡ ಸಂಖ್ಯೆಯಲ್ಲಿ ಪ್ರವಾಸಿಗರನ್ನು ಆಕರ್ಷಿಸುತ್ತಿದೆ. ಹಿಂದೆ, ಈ ದೇವಾಲಯಗಳ ಶಿಲ್ಪಗಳನ್ನು ಕೃಷ್ಣರಾಜಸಾಗರ ಆಣೆಕಟ್ಟಿನ ಉತ್ತರ ಪಾರ್ಶ್ವದ ನಾರ್ತ್‌ಬ್ಯಾಂಕ್ ಗ್ರಾಮದಲ್ಲಿ ನಿರ್ಮಿಸಲಾದ ಹೊಸ ದೇವಾಲಯಗಳಲ್ಲಿ ರಕ್ಷಿಸಿಡಲಾಗಿತ್ತು. ಈಗ ಅವುಗಳನ್ನು ಪುನರ್ ನಿರ್ಮಿತ ದೇವಾಲಯ ಪರಿಸರಕ್ಕೆ ಸಾಗಿಸಲಾಗುತ್ತಿದೆ. ಮಂಡ್ಯ ಜಿಲ್ಲೆಯಲ್ಲಿರುವ ಕೃಷ್ಣರಾಜಸಾಗರದ ಆಕರ್ಷಕ ದೀಪಾಲಂಕಾರವಿರುವ 'ಬೃಂದಾವನ ಉದ್ಯಾನವನ'ಗಳಿರುವ ಅಣೆಕಟ್ಟು, ಸಂಗೀತ ಕಾರಂಜಿಗಳುಳ್ಳ ಉದ್ಯಾನವನವನ್ನು ಸಂಜೆಯ ಸಮಯದಲ್ಲಿ ನೋಡಿದಾಗ ಆಹ್ಲಾದಕರ ಅನುಭವವಾಗುತ್ತದೆ.

**ಕಾರ್ಕಳ:** ಜಿಲ್ಲಾಕೇಂದ್ರ ಉಡುಪಿಯಿಂದ ೩೦ ಕಿ.ಮೀ ದೂರದಲ್ಲಿರುವ ತಾಲೂಕು ಕೇಂದ್ರ ಕಾರ್ಕಳವು ಗಮನಾರ್ಹ ಜೈನ ಕೇಂದ್ರವಾಗಿದೆ. ಇದು ಭೈರರಸರು ಅಥವಾ ಶಾಂತರಸರು ಎಂದು ಕರೆಯಲಾಗುತ್ತಿದ್ದ ಜೈನ ವಂಶೀಯರ ರಾಜಧಾನಿಯಾಗಿದ್ದು, ಇಲ್ಲಿರುವ ಗೊಮ್ಮಟ ವಿಗ್ರಹದ ಪ್ರತಿಸ್ಥಾಪನೆಯನ್ನು ೧೪೩೨ರಲ್ಲಿ ಆ ವಂಶದ ವೀರಪಾಂಡ್ಯನು ಮಾಡಿಸಿದನು. ಇಮ್ಮಡಿ ಭೈರವರಾಯನು ಇಲ್ಲಿ ಬಹು ಸುಂದರವಾದ ಚತುರ್ಮುಖ ಬಸದಿ, ತ್ರಿಭುವನ ತಿಲಕ ಜಿನ ಚೈತ್ಯಾಲಯವನ್ನು ೧೫೮೬ರಲ್ಲಿ ನಿರ್ಮಿಸಿದ್ದಾನೆ. ನಾಲ್ಕು ಪ್ರವೇಶದ್ವಾರಗಳುಳ್ಳ ಈ ಬಸದಿಯ ಗರ್ಭಗೃಹದ ಪೀಠದ ಮೇಲೆ ನಾಲ್ಕು ದಿಕ್ಕಲ್ಲಿ ಅರನಾಥ, ಮಲ್ಲಿನಾಥ ಮತ್ತು ಮುನಿ ಸುವೃತನಾಥ ತೀರ್ಥಂಕರರ ಮೂರ್ತಿಗಳಿರುವಂತೆ ಸಂಯೋಜಿಸಲಾಗಿದೆ. ಇಲ್ಲಿರುವ ಅನಂತಶಯನ ಹಾಗೂ ವೆಂಕಟರಮಣ ದೇವಾಲಯಗಳು ಸಾಕಷ್ಟು ಹಳೆಯದವಾಗಿದ್ದು, ರಾಮಸಮುದ್ರ ಹೊಂಡದ ಮೇಲೆ ಇನ್ನೊಂದು ಪ್ರಾಚೀನ ಬಸದಿ ಇದೆ. ಇಲ್ಲಿಯ ಸಂತ ಲಾರೆನ್ಸ್ ಚರ್ಚ್ ಬಹಳಷ್ಟು ಪೂಜನೀಯವೆನಿಸಿದೆ. ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರಿನಿಂದ ೩೫ ಕಿ.ಮೀ. ದೂರದಲ್ಲಿರುವ **ಮೂಡಬಿದರೆಯು** ದಕ್ಷಿಣಭಾರತದ ಪ್ರಸಿದ್ಧ ಜೈನ ಕೇಂದ್ರಗಳಲ್ಲಿ ಒಂದಾಗಿದೆ. ಇಲ್ಲಿರುವ ೧೮ ಬಸದಿಗಳಲ್ಲಿ ತ್ರಿಭುವನತಿಲಕ ಚೂಡಾಮಣಿ ಬಸದಿ ಅಥವಾ ಸಾವಿರ ಕಂಬದ ಬಸದಿಯು ಅತೀ ದೊಡ್ಡದು. ಉಳಿದ ಬಸದಿಗಳು ಆಕರ್ಷಕವಾಗಿವೆ. ಜೈನಮಠದಲ್ಲಿ ಅಪರೂಪದ ಜೈನ ಕೃತಿಗಳು, ಹಸ್ತಪ್ರತಿಗಳು ಹಾಗು ಗಮನಾರ್ಹ ಲೋಹದ ವಿಗ್ರಹಗಳೂ ಇವೆ. ಮೂಡಬಿದರೆಯು ಹಿಂದೆ ಚೌಟರಸರ ರಾಜಧಾನಿಯಾಗಿತ್ತು. ಈ ವಂಶದ ಹಳೆಯ ಅರಮನೆಯಲ್ಲಿ ನವನಾರೀ ಕುಂಜರ ಹಾಗೂ ಪಂಚನಾರೀ ತುರಗ ಕೆತ್ತನೆಗಳುಳ್ಳ ಮರದ ಆಕರ್ಷಕ ಕಂಬಗಳಿವೆ.

**ಕಾರವಾರ:** ಉತ್ತರಕನ್ನಡದ ಜಿಲ್ಲಾ ಕೇಂದ್ರವಾಗಿರುವ ಕಾರವಾರವು ಗೋವಾ ರಾಜ್ಯಕ್ಕೆ ಹೊಂದಿಕೊಂಡಂತಿದ್ದು ಬೆಂಗಳೂರಿನಿಂದ ೬೦೦ ಕಿ.ಮೀ. ದೂರದಲ್ಲಿದೆ. ೧೮೬೩ರಲ್ಲಿ ಬ್ರಿಟಿಷರಿಂದ ಸ್ಥಾಪಿತವಾದ ಈ ಪಟ್ಟಣವು ಕಡವಾಳ ಗ್ರಾಮದಿಂದ ತನ್ನ ಹೆಸರು ಪಡೆದಿದೆ. ಕಡವಾಳವು ಕಾಳೀ ನದಿ ದಂಡೆಯ ಮೇಲೆ ಸ್ವಲ್ಪ ಒಳಗಾದಂತೆ, ಇದ್ದು ಇಲ್ಲಿ ಬ್ರಿಟಿಷರು ೧೮೩೮ರಲ್ಲಿ ಫ್ಯಾಕ್ಟರಿ ನಿರ್ಮಿಸಿದ್ದರು. ಕಾರವಾರವು ಸಾರ್ವಕಾಲಿಕ ಅನುಕೂಲತೆಗಳುಳ್ಳ ಬಂದರಾಗಿದ್ದು, ಅಂಜದೀವ್, ಕೂರ್ಮಗಡ, ದೇವಗಡ, ಮುಂತಾದ ದ್ವೀಪಗಳ ಸಾಲಿನಿಂದಾಗಿ ಬಿರುಗಾಳಿಯಿಂದ ರಕ್ಷಿತವಾಗಿದೆ. ಇಲ್ಲಿ ಬಹು ಉತ್ಕೃಷ್ಟ ದರ್ಜೆಯ ಕಡಲ ತಾಣಗಳಿವೆ. ಭಾರತದಿಂದ ಹಿಡಿದು ಶ್ರೀಲಂಕಾ, ಆಸ್ಟ್ರೇಲಿಯವರೆಗೆ ಇರುವ ಬಂದರುಗಳ ಪೈಕಿ ಕಾರವಾರ ಬಂದರನ್ನು ಅತ್ಯಂತ ಸುರಕ್ಷಿತ ಬಂದರೆಂದು ಸೈನಿಕವಾಗಿ ಪರಿಗಣಿಸಲಾಗಿದೆ. ಆದ ಕಾರಣ ಭಾರತೀಯ ನೌಕಾಪಡೆಯು ಇಲ್ಲಿ 'Sea Bird' ನೌಕಾನೆಲೆಯನ್ನು ಹಲವು ವರ್ಷಗಳ ಹಿಂದೆಯೇ ಸ್ಥಾಪಿಸಿದೆ. ಕಾಳೀನದಿಗೆ ಹೊಸದಾಗಿ ಕಟ್ಟಲಾಗಿರುವ ಸೇತುವೆಯನ್ನು ದಾಟಿದರೆ, ಸೋಂದಾ ಸದಾಶಿವನಾಯಕನಿಂದ ನಿರ್ಮಿತವಾದ ಸದಾಶಿವಗಡ ಎಂಬ ಗಿರಿದುರ್ಗವಿದೆ. ಸದಾಶಿವಗಡದಲ್ಲಿ ದುರ್ಗಾ ದೇವಾಲಯ ಹಾಗೂ ಪೀರ್ ಕಮರುದ್ದೀನ್ ದರ್ಗಾ ಇವೆ. ಕಾರವಾರದ ದಕ್ಷಿಣಕ್ಕೆ ಬಿನಗಾ ಎಂಬ ಊರಿದೆ. ಇಲ್ಲಿ ಕಾಸ್ಟಿಕ್ ಸೋಡಾ ಕಾರ್ಖಾನೆ ಇದೆ. ಕಾಳೀನದಿಯ ಮುಖಜ ಪ್ರದೇಶದಿಂದ ನದಿಯ ಹರವಿನವರೆಗೂ ಸರಕುಗಳು ಕದ್ರಾವನ್ನು ತಲುಪಿ ಅಲ್ಲಿಂದ ಮುಂದೆ ಭೂಮಾರ್ಗದ ಮೂಲಕ ಮಧ್ಯಯುಗೀನ ಕಾಲದಲ್ಲಿ ಮಲೆನಾಡನ್ನು ತಲುಪುತ್ತಿದ್ದವು. ಗೋವಾದ ಆಡಳಿತದಲ್ಲಿರುವ ಅಂಜದೀವ

ದ್ವೀಪವು ಬಿನಗದ ಸಮೀಪವಿದೆ. ಇಲ್ಲಿ ಪೋರ್ಚುಗೀಸ್ ಯಾತ್ರಿಕ ವಾಸ್ಕೋಡಗಾಮನು ಸ್ವಲ್ಪ ಕಾಲ ನೆಲಸಿದ್ದನೆಂದು ಪ್ರತೀತಿಯಿದೆ.

**ಕಾಳಗಿ:** ಚಿತ್ತಾಪುರ ತಾಲೂಕಿನಲ್ಲಿರುವ ಕಾಳಗಿ ಕಲಬುರಗಿಯ ೬೦ ಕಿ.ಮೀ. ದೂರದಲ್ಲಿದೆ. ಕಲ್ಯಾಣದ ಚಾಳುಕ್ಯರ ಕಾಲದಲ್ಲಿ ಇದು ಮನ್ನೆದಡಿ–೧೦೦೦ ಎಂಬ ಆಡಳಿತ ವಿಭಾಗದ ಕೇಂದ್ರವಾಗಿತ್ತು. ಇಲ್ಲಿ ಕಲ್ಯಾಣ ಚಾಳುಕ್ಯರ ಕಾಲದ ಐದು ದೇವಾಲಯಗಳಿವೆ. ಇವುಗಳಲ್ಲಿ ಊರಿನ ಹೃದಯ ಭಾಗದಲ್ಲಿರುವ ಮಲ್ಲಿಕಾರ್ಜುನ ದೇವಾಲಯವು ೧೧೬೩ರಲ್ಲಿ ಬಾಣ ಮಹಾಮಂಡಲೇಶ್ವರ ವೀರಗೊಂಕರಸನಿಂದ ನಿರ್ಮಿಸಲ್ಪಟ್ಟ ಸುಂದರ ವಾಸ್ತುವಿನ ಉದಾಹರಣೆಯಾಗಿದೆ. ರಾಮೋಜನೆಂಬ ಸ್ಥಪತಿಯ ನೇತೃತ್ವದಲ್ಲಿ ಹನ್ನೆರಡು ಜನ ಶಿಲ್ಪಿಗಳು ಇದನ್ನು ನಿರ್ಮಿಸಿದರು. ಬನಶಂಕರಿ ದೇವಾಲಯದ ಸಮೀಪದಲ್ಲಿರುವ ಪಾರ್ಶ್ವನಾಥ ಬಸದಿಯು ಹನ್ನೊಂದನೇ ಶತಮಾನದ ತ್ರಿಕೂಟ ದೇವಾಲಯವಾಗಿದ್ದು ಮುಖ್ಯ ಗರ್ಭಗೃಹದಲ್ಲಿ ಪಾರ್ಶ್ವನಾಥ ತೀರ್ಥಂಕರನ ವಿಗ್ರಹವಿದೆ.

ಊರಿಂದ ದಕ್ಷಿಣ ಒಂದು ಕಿ.ಮೀ. ದೂರದಲ್ಲಿ ಕಾಳಂಗ ದೇವಾಲಯ ಸಂಕೀರ್ಣವಿದ್ದು ಇವುಗಳಲ್ಲಿ ಕೆಲವು ದೇವಾಲಯಗಳು ವಿವಿಧ ದೇವತಾ ಶಿಲ್ಪಗಳಿಂದ ಸಮೃದ್ಧವಾಗಿ ಅಲಂಕೃತವಾಗಿವೆ. ಇಲ್ಲಿಯ ಕರಿ ದೇವರು (ಸೂರ್ಯನಾರಾಯಣ) ದೇವಾಲಯ ಜೀರ್ಣವಾಗಿದ್ದರೂ ವಿಷ್ಣು, ಬ್ರಹ್ಮ, ಮಹೇಶ್ವರ, ಭೈರವ, ನಟರಾಜ, ಉಮಾಮಹೇಶ್ವರ, ಮಹಿಷಮರ್ದಿನಿ, ಗಣಪತಿ, ಮದನಿಕೆಯರೇ ಮುಂತಾದ ಅನೇಕ ಉಬ್ಬು ಶಿಲ್ಪಗಳನ್ನು ಹೊಂದಿರುವ ತ್ರಿಕೂಟ ದೇವಾಲಯವಾಗಿದೆ. ಹದಿಮೂರನೇ ಶತಮಾನದ ಶಾಸನದಲ್ಲಿ ಉಲ್ಲೇಖಿತವಾಗಿರುವ ಜಯಲಿಂಗೇಶ್ವರ ದೇವಾಲಯ ಇದಾಗಿರಬಹುದು ಎಂಬ ಅಭಿಪ್ರಾಯವಿದೆ. ಇಲ್ಲಿರುವ ಕಾಳೇಶ್ವರ ದೇವಾಲಯ ಪ್ರಾಚೀನತಮವಾದುದಾಗಿದ್ದು, ೧೧೦೩ರ ಶಾಸನ ಒಂದರಲ್ಲಿ ಸ್ವಯಂಭು ಕಾಳೇಶ್ವರ ಎಂದು ಹೆಸರಿಸಲ್ಪಟ್ಟಿದೆ. ಸಭಾಮಂಟಪದ ಇಕ್ಕೆಲಗಳಲ್ಲಿ ನೀಲಕಂಠ, ರೇವಣ ಸಿದ್ಧೇಶ್ವರ, ಈಶ್ವರ, ಸೋಮೇಶ್ವರ ಬಿಬ್ಬೇಶ್ವರ ಲಿಂಗಗಳು ಪ್ರತಿಷ್ಠಾಪಿತವಾಗಿವೆ. ದೇವಾಲಯದ ಪಾರ್ಶ್ವದಲ್ಲಿ ಕಾಶಿ ವಿಶ್ವನಾಥ, ರಾಮಲಿಂಗ ಮತ್ತು ನಂದಿಯ ಗುಡಿಗಳಿವೆ. ಕಾಳಗಿ ಹೊಳೆಯ ಉತ್ತರದಂಡೆಯ ಮೇಲೆ ಪುಷ್ಕರಿಣಿಯ ಪರಿಸರದಲ್ಲಿ ಈಶ್ವರ ಮತ್ತು ನರಸಿಂಹ ದೇವಾಲಯಗಳಿವೆ.

**ಕಿತ್ತೂರು:** ಧಾರವಾಡ–ಬೆಳಗಾವಿ ರಸ್ತೆಯಲ್ಲಿ ಧಾರವಾಡದಿಂದ ೩೩ ಕಿ.ಮೀ. ದೂರವಿರುವ, ಕಿತ್ತೂರು ಹಿಂದೆ ದೇಶಗತಿಯೊಂದರ ರಾಜಧಾನಿಯಾಗಿತ್ತು. ೧೮೨೪ರಲ್ಲಿ ಬ್ರಿಟಿಷರ ವಿರುದ್ಧ ದಂಗೆ ಎದ್ದ ದೇಸಾಯಿನಿ ಚೆನ್ನಮ್ಮಾಜಿಯಿಂದಾಗಿ ಈ ಸ್ಥಳವು ಪ್ರಸಿದ್ಧವಾಯಿತು. ಊರಲ್ಲಿ ಜೀರ್ಣವಾಗಿರುವ ವಾಡೆ, ಬುರುಜು, ಇತ್ಯಾದಿಗಳಿದ್ದು, ಇವು ಕೋಟೆಯ ಒಂದು ಭಾಗದಲ್ಲಿವೆ. ಇಲ್ಲಿರುವ ಕರ್ನಾಟಕ ರಾಜ್ಯ ಸರ್ಕಾರ ವಸ್ತುಸಂಗ್ರಹಾಲಯದಲ್ಲಿ ದೇಸಾಯಿ ವಾಡೆಯಿಂದ ಸಂಗ್ರಹಿಸಲಾದ ಅನೇಕ ಪ್ರಾಚ್ಯವಸ್ತುಗಳಿವೆ. ಕೋಟೆಯೊಳಗೆ ಕಲ್ಮೇಶ್ವರ ದೇವಾಲಯವಿದ್ದು, ಊರಲ್ಲಿ ಚೌಕಿಮಠ ಹಾಗೂ ಹಿರೇಮಠ ಎಂದು ಕರೆಯಲಾಗುವ ವೀರಶೈವ ಮಠಗಳಿವೆ. ಕಿತ್ತೂರಿನಲ್ಲಿ ಬಾಲಕಿಯರ ಸೈನಿಕ ಶಾಲೆಯಿದೆ. ತಾಲೂಕುಕೇಂದ್ರ ಬೈಲಹೊಂಗಲದಲ್ಲಿ ಚೆನ್ನಮ್ಮಾಜಿಯ ಸಮಾಧಿ ಇದ್ದು, ಅದರ ಮೇಲೆ ಆಕೆಯ ಕಂಚಿನ ವಿಗ್ರಹವನ್ನು ಪ್ರತಿಸ್ಥಾಪಿಸಲಾಗಿದೆ. ಕಿತ್ತೂರಿನಿಂದ ಐದು ಕಿ.ಮೀ. ದೂರವಿರುವ ದೇಗಾಂವೆಯಲ್ಲಿ ಚಾಳುಕ್ಯರ ಶೈಲಿಯಲ್ಲಿರುವ ೧೨ನೇ ಶತಮಾನದ ಕಮಲನಾರಾಯಣ ದೇವಾಲಯವಿದೆ. ಇದನ್ನು ಗೋವೆಯ ಕದಂಬರು ನಿರ್ಮಿಸಿದರು. ಉತ್ಕೃಷ್ಟ ಕಲಾಪ್ರತಿಭೆಗಾಗಿ ಈ ಸುಂದರ ದೇಗುಲ ಪ್ರಸಿದ್ಧವಾಗಿದೆ. ಬೈಲಹೊಂಗಲದಿಂದ ೧೦ ಕಿ.ಮೀ ದೂರದಲ್ಲಿರುವ ಒಕ್ಕುಂದವು ರಾಷ್ಟ್ರಕೂಟರ ಕಾಲದಲ್ಲಿ (ಕ್ರಿ.ಶ. ೮೫೦) ಪ್ರಮುಖ ಪಟ್ಟಣವಾಗಿದ್ದು ಕವಿರಾಜ ಮಾರ್ಗದ ಕರ್ತೃ ಶ್ರೀವಿಜಯ ಹೆಸರಿಸಿರುವ ತಿರುಳ ಕನ್ನಡ ಪ್ರದೇಶ ನಾಲ್ಕು ಗಡಿಸ್ಥಳಗಳಲ್ಲಿ ಇದೊಂದಾಗಿದ್ದು, ಫಲಗೆರೆ ಪಟ್ಟದ ಕಿಸುವೊಳಲು ಹಾಗೂ ಕೊಪ್ಪಣ ನಗರ ಉಳಿದ ಮೂರ್ತಿ ಸ್ಥಳಗಳಾಗಿವೆ. ಈಗ ನವಿಲುತೀರ್ಥ ಅಣೆಕಟ್ಟಿನಲ್ಲಿ ಮುಳುಗಡೆಯಾಗಿದೆ. ಇಲ್ಲಿ ಕಲ್ಯಾಣದ ಚಾಳುಕ್ಯರ ಕಾಲದ ಜೈನ, ಶೈವ ಸಂಪ್ರದಾಯ ದೇವಾಲಯಗಳಿದ್ದು, ಕೇವಲ ಬೇಸಿಗೆಯಲ್ಲಿ ಮಾತ್ರ ನೋಡಲು ದೊರೆಯುತ್ತದೆ.

**ಕೈದಾಳ:** ಜಿಲ್ಲಾ ಕೇಂದ್ರ ತುಮಕೂರಿನಿಂದ ಐದು ಕಿ.ಮೀ ದಕ್ಷಿಣಕ್ಕಿರುವ ಚಾರಿತ್ರಿಕ ಮಹತ್ವದ ಸ್ಥಳ. ಇಲ್ಲಿಯ ಶಾಸನವೊಂದು ಹೊಯ್ಸಳ ಒಂದನೆಯ ನರಸಿಂಹನ ಸಾಮಂತ ಗೂಚಿಬಾಚಿಯು ಇಲ್ಲಿ ಕೈದಾಳದಲ್ಲಿ ಶಿವ ವಿಷ್ಣು ಜಿನ ದೇವಾಲಯವನ್ನು ನಿರ್ಮಿಸಿದ ಅಂಶವನ್ನು ದಾಖಲಿಸಿದೆ. ಇಲ್ಲಿ ಚನ್ನಕೇಶವ, ಗಂಗಾಧರೇಶ್ವರ, ರಾಮೇಶ್ವರ ಗೌರಿಶ್ವರ ಹಾಗೂ ಶೂಲಗಂಬದ ಆಂಜನೆಯ ಗುಡಿಗಳಿವೆ. ಚನ್ನಕೇಶವ ಮೂರ್ತಿಯನ್ನು ಕೆತ್ತಿದ ಜಕಣಾಚಾರಿಯ ದೋಷವನ್ನು ಮಗ ಡಕಣಾಚಾರಿಯ ತೋರಿಸಿದಾಗ, ತಂದೆ ತನ್ನ ಕೈಗಳನ್ನು ಕತ್ತರಿಸಿಕೊಂಡನೆಂಬ ಐತಿಹ್ಯವಿದೆ.

**ಕೊಕ್ಕರೆ ಬೆಳ್ಳೂರು:** ತಾಲೂಕು ಕೇಂದ್ರ ಮದ್ದೂರಿನಿಂದ ೧೮ ಕಿ.ಮೀ ವಾಯವ್ಯಕ್ಕಿರುವ ಕೊಕ್ಕರೆ ಬೆಳ್ಳೂರು ಗ್ರಾಮವು ಅಪರೂಪದ ನೈಸರ್ಗಿಕ ಪಕ್ಷಿಧಾಮ. ಜನವರಿಯಿಂದ–ಜುಲೈ ತಿಂಗಳವರೆಗೆ ಬೇರೆ ಬೇರೆ ದೇಶಗಳಿಂದ ವಲಸೆ ಬರುವ ಪೆಲಿಕನ್ ಹಕ್ಕಿಗಳು ಇಲ್ಲಿಯ ವೃಕ್ಷಗಳ ಮೇಲೆ ಗೂಡುಕಟ್ಟಿ ತತ್ತಿಗಳನ್ನಿಟ್ಟು ಮರಿಮಾಡಿ ಚಳಗಾಲದ ತರುವಾಯ ತಮ್ಮ ತಮ್ಮ ಮೂಲಸ್ಥಳಗಳಿಗೆ ಮರಳುತ್ತವೆ. ಹೆಜ್ಜರ್ಲೆ ತಳಿಯ ಪೆಲಿಕನ್ ಹಕ್ಕಿಗಳು ದೊಡ್ಡ ಸಂಖ್ಯೆಯಲ್ಲಿ ಇಲ್ಲಿಗೆ ಬರುತ್ತವೆ. ಇವುಗಳಲ್ಲಿ ಕೆಲವು ನಸುಗೆಂಪು ಬಣ್ಣದವು. ಇನ್ನೂ ಕೆಲವು ನಸುಕಪ್ಪು ಬಣ್ಣದವು ಹಾಗು ಹೆಚ್ಚಿನವು ಬಿಳಿ ಬಣ್ಣದವು ಆಗಿರುತ್ತವೆ. ಇವು ಗ್ರಾಮದ ಸಮೀಪದ ಕೆರೆಯಲ್ಲಿರುವ ಮೀನುಗಳನ್ನು ತಿಂದು ಜೀವಿಸುತ್ತವೆ. ಗ್ರಾಮಸ್ಥರು ಈ ಹಕ್ಕಿಗಳ ಚಟುವಟಿಕೆಗೆ ಧಕ್ಕೆ ಬಾರದಂತೆ ಕಾಳಜಿ ವಹಿಸುತ್ತಾರೆ. ಈ ಸ್ಥಳವನ್ನು ರಾಷ್ಟ್ರೀಯ ರಕ್ಷಿತ ಪಕ್ಷಿಧಾಮ ಎಂದು ಘೋಷಿಸಲಾಗಿದೆ.

**ಕೊಪ್ಪಳ:** ಈಗ ಜಿಲ್ಲಾ ಕೇಂದ್ರವಾಗಿರುವ ಕೊಪ್ಪಳ ಪ್ರಾಚೀನ ಕಾಲದಲ್ಲಿ 'ಕೊಪಣ' ಎಂದು ಕರೆಯಲ್ಪಟ್ಟಿದ್ದು ಕವಿರಾಜಮಾರ್ಗ ಗ್ರಂಥದಲ್ಲಿ ಈ ಊರು ಉಲ್ಲೇಖಿತಗೊಂಡಿದ್ದು ಹಿಂದೆ ಇದೊಂದು ಜೈನರ ಪವಿತ್ರ ಕೇಂದ್ರವಾಗಿತ್ತು. ಇಲ್ಲಿರುವ ಪಾಲ್ಕಿಗುಂಡು ಮತ್ತು ಗವಿಮಠ ಎಂಬಲ್ಲಿ ಅಶೋಕನ ಶಿಲಾಶಾಸನಗಳಿವೆ. ಗಿರಿದುರ್ಗವೂ ಇಲ್ಲಿದೆ. ಕಲ್ಯಾಣದ ಚಾಳುಕ್ಯರ ಮಾಂಡಲೀಕರಾಗಿದ್ದ ಶಿಲಾಹಾರ ವಂಶದ ಕುಡಿಯೊಂದಕ್ಕೆ ಕೊಪ್ಪಳವು ರಾಜಧಾನಿಯಾಗಿತ್ತು. ಜೂನ್ ೧೮೫೮ರಲ್ಲಿ (೧೮೫೭ರ ದಂಗೆಯ ಸರಮಾಲೆಯಲ್ಲಿ) ಮುಂಡರಗಿ ಭೀಮರಾವ್ ಮತ್ತು ಹಮ್ಮಿಗೆ ಕೆಂಚನಗೌಡ ಅವರು ಬ್ರಿಟಿಷರ ವಿರುದ್ಧ ಹೋರಾಡಿ ಸತ್ತದ್ದು ಇಲ್ಲಿಯೇ. ಇಲ್ಲಿಯ ಪಾಲ್ಕಿಗುಂಡು ತಾಣವನ್ನು ಮಹಾಭಾರತ ಖ್ಯಾತಿಯ ಇಂದ್ರಕೀಲ ಪರ್ವತವೆಂದು

ಹೇಳಲಾಗಿದ್ದು, ಮಳೆಮಲ್ಲೇಶ್ವರ ಎಂಬ ಪ್ರಾಚೀನ ಶಿವ ದೇವಾಲಯವಿಲ್ಲದೆ. ಕೊಪ್ಪಳದಿಂದ ೧೩ ಕಿ.ಮೀ. ದೂರದಲ್ಲಿರುವ ಕಿನ್ನಾಳವು ಸಾಂಪ್ರದಾಯಿಕ ವರ್ಣಮಯ 'ಲ್ಯಾಕರ್‌ವೇರ್' ಕಲೆಗೆ ಪ್ರಸಿದ್ಧವಾಗಿದೆ. ಇಲ್ಲಿಯ ಗವಿಸಿದ್ದೇಶ್ವರ ಮಠ ವಿಶೇಷ ಆಕರ್ಷಣೆಯಾಗಿದ್ದು ಪ್ರತೀ ವರ್ಷ ಜಾತ್ರೆಯಾಗುತ್ತದೆ.

**ಕೊಲ್ಲೂರು:** ಕರ್ನಾಟಕದ ಶಕ್ತಿ ಆರಾಧನಾ ಕೇಂದ್ರಗಳಲ್ಲಿ ಒಂದಾಗಿರುವ ಕೊಲ್ಲೂರು ಉಡುಪಿ ಜಿಲ್ಲೆಯ ತಾಲೂಕು ಕೇಂದ್ರ ಕುಂದಾಪುರದಿಂದ ೪೨ ಕಿ.ಮೀ ದೂರದಲ್ಲಿದ್ದು, ಆದಿ ಶಂಕರಾಚಾರ್ಯರಿಗೆ ಅನ್ವಯಿಸಲಾಗಿರುವ ಮೂಕಾಂಬಿಕಾ ದೇವಾಲಯದಿಂದಾಗಿ ಪ್ರಸಿದ್ಧವಾಗಿದೆ. ಇಲ್ಲಿರುವ ಚಂದ್ರಮೌಳೇಶ್ವರ ದೇವರೊಂದಿಗೆ ಶ್ರೀಚಕ್ರದ ಮೇಲೆ ಆದಿಶಂಕರಾಚಾರ್ಯರಿಂದ ಪ್ರತಿಷ್ಠಾಪಿಸಲ್ಪಟ್ಟಿದ್ದೆಂದು ಹೇಳಲಾದ ದೇವಿಯ ದೇಗುಲವು ಮಧ್ಯಯುಗದಲ್ಲಿ ಕೆಳದಿ ಅರಸರಿಂದ ಮರು ಜೀರ್ಣೋದ್ಧಾರಗೊಂಡು ಆರಾಧಿಸಲ್ಪಟ್ಟಿತ್ತು. ಈ ದೇವಾಲಯವು ಕೊಡಚಾದ್ರಿಯ ಬುಡದಲ್ಲಿ ಸುಂದರ ನೈಸರ್ಗಿಕ ಪರಿಸರದಲ್ಲಿದೆ.

**ಕೋಟಿಲಿಂಗೇಶ್ವರ:** ಕೋಲಾರ ಜಿಲ್ಲೆಯ ಬಂಗಾರಪೇಟೆ ತಾಲೂಕಿನ ಕಮ್ಮಸಂದ್ರ ಗ್ರಾಮದಲ್ಲಿರುವ ಕೋಟಿಲಿಂಗೇಶ್ವರ ದೇವಾಲಯ ಸಂಕೀರ್ಣವು ದಕ್ಷಿಣ ಭಾರತದಿಂದ ಹೆಚ್ಚಾಗಿ ಯಾತ್ರಿಗಳನ್ನು ಆಕರ್ಷಿಸುತ್ತಿದೆ. ಇದು ಬಂಗಾರ ಪೇಟೆ-ಕೆ.ಜಿ.ಎಫ್. ರಸ್ತೆಯಲ್ಲಿದೆ. ಕೋಟಿಲಿಂಗೇಶ್ವರ ದೇವಾಲಯದ ಯೋಜನೆಯನ್ನು ಸ್ಥಳೀಯ ಸಂತ ಸಾಂಬಶಿವಮೂರ್ತಿ ಪ್ರಾರಂಭಿಸಿದರು. ಇವರ ಮೂಲ ಆಶ್ರಮವು ಕಮ್ಮಸಂದ್ರದಲ್ಲಿದ್ದು, ವಾಲ್ಮೀಕಿ ಆಶ್ರಮವೆಂದು ಕರೆಯಲಾಗುವ ಇಲ್ಲಿ ೧೯೪೭ರ ಆಗಸ್ಟ್ ೨೩ರಂದು ಅವರು ಜನಿಸಿದರು. ಈ ಪವಿತ್ರ ಸ್ಥಾನಕ್ಕೆ ಬರುವ ಭಕ್ತರ ಸಹಾಯದಿಂದ ಒಂದು ಕೋಟಿ ಶಿವಲಿಂಗಗಳನ್ನು ಪ್ರತಿಷ್ಠಾಪಿಸಬೇಕೆಂಬ ಆಕಾಂಕ್ಷೆ ಅವರದಾಗಿತ್ತು. ಹೀಗಾಗಿ ಇದಕ್ಕೆ ಕೋಟಿಲಿಂಗ ಎಂಬ ಹೆಸರು ಬಂದಿದೆ. ಈ ದೇವಾಲಯ ಸಂಕೀರ್ಣದಲ್ಲಿ ಈಗಾಗಲೇ ಭಕ್ತರ ಧನಸಹಾಯದಿಂದ ೭೦ ಲಕ್ಷಕ್ಕೂ ಹೆಚ್ಚು ಕಿರು ಲಿಂಗಗಳನ್ನು ಪ್ರತಿಷ್ಠಾಪಿಸಲಾಗಿದೆ. ಇದಲ್ಲದೇ ಮಂಜುನಾಥ, ಬ್ರಹ್ಮ, ವಿಷ್ಣು ಮತ್ತು ಮಹೇಶ್ವರ ದೇವಾಲಯಗಳು ಇಲ್ಲಿವೆ. ದೇವಾಲಯ ಸಂಕೀರ್ಣದ ಪ್ರದೇಶದಲ್ಲಿ ದ್ರಾವಿಡ ಶೈಲಿಯಲ್ಲಿ ನಿರ್ಮಿಸಿರುವ ಎತ್ತರವಾದ ರಾಯಗೋಪುರವಿದೆ. ಮಂಜುನಾಥ ದೇವಾಲಯವು ಗರ್ಭಗೃಹ, ಅಂತರಾಳ, ನವರಂಗ ಮತ್ತು ತೆರೆದ ಮುಖಮಂಟಪವನ್ನು ಒಳಗೊಂಡಿದೆ. ಗರ್ಭಗೃಹದಲ್ಲಿ ಎತ್ತರವಾದ ಶಿವಲಿಂಗವಿದ್ದು ಶಿಖರವು ಚಿಕ್ಕದಾಗಿದೆ. ಶಿವಪುರಾಣವನ್ನು ಚಿತ್ರಿಸುವ ಕೆಲವು ಶಿಲ್ಪಗಳಲ್ಲಿವೆ. ಬ್ರಹ್ಮ, ವಿಷ್ಣು ಮತ್ತು ಮಹೇಶ್ವರ ದೇವಾಲಯವು ಒಂದೇ ಸಾಲಿನಲ್ಲಿ ಮೂರು ಗರ್ಭಗೃಹಗಳನ್ನು ಹಾಗು ಅಂತರಾಳ ಮತ್ತು ನವೀನ ನವರಂಗವನ್ನು ಹೊಂದಿದೆ. ದೇವಾಲಯದ ಎದುರುಗಡೆ ದೊಡ್ಡ ಬಿಲ್ವ ವೃಕ್ಷವಿದೆ,. ತರುಣ ದಂಪತಿಗಳು ಈ ವೃಕ್ಷದ ಕೆಳಗೆ ಬೊಡ್ಡೆಗೆ ಚಿಕ್ಕ ತೊಟ್ಟಿಲುಗಳನ್ನು ಕಟ್ಟುವ ಪರಂಪರೆಯಿದ್ದು, ಅನೇಕ ಕಿರು ತೊಟ್ಟಿಲುಗಳು ಅದರ ಸುತ್ತಲೂ ಇರುವುದನ್ನು ಕಾಣಬಹುದು. ೧೦೮ ಅಡಿ ಎತ್ತರದ ಬ್ರಹತ್ ಶಿವಲಿಂಗವು ಇಲ್ಲಿದ್ದು, ಅದರ ಮುಂದುಗಡೆ ೩೫ ಅಡಿ ಎತ್ತರದ ಕಲ್ಲಿನ ನಂದಿ ವಿಗ್ರಹವಿದೆ. ಶಿವರಾತ್ರಿಯಂದು ನಡೆಯುವ ವಾರ್ಷಿಕ ಜಾತ್ರೆಗೆ ಸಾವಿರಾರು ಜನರು ಇಲ್ಲಿ ಸೇರುತ್ತಾರೆ. ಯಾತ್ರಾರ್ಥಿಗಳ ಅನುಕೂಲಕ್ಕಾಗಿ ದೇವಾಲಯದ ಆಡಳಿತ ವರ್ಗ ಧರ್ಮಶಾಲೆಗಳನ್ನು ನಿರ್ಮಿಸಿದೆ.

**ಕೋಲಾರ:** ಬೆಂಗಳೂರಿನಿಂದ ೭೫ ಕಿ.ಮೀ. ದೂರದಲ್ಲಿ ಬೆಂಗಳೂರು-ಚೆನ್ನೈ ಹೆದ್ದಾರಿಯಲ್ಲಿರುವ ಕೋಲಾರ ಒಂದು ಜಿಲ್ಲಾ ಕೇಂದ್ರ. "ಕುವಳಾಲಪುರ" ಎಂದೂ ಕರೆಯಲ್ಪಡುತ್ತಿದ್ದ ಈ ಊರು ಗಂಗರ ಮೊದಲ ರಾಜಧಾನಿಯಾಗಿತ್ತು. ಅವರಿಂದ ನಿರ್ಮಿತಗೊಂಡು ತದನಂತರ ಚೋಳರಿಂದ ಜೀರ್ಣೋದ್ಧಾರಗೊಂಡಿರುವ ಮರು ಕೋಲಾರಮ್ಮ ದೇವಾಲಯಕ್ಕೆ ಈ ಊರು ಪ್ರಸಿದ್ಧವಾಗಿದೆ. ಕೋಲಾರಮ್ಮ ದೇವಿಯು ಮಹಿಷ ಮರ್ಧಿನಿಯ ರೂಪದಲ್ಲಿದ್ದು, ಇಲ್ಲಿ ಪ್ರತಿಷ್ಠಾಪಿತವಾಗಿರುವ ಸಪ್ತಮಾತೃಕೆಯರಲ್ಲಿ ಒಬ್ಬಳಾಗಿದ್ದಾಳೆ. ಈ ಗುಡಿಯ ಪಕ್ಕದಲ್ಲಿರುವ ಇನ್ನೊಂದು ಗುಡಿಯಲ್ಲಿ ಸಪ್ತಮಾತೃಕೆಯರ ಆಕರ್ಷಕ ಗಾರೆಯ ಬಿಡಿ ಬಿಂಬಗಳಿವೆ. ಅಲ್ಲದೆ ಸೋಮೇಶ್ವರ, ವೆಂಕಟರಮಣ ಮತ್ತು ಕೋದಂಡರಾಮ ಎಂಬ ಇತರ ಪ್ರಧಾನ ದೇವಾಲಯಗಳೂ ಊರಲ್ಲಿವೆ. ಸೋಮೇಶ್ವರ ದೇವಾಲಯವು ಹೊಯ್ಸಳರ ಕಾಲದಲ್ಲಿ ನಿರ್ಮಾಣವಾಗಿದ್ದು, ರಾಜ್ಯ ಸರ್ಕಾರದಿಂದ ರಕ್ಷಿತವಾಗಿರುವ ಸ್ಮಾರಕವಾಗಿದೆ. ಕೋಲಾರದಲ್ಲಿರುವ ಮಕಬರಾದಲ್ಲಿ ಹೈದರಾಲಿಯ ಸಂಬಂಧಿಕರ ಗೋರಿಗಳಿವೆ. ಕೋಲಾರವು ಹಿಂದೆ ಸ್ಥಳೀಯ ಕಂಬಳಿ ತಯಾರಿಕೆಗಾಗಿ ಪ್ರಸಿದ್ಧವಾಗಿತ್ತು. ಕೋಲಾರದಿಂದ ಮೂರು ಕಿ.ಮೀ. ದೂರದಲ್ಲಿರುವ ಕೋಲಾರ ಬೆಟ್ಟದ ಮೇಲಿನ ನಂದಿಯ ಬಾಯಿಂದ ಹೊರಡುವ ನಿರಂತರ ಜಲ **ಅಂತರಗಂಗೆ** ಎಂದು ಪ್ರಸಿದ್ಧವಾಗಿದ್ದು ಪವಿತ್ರ ಸ್ಥಳವೆನಿಸಿದೆ. ಬೆಟ್ಟದ ಮೇಲೆ ತೇರುಹಳ್ಳಿ (ವಿಜಯನಗರ ಪೂರ್ವ ಕಾಲದ ಹಳೆಯ ದೇವಾಲಯ), ಪಾಪರಾಜನ ಹಳ್ಳಿ ಮತ್ತು ಇತರ ಏಳು ಹಳ್ಳಿಗಳಿವೆ. ಪಟ್ಟಣದ ಸಮೀಪದಲ್ಲಿರುವ ಈ ಬೆಟ್ಟವು ಪರ್ವತ ಚಾರಣಕ್ಕೆ ತಕ್ಕುದಾಗಿದೆ.

**ಗದಗ-ಬೆಟಗೇರಿ:** ಇದು ಧಾರವಾಡ-ಗುಂತಕಲ್ ರೈಲ್ವೇ ಮಾರ್ಗದಲ್ಲಿರುವ ಅವಳಿನಗರ. ಮುನಿಸಿಪಾಲಿಟಿಯನ್ನು ಹೊಂದಿದ್ದು, ಧಾರವಾಡದಿಂದ ೮೦ ಕಿ.ಮೀ. ದೂರದಲ್ಲಿದೆ. ೧೯೯೭ರಿಂದ ಗದಗ ಜಿಲ್ಲಾ ಕೇಂದ್ರವಾಗಿದೆ. ಇದು ಕಲ್ಯಾಣ ಚಾಳುಕ್ಯರ ಶಿಲ್ಪಕಲೆಯ ಪ್ರಸಿದ್ಧ ಕೇಂದ್ರವಾಗಿದ್ದು, ತ್ರಿಕೂಟೇಶ್ವರ ದೇವಾಲಯವು ಅದಕ್ಕೆ ಉತ್ತಮ ಉದಾಹರಣೆಯಾಗಿದೆ. ಮೂಲತ: ರಾಷ್ಟ್ರಕೂಟ ದೇವಾಲಯವಾಗಿದ್ದ ಇದು, ಕಲ್ಯಾಣದ ಚಾಳುಕ್ಯರ ಕಾಲದಲ್ಲಿ ವಿಶಾಲ ಸಂಕೀರ್ಣವಾಗಿ ಅಭಿವೃದ್ಧಿ ಹೊಂದಿತು. ಇಲ್ಲಿರುವ ತ್ರಿಕೂಟೇಶ್ವರ ದೇವಾಲಯದಲ್ಲಿ ಮೂರು ಗರ್ಭಗೃಹಗಳಿದ್ದು, ಇವುಗಳಲ್ಲಿ ಶಿವ, ಬ್ರಹ್ಮ ಮತ್ತು ಸೂರ್ಯನನ್ನು ಆರಾಧಿಸಲಾಗುತ್ತಿತ್ತು. ಇಲ್ಲಿಯೇ ಇರುವ ಸರಸ್ವತಿ ದೇವಾಲಯದಲ್ಲಿ ಸುಂದರವಾದ ಹೊಳೆಯುವ ಆಕರ್ಷಕ ಕಂಬಗಳಿವೆ. ಇಲ್ಲಿರುವ ಸರಸ್ವತಿ ವಿಗ್ರಹವು ಈಗ ಭಗ್ನವಾಗಿದ್ದರೂ ಚಾಳುಕ್ಯಕಲೆಯ ಅತ್ಯುತ್ತಮ ಉದಾಹರಣೆಯಾಗಿದೆ. ಇತ್ತೀಚೆಗೆ ಚಾಳುಕ್ಯ ಶೈಲಿಯಲ್ಲಿಯೇ ಹೊಸದಾಗಿ ಸರಸ್ವತಿ ವಿಗ್ರಹವನ್ನು ಕೆತ್ತಿಸಿ ಹಳೆಯ ವಿಗ್ರಹದ ಜಾಗದಲ್ಲಿ ಸ್ಥಾಪಿಸಲಾಗಿದೆ. ಇದಲ್ಲದೇ ಇಲ್ಲಿ ಚಾಳುಕ್ಯಶೈಲಿಯಲ್ಲಿಯ ಸೋಮೇಶ್ವರ ಹಾಗೂ ರಾಮಲಿಂಗೇಶ್ವರ ದೇವಾಲಯಗಳಿವೆ. ಇಲ್ಲಿರುವ ವೀರನಾರಾಯಣ ದೇವಾಲಯವು ಚಾಲುಕ್ಯರ ಕಾಲದ್ದಾದರೂ, ವಿಜಯನಗರ ಅರಸರ ಕಾಲದಲ್ಲಿ ನಾರಾಯಣನ ವಿಗ್ರಹಸಹಿತ ಸಂಪೂರ್ಣವಾಗಿ ಪುನರುತ್ಥಾನ ಮಾಡಲಾಗಿತ್ತು. ಪ್ರಸಿದ್ಧ ಕನ್ನಡ ಕವಿ ಕುಮಾರವ್ಯಾಸನು 'ಕರ್ನಾಟಕ ಭಾರತ ಕಥಾಮಂಜರಿ' ಕೃತಿಯನ್ನು ಈ ದೇವಾಲಯದಲ್ಲಿ ಕುಳಿತು ಬರೆದಿದ್ದನೆನ್ನಲಾಗಿದೆ. ಇಲ್ಲಿ ಆದಿಲ್‌ಶಾಹಿ ಕಾಲದ ಕಲಾತ್ಮಕವಾದ ಮಸೀದಿಯೂ ಇದೆ. ಅಲ್ಲದೆ ಬ್ಯಾಸೆಲ್‌ಮಿಶನ್

ಚರ್ಚ್ ಇದೆ. ಬೆಟಗೇರಿಯಲ್ಲಿ ಸುಂದರವಾಗಿ ಕೆತ್ತಲಾದ ಬಹಳಷ್ಟು ವೀರಗಲ್ಲುಗಳಿದ್ದು, ಕೆಲವು ೯–೧೦ನೇ ಶತಮಾನದಷ್ಟು ಹಳೆಯವಾಗಿದೆ. ('ಕಳ್ದುಗು' ಗದಗಿನ ಹಳೆಯ ಹೆಸರಾಗಿತ್ತು ಹಾಗೂ 'ಬಟ್ಟಕೆರೆ' ಬೆಟಗೇರಿಯ ಹಿಂದಿನ ಹೆಸರಾಗಿತ್ತು.) ಗದಗ–ಬೆಟಗೇರಿ ನೇಯ್ಗೆಗೆ ಪ್ರಸಿದ್ಧವಾಗಿದೆ. ಇತ್ತೀಚೆಗೆ ಮುದ್ರಣದಲ್ಲಿಯೂ ಗದಗ್ ಮುಂದುವರೆದಿದೆ. ಇತಿಹಾಸ ಪ್ರಸಿದ್ಧ ಲಕ್ಕುಂಡಿ, ಡಂಬಳ, ಇಟಗಿ, ಹಾಗೂ ಕುಕನೂರುಗಳಿಗೆ ಗದಗನಿಂದ ಹೋಗಬಹುದಾಗಿದೆ..

**ಕಲಬುರಗಿ:** ಇದು ಜಿಲ್ಲಾ ಹಾಗೂ ಪ್ರಾಂತೀಯ ಕೇಂದ್ರವಾಗಿದ್ದು, ಬೆಂಗಳೂರಿನಿಂದ ೬೨೩ ಕಿ.ಮೀ ದೂರದಲ್ಲಿದೆ. ಸ್ವಾತಂತ್ರ ಪೂರ್ವದಲ್ಲಿ ನಿಜಾಮರ ರಾಜ್ಯಕ್ಕೆ ಸೇರಿತ್ತು, ೧೩೪೭ರಿಂದ ಬಹಮನಿಗಳ ಮೊದಲಿನ ರಾಜಧಾನಿಯಾಗಿತ್ತು. ಕನ್ನಡ ಶಾಸನಗಳಲ್ಲಿ ಇದನ್ನು 'ಕಲುಂಬರಿಗೆ' ಅಥವಾ'ಕಲುಬರಿಗೆ' ಎಂದು ಕರೆಯಲಾಗಿದ್ದು, ನಂತರ ಮುಸ್ಲಿಮರು ಅದಕ್ಕೆ ಸಸ್ಯದ ಕಂಪು ಸೇರಿಸಿ ಕಲಬುರಗಿ (ಹೂವಿನ ತೋಟ) ಎಂದು ಕರೆದರು. ಕನ್ನಡದಲ್ಲಿ 'ಕಲ್ಬುರ್ಗಿ' ಎಂದರೆ ಕಲ್ಲುಗಳ ನಾಡು ಅಥವಾ ಕಲ್ಲಿನ ಛಾವಣಿ ಎಂದರ್ಥ. ಇಲ್ಲಿರುವ ಕೋಟೆಯನ್ನು ಮೂಲತಃ ವಾರಂಗಲ್ ಕಾಕತೀಯರ ಸಾಮಂತ ರಾಜಾ ಗುಲಚಂದ ಎಂಬಾತನು ಕಟ್ಟಿಸಿದ್ದನೆಂಬ ಅಭಿಪ್ರಾಯವಿದೆ. ಇದನ್ನು ಅಲ್ಲಾವುದ್ದೀನ್ ಬಹಮನಿ ಪುನಃ ೧೫ ಭವ್ಯವಾದ ಗೋಪುರಗಳಿಂದ ಪುನರ್ ನಿರ್ಮಿಸಿದನು. ಕೋಟೆಯೊಳಗೆ ೧೩೬೭ರಲ್ಲಿ ಮುಹಮದ್ ಬಹಮನಿ ೩೮೦೦೦ ಚದರ ಅಡಿ ಪ್ರದೇಶದಲ್ಲಿ ಕಟ್ಟಿಸಿದ ಬೃಹತ್ತಾದ ಹಾಗೂ ಸುಂದರವಾದ ಮಸೀದಿ ಇದೆ. ಇಲ್ಲಿಯ ಬಂದೇ ನವಾಜ್ ಸಂಕೀರ್ಣದಲ್ಲಿ ೧೪೧೩ರಲ್ಲಿ ಕಲಬುರಗಿಗೆ ಬಂದ ಸೂಫಿ ಸಂತ ಬಂದೇನವಾಜ್‌ರ ಗೋರಿ ಇದೆ. ಈ ಗೋರಿಯ ಗೋಡೆಗಳಲ್ಲಿ ವರ್ಣಚಿತ್ರಗಳಿದ್ದು, ಸನಿಹದಲ್ಲಿಯೇ ಮುಘಲರು ಕಟ್ಟಿಸಿದ ಮಸೀದಿ ಇದೆ. ಚಾಂದಬೀಬಿ ಕಟ್ಟಿಸಿದ ಕಂದಾಲ್‌ಖಾನ ಮಸೀದಿ ಹಾಗೂ ಹೀರಾಪುರ್ ಮಸೀದಿ (೧೫೮೫) ಇತರ ಸ್ಮಾರಕಗಳಾಗಿದ್ದು, ಸುಲ್ತಾನ್ ಹಸನ್ ಹಾಗು ಫಿರೋಜ್ ಶಾಹರ ಗೋರಿಗಳು ಇಲ್ಲಿರುವ ಇತರ ಪ್ರಮುಖ ಕಟ್ಟಡಗಳು. ಎಲ್ಲಾ ಸೇರಿ ಕಲಬುರಗಿಯಲ್ಲಿ ಬಹಮನಿ ಸುಲ್ತಾನರ ಏಳು ಸಮಾಧಿ ಸ್ಮಾರಕಗಳಿವೆ. ಇಲ್ಲಿರುವ ಶರಣಬಸಪ್ಪ ಅಪ್ಪನ ಸಮಾಧಿ ಬಹಳ ಪವಿತ್ರ ಸ್ಥಳವಾಗಿದೆ. ಇದಲ್ಲದೇ ಇಲ್ಲಿ ಸಾಕಷ್ಟು ಆಧುನಿಕ ದೇವಾಲಯಗಳಿವೆ. ಇಲ್ಲಿರುವ ರಾಜ್ಯ ಪುರಾತತ್ವ ವಸ್ತುಸಂಗ್ರಹಾಲಯದಲ್ಲಿ ಸನ್ನತಿಯಿಂದ ತಂದ ಬೌದ್ಧಶಿಲ್ಪ ಫಲಕಗಳಿವೆ. ಈ ಪಟ್ಟಣ ಮಹಾನಗರ ಪಾಲಿಕೆಯ ನಿಮಂತ್ರಣಕ್ಕೆ ಒಳಪಟ್ಟಿದೆ ಈ ನಗರದ ಹೊರವಲಯದಲ್ಲಿರುವ ಕಲಬುರಗಿ ವಿಶ್ವವಿದ್ಯಾಲಯವು ಉತ್ತಮ ಗ್ರಂಥಾಲಯ ಹಾಗೂ ಸಂಶೋಧನಾ ಕೇಂದ್ರಗಳನ್ನು ಹೊಂದಿದೆ. ಇತ್ತೀಚೆಗೆ ಆಕರ್ಷಕವಾದ ಬೌದ್ಧವಿಹಾರವನ್ನು ನಿರ್ಮಿಸಲಾಗಿದೆ.

**ಗುಬ್ಬಿ:** ತುಮಕೂರು ಜಿಲ್ಲೆಯ ಒಂದು ತಾಲೂಕು ಕೇಂದ್ರವಾದ ಗುಬ್ಬಿಯು ತುಮಕೂರಿನಿಂದ ೨೦ ಕಿ.ಮೀ. ದೂರದಲ್ಲಿದೆ ಇಲ್ಲಿಯ ಗುಬ್ಬಿಯಪ್ಪನ ಗುಡಿಯು ವೀರಶೈವ ಯತಿ ಗೋಸಲ ಚೆನ್ನಬಸವೇಶ್ವರರ ಗದ್ದುಗೆಯಾಗಿದಲ್ಲಿ ಮಾರ್ಚಿ ತಿಂಗಳಲ್ಲಿ ೧೫ ದಿನಗಳ ಜಾತ್ರೆ ಆಗುತ್ತದೆ. ಗದ್ದೆಮಲೇಶ್ವರ ಇಲ್ಲಿಯ ಪ್ರಾಚೀನ ದೇವಾಲಯವಾಗಿದ್ದು ಅಮರಗೊಂಡ ಮಲ್ಲಿಕಾರ್ಜುನ ಎಂಬ ವೀರಶೈವ ಯತಿ ಇಲ್ಲಿ ನೆಲೆಸಿದನೆಂದು ಹೇಳಲಾಗುತ್ತದೆ. ಇಲ್ಲಿ ಬೇಟೆಯ ಸ್ವಾಮಿ ಜನಾರ್ಧನ ಆಂಜನೇಯ ಮುಂತಾದ ದೇವಾಲಯಗಳಿವೆ.

**ಗೋಕರ್ಣ:** ಬೆಂಗಳೂರಿನಿಂದ ೪೫೩ ಕಿ.ಮೀ. ಕಲಬುರಗಿ ನಗರದ ಹೊರವಲಯದಲ್ಲಿ ಹಾಗೂ ಜಿಲ್ಲಾ ಕೇಂದ್ರ ಕಾರವಾರದಿಂದ ೫೫ ಕಿ.ಮೀ. ದೂರದಲ್ಲಿರುವ ಇದನ್ನು ಕಾಶಿ ಮತ್ತು ದಕ್ಷಿಣದ ರಾಮೇಶ್ವರದಷ್ಟೇ ಪ್ರಮುಖವಾದ ಪವಿತ್ರ ಶೈವ ಕ್ಷೇತ್ರವೆಂದು ಪರಿಗಣಿಸಲಾಗಿದೆ. ಇಲ್ಲಿರುವ ಮಹಾಬಲೇಶ್ವರ ದೇವಾಲಯವು ಮೂಲತ: ಸುಮಾರು ೧೧–೧೨ನೇ ಶತಮಾನದಲ್ಲಿಯೇ ಕಟ್ಟಲ್ಪಟ್ಟಿತ್ತು ಎಂಬುದಕ್ಕೆ ಪುರಾವೆಗಳಿವೆ. ಈ ದೇವಾಲಯವನ್ನು ಪೋರ್ಚುಗೀಸರು ೧೮ನೇ ಶತಮಾನದಲ್ಲಿ ಹಾಳು ಮಾಡಿದ್ದರಿಂದ ಅದನ್ನು ಪುನರುತ್ಥಾನಗೊಳಿಸಲಾಯಿತೆಂದು ಹೇಳಲಾಗಿದೆ. ಇಲ್ಲಿಯ ಪ್ರಸಿದ್ಧ ಗಣಪತಿ ದೇವಾಲಯದಲ್ಲಿರುವ ಗಣಪತಿಯ ವಿಗ್ರಹವು ೧೫೦೦ ವರ್ಷಗಳಷ್ಟು ಹಳೆಯದಾಗಿದೆ. ಇದು ಸಮಭಂಗಿಯಲ್ಲಿ ನಿಂತಿರುವ ಕದಂಬರ ಕಾಲದ ದ್ವಿಬಾಹು ಗಣಪತಿ ವಿಗ್ರಹವಾಗಿದೆ. ಇಲ್ಲಿ ತಾಮ್ರಗೌರಿಯ ಇನ್ನೊಂದು ದೇವಾಲಯವಿದೆ. ಭದ್ರಕಾಳಿ ಹಾಗೂ ವೆಂಕಟರಮಣ ದೇವಾಲಯಗಳು ಮತ್ತು ಜಟಾಯುತೀರ್ಥ ಹಾಗೂ ಕೋಟಿತೀರ್ಥಗಳು ಇಲ್ಲಿರುವ ಇತರ ಪವಿತ್ರ ಸ್ಥಳಗಳಾಗಿವೆ. ಗೋಕರ್ಣದಲ್ಲಿ ಬಹು ನಿಡಿದಾದ ಆಕರ್ಷಕ ಸಮುದ್ರತೀರವಿದ್ದು, ಪೂರ್ವಕ್ಕಿರುವ ಪಶ್ಚಿಮಘಟ್ಟಗಳು ಬಹಳ ಸುಂದರವಾದ ನೈಸರ್ಗಿಕ ಪರಿಸರವೊದಗಿಸಿದ್ದು, ಒಂದು ಕಡೆ ಸಮುದ್ರ ಮತ್ತೊಂದು ಕಡೆ ಅಘನಾಶಿನಿ ಮತ್ತು ಗಂಗಾವಳಿ ನದಿಗಳು ಕರ್ಣದ(ಕಿವಿ) ರೂಪವನ್ನು ಭೂಭಾಗದಲ್ಲಿ ನೈಸರ್ಗಿಕವಾಗಿ ಹೊಮ್ಮಿಸಿರುವ ಕಾರಣ ಗೋವಿನ ಕರ್ಣ (ಕಿವಿ) ದ ಆಕಾರದಲ್ಲಿರುವುದರಿಂದ ಈ ಸ್ಥಳಕ್ಕೆ, 'ಗೋಕರ್ಣ' ಎಂದು ಕರೆಯಲಾಗುತ್ತದೆ. ಪೌರಾಣಿಕ ನಂಬಿಕೆಯ ಪ್ರಕಾರ ರಾವಣನು ತಂದ ಆತ್ಮಲಿಂಗವು ಇಲ್ಲಿ ಸ್ಥಿರವಾದ ನಂತರ ರಾವಣನು ಅದನ್ನು ಹೊರ ತೆಗೆಯಲು ಮಾಡಿದ ಪ್ರಯತ್ನದಲ್ಲಿ ಲಿಂಗದ ಮೇಲಿನ ಭಾಗಗಳನ್ನು ಕಿತ್ತು ಎಸೆದನೆಂದೂ ಅವೇ ಧಾರೇಶ್ವರ, ಗುಣವಂತೇಶ್ವರ, ಮುರುಡೇಶ್ವರ, ಸೆಜ್ಜೇಶ್ವರ (ಕಾರವಾರದ ಬಳಿ) ಲಿಂಗಗಳಾಗಿವೆಯೆಂದೂ ಹೇಳಲಾಗಿದ್ದು. ಈ ಎಲ್ಲಾ ಸ್ಥಳಗಳೂ ಉತ್ತರ ಕನ್ನಡ ಜಿಲ್ಲೆಯಲ್ಲಿವೆ.

**ಚಾಮರಾಜನಗರ:** ಇದು ಇತ್ತೀಚೆಗೆ(೧೯೯೭) ಮೈಸೂರು ಜಿಲ್ಲೆಯಿಂದ ಬೇರ್ಪಡಿಸಲ್ಪಟ್ಟು ಮಾಡಿದ ನೂತನ ಜಿಲ್ಲೆಯ ಜಿಲ್ಲಾ ಕೇಂದ್ರವಾಗಿದ್ದು, ಮೈಸೂರಿನಿಂದ ೫೬ ಕಿ.ಮೀ. ದೂರದಲ್ಲಿದೆ. ಗಂಗರ ಕಾಲದಲ್ಲಿ ಪುನ್ನಾಟ ನಾಡಿಗೆ ಸೇರಿದ್ದ ಇದನ್ನು 'ಅರಿಕುಟಾರ' ಎಂದು ಕರೆಯುತ್ತಿದ್ದರು. ಇದು ಎಂಟನೇ ಚಾಮರಾಜ ಒಡೆಯರ ಜನ್ಮಸ್ಥಳವಾಗಿದ್ದು, ಅವರ ಸ್ಮರಣಾರ್ಥ ಇಲ್ಲಿ ಚಾಮರಾಜೇಶ್ವರ ದೇವಾಲಯವನ್ನು (೧೮೨೫)ಅವರ ಪುತ್ರ ಮುಮ್ಮಡಿ ಕೃಷ್ಣರಾಜ ಒಡೆಯರು ನಿರ್ಮಿಸಿದರು. ಇದಲ್ಲದೇ ಪ್ರಾಚೀನ ಪಾರ್ಶ್ವನಾಥ ಬಸದಿ, ಲಕ್ಷ್ಮೀಕಾಂತ ಹಾಗು ವೀರಭದ್ರ ದೇವಾಲಯಗಳು ಇಲ್ಲಿವೆ. ಸನಿಹದಲ್ಲಿರುವ **ನರಸಮಂಗಲ** ಪ್ರಾಚೀನ ಸ್ಥಳದವಾಗಿದ್ದು ಗಂಗರ ಕಾಲಕ್ಕೆ ಸೇರಿದ ಪ್ರಾಚ್ಯವಸ್ತುಗಳಲ್ಲದೆ ಗಂಗ ವಾಸ್ತುಶೈಲಿಯ ರಾಮೇಶ್ವರ ದೇವಾಲಯವಿದೆ. ಪ್ರವಾಸಿಗರು ಸಂರಕ್ಷಣೆಗೆ ಒಳಪಟ್ಟಿರುವ ಇಲ್ಲಿಗೆ ಅವಶ್ಯವಾಗಿ ಸಂದರ್ಶಿಸಬೇಕಾಗಿದೆ. ಈ ದೇವಾಲಯದಲ್ಲಿ ಬೃಹದಾಕಾರದ ಸಪ್ತಮಾತೃಕೆಯರ ಬಿಡಿ ಶಿಲ್ಪಾಕೃತಿಗಳಿವೆ.

**ಚಿಕ್ಕಮಗಳೂರು:** ಇದು ಕಾಫಿ ಬೆಳೆಯುವ ಮಲೆನಾಡು ಪ್ರದೇಶದ ಜಿಲ್ಲಾ ಕೇಂದ್ರವಾಗಿದ್ದು, ಬೆಂಗಳೂರಿನಿಂದ ೨೫೧ ಕಿ.ಮೀ

ದೂರದಲ್ಲಿದೆ. ಶಾಸನಗಳಲ್ಲಿ ಇದನ್ನು 'ಕಿರಿಯಮುಗಳ' ಎಂದು ಕರೆಯಲಾಗಿದ್ದು, ಈ ಪಟ್ಟಣದ ಭಾಗವಾದ ಹಿರೇಮಗಳೂರನ್ನು 'ಪಿರಿಯಮುಗಳ' ಎಂದು ಕರೆಯಲಾಗಿದೆ. ಇದನ್ನು ಮಗಳು ಎಂದು ತಪ್ಪಾಗಿ ತಿಳಿದಿದ್ದು ಶಾಸನೋಕ್ತ 'ಮುಗಳ' ಒಂದು ಜಾತಿಯ ಸಸ್ಯದ ಹೆಸರು. ಹಿರೇಮಗಳೂರಿನಲ್ಲಿ ಹೊಯ್ಸಳರ ಕಾಲದ ಕೋದಂಡರಾಮ ದೇವಾಲಯವಿದೆ. ಇಲ್ಲಿರುವ ಸಂಗೀನ ಮಸೀದಿ ಪ್ರಾಚೀನ ಕಟ್ಟಡವಾಗಿದೆ. ೧೯ನೇ ಶತಮಾನದಲ್ಲಿ ಕಟ್ಟಲಾದ ಝುರಣಿ ಮಸೀದಿ ಜಿಲ್ಲೆಗೇ ದೊಡ್ಡ ಮಸೀದಿಯಾಗಿದೆ. ಸಂತ ಜೋಸೆಫ್ ಕ್ಯಾಥಡ್ರಲ್ ಹಾಗೂ ಸಂತ ಆಂಡ್ರೂ ಚರ್ಚು (೧೮೮೦) ಇತರ ಗಮನಾರ್ಹ ಕಟ್ಟಡಗಳಾಗಿವೆ. ಇಲ್ಲಿರುವ ಕಟ್ಟೀರಮ್ಮ ದೇವಾಲಯವು ಇನ್ನೊಂದು ಪ್ರಮುಖ ಆಧುನಿಕ ಗುಡಿಯಾಗಿದೆ. ಇಲ್ಲಿನ ಕನ್ನಿಕಾ ಪರಮೇಶ್ವರಿ ಹಾಗೂ ರುಕ್ಮಿಣಿ–ಪಾಂಡುರಂಗ ದೇವಾಲಯಗಳು ಆಧುನಿಕ ಕಟ್ಟಡಗಳಾಗಿವೆ. ಈ ಪಟ್ಟಣವು ಪಶ್ಚಿಮ ಘಟ್ಟದ ಚಂದ್ರದ್ರೋಣ ಪರ್ವತ ಅಥವಾ ಬಾಬಾಬುಡನ್ ಬೆಟ್ಟದ ಹಿನ್ನೆಲೆಯಲ್ಲಿದ್ದು ಇನಾಮ್ ದತ್ತಾತ್ರೇಯ ಪೀಠ ಇಲ್ಲಿಂದ ೩೫ ಕಿ.ಮೀ ದೂರದಲ್ಲಿದೆ.

**ಚಿತ್ರದುರ್ಗ:** ಪ್ರಸಿದ್ಧವಾದ ಈ ಕೋಟೆ ಪಟ್ಟಣವು ಜಿಲ್ಲಾ ಕೇಂದ್ರವಾಗಿದ್ದು, ಬೆಂಗಳೂರಿನಿಂದ ೨೦೨ ಕಿ.ಮೀ. ದೂರದಲ್ಲಿ ಪುಣೆ–ಬೆಂಗಳೂರು ರಸ್ತೆಯಲ್ಲಿದೆ. ಇಲ್ಲಿ ಮದಕರಿ ನಾಯಕರು ಎಂಬ ವಿಜಯನಗರ ಅರಸರ ಸಾಮಂತರು ಆಳುತ್ತಿದ್ದರು. ಈ ನಾಯಕರು ತಮ್ಮ ವೀರಗಾಥೆಗೆ ಪ್ರಸಿದ್ಧಿ ಪಡೆದಿದ್ದರು. ಇಲ್ಲಿಯ ಕೋಟೆಯನ್ನು ಕಟ್ಟಿಸಿದವರು ಇವರೇ. ಈ ಕೋಟೆಯನ್ನು ಏಳು ಸುತ್ತಿನಲ್ಲಿ ಕಟ್ಟಿದ್ದು, ರಮಣೀಯವಾಗಿದೆ. ಎತ್ತರವಾದ ಕೋಟೆಯೊಳಗೆ ಸಂಪಿಗೆ ಸಿದ್ದೇಶ್ವರ, ಹಿಡಿಂಬೇಶ್ವರ (ಗುಹಾಲಯ), ಏಕನಾಥೇಶ್ವರಿ, ಫಲ್ಗುಣೇಶ್ವರಿ, ಗೋಪಾಲಕೃಷ್ಣ ಮುಂತಾದ ದೇವಾಲಯಗಳಿವೆ. ಚಿತ್ರದುರ್ಗ ನಾಯಕರ ವೀರಗಾಥೆಯನ್ನು ತಿಳಿದವರು ಈ ಕೋಟೆಯ ಎತ್ತರವಾದ ಬುರುಜು, ದ್ವಾರಗಳನ್ನು ನೋಡಿ ಮಂತ್ರಮುಗ್ಧರಾಗುತ್ತಾರೆ. ಹಿಡಿಂಬೇಶ್ವರ ದೇವಾಲಯದ ಎದುರಿಗೆ ಇರುವ 'ಗಾಳಿಮಂಟಪ'ಎತ್ತರದ ವಿಶಿಷ್ಟವಾದ ಕಲ್ಲಿನ ಕಟ್ಟಡವಾಗಿದೆ. ರಂಗಯ್ಯನ ಬಾಗಿಲ ಬಳಿ ಪುರಾತತ್ತ್ವವಸ್ತು ಸಂಗ್ರಹಾಲಯವಿದೆ. ಪಟ್ಟಣದ ಒಳಗೆ ಚೆನ್ನಕೇಶವ, ವೆಂಕಟರಮಣ, ಆಂಜನೇಯ ಇತ್ಯಾದಿ ದೇವಾಲಯಗಳಿವೆ. ಇಲ್ಲಿರುವ ಮುರುಘರಾಜೇಂದ್ರ ಬೃಹನ್ಮಠ ವೀರಶೈವರ ಪವಿತ್ರ ಸ್ಥಳವಾಗಿದೆ.

**ಡಂಬಳ;** ಇದು ಗದಗ ಜಿಲ್ಲೆಯ ಕಸಬಾ ದಿಂದ ೨೦ ಕಿ.,ಮೀ ದೂರದಲ್ಲಿದೆ. ಪುರಾತನ ಶಾಸನಗಳಲ್ಲಿ ಇದನ್ನು 'ಧರ್ಮಪೊಳಲು' ಎಂದು ಕರೆಯಲಾಗಿದೆ. ಪ್ರಾಚೀನ ಕಾಲದಲ್ಲಿ ಇದು ಬೌದ್ಧ ಕೇಂದ್ರವಾಗಿತ್ತು. ಇಲ್ಲಿರುವ ದೊಡ್ಡಬಸಪ್ಪ ಹಾಗೂ ಸೋಮೇಶ್ವರ ದೇವಾಲಯಗಳು ಕಲ್ಯಾಣ ಚಾಳುಕ್ಯರ ಕಾಲದ ಸುಂದರ ಶಿಲ್ಪಕಲಾಕೃತಿಗಳಾಗಿವೆ. ದೊಡ್ಡಬಸಪ್ಪ ದೇವಾಲಯಕ್ಕೆ ಬಹು ಕೋನಾಕಾರದ ಗರ್ಭಗೃಹವಿದ್ದು, ಈ ರೀತಿಯ ಮುಂದಿನ ಹೊಯ್ಸಳ ಶೈಲಿಗೆ ಇದು ಮುನ್ನುಡಿ ಬರೆದಿದೆಯೆಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಇಲ್ಲಿ ಅತ್ಯಂತ ಸುಂದರವಾದ ಶಿಲ್ಪಗಳ ಜೊತೆಗೆ ಬೃಹದಾಕಾರದ ನಂದಿಯ ವಿಗ್ರಹವಿದೆ. ಸೋಮೇಶ್ವರ ಹಳೆಯ ಬಸದಿಯಾಗಿದ್ದಿರಬಹುದು. ಇಲ್ಲಿ ಪಾಳು ಬಿದ್ದಿರುವ ಹಳೆಯ ಕೋಟೆಯಲ್ಲಿ ದೊಡ್ಡದಾದ ಗಣಪತಿ ವಿಗ್ರಹವಿರುವ ಸಣ್ಣಗುಡಿ ಇದೆ. ಇಲ್ಲಿ ೪೦೦ ವರ್ಷ ಪುರಾತನವಾದ ವಿಶಾಲವಾದ ಕೆರೆಯಿದೆ. ಇದಲ್ಲದೇ ಇಲ್ಲಿ ತೋಂಟದ ಸಿದ್ಧಲಿಂಗಮಠವೂ ಇದೆ.

**ತಲಕಾಡು:** ಕಾವೇರಿ ನದಿಯ ದಂಡೆಯ ಮೇಲಿನ ಈ ಪವಿತ್ರ ಸ್ಥಳ, ಹಿಂದೊಂದು ತಾಲೂಕು ಕೇಂದ್ರವಾಗಿದ್ದು ಪ್ರಸ್ತುತ ತಾಲೂಕು ಕೇಂದ್ರ ತಿ. ನರಸೀಪುರದಿಂದ ೨೯ ಕಿ.ಮೀ. ದೂರದಲ್ಲಿದೆ. ಇದು ಗಂಗರ ರಾಜಧಾನಿಯಾಗಿತ್ತು. ಗಂಗರು ಇಲ್ಲಿ ಪಾತಾಳೇಶ್ವರ ಹಾಗೂ ಮರುಳೇಶ್ವರ ದೇವಾಲಯಗಳನ್ನು ಕಟ್ಟಿಸಿದ್ದರು. ಚೋಳರಿಂದ ತಲಕಾಡನ್ನು ಗೆದ್ದ ಮೇಲೆ ಹೊಯ್ಸಳ ವಿಷ್ಣುವರ್ಧನನು ಇಲ್ಲಿ ಕೀರ್ತಿನಾರಾಯಣ ದೇವಾಲಯವನ್ನು ಕಟ್ಟಿಸಿದನು. ವೈದ್ಯನಾಥೇಶ್ವರವು ಇಲ್ಲಿಯ ಇನ್ನೊಂದು ಶೈವ ದೇವಾಲಯ. ಇಲ್ಲಿಯ ಮೂರು ಶೈವ ದೇವಾಲಯಗಳು, ಸಮೀಪದಲ್ಲಿರುವ ವಿಜಯಪುರದ ಅರ್ಕೇಶ್ವರ ದೇವಾಲಯ ಹಾಗೂ ಮುಡುಕುತೊರೆ ಬೆಟ್ಟದ ಮಲ್ಲಿಕಾರ್ಜುನ ದೇವಾಲಯಗಳು ಸೇರಿ ಒಟ್ಟಿಗೆ ಪಂಚಲಿಂಗೇಶ್ವರ ದೇವಾಲಯಗಳೆಂದು ಪರಿಗಣಿಸಲ್ಪಡುತ್ತಿದ್ದು, ಪ್ರತೀ ೧೨ ವರ್ಷಗಳಗೊಮ್ಮೆ ಜರಗುವ ಪಂಚಲಿಂಗದರ್ಶನ ಆಚರಣೆಯು ಬೃಹತ್ ಜಾತ್ರೆಯೇ ಆಗಿಬಿಟ್ಟಿದೆ. ಆ ಸಮಯದಲ್ಲಿ ಲಕ್ಷಾಂತರ ಜನರು ಇಲ್ಲಿಗೆ ಭೇಟಿ ನೀಡುತ್ತಾರೆ. ತಲಕಾಡು ಕ್ರಿ.ಶ. ೧೬ನೇ ಶತಮಾನದಲ್ಲಿ ವಿಜಯನಗರದ ದಂಡನಾಯಕ ಮಾಧವ ಮಂತ್ರಿಯು ಕಟ್ಟಿಸಿದ ಅಣೆಕಟ್ಟಿನಿಂದಾಗಿ ಬರಿದಾದ ನದಿಪಾತ್ರದಿಂದ ಗಾಳಿಗೆ ಸಾಗಿಬರುವ ಮರಳರಾಶಿಯಿಂದ ತುಂಬಿಕೊಂಡಿದೆ. ಬೇಸಿಗೆಯಲ್ಲಿ ನದಿಯ ಒಣಗಿದ ಪಾತ್ರದಿಂದ ಮರಳು ದೊರೆಯುತ್ತದೆ. ಇತ್ತೀಚಿನ ಉತ್ಖನನಗಳ ಪರಿಣಾಮವಾಗಿ ಕ್ರಿಸ್ತಶಕ ಆರಂಭಕಾಲದ ಮಣಿಗಳು, ಬಂಗಾರ ಕರಗಿಸುವ ಕುಲುಮೆ, ಮುಂತಾದವು, ಗಂಗರ ಕಾಲದ ಬಸದಿಯ ಅವಶೇಷಗಳು ಹಾಗೂ ಸುಟ್ಟಮಣ್ಣಿನ ಬಳೆಯಾಕಾರದ ಎರಡು ಬಾವಿಗಳಂತಹ ರಚನೆಗಳು ಬೆಳಕಿಗೆ ಬಂದಿವೆ. ನದಿಯ ಪ್ರವಾಹವನ್ನು ನಿಯಂತ್ರಿಸುವ ಪ್ರಾಚೀನ ರಕ್ಷಣಾ ಗೋಡೆಯನ್ನು ಉತ್ಖನನ ಸಂದರ್ಭದಲ್ಲಿ ಪತ್ತೆಹಚ್ಚಲಾಗಿದೆ.

**ತಲಕಾವೇರಿ:** ಕೊಡಗು ಜಿಲ್ಲೆಯಲ್ಲಿ ತಾಲೂಕು ಕೇಂದ್ರ ಮಡಿಕೇರಿಯಿಂದ ೨೮ ಕಿ.ಮೀ. ದೂರದಲ್ಲಿ ಬ್ರಹ್ಮಗಿರಿ ಬೆಟ್ಟದ ಮೇಲಿರುವ ಕಾವೇರಿ ನದಿಯ ಉಗಮಸ್ಥಾನವಿದು. ಇಲ್ಲಿರುವ ಚಿಕ್ಕ ಹೊಂಡದಲ್ಲಿ ಕಾವೇರಿ ಹುಟ್ಟಿ ತುಸು ದೂರ ಭೂಗತವಾಗಿ ಹರಿಯುತ್ತಾಳೆಂದು ನಂಬುಗೆ. ಈಶ್ವರ ಮತ್ತು ಗಣಪತಿಗೆ ಮುಡುಪಾಗಿರುವ ಎರಡು ಗುಡಿಗಳು ಇಲ್ಲಿವೆ. ತುಲಾ ಸಂಕ್ರಮಣದಂದು ಕಾವೇರಿಯು ಇಲ್ಲಿಯ ಚೌಕ ಹೊಂಡದಿಂದ ಉಗಮಸಿ ಹರಿಯಲಾರಂಭಿಸುವಳೆಂದು ನಂಬುಗೆ ಇದ್ದು, ಅಂದು ಬೃಹತ್ ಜಾತ್ರೆ ನಡೆಯುತ್ತದೆ. ಬ್ರಹ್ಮಗಿರಿಗೆ ಇಲ್ಲಿಂದ ಮೆಟ್ಟಿಲುಗಳಿದ್ದು, ಬೆಟ್ಟದ ಮೇಲೆ ಯಜ್ಞಕುಂಡಗಳ ಅವಶೇಷಗಳಿವೆ. ಈ ಶಾಂತಿಧಾಮವು ಬೆಟ್ಟ–ಅರಣ್ಯಗಳ ಪರಿಸರದಲ್ಲಿದೆ.

**ತಿಂಥಿಣಿ:** ಯಾದಗಿರಿ ಜಿಲ್ಲೆಯ ಸುರಪುರ ತಾಲೂಕಿನಲ್ಲಿ ಕೃಷ್ಣಾ ನದಿಯ ದಂಡೆಯ ಮೇಲಿರುವ ಈ ಸ್ಥಳ ಧಾರ್ಮಿಕ ಸಮನ್ವಯಕ್ಕೆ ಪ್ರಸಿದ್ಧವಾಗಿದೆ. ಇಲ್ಲಿರುವ ಮೌನಪ್ಪಯ್ಯ ಸಂತನ ಸಮಾಧಿಯನ್ನು ಹಿಂದೂಗಳೂ ಮುಸ್ಲಿಮರೂ ಸಮಾನ ಗೌರವದಿಂದ ಪೂಜಿಸುತ್ತಾರೆ.

**ತಿರುಮಕೂಡಲು ನರಸೀಪುರ:** ಮೈಸೂರು ಜಿಲ್ಲೆಯಲ್ಲಿರು ಒಂದು ತಾಲೂಕು ಕೇಂದ್ರವಾದ ಇದು, ೧೮೬೮ರಿಂದ ಆಗಿನ ತಲಕಾಡು ತಾಲೂಕಿನ ಆಡಳಿತ ಕೇಂದ್ರವಾಗಿದ್ದು, ಮುಂದೆ ೧೮೮೨ರಲ್ಲಿ ತಾಲೂಕಿಗೂ ಇದೇ ಹೆಸರನ್ನು ನೀಡಲಾಯಿತು. ನರಸೀಪುರವು

ಕಪಿಲ ಹಾಗೂ ಕಾವೇರಿ ನದಿಗಳ ಬಲದಂಡೆಯ ಮೇಲಿರುವ ಪಟ್ಟಣವಾಗಿದ್ದು, ಕಾವೇರಿ–ಕಪಿಲ ಸಂಗಮ ಸ್ಥಳದ ಇಕ್ಕೆಲದಲ್ಲಿ ಆಚೀಚೆ ದಡದಲ್ಲಿ ಅಗಸ್ತೇಶ್ವರ ಹಾಗೂ ಗುಂಜಾ ನರಸಿಂಹಸ್ವಾಮಿ ದೇವಾಲಯಗಳನ್ನು ಪ್ರಮುಖವಾಗಿ ಹೊಂದಿದೆ. ಅಲ್ಲದೆ ಈ ಪರಿಸರವು ನೂತನ ಶಿಲಾಯುಗ ಹಾಗೂ ಬೃಹತ್ ಶಿಲಾಯುಗ ಜನರ ಬದುಕನ್ನು ಬಿಂಬಿಸುವ ಕುರುಹುಗಳನ್ನು ಹೊಂದಿರುವುದು ಉಲ್ಲೇಖಾರ್ಹ. ಪ್ರಾಚೀನ ಶಾಸನಗಳಲ್ಲಿ ತಿರುಮಕೂಡಲಿನ ಉಲ್ಲೇಖ ಆರಂಭದಿಂದಲೂ ಕಂಡುಬರುತ್ತಿದ್ದು, ಸುಮಾರು ೧೩ನೆಯ ಶತಮಾನಕ್ಕೆ ಸೇರಿದ ಹೊಯ್ಸಳ ಬಲ್ಲಾಳನ ಹುಣಸೂರು ಶಾಸನದಲ್ಲಿ ಪುಣಿಶೆಯೂರಾದ ನರ ಸಿಂಹದೇವಚತುರ್ವೇದಿ ಮಂಗಲ ಮಹಾಸಭೆಯ ಉಲ್ಲೇಖವಿದ್ದು, ಸಾಂದರ್ಭಿಕ ಆಧಾರದ ಮೇಲೆ ಇದನ್ನು ಹೊಯ್ಸಳ ಮುಮ್ಮಡಿ ನರಸಿಂಹನ ಕಾಲದಷ್ಟು ಹಿಂದಕ್ಕೆ ಗುರುತಿಸಬಹುದೆಂದು ತೋರುತ್ತದೆ. ತಿರುಮಕೂಡಲು ನರಸೀಪುರದಿಂದ ೧೭ ಶಾಸನಗಳು ವರದಿಯಾಗಿದ್ದು, ನರಸೀಪುರದ ೧೬೨೨ರ ತಾಮ್ರಶಾಸನ ರಾಜ್ಯದಲ್ಲಿ ಈವರೆಗೆ ಲಭಿಸಿರುವ ಅತ್ಯಂತ ಸುದೀರ್ಘ ಶಾಸನವಾಗಿದೆ.

ಮೂಗೂರು ರಸ್ತೆಯಲ್ಲಿ ಹೊಳೆ ದಂಡೆಯ ಮೇಲೆ ಉತ್ತರಾಭಿಮುಖವಾಗಿರುವ ಗುಂಜಾ ನರಸಿಂಹಸ್ವಾಮಿಯ ಗುಡಿಯು ವಿಜಯನಗರ ಕಾಲದ ವಿಶಾಲ ರಚನೆಯಾಗಿದ್ದು, ಪ್ರಾಕಾರದ ಮಹಾದ್ವಾರಕ್ಕೆ ಎತ್ತರವಾದ ಗೋಪುರವಿದ್ದು, ಮೇಲೆ ಸುತ್ತಲೂ, ಇಟ್ಟಿಗೆ ಗಾರೆಗಳಿಂದ ಮಾಡಿದ ಕಿರು ದೇವಕೋಷ್ಟಗಳಿವೆ. ಮಹಾದ್ವಾರದ ಬಳಿಯಿರುವ ಭಕ್ತವಿಗ್ರಹವನ್ನು ಮೂಗೂರು ಪಾಳೇಗಾರನ ಶಿಲ್ಪವೆಂದು ಹೇಳಲಾಗುತ್ತದೆ. ಒಳಗೆ ಪ್ರಧಾನ ಗರ್ಭಗೃಹದಲ್ಲಿ ಬಲಗೈಯಲ್ಲಿ ಗುಲಗಂಜಿಮರದ ರೆಂಬೆಯನ್ನಿಡಿದಿರುವ ನರಸಿಂಹನ ಶಿಲ್ಪವಿದೆ. ಅದರಿಂದಾಗಿ ಈ ಕ್ಷೇತ್ರವು ವಾರಣಾಸಿಗಿಂತ ಒಂದು ಗುಲಗಂಜಿಯಷ್ಟು ಹೆಚ್ಚು ಪವಿತ್ರವೆಂದು ಸಾಂಪ್ರದಾಯಕವಾಗಿ ಹೇಳಲಾಗುತ್ತದೆ. ಗರ್ಭಗೃಹ–ಅಂತರಾಳಗಳ ಮುಂದೆ ವಿಶಾಲವಾದ ನವರಂಗ ಹಾಗೂ ವಿಜಯನಗರ ಶೈಲಿಯ ಎತ್ತರದ ಕಂಬಗಳನ್ನು ಹೊಂದಿದ ರಂಗಮಂಟಪವಿದೆ. ಅದರ ಕಂಬಗಳ ಮೇಲೆ ರಾಮಾಯಣ ಹಾಗೂ ಭಾಗವತಗಳಿಗೆ ಸಂಬಂಧಿಸಿದ ಕಥನ ಶಿಲ್ಪಗಳಿವೆ. ಈ ಕಂಬಗಳ ಮೇಲಿರುವ ಭಕ್ತ ವಿಗ್ರಹಗಳನ್ನು ಮೂಗೂರು ಪಾಳೇಗಾರರ ಶಿಲ್ಪಗಳೆಂದು ಹೇಳಲಾಗುತ್ತದೆ. ಈ ದೇವಾಲಯದ ಹಿಂಬದಿಯಲ್ಲಿ ಆಂಡಾಲಮ್ಮ, ಚೆಲುವನಾರಾಯಣ, ಸೀತಾರಾಮ, ಶ್ರೀನಿವಾಸ, ಬೆಣ್ಣೆಕೃಷ್ಣ, ವರದರಾಜಸ್ವಾಮಿ, ವೇದಾಂತ ದೇಶಿಕಾ ಹಾಗೂ ಮಹಾಲಕ್ಷ್ಮೀಯರ ಕಿರುಗುಡಿಗಳಿವೆ. ಅಲ್ಲೇ ವ್ಯಾಸ ಪ್ರತಿಷ್ಠಿತವೆಂದು ಹೇಳಲಾಗುವ ಹನುಮ ಶಿಲ್ಪವೂ ಸೇರಿದಂತೆ ಹನುಮಂತನ ಎರಡು ಶಿಲ್ಪಗಳಿವೆ. ಇದರ ಎಡಭಾಗದ ಗುಡಿಯಲ್ಲಿ ಜನಾರ್ಧನನ ಸುಂದರ ಶಿಲ್ಪವಿದೆ. ಗುಂಜಾ ನರಸಿಂಹಸ್ವಾಮಿಯ ರಥೋತ್ಸವವು ಜನವರಿ ತಿಂಗಳಲ್ಲಿ ವಿಜೃಂಭಣೆಯಿಂದ ಜರುಗುತ್ತದೆ.

ಊರಾಚೆ ಹೆಮ್ಮಿಗೆ ರಸ್ತೆಯಲ್ಲಿ ಎಡಕ್ಕಾದಂತೆ ಕಾವೇರಿಯ ಬಲದಂಡೆಯ ಮೇಲಿರುವ ಮೂಲಸ್ಥಾನೇಶ್ವರ ಗುಡಿಯು ವಿಜಯನಗರ ಕಾಲದ ರಚನೆಯಾಗಿದ್ದು, ಅನಂತರದಲ್ಲಿ ಲಕ್ಷ್ಮೀನಾರಾಯಣ, ದಕ್ಷಿಣಾಮೂರ್ತಿ, ಸಚ್ಚಿದಾನಂದೇಶ್ವರಿ, ಶಿವಕಾಮೇಶ್ವರಿ ಹಾಗೂ ಚಂಡಿಕೇಶ್ವರಿ ಗುಡಿಗಳನ್ನು ಸೇರಿಸುವ ಮೂಲಕ ಅದನ್ನು ವಿಸ್ತರಿಸಲಾಗಿದೆ. ಮೂಲಸ್ಥಾನಗುಡಿಯ ಹಿಂಬದಿಯಲ್ಲಿ ಮರವೊಂದರ ಬುಡಕ್ಕೆ ಒರಗಿಸಿರುವ ಪಾರ್ಶ್ವನಾಥ ತೀರ್ಥಂಕರ ಶಿಲ್ಪದ (ಇದು ಹಿಂದಿನ ತಾಲೂಕು ಕಚೇರಿ ಬಳಿ ಇತ್ತೆಂದು ವರದಿಯಾಗಿದೆ)ಲ್ಲಿರುವ ಶಾಸನದಲ್ಲಿ ಮೂಲಸಂಘ ದೇಶಿಗಣ, ಪುಷ್ಟಕಗಚ್ಛ ಕೊಂಡಕುಂದಾನ್ವಯದ ಉಲ್ಲೇಖವಷ್ಟೇ ಇದೆ. ಕಪಿಲ ಹೊಳೆ ದಂಡೆಯಲ್ಲಿರುವ ಬಲ್ಲೇಶ್ವರ ಎಂಬ ಇನ್ನೊಂದು ದೇವಾಲಯವೂ ಜೀರ್ಣೋದ್ಧಾರಗೊಂಡಿದೆ. ಉಳಿದಂತೆ, ಇತರ ನವೀನ ಗುಡಿಗಳಷ್ಟೇ ಅಲ್ಲದೇ ಇಗರ್ಜಿ ಹಾಗೂ ಮಸೀದಿಗಳೂ ಇಲ್ಲಿವೆ.

**ತಿರುಮಕೂಡಲು:** ಕಾವೇರಿ–ಕಪಿಲ ಸಂಗಮ ಸ್ಥಳದಲ್ಲಿ ತಾಲೂಕು ಕೇಂದ್ರ ನರಸೀಪುರದಿಂದ ಆಚೆ ದಡದಲ್ಲಿರುವ ತೀರ್ಥಸ್ಥಳ. ಕಾವೇರಿ–ಕಪಿಲ ನದಿಗಳು ಕೂಡುವ (ತಿರು–ಮಹಾಕೂಡಲು) ಸಂಗಮ ಸ್ಥಳ ಇದಾಗಿದ್ದು, ಈ ಎರಡು ನದಿಗಳು ಅಲ್ಲಿರುವ ಸ್ಪಟಿಕ ಸರೋವರದೊಂದಿಗೆ ಸಂಗಮಿಸುವುದರಿಂದ ಇದಕ್ಕೆ 'ತಿರುಮಕೂಡಲು' ಎಂಬ ಹೆಸರು ಬಂದಿದೆ ಎಂದೂ ಹೇಳಲಾಗುತ್ತದೆ. ಇದನ್ನು ಸ್ಥಳೀಯ ಶಾಸನಗಳೂ ಮಾರ್ದನಿಸುತ್ತವೆ. ನೆರೆಯ ತುಂಬಲದ ೧೧೮೦ರ ಎರಡು ಶಾಸನಗಳಲ್ಲಿ ತಿರುಮಕೂಡಲಿನ ಮೊದಲ ಉಲ್ಲೇಖವಿ ಇದಾಗಿದ್ದು, ಪ್ರಾಚೀನ ಶಾಸನಗಳಲ್ಲಿ ದಕ್ಷಿಣ ಪ್ರಯಾಗ, ದಕ್ಷಿಣ ವಾರಣಾಸಿ, ಭೂಕೈಲಾಸವಾದ ಶ್ರೀರುದ್ರಪಾದ ಸಾನಿಧ್ಯವಾದ ಕಾವೇರಿ–ಕಪಿಲ ಸಂಗಮ 'ತಿರುಮಕೂಡಲು' ಎಂದೇ ಉಲ್ಲೇಖಿತಗೊಂಡಿದ್ದು, ಹಿಂದೆ ಇದು ಅಗಸ್ತ್ಯಮುನಿಗಳ ಆಶ್ರಮವಾಗಿದ್ದು, ಅವರ ಆದೇಶದಂತೆ ಉತ್ತರದಿಂದ ಶಿವಲಿಂಗವನ್ನು ತರಲು ಹೋದ ಹನುಮಂತನು ಸಕಾಲಕ್ಕೆ ಬರುವಲ್ಲಿ ವಿಫಲನಾದಾಗ ತಾವೇ ಮರಳಿನಿಂದ ಸಿದ್ಧಪಡಿಸಿದ್ದ ಲಿಂಗವನ್ನು ಅಗಸ್ತ್ಯರು ಪ್ರತಿಷ್ಠಾಪಿಸಿ ಪೂಜಿಸಿದರಂತೆ. ಅನಂತರ ಶಿವಲಿಂಗದೊಂದಿಗೆ ಉತ್ತರದಿಂದ ಬಂದ ಹನುಮಂತನು ಇದನ್ನು ಕಂಡು ಸಿಟ್ಟಿನಿಂದ ಈ ಲಿಂಗವನ್ನು ಕೀಳಲು ಯತ್ನಿಸಿದಾಗ ಆದ ಗುರುತನ್ನು ಹನುಮಲಿಂಗದ ಮೇಲೆ ಈಗಲೂ ನೋಡಬಹುದೆಂಬ ಐತಿಹ್ಯವಿದೆ. ಅಗಸ್ತ್ಯಲಿಂಗವಿರುವ ಈ ಕ್ಷೇತ್ರದ'ಲ್ಲೇ ಹನುಮಂತನು ತಂದಿದ್ದ ಹನುಮಂತೇಶ್ವರ ಶಿವಲಿಂಗವನ್ನು ನಂತರದಲ್ಲಿ ಪ್ರತಿಷ್ಠಾಪಿಸಲಾಯಿತಂತೆ. ಇಲ್ಲಿಯ ಹನುಮಂತೇಶ್ವರನ ಗುಡಿಯು ಪೂರ್ವಾಭಿಮುಖವಾಗಿದ್ದು, ಗರ್ಭಗೃಹ, ಅಂತರಾಳ ಹಾಗೂ ನವರಂಗಗಳನ್ನು ಹೊಂದಿದೆ. ಗರ್ಭಗೃಹದಲ್ಲಿ, ಹನುಮ ಪ್ರತಿಷ್ಠಿತ ಹನುಮಂತೇಶ್ವರ ಲಿಂಗವಿದ್ದು, ಗುಡಿಯ ಛಾವಣಿಯು ಇಳಿಜಾರಾಗಿದೆ. ನೆರೆಯ ಮೂಗೂರು ಸಹ ಜೈನಬಸದಿ ಹಾಗೂ ತ್ರಿಪುರ ಸುಂದರಮಣಿ ದೇವಾಲಯಗಳಿಂದಾಗಿ ಪ್ರಸಿದ್ಧವಾಗಿದೆ. ಸ್ಥಳೀಯ ಪಾಳೇಗಾರರ ಆಡಳಿತದೊಳಪಟ್ಟಿದ್ದು ಉಲ್ಲೇಖಾರ್ಹ ಸ್ಥಳವಾಗಿದೆ.

ಇಲ್ಲಿರುವ ಅಗಸ್ತೇಶ್ವರ ದೇವಾಲಯವು ವಿಶಾಲ ಸಂಕೀರ್ಣವಾಗಿದ್ದು, ಪ್ರಧಾನದ್ವಾರವು ಉತ್ತರಕ್ಕಿದ್ದರೆ, ಅಗಸ್ತೇಶ್ವರ ಗುಡಿಯು ಪೂರ್ವಾಭಿಮುಖವಾಗಿದೆ. ಮೂಲತಃ ೧೦–೧೧ನೆಯ ಶತಮಾನದ್ದೆಂದು ಊಹಿಸಲಾಗಿರುವ ಈ ಗುಡಿಯು ನಂತರದಲ್ಲಿ ಹೊಯ್ಸಳ, ವಿಜಯನಗರ, ಮೈಸೂರರಸರು ಹಾಗೂ ಸ್ಥಳೀಯ ಪಾಳೇಗಾರರ ಆಡಳಿತಾವಧಿಯಲ್ಲಿ ಹಲವಾರು ಸೇರ್ಪಡೆ ಮಾರ್ಪಾಡುಗಳೊಂದಿಗೆ ವಿಸ್ತಾರಗೊಂಡು ಇಂದಿನ ರೂಪು ಪಡೆದಿದೆ. ಮೂಲಗರ್ಭಗೃಹದಲ್ಲಿ ಅಗಸ್ತೇಶ್ವರ ಲಿಂಗವಿದ್ದು, ನವರಂಗದ ಕಂಬಗಳು ದುಂಡಾಗಿದ್ದು, ಬಾಗಿಲುವಾಡ ಸರಳವಾಗಿದೆ. ಕಚ್ಚು

ಬಿದ್ದಿರುವ ಅಗಸ್ತ್ಯೇಶ್ವರ ಲಿಂಗದಲ್ಲಿನ ಗುಳಿಯ ನೀರನ್ನು ಭಕ್ತರು ಪ್ರಸಾದವೆಂದು ಈಗಲೂ ಪರಿಗಣಿಸಿ ಸ್ವೀಕರಿಸುತ್ತಾರೆ. ಅಗಸ್ತ್ಯೇಶ್ವರ ದೇವಾಲಯದ ಹೊರಪ್ರಾಕಾರದ ಸಭಾಮಂಟಪದ ಕಂಬವೊಂದರ ಮೇಲೆ ಪಿಟೀಲನ್ನು ನುಡಿಸುತ್ತಿರುವ ಸುಂದರಿಯೋರ್ವಳ ಉಬ್ಬುಕೆತ್ತನೆ ಆಕರ್ಷಕವಾಗಿದೆ. ಅಗಸ್ತ್ಯೇಶ್ವರನ ಸನ್ನಿಧಿಯಲ್ಲಿ ಮೂರು ವರ್ಷಕ್ಕೊಮ್ಮೆ ಮಾಘ ಶುದ್ಧ ಪೌರ್ಣಿಮೆಯಲ್ಲಿ ಕುಂಭಮೇಳ ಜರುಗುತ್ತದೆ. ಪ್ರವೇಶದ್ವಾರದ ಬಳಿಯಿರುವ ಆಕರ್ಷಕ ತೋರಣಕಲ್ಲನ್ನು ದೀಪಸ್ತಂಭಗಳು ಹೊತ್ತುನಿಂತಿದ್ದು, ಅಲ್ಲೇ ಬಲಿಪೀಠವಿದೆ. ಈ ಗುಡಿಯ ಅಗಸ್ತ್ಯೇಶ್ವರ ದೇವಾಲಯದ ಆವರಣದಲ್ಲಿ ಮಾರ್ಕಂಡೇಶ್ವರ, ಸೋಮೇಶ್ವರ, ಗರ್ಗೇಶ್ವರ ಮುಂತಾದವಲ್ಲದೆ ೨೧ ಬಿಡಿ ಶಿವಲಿಂಗಗಳನ್ನುಳ್ಳ ಕಿರುಗುಡಿಗಳೂ ಪ್ರಾಕಾರದಂಚಿನಲ್ಲಿವೆ. ಈ ಗುಡಿಗೆ ಹೊಂದಿಕೊಂಡಂತೆ ಇರುವ ಅಶ್ವತ್ಥಕಟ್ಟೆಯು ಬ್ರಹ್ಮಪೂಜಿತವೆಂಬ ಹೇಳಿಕೆ ಇದ್ದು, ಅಲ್ಲಿ ಆಕರ್ಷಕವಾದ ನೂರಾರು ನಾಗಕಲ್ಲುಗಳಿವೆ. ಸನಿಹದಲ್ಲೇ ಇರುವ ಬ್ರಹ್ಮೇಶ್ವರ ಗುಡಿಯ ಬದಿಯಲ್ಲಿ ಸುಮಾರು ೧೮ನೇ ಶತಮಾನದಲ್ಲಿದ್ದ ಮಾಧ್ವಯತಿ ರಘುನಾಥತೀರ್ಥ ಶೇಷಚಂದ್ರಿಕಾಚಾರ್ಯರ ವೃಂದಾವನವೂ ಸೇರಿದಂತೆ ಹತ್ತು ವೃಂದಾವನಗಳಿವೆ. ಸೋಸಲೆಯ ವ್ಯಾಸರಾಜ ಮಠದ ಶಾಖಾಮಠವಿದಾಗಿದ್ದು, ಅನತಿ ದೂರದಲ್ಲೇ ಶೃಂಗೇರಿ ಶಾಖಾಮಠವೂ ಇದೆ.

ಇಲ್ಲಿಯ ವೀರಭದ್ರ ಗುಡಿಯು ಹಿಂದೆ ಇಲ್ಲಿದ್ದಿರಬಹುದಾದ ಜೈನ ಬಸದಿಯನ್ನು ಸೂಚಿಸುವಂತಿದೆ. ಅಗಸ್ತ್ಯೇಶ್ವರ ಗುಡಿಯಿಂದ ಪೂರ್ವಕ್ಕೆ ಆಚೆ ದಡದಲ್ಲಿರುವ ಆನಂದೇಶ್ವರ ದೇವಾಲಯವನ್ನು ಚಿದಾನಂದ ಎಂಬ ಸನ್ಯಾಸಿಯು ೨೦೦ ವರ್ಷಗಳ ಹಿಂದೆ ನಿರ್ಮಿಸಿದ್ದು, ಬದಿಯಲ್ಲೇ ಭಿಕ್ಷೇಶ್ವರ ಎಂದು ಕರೆಯಲ್ಪಡುವ ಇನ್ನೊಂದು ದೇವಾಲಯವಿದೆ. ಶ್ರೇಷ್ಠ ಪಿಟೀಲುವಾದಕರಾದ ಚೌಡಯ್ಯ ಮತ್ತವರ ತಾಯಿ ಭರತನಾಟ್ಯ ವಿಶಾರದೆ ಖ್ಯಾತಿಯ ರಾಜನರ್ತಕಿ ಸುಂದರಮ್ಮ ತಿರುಮಕೂಡಲಿನವರಾಗಿದ್ದು, ರಾಜಾಶ್ರಯದಲ್ಲಿದ್ದ ಕಲಾಕೋವಿದರಾಗಿದ್ದು, ಅವರ ವಂಶಸ್ಥರು ಈಗಲೂ ಇಲ್ಲಿದ್ದಾರೆ. ತಿರುಮಕೂಡಲಿನ ೧೫೫೭ರ ಶಾಸನದಿಂದ, ತಿರುಮಕೂಡಲು ಕೂಡ ಆ ವೇಳೆಗೆ ಪಂಚಲಿಂಗ ಕ್ಷೇತ್ರವಾಗಿದ್ದ ಅಂಶ ವೇದ್ಯವಾಗುತ್ತದೆ. ತಿರುಮಕೂಡಲಿನ ಬಳಿ ಕಾವೇರಿ–ಕಪಿಲ ನದಿಗಳಿಗೆ ೧೯೩೨–೩೪ರಲ್ಲಿ ನಿರ್ಮಿಸಿರುವ ಸೇತುವೆಗಳು ತಾಲೂಕಿನ ಪ್ರಾಚೀನ ಸೇತುವೆಗಳಾಗಿದ್ದು, ಶಿಥಿಲಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ಪರ್ಯಾಯ ಸೇತುವೆಗಳನ್ನು ನಿರ್ಮಿಸಲಾಗಿದೆ. ಪಟ್ಟಣ ಪ್ರವೇಶಕ್ಕೆ ಉತ್ತಮ ರಸ್ತೆ ಸಂಪರ್ಕ ಕಲ್ಪಿಸಲಾಗಿದೆ. ೧೪೯೪ರ ಶಾಸನ ಪ್ರಸ್ತಾಪಿಸಿರುವ ಗರ್ಗೇಶ್ವರ ಸನ್ನಿಧಿ ನೆರೆಯ ಗರ್ಗೇಶ್ವರಿಯೇ ಆಗಿದ್ದು, ಅಲ್ಲಿ ಗರ್ಗೇಶ್ವರ ಹಾಗೂ ಉಮಾಹರದೇವರ ಆಲಯಗಳಿವೆ. ಅಲ್ಲಿಯ ಗಣಪತಿಗೆ ಶ್ರೀ ಚಕ್ರಯಂತ್ರವನ್ನು ಬರೆದವರು ಆದಿಶಂಕರರೆಂಬ ಪ್ರತೀತಿ ಇದ್ದು, ಭಕ್ತರ ಕೋರಿಕೆ ಪೂರೈಸುವ ಗಣಪನೆಂದೇ ಪ್ರಸಿದ್ಧನಾಗಿದ್ದಾನೆ.

**ತುಮಕೂರು:** ಇದೊಂದು ಜಿಲ್ಲಾ ಕೇಂದ್ರವಾಗಿದ್ದು, ಬೆಂಗಳೂರಿನಿಂದ ಉತ್ತರಕ್ಕೆ ೭೦ ಕಿ.ಮೀ. ದೂರದಲ್ಲಿದೆ. ಸುಮಾರು ೧೧ನೇ ಶತಮಾನದ ಶಾಸನವೊಂದರಲ್ಲಿ ಇದನ್ನು 'ತುಮ್ಮುಗೆರೆ' ಅಥವಾ 'ತುಂಬೆಊರು' ಎಂದು ಕರೆಯಲಾಗಿದೆ. ಬಹುಶ: ಈ ಪರಿಸರದಲ್ಲಿ ಹೇರಳವಾಗಿ ಕಂಡುಬರುವ ತುಂಬೆ ಹೂವಿನ ಗಿಡಗಳಿಂದಾಗಿ ಇದಕ್ಕೆ ತುಂಬೆಕೂರು ಎಂಬ ಹೆಸರು ರೂಢಿಗೆ ಬಂದಿದ್ದು ಕಾಲಾನಂತರ ತುಮಕೂರು ಆಗಿದೆ ಎಂದು ಹೇಳಬಹುದಾಗಿದೆ. ಇಲ್ಲಿರುವ ಸುಮಾರು ೧೫೬೦ ರಲ್ಲಿ ನಿರ್ಮಾಣಗೊಂಡ ಲಕ್ಷ್ಮೀನಾರಾಯಣ ದೇವಾಲಯ ಪ್ರಾಚೀನ ದೇವಾಲಯವಾಗಿದೆ. ತುಮಕೂರು ೧೭ ನೇ ಶತಮಾನದಲ್ಲಿ ಮೈಸೂರು ರಾಜ್ಯದಲ್ಲಿ ಸೇರಿದಾಗ ಮಾರುತಿ ದೇವಾಲಯವು ನಿರ್ಮಾಣವಾಯಿತು. ಈ ನಗರದ ಹೊರಗೆ ಕೆರೆಯ ಬಳಿಯಿರುವ ಕೋಡಿಬಸವಣ್ಣನ ಗುಡಿ ಮತ್ತು ಬಯಲು ಆಂಜನೇಯ ದೇವಾಲಯಗಳು ಬಹಳ ಪುರಾತನದ್ದಾಗಿವೆ. ಆಂಜನೇಯನಿಗೆ ಆರು ತೋಳುಗಳಿರುವುದು ಈ ವಿಗ್ರಹದ ವೈಶಿಷ್ಟ್ಯವಾಗಿದೆ. ಹನುಮಂತಪುರದ ಕೊಲ್ಲಾಪುರದಮ್ಮನ ದೇವಾಲಯವು ಉಲ್ಲೇಖಾರ್ಹ. ತುಮಕೂರು–ಮಧುಗಿರಿ ರಸ್ತೆಯಲ್ಲಿರುವ ಯಲ್ಲಾಪುರದಿಂದ ಐದು ಕಿ.ಮೀ. ದೂರದ ಅಜ್ಜಪ್ಪನಹಳ್ಳಿಯಲ್ಲಿ ಸುಂದರವಾದ ನೈಸರ್ಗಿಕ ಬಂಡೆಗಳಿಂದ ಆವೃತವಾದ ಚಿನಗ ರಂಗನಾಥಸ್ವಾಮಿ ಬೆಟ್ಟ ಸಾಲುಗಳ ತಪ್ಪಲಲ್ಲಿ ವಿಜಯನಗರೋತ್ತರ ಶೈಲಿಯ ಸ್ವಯಂವ್ಯಕ್ತ ಅರೆ ಆಂಜನೇಯ ದೇವಾಲಯವು ಅತ್ಯಂತ ಆಕರ್ಷಕ ಪರಿಸರದಲ್ಲಿದೆ. ಈ ದೇವಾಲಯದ ಮೂಲ ವಿಗ್ರಹವು ವ್ಯಾಸತೀರ್ಥ ಪ್ರತಿಷ್ಠಿತವೆಂದು ಸ್ಥಳೀಯವಾಗಿ ನಂಬಲಾಗುತ್ತದೆ. ಚೈತ್ರ ಶುದ್ಧ ದಶಮಿಯಂದು (ಶ್ರೀರಾಮನವಮಿಯ ಮೂರನೆಯ ದಿನ) ವಾರ್ಷಿಕವಾಗಿ ರಥೋತ್ಸವ ಹಾಗೂ ಮೂರು ದಿನಗಳ ಜಾತ್ರೆ ನಡೆಯುತ್ತದೆ. ಕ್ಯಾತಸಂದ್ರದ ಹತ್ತಿರ ಬೆಟ್ಟದ ಮೇಲೆ ಸಿದ್ಧಗಂಗಾ ಕ್ಷೇತ್ರವಿದೆ. ಸಿದ್ಧಗಂಗಾದಲ್ಲಿ ಶಿಕ್ಷಣ ಕ್ಷೇತ್ರಕ್ಕೆ ಅಪೂರ್ವ ಕೊಡುಗೆ ನೀಡಿರುವ ವೀರಶೈವ ಮಠ ಹಾಗೂ ಪ್ರಾಚೀನ ಸಂಸ್ಕೃತ ಪಾಠಶಾಲೆಯಿದೆ. ಅದರಲ್ಲಿ ಸಾವಿರಾರು ವಿದ್ಯಾರ್ಥಿಗಳಿಗೆ ಉಚಿತ ವಸತಿ ನಿಲಯವಿದೆ. ಎಂಜಿನಿಯರಿಂಗ್ ಕಾಲೇಜು ಸೇರಿದಂತೆ ಅನೇಕ ಶೈಕ್ಷಣಿಕ ಸಂಸ್ಥೆಗಳನ್ನು ಸಿದ್ಧಗಂಗಾ ಮಠವು ನಡೆಸುತ್ತಿದೆ. ಸಿದ್ಧಗಂಗಾದಲ್ಲಿ ವೀರಶೈವ ಸಿದ್ಧಲಿಂಗೇಶ್ವರ ಯತಿಯ ಸಮಾಧಿ ಇದ್ದು, ಸಿದ್ಧಗಂಗಾ ಎಂದು ಕರೆಯಲ್ಪಡುವ ನೈಸರ್ಗಿಕ ಚಿಲುಮೆ ಇದೆ. ೨೦೦೪ರಲ್ಲಿ ವಿಶ್ವವಿದ್ಯಾಲಯವನ್ನೂ ಇಲ್ಲಿ ಆರಂಭಿಸಲಾಗಿದೆ. ಈ ಕ್ಷೇತ್ರದ ಮಠಿಗಳಾದ ಡಾ.ಶಿವಕುಮಾರಸ್ವಾಮಿಯವರು ಶತಾಯುಷಿಗಳಾಗಿದ್ದು ಅನ್ನದಾನಕ್ಕೆ ಶಿಕ್ಷಣ ದಾಸೋಹ ಈ ಕ್ಷೇತ್ರವು ಪ್ರಸಿದ್ಧವಾಗಿದೆ.

**ದಾವಣಗೆರೆ:** ದಾವಣಗೆರೆ ೧೯೯೭ರಿಂದೀಚೆಗೆ ಜಿಲ್ಲಾ ಕೇಂದ್ರವಾಗಿದ್ದು, ಪುಣೆ–ಬೆಂಗಳೂರು ರಸ್ತೆಯಲ್ಲಿ, ಬೆಂಗಳೂರಿನಿಂದ ೨೬೭ ಕಿ.ಮೀ ದೂರದಲ್ಲಿರುವ ಆಧುನಿಕ ಕೈಗಾರಿಕಾ ಕೇಂದ್ರ. ಇದು 'ದಾವಣಿಕೆರೆ' ಎಂಬ ಕೆರೆಯ ಸುತ್ತ ಬೆಳೆದಿದೆ. 'ದಾವಣಿ' ಪದಕ್ಕೆ ದನಗಳನ್ನು ಕಟ್ಟುವಹಗ್ಗ ಎಂಬ ಅರ್ಥವಿದೆ. ಹಿಂದೆ ಇದು ಸೇವುಣರ ಕಾಲದಲ್ಲಿ ಪ್ರಸಿದ್ಧಿ ಪಡೆದಿದ್ದ, ಬೇತೂರಿನ ಭಾಗವಾಗಿತ್ತು. ಹೈದರಾಲಿಯು ಇದನ್ನು ತನ್ನ ಕೈಕೆಳಗೆ ಅಧಿಕಾರಿಯಾಗಿದ್ದ ಅಪ್ಪಾಜಿರಾಮ ಎಂಬವನಿಗೆ ಜಹಗೀರಾಗಿ ಉಡುಗೊರೆಯನ್ನಿತ್ತಿದ್ದ. ಇದರಿಂದಾಗಿ ದಾವಣಿಕೆರೆಯು ಪ್ರಮುಖ ವಾಣಿಜ್ಯ ಹಾಗೂ ಕೈಗಾರಿಕಾ ಕೇಂದ್ರವಾಗಿ ಬೆಳೆಯಿತು. ದಾವಣಗೆರೆಯು ಬಟ್ಟೆ ಕಾರ್ಖಾನೆಗಳ ಕೇಂದ್ರವಾಗಿ ಬೆಳೆದಿದೆ. ಇದಲ್ಲದೇ, ಮೆಡಿಕಲ್ ಹಾಗೂ ಎಂಜಿನಿಯರಿಂಗ್ ಕಾಲೇಜುಗಳಿಂದಾಗಿ ವಿದ್ಯಾಕೇಂದ್ರವಾಗಿಯೂ ಪ್ರಸಿದ್ಧಿ ಪಡೆದಿದೆ. ನೆರೆಯ ಆನೆಕೊಂಡ ಗ್ರಾಮದಲ್ಲಿರುವ ಈಶ್ವರ ದೇವಾಲಯವೂ ಪ್ರಸಿದ್ಧವಾಗಿದೆ. ಸಮೀಪದ ಎಲೆಬೇತೂರು ಹಿಂದೆ ಪ್ರಮುಖ ಜೈನ ಕೇಂದ್ರವಾಗಿದ್ದು, ಇಂದು ಅವಶೇಷಗಳಲ್ಲದೆ, ಪ್ರಾಚೀನ ಈಶ್ವರ ದೇವಾಲಯವೂ ಇದೆ.

**ದೇವಲ(ರ)ಗಾಣಗಾಪುರ:** ಇದು ಕಲಬುರಗಿ ಜಿಲ್ಲೆಯ ಅಫಜಲ್‌ಪುರ ತಾಲೂಕಿನಲ್ಲಿ ಬೆಂಗಳೂರಿನಿಂದ ೬೫೧ ಕಿ.ಮೀ. ದೂರದಲ್ಲಿದ್ದು, ಗಾಣಗಾಪುರ ರೈಲ್ವೆ ನಿಲ್ದಾಣದಿಂದಲೂ ಹೋಗಬಹುದು. ಶ್ರೀ.ನರಸಿಂಹ ಸರಸ್ವತಿಯವರು ಇಲ್ಲಿ ಬಹಳ ಕಾಲ ನೆಲೆಸಿದ್ದರು. ಈ ಸಂತರು ಸುಲ್ತಾನನ ಗುಣಪಡಿಸಲಾರದ ಯಾವುದೋ ವ್ಯಾಧಿಯನ್ನು ಗುಣಪಡಿಸಿದ್ದರಿಂದ ಬಹಮನಿ ಸುಲ್ತಾನನು ಇವರಿಗೆ ಜಹಗೀರನ್ನು ನೀಡಿದ್ದನು. ಇವರನ್ನು ದತ್ತಾತ್ರೇಯನ ಅವತಾರವೆಂದು ಭಕ್ತರು ನಂಬಿದ್ದು, ಪ್ರತಿದಿನ ಅಪಾರ ಸಂಖ್ಯೆಯಲ್ಲಿ ಭಕ್ತರು ಮಹಾರಾಷ್ಟ್ರ ಹಾಗೂ ಕರ್ನಾಟಕದ ವಿವಿಧೆಡೆಗಳಿಂದ ಇಲ್ಲಿಗೆ ಬರುತ್ತಾರೆ.

**ದೊಡ್ಡಗದ್ದವಳ್ಳಿ:** ಇದು ಹಾಸನದಿಂದ ೧೪ ಕಿ.ಮೀ. ದೂರದಲ್ಲಿರುವ ಚಾರಿತ್ರಿಕ ಮಹತ್ವದ ಸ್ಥಳವಾಗಿದ್ದು, ಇಲ್ಲಿರುವ ಲಕ್ಷ್ಮೀ ದೇವಸ್ಥಾನದಿಂದಾಗಿ ಪ್ರಸಿದ್ಧವಾಗಿದೆ. ೧೧೧೪ರಲ್ಲಿ ಕಲ್ಹಣ ರಾಹುತ ಎಂಬ ವ್ಯಾಪಾರಿಯಿಂದ ಕಟ್ಟಿಸಲ್ಪಟ್ಟ ಈ ದೇವಾಲಯವು ಹೊಯ್ಸಳ ಶೈಲಿಯಲ್ಲಿದ್ದು ಐದು ಗರ್ಭಗೃಹಗಳನ್ನು ಹೊಂದಿದ್ದು, ಆರಂಭಿಕ ಶೈಲಿಯ ದೇವಾಲಯಗಳಲ್ಲಿ ಪ್ರಮುಖದ್ದಾಗಿದೆ. ಇದನ್ನು ದಕ್ಷಿಣದ ಕೊಲ್ಲಾಪುರ ಎಂದೂ ಕರೆಯಲಾಗುತ್ತದೆ. ಇಲ್ಲಿರುವ ಲಕ್ಷ್ಮೀಯು ಶಾಕ್ತ ಲಕ್ಷ್ಮಿಯನ್ನು ಪ್ರತಿನಿಧಿಸುತ್ತಾಳೆ. ಭೈರವ ಹಾಗು ಇತರ ದೇವಾನು ದೇವತೆಗಳನ್ನು ಇಲ್ಲಿ ಪೂಜಿಸಲಾಗುತ್ತದೆ.

**ಧರ್ಮಸ್ಥಳ:** ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲೂಕಿನಲ್ಲಿರುವ ಇದೊಂದು ಪ್ರಸಿದ್ಧ ಶೈವ ಕೇಂದ್ರವಾಗಿದ್ದು, ಇಲ್ಲಿರುವ ಕುಡುಮ ಮಂಜುನಾಥನನ್ನು (ಶಿವ) ಶಿವಳ್ಳಿಯ ಮಾಧ್ವವೈಷ್ಣವ ಅರ್ಚಕರು ಪೂಜೆ ಮಾಡುತ್ತಾರೆ. ಈ ದೇವಾಲಯದಲ್ಲಿ ಕಾರಣಾಂತರಗಳಿಂದ ಸ್ವಲ್ಪ ಕಾಲ ಪೂಜೆಯು ಸ್ಥಗಿತಗೊಂಡಿದ್ದಾಗ ಸೋದೆಯ ವಾದಿರಾಜತೀರ್ಥರು ಇಲ್ಲಿ ಪೂಜಾ ಕೈಂಕರ್ಯಗಳು ಅವಿರತವಾಗಿ ನಡೆಯುವಂತೆ ಮಾಡಿದರೆಂಬ ಸ್ಥಳೀಯ ನಂಬಿಕೆಯಿದೆ. ಈ ದೇವಾಲಯದ ಆಡಳಿತ ವರ್ಗ ಅಥವಾ ಧರ್ಮದರ್ಶಿಗಳು ಜೈನರಾಗಿದ್ದಾರೆ, ಹಾಗಾಗಿ ಇದೊಂದು ಸರ್ವಧರ್ಮ ಸಮನ್ವಯ ಕ್ಷೇತ್ರವೆಂದು ಜನಪ್ರಿಯವಾಗಿದೆ. ಈ ದೇವಾಲಯದಲ್ಲಿ ಭೂತಗಳನ್ನು (ಸತ್ತವರನ್ನು ದೈವೀಕರಿಸಿ) ಶಿವನ ಗಣಗಳನ್ನಾಗಿ ಪೂಜಿಸುತ್ತಾರೆ. ಇದು ಮಂಗಳೂರಿನಿಂದ ೭೫ ಕಿ.ಮೀ ದೂರದಲ್ಲಿದ್ದು, ಸುತ್ತಲೂ ಹಸಿರು ಗುಡ್ಡಗಳಿವೆ. ಈ ದೇವಾಲಯದಲ್ಲಿ ಮುಖ್ಯವಾಗಿ ಮಂಜುನಾಥನ ಲಿಂಗ ಹಾಗೂ ದೇವಿ ಇದ್ದಾರೆ. ಇದಲ್ಲದೇ ಇಲ್ಲಿ ಚಂದ್ರನಾಥ ಬಸದಿ ಹಾಗೂ ೧೧.೯ ಮೀಟರ್ ಎತ್ತರದ, ೧೯೮೨ರಲ್ಲಿ ಪ್ರತಿಸ್ಥಾಪಿಸಿರುವ ಗೊಮ್ಮಟ ವಿಗ್ರಹವಿದೆ. ಇಲ್ಲಿರುವ 'ಮಂಜೂಷ' ವಸ್ತುಸಂಗ್ರಹಾಲಯ ವಿಶಿಷ್ಟವಾಗಿದ್ದು ಹಲವಾರು ಪ್ರಾಚೀನ ಹಾಗೂ ಸಮಕಾಲೀನ ಅವಶೇಷಗಳನ್ನು ಪ್ರದರ್ಶನಕ್ಕಿಡಲಾಗಿದೆ. ಇದೇ ರೀತಿ ಕಾರು ವಸ್ತುಸಂಗ್ರಹಾಲಯದಲ್ಲಿ ದೇಶವಿದೇಶಗಳ ವಿಶಿಷ್ಟವಾದ ಹಳೆಯ ಕಾರುಗಳನ್ನು(vintage cars) ಪ್ರದರ್ಶಿಸಿರುವುದು ಉಲ್ಲೇಖಾರ್ಹ. ಇಲ್ಲಿಗೆ ಕರ್ನಾಟಕದ ಎಲ್ಲಾ ಭಾಗಗಳಿಂದಲೂ ಬಸ್ಸುಗಳಿದ್ದು, ತಂಗಲು ಧರ್ಮಛತ್ರಗಳಿವೆ. ಇಲ್ಲಿಗೆ ಬರುವ ಭಕ್ತರಿಗೆ ಜಾತಿ-ಮತ ಬೇಧಗಳಿಲ್ಲದೇ ಊಟವನ್ನು ಒದಗಿಸಲಾಗುತ್ತದೆ. ದೇವಸ್ಥಾನದ ಆಡಳಿತವರ್ಗ ಅನೇಕ ವಿದ್ಯಾಕೇಂದ್ರಗಳನ್ನು ನಡೆಸುತ್ತಿದ್ದು ಧರ್ಮಸ್ಥಳವು ಧಾರ್ಮಿಕ, ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಕೇಂದ್ರವಾಗಿ ಜನಪ್ರಿಯವಾಗಿದೆ.

**ಧಾರವಾಡ:** ಇದು ಪುಣೆ-ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿರುವ ಜಿಲ್ಲಾ ಕೇಂದ್ರವಾಗಿದ್ದು, ಬೆಂಗಳೂರಿನಿಂದ ೪೩೭ ಕಿ.ಮೀ ದೂರದಲ್ಲಿದೆ. ಇದನ್ನು ಉತ್ತರಕರ್ನಾಟಕದ ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಕೇಂದ್ರವೆಂದು ಕರೆಯಲಾಗುತ್ತದೆ. ಕರ್ನಾಟಕ ಏಕೀಕರಣ ಹೋರಾಟದ ಪಿತಾಮಹರಾದ ಆಲೂರು ವೆಂಕಟರಾವ್ ಅವರು ಇಲ್ಲಿಯವರಾಗಿದ್ದರು. ಅದಲ್ಲದೇ ಪ್ರಸಿದ್ಧ ವರಕವಿ ದತ್ತಾತ್ರೇಯ ರಾಮಚಂದ್ರ ಬೇಂದ್ರೆ ಹಾಗೂ ಹಿಂದೂಸ್ಥಾನಿ ಗಾಯಕ ಮಲ್ಲಿಕಾರ್ಜುನ ಮನ್ಸೂರ್ ಅವರು ಇಲ್ಲಿಯವರು. ಈಗ ಹುಬ್ಬಳ್ಳಿ-ಧಾರವಾಡ ಕಾರ್ಪೋರೇಶನ್ ಭಾಗವಾಗಿರುವ ಧಾರವಾಡ, ೧೮೧೮ರಲ್ಲಿ ಮರಾಠರಿಂದ ಬ್ರಿಟೀಷರ ನಿಯಂತ್ರಣಕ್ಕೆ ಬಂದಮೇಲೆ ಜಿಲ್ಲಾ ಕೇಂದ್ರವಾಯಿತು. ಇಲ್ಲಿರುವ ೧೮೪೮ರಲ್ಲಿ ಸ್ಥಾಪಿತವಾದ ಇಂಗ್ಲೀಷ್ ಶಾಲೆ, ೧೮೬೮ ರಲ್ಲಿ ಸ್ಥಾಪಿಸಲಾದ ಬಾಸೆಲ್ ಮಿಶನ್ ಶಾಲೆ, ೧೮೬೭ರಲ್ಲಿ ಸ್ಥಾಪಿತವಾದ ತರಬೇತಿ ಕಾಲೇಜುಗಳಿಂದಾಗಿ ಇದು ವಿದ್ಯಾಕೇಂದ್ರವಾಗಿ ಬೆಳೆಯಿತು. ಈ ತರಬೇತಿ ಕಾಲೇಜು ಮುಂದೆ ಕನ್ನಡ ಚಳವಳಿಯ ಕೇಂದ್ರವಾಯಿತು. ಕರ್ನಾಟಕ ವಿದ್ಯಾವರ್ಧಕ ಸಂಘ (೧೮೯೦)ವು ಕನ್ನಡ ಪುನರುತ್ಥಾನದ ಬೀಜವನ್ನು ಬಿತ್ತಿತು. ಕಲ್ಯಾಣ ಚಾಳುಕ್ಯರ ಕ್ರಿ.ಶ.೧೨ನೇ ಶತಮಾನದ ಶಾಸನದಲ್ಲಿ 'ಧಾರವಾಡ' ಎಂದು ಕರೆಯಲ್ಪಟ್ಟಿರುವ ಈ ಸ್ಥಳವು, ಸೇವುಣರು, ವಿಜಯನಗರ ಅರಸರು, ವಿಜಾಪುರ ಅರಸರು, ಮುಘಲರು, ಮರಾಠರು, ಹೈದರಾಲಿ, ಟಿಪ್ಪು, ಮುಂತಾದವರ ಆಡಳಿತಕ್ಕೆ ಒಳಪಟ್ಟಿತ್ತು. ವಿಜಯನಗರ ಅರಸರು ಇಲ್ಲಿ ಕೋಟೆಯನ್ನು ಕಟ್ಟಿಸಿದ್ದರು. ಅದನ್ನು ವಿಜಯಪುರದ ಅರಸರು ಬಲಪಡಿಸಿದರು. ಆಗ ಕೋಟೆಯ ಕಲ್ಲಿನ ದ್ವಾರವಷ್ಟೇ ಉಳಿದಿದೆ. ಇಲ್ಲಿರುವ ದುರ್ಗಾದೇವಿ ದೇವಾಲಯವನ್ನು ಪುನರ್ ನಿರ್ಮಾಣ ಮಾಡಲಾಗಿದೆ. ಕಲಘಟಗಿ ರಸ್ತೆಯಲ್ಲಿರುವ ಸೋಮೇಶ್ವರದಲ್ಲಿ ಕಲ್ಯಾಣ ಚಾಳುಕ್ಯರ ಕಾಲದ ದೇವಾಲಯ ಹಾಗೂ ಕೆರೆಗಳಿವೆ. ವಿದ್ಯಾಗಿರಿಯಲ್ಲಿರುವ ಮೈಲಾರಲಿಂಗ ದೇವಾಲಯವು ಕಲ್ಯಾಣದ ಚಾಳುಕ್ಯರ ಕಾಲಕ್ಕೆ ಸೇರಿದ್ದಾಗಿದ್ದು, ಇದನ್ನು ವಿಜಾಪುರದ ಸೈನ್ಯವು ಮಸೀದಿಯನ್ನಾಗಿ ಪರಿವರ್ತಿಸಿದ್ದು.

ನಂತರ ಪೇಶ್ವಾಗಳ ಕಾಲದಲ್ಲಿ ಪುನಃ ದೇವಾಲಯವಾಗಿ ಮಾಡಲಾಯಿತೆಂದು ಹೇಳಲಾಗುತ್ತದೆ. ಇವಲ್ಲದೇ ಇಲ್ಲಿ ವೆಂಕಟರಮಣ, ನಂದಿಕೋಲು ಬಸವಣ್ಣ, ದತ್ತಾತ್ರೇಯ, ಉಳವಿ ಬಸವಣ್ಣ, ಮುಂತಾದ ದೇವಾಲಯಗಳಿವೆ. ಮುರುಘಾ ಮಠವು ಧಾರ್ಮಿಕ ಕಾರ್ಯಗಳ ಕೇಂದ್ರವಾಗಿದೆ. ಇಲ್ಲಿರುವ ಸಂಸ್ಕೃತ ಕಾಲೇಜು ಇಲ್ಲಿಯ ಸುಮಾರು ೧೯ನೇ ಶತಮಾನಕ್ಕೆ ಸೇರಿದ ನಾಲ್ಕು ಅಂತಸ್ತಿನ ಕಟ್ಟಡವಾಗಿದೆ. ಇಲ್ಲಿರುವ ಕರ್ನಾಟಕ ವಿಶ್ವವಿದ್ಯಾಲಯ (೧೯೪೯), ಕೃಷಿ ವಿಶ್ವವಿದ್ಯಾಲಯ (೧೯೮೬) ಹಾಗೂ ಆಕಾಶವಾಣಿ ಕೇಂದ್ರಗಳು ಶೈಕ್ಷಣಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ಧಾರವಾಡವು ಇನ್ನಷ್ಟು ಮಹತ್ವಪಡೆಯಲು ಸಹಾಯ ಮಾಡಿದವು. ಸ್ವಾತಂತ್ರ್ಯ ಸಂಗ್ರಾಮ ಹಾಗೂ ಏಕೀಕರಣ ಚಳವಳಿಯಲ್ಲೂ ಧಾರವಾಡವು ಪ್ರಮುಖ ಭೂಮಿಕೆಯನ್ನು ಒದಗಿಸಿತ್ತು. ೧೯೨೧ ರಲ್ಲಿ ನಡೆದ ಧಾರವಾಡ ಫೈರಿಂಗ್‌ನಲ್ಲಿ ಮೂವರು ಖಿಲಾಫತ್ ಕಾರ್ಯಕರ್ತರು ಮಡಿದ ಬಳಿಕ ದೇಶದಾದ್ಯಂತ ಗಲಭೆ ಉಂಟಾಗಿತ್ತು. ಧಾರವಾಡದಲ್ಲಿ ಬ್ಯಾಸೆಲ್ ಮಿಶನ್ ಹಾಗೂ ಕ್ಯಾಥೋಲಿಕರ ಚರ್ಚುಗಳಿವೆ. ಇಂದು ಶೈಕ್ಷಣಿಕ ಕೇಂದ್ರವಾಗಿ ಪ್ರಾಮುಖ್ಯತೆ ಪಡೆದಿರುವ ಇದು ಹುಬ್ಬಳ್ಳಿ-ಧಾರವಾಡ ಅವಳಿ ನಗರವೆಂದೇ ಚಿತಪರಿಚಿತವಾಗಿದೆ.

**ನಂಜನಗೂಡು:** ಮೈಸೂರು ಜಿಲ್ಲೆಯಲ್ಲಿರುವ ತಾಲೂಕು ಕೇಂದ್ರ, ನಂಜನಗೂಡು ಮೈಸೂರಿನಿಂದ ೨೦ ಕಿ.ಮೀ ದೂರದಲ್ಲಿದೆ. ಕಪಿಲಾ ನದಿಯ ದಂಡೆಯಲ್ಲಿರುವ ಇದು ಸುಮಾರು ೧೦೦೦ ವರ್ಷ ಹಳೆಯದಾದ ನಂಜುಂಡೇಶ್ವರ ದೇವಾಲಯದಿಂದಾಗಿ ಪ್ರಸಿದ್ಧವಾಗಿದೆ. ಇದು ಹೊರ ಪ್ರಾಕಾರದಿಂದ ಸುತ್ತುವರಿಯಲ್ಪಟ್ಟ ನಂಜುಂಡೇಶ್ವರ ಮತ್ತು ಪಾರ್ವತಿ ದೇವಾಲಯಗಳನ್ನು ಹೊಂದಿದ್ದು, ಪ್ರಾಕಾರದ ಮೇಲ್ತುದಿಯ ಹಾರದಮೇಲೆ ದೇವಾನು ದೇವತೆಗಳ ಬಹು ಸುಂದರವಾದ ಗಾರೆಯ ಶಿಲ್ಪಸಾಲುಗಳಿವೆ. ಹೈದರಾಲಿಯ ಆನೆಗೆ ಚರ್ಮರೋಗ ಬಂದಿದ್ದಾಗ ನಂಜುಂಡೇಶ್ವರನ ದೇವಾಲಯದ ತೀರ್ಥ ಪ್ರೋಕ್ಷಣೆಯಿಂದ ನಿವಾರಣೆಯಾಯಿತೆಂದು ನಂಬಲಾಗುತ್ತದೆ. ಈ ಕಾರಣ ಆತನು ನಂಜುಂಡೇಶ್ವರನನ್ನು 'ಫಕೀರ್ (ಹಕಿಮ್) ನಂಜುಂಡ' ಎಂದು ಕರೆದು ಅತ್ಯಂತ ಅಮೂಲ್ಯವಾದ ಹಸಿರು ಪಚ್ಚೆಕಲ್ಲಿನ ಆಭರಣವನ್ನು ದಾನವಾಗಿ ನೀಡಿದನೆಂದು ಪ್ರತೀತಿ ಇದೆ. ಇಲ್ಲಿರುವ ರಾಘವೇಂದ್ರ ಸ್ವಾಮಿ ಮಠವು ಪುರಾತನದ್ದಾಗಿದ್ದು ಅಲ್ಲಿ ಬೃಂದಾವನಕ್ಕೆ ಬದಲಾಗಿ ರಾಘವೇಂದ್ರ ಸ್ವಾಮಿಗಳ ಪ್ರತಿಮೆಗೆ ಪೂಜೆ ಸಲ್ಲಿಸಲಾಗುತ್ತದೆ. ಈ ಮೂಲ ಪ್ರತಿಮೆಯು ಶ್ರೀರಂಗಪಟ್ಟಣದ ಕಾವೇರಿ ನದಿಯಲ್ಲಿ ಮುಮ್ಮಡಿಕೃಷ್ಣರಾಜರ ಕಾಲದಲ್ಲಿ ದೊರೆತ ಕಾರಣ ಇದನ್ನು ಪ್ರತಿಕಾ ಸಂಸ್ಥಾನವೆಂದು ಕರೆದು ರಾಘವೇಂದ್ರ ಮಠದಲ್ಲಿ ಪ್ರತಿಷ್ಠಾಪಿಸಲಾಗಿದೆ ಎಂದು ಸ್ಥಳೀಯವಾಗಿ ಹೇಳಲಾಗುತ್ತದೆ. ಈ ಮಠಕ್ಕೆ ಸೇರಿದ ಪರಿಮಳ ಸಂಶೋಧನಾ ಕೇಂದ್ರವು (೧೯೫೬) ದ್ವೈತ ವೇದಾಂತಕ್ಕೆ ಸಂಬಂಧಿಸಿದ ಪಾಂಡಿತ್ಯ ಪೂರ್ಣ ಗ್ರಂಥಗಳ ಪ್ರಕಟಣೆ ಹಾಗೂ ಪ್ರಾಚೀನ ತಾಳೆಗರಿ ಗ್ರಂಥಗಳ ಸಂಗ್ರಹಣೆ ಹಾಗೂ ಪ್ರಕಟಣೆಯಲ್ಲಿ ತೊಡಗಿದೆ. ರಾಜಾ ಎಸ್. ಗುರುರಾಜಾಚಾರ್ಯರು ಈ ಸಂಶೋಧನಾ ಮಂಡಳಿಯ ಪ್ರಮುಖ ಪ್ರವರ್ತಕರು. ಸುತ್ತೂರು ಮಠ ಹಾಗೂ ಮಂಟೆಸ್ವಾಮಿ ಸಂಪ್ರದಾಯದ ಸಿದ್ಧಪ್ಪಾಜಿಯ ಗುಡಿಗಳು ಈ ಊರಿನಲ್ಲಿವೆ.

**ನಾಗಮಂಗಲ:** ತಾಲೂಕು ಕೇಂದ್ರವಾದ ಇದು ಮಂಡ್ಯದಿಂದ ೩೦ಕಿ.ಮೀ. ಪಶ್ಚಿಮಕ್ಕಿದೆ. ಪ್ರಾಚೀನ ಶಾಸನಗಳಲ್ಲೂ 'ನಾಗಮಂಗಲ''(ನಾಗವಂಗಲ ಕ್ರಿ.ಶ.೧೧೩೪)) ಎಂದೇ ಉಲ್ಲೇಖಿತಗೊಂಡಿದ್ದು, ತಲಕಾಡಿನ ಗಂಗರ ಕಾಲದಷ್ಟು ಪ್ರಾಚೀನ ನೆಲೆಯಾಗಿದೆ. ಅನಾದಿ ಅಗ್ರಹಾರ ವೀರಬಲ್ಲಾಳ ಚತುರ್ವೇದಿ ಭಟ್ಟರತ್ನಾಕರ ಎಂಬ ಅಭಿದಾನವನ್ನೂ ಹೊಂದಿದ್ದ ಇದಕ್ಕೆ ಫಣಿಪುರ, ಮಣಿಪುರ, ನಾಗಪುರ, ನಾಗಮಂಡಲ ಎಂಬ ಹೆಸರುಗಳೂ ಇದ್ದು, ಬಭ್ರುವಾಹನನ ಮಣಿಪುರ ಇದೆಂಬ ಐತಿಹ್ಯವೂ ಇದೆ. ಹಿಂದೆ ಎರಡು ಸುತ್ತಿನ ಕೋಟೆ ಹಾಗೂ ಅರಮನೆ ಇದ್ದುದ್ದಕ್ಕೆ ಕುರುಹುಗಳು ಅಲ್ಲಲ್ಲಿ ಈಗಲೂ ಉಳಿದಿವೆ. ಇಲ್ಲಿಯ ಭುವನೇಶ್ವರ ದೇವಾಲಯವು ಅತ್ಯಂತ ಪ್ರಾಚೀನದ್ದಾಗಿದ್ದು, ಗರ್ಭಗೃಹ, ಅಂತರಾಳ ಹಾಗೂ ನವರಂಗಗಳನ್ನು ಹೊಂದಿದ್ದು, ಮರು ಜೀರ್ಣೋದ್ಧಾರಗೊಂಡಿದೆ. ಇಲ್ಲಿಯ ಸೌಮ್ಯಕೇಶವ (ಶಾಸನೋಕ್ತ ಚನ್ನಕೇಶವ) ಗುಡಿಯು ಹೊಯ್ಸಳರ ಕಾಲದ್ದಾಗಿದ್ದು ಮೂಲತ: ಪ್ರಧಾನ ಗರ್ಭಗೃಹ, ಅಂತರಾಳ ಮತ್ತು ನವರಂಗದ ಉತ್ತರ ದಕ್ಷಿಣಗಳಲ್ಲಿ ಒಂದೊಂದಂಕಣದ ಗರ್ಭಗೃಹ ಹಾಗೂ ನವರಂಗದ ಮುಂಭಾಗದಲ್ಲಿ ಅರ್ಧಮಂಟಪವನ್ನು ಹೊಂದಿದ್ದು, ನಂತರದಲ್ಲಿ ನವರಂಗಕ್ಕೆ ಮೂರು ಅಂಕಣದ ಮುಖಮಂಟಪವನ್ನೂ ಸೇರಿಸಲಾಗಿದ್ದು, ಜಗತಿ ಇದೆ. ವಿಜಯನಗರ ಕಾಲದಲ್ಲಿ ಪಾತಾಳಾಂಕಣ, ಪ್ರಾಕಾರಕ್ಕೆ ಹೊಂದಿಕೊಂಡಂತಿರುವ ಸುತ್ತಾಲಯ ಮಂಟಪ, ಮಹಾದ್ವಾರಗೋಪುರ, ಬಲಕ್ಕಿರುವ ಎರಡಂಕಣದ ಕೈಸಾಲೆ ಮಂಟಪ ಮತ್ತು ಎದುರಿಗಿರುವ ೫೫ ಅಡಿ ಎತ್ತರದ ಗರುಡಗಂಬಗಳನ್ನು ಸೇರಿಸುವ ಮೂಲಕ ದೇವಾಲಯವನ್ನು ಗಣನೀಯ ಪ್ರಮಾಣದಲ್ಲಿ ವಿಸ್ತರಿಸಲಾಗಿದೆ. ಶಿಲ್ಪದ ಮುಖದಲ್ಲಿಯ ಶಾಂತಿ, ಕಾಂತಿ ಮಂದಹಾಸಗಳಿಂದಾಗಿ ಅದನ್ನು ಸೌಮ್ಯಕೇಶವನೆಂದೂ ಕರೆಯುತ್ತಾರೆ. ನವರಂಗದ ದಕ್ಷಿಣ ಹಾಗೂ ಉತ್ತರ ಗರ್ಭಗೃಹಗಳಲ್ಲಿರುವ ಆಳೆತ್ತರದ ವೇಣುಗೋಪಾಲ ಹಾಗೂ ಲಕ್ಷ್ಮೀನರಸಿಂಹನ ಸುಂದರ ಶಿಲ್ಪಗಳು ವಿಜಯನಗರ ಕಾಲದ ಲಕ್ಷಣವನ್ನು ಹೊಂದಿದ್ದು, ಬಾಗಿಲಲ್ಲಿ ದ್ವಾರಪಾಲಕರಿದ್ದಾರೆ.

ಈ ದೇವಾಲಯದ ಪಶ್ಚಿಮಕ್ಕೆ ೧೦೦ ಗಜ ಅಂತರದಲ್ಲಿರುವ ಯೋಗಾನರಸಿಂಹನ ದೇವಾಲಯವು ಸುಮಾರು ೧೩ನೆಯ ಶತಮಾನದ ಮಧ್ಯಭಾಗದ ರಚನೆಯಾಗಿದ್ದು, ಗರ್ಭಗೃಹ, ಪ್ರದಕ್ಷಿಣಾಪಥ, ಅಂತರಾಳ, ನವರಂಗ, ಮುಖಮಂಟಪ, ಪಾತಾಳಾಂಕಣ, ಒಳ ಕೈಸಾಲೆಮಂಟಪವಿರುವ ಪ್ರಾಕಾರ ಹಾಗೂ ಮಹಾದ್ವಾರಗಳನ್ನು ಹೊಂದಿದೆ. ಗರ್ಭಗೃಹದಲ್ಲಿ ಯೋಗಾನರಸಿಂಹ, ನವರಂಗದಲ್ಲಿ ಆದಿಶೇಷ ಮತ್ತು ವಿಶ್ವಕಸೇನ ಶಿಲ್ಪಗಳಿವೆ. ಆದಿಶೇಷನ ಶಿಲ್ಪದ ಬಳಿಯಿರುವ ಪೊಟರೆಯು ಅನಂತತೀರ್ಥ ನಾಗರಾಜನ ವಾಸಸ್ಥಾನವಾಗಿದ್ದು, ಹಿಂದೆ ಅಲ್ಲಿದ್ದ ಹಂಗರ ಮರದ ೪೦ ಅಡಿ ಉದ್ದದ ಖಾಂಡವಿಂದು ಪ್ರಾಕಾರದಲ್ಲಿದ್ದು, ನರಸಿಂಹನ ಪ್ರಾಚೀನ ಶಿಲ್ಪವಿದ್ದ ಸ್ಥಳ ಇದೆಂಬ ಅಭಿಪ್ರಾಯವಿದೆ.

ದ್ರಾವಿಡ ಶೈಲಿಯ ವೀರಭದ್ರನ ಗುಡಿಯು ವಿಜಯನಗರ ಕಾಲದ್ದಾಗಿದ್ದು, ಗರ್ಭಗೃಹದಲ್ಲಿ ವೀರಭದ್ರನ ಕಿರುಮೂರ್ತಿ ಮತ್ತು ದಕ್ಷಿಣಾಮೂರ್ತಿಯ ಲೋಹದ ಶಿಲ್ಪಗಳಿವೆ. ಎಡಭಾಗದ ಪ್ರತ್ಯೇಕ ಗರ್ಭಗೃಹದಲ್ಲಿ ಭದ್ರಕಾಳಿಯ ಶಿಲ್ಪವಿದೆ. ಕಳೆದ ಶತಮಾನದ ಆರಂಭದಲ್ಲಿ ಜೀರ್ಣೋದ್ಧಾರಗೊಂಡಿರುವ ಶ್ರೀರಾಮಮಂದಿರದಲ್ಲಿ ರಾಮ, ಲಕ್ಷ್ಮಣ, ಸೀತೆಯರ ಸುಂದರ ಶಿಲ್ಪಗಳಿವೆ. ಗ್ರಾಮದೇವತೆ ಬಡಗೋಡಮ್ಮನ ಗುಡಿಯು ಹಿರಿಕೆರೆಯ ಉತ್ತರ ಕೋಡಿಯ ಬಳಿಯಿದ್ದು, ಅದರಿಂದಾಗಿ ಆ ಹೆಸರು ಬಂದಿದೆ. ಈ ದೇವಿಯ ಉತ್ಸವ ಮೂರ್ತಿಯು ಅರಸಮ್ಮನ ಗುಡಿಯಲ್ಲಿದ್ದು, ಅಲ್ಲೇ ಇರುವ ಸುಮಾರು ೧೬ನೆಯ ಶತಮಾನದ ಶಾಸನವು, ಅಂಕುಶರಾಯನು ವೀರಾಂಬುಧಿಯೂರಾದ ನಾಗಮಂಗಲದಲ್ಲಿ ಸಿಂಗಾರಿಕೆರೆಯನ್ನು ನಿರ್ಮಿಸಿದ್ದನ್ನು ದಾಖಲಿಸುತ್ತದೆ. ಪಟ್ಟಣದ ಒಳಕೋಟೆಯ ದಿಡ್ಡಿಬಾಗಿಲ ಬಳಿಯಿರುವ, ಅಕ್ಕಸಾಲಿಗರಿಂದ ಆರಾಧಿಸಲ್ಪಡುವ ಕಾಳಮ್ಮ-ಕಮ್ಮಟೇಶ್ವರ ಗುಡಿಯು ದ್ರಾವಿಡ ಶೈಲಿಯಲ್ಲಿದ್ದು, ಬೃಹತ್ ಗೋಪುರವನ್ನು ಹೊಂದಿದೆ. ನಾಗಮಂಗಲದ ಛಲವಾದಿಗಳ ಬಳಿ ಇರುವ 'ದೇಶಿಸ್' ಸೌಟಿನ (ಛಲವಾದಿ ಗಂಟೆ ಬಟ್ಟಲು) ಮೇಲೆ ಹದಿನೆಂಟು ಜಾತಿಯವರ ವೃತ್ತಿ ಚಿಹ್ನೆಗಳಿದ್ದು, ಆ ಬಟ್ಟಲನ್ನು ಉಪಯೋಗಿಸಿ ಧಾನ್ಯದ ರಾಶಿಯಿಂದ ಪಡಿ ತೆಗೆಯುವ ಹಕ್ಕು (ಛಲವಾದಿ ಸಂಪ್ರದಾಯ) ಹಿಂದೆ ಇತ್ತೆಂದು ತಿಳಿದು ಬರುತ್ತದೆ. ಊರಾಚೆ ಸುಮಾರು ೬೦ ಅಡಿ ವ್ಯಾಸ, ಮೂರ್‍ನಾಲ್ಕಡಿ ಆಳದ ಚಕ್ರಕೊಳದ ನಡುವಿರುವ ಕಲ್ಲಿನ ಮಂಟಪವನ್ನು ಚನ್ನಪಟ್ಟಣದ ಪಾಳೇಗಾರ ಜಗದೇವರಾಯನ ಸೋದರ ಅಂಕುಶರಾಯನು ಜಲಕ್ರೀಡೆಗಾಗಿ ಕಟ್ಟಿಸಿದ್ದು, ಅವನ ಪ್ರೇಯಸಿಯಾದ ತರಂಗಿಣಿಯನ್ನು ಜಲಕ್ರೀಡೆ ಸಮಯದಲ್ಲಿ ಇಲ್ಲಿ ಕೊಲ್ಲಲಾಯಿತೆಂಬ ಸ್ಥಳೀಯ ಅಭಿಪ್ರಾಯವಿದೆ. ಅಂಕುಶರಾಯನು ಕಟ್ಟಿಸಿದ ಸೂಳೆಕೆರೆ, ಸೂಳೆಮಂಟಪ ಮತ್ತು ಕೆರೆಗೆ ಹಾರವಾದ

ಅವನ ಸೂಳೆಯ ತ್ಯಾಗ ಜನಪದ ಕಥೆಯಾಗಿದೆ. ಉಳಿದಂತೆ ಊರಲ್ಲಿ ನಗರೇಶ್ವರ, ಕನ್ನಿಕಾ ಪರಮೇಶ್ವರಿ, ಆಂಜನೇಯ ಮುಂತಾದ ನವೀನ ಗುಡಿಗಳದ್ದು, ಮಸೀದಿ ಹಾಗೂ ದರ್ಗಾ ಕೂಡ ಇವೆ. ಹಿಂದಿನಿಂದಲೂ ನಾಗಮಂಗಲ ಪಂಚಲೋಹದ ಕಲಾಕುಸುರಿ ಕೆಲಸಕ್ಕೆ ಹೆಸರಾಗಿದೆ.

**ನರಸಮಂಗಲ:** ಜಿಲ್ಲಾ ಕೇಂದ್ರ ಚಾಮರಾಜನಗರದಿಂದ ೨೪ ಕಿ.ಮೀ ದೂರದಲ್ಲಿ ಸ್ವಲ್ಪ ಒಳಗಾದಂತಿರುವ ನರಸಮಂಗಲವು ಕಸಬಾ ತಾಲೂಕಿನಲ್ಲಿದ್ದು, ಅಮಚವಾಡಿ ಮಾರ್ಗವಾಗಿ ಇದನ್ನು ತಲುಪಬಹುದು. ವೇದಾಧ್ಯಯನ ಮಾಡುತ್ತಿದ್ದ ಅಗ್ರಹಾರದ ಪಂಡಿತರು ನೆಲೆಸಿದ್ದ ಕಾರಣ ನರಸಿಂಹಮಂಗಲವು ಎಂಬ ಅಗ್ರಹಾರವಾಗಿತ್ತೆಂದು ಶಾಸನಗಳಿಂದ ವ್ಯಕ್ತವಾಗುತ್ತದೆ. ಇದನ್ನು ಪ್ರಾಯಶಃ ಗಂಗ ನರಸಿಂಹನು (ಕ್ರಿ.ಶ.೯೨೧-೩೩) ಸ್ಥಾಪಿಸಿದನೆಂದು ತೋರುತ್ತದೆ. ಇಲ್ಲಿ ಗಂಗರ ಕಾಲದ ಅತ್ಯಂತ ಆಕರ್ಷಕವಾದ ವಾಸ್ತು ರಚನೆಯುಳ್ಳ ರಾಮೇಶ್ವರ ದೇವಾಲಯವಿದೆ. ಇದು ಸುಮಾರು ೯-೧೦ನೇ ಶತಮಾನದ್ದು. ಈ ಚಿಕ್ಕದೇವಾಲಯವು ಆಕರ್ಷಕ ಹಾಗೂ ಭದ್ರವಾದ ಶಿಖರವನ್ನು ಹೊಂದಿದ್ದು, ೧೦೦೦ ವರ್ಷಗಳಗೂ ಮಿಕ್ಕಿ ಮೂಲರೂಪದಲ್ಲಿ ಉಳಿದು ಬಂದಿರುವ ಗಾರೆಯ ಶಿಲ್ಪಗಳಿವೆ. ನಂದಿಯ ತಲೆಯಮೇಲೆ ನಿಂತಿರುವ ಶಿವ ತಾಂಡವೇಶ್ವರ, ಉಮಾ, ದಕ್ಷಿಣಾಮೂರ್ತಿ, ವಿಷ್ಣು, ಗರುಡ, ಉಗ್ರನರಸಿಂಹ ಮುಂತಾದ ಪ್ರಮಾಣಬದ್ಧ ಶಿಲ್ಪಗಳಿವೆ. ಗರ್ಭಗೃಹದಲ್ಲಿ ಒಂದು ಮೀಟರ್ ಎತ್ತರದ ಚೌಕಪೀಠದಲ್ಲಿ ದೊಡ್ಡ ಶಿವಲಿಂಗವಿದೆ. ದೇವಾಲಯದ ವಾಯವ್ಯ ದಿಕ್ಕಿಗೆ ಸಪ್ತಮಾತೃಕೆಯರ ಗುಡಿಯಿದೆ. ಗಂಗ ವಾಸ್ತುಶಿಲ್ಪದ ಬಗ್ಗೆ ಅಧ್ಯಯನಾ ಮಾಡುವವರು ನೋಡಲೇಬೇಕಾದ ದೇವಾಲಯವಿದು. ವಾಹನಗಳು ಹೋಗಬಹುದಾದ ರಸ್ತೆ ಇದೆಯಾದರೂ, ನಿಯತವಾಗಿ ಬಸ್ಸಿನ ಸೌಕರ್ಯವಿಲ್ಲ. ಇಲ್ಲಿ ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆಯು ಶಿಲ್ಪಗಳನ್ನು ಸಂಗ್ರಹಿಸಿಡಲು ನಿರ್ಮಿಸಿರುವ ಶೆಡ್‌ನಲ್ಲಿ ಸಪ್ತಮಾತೃಕೆಯರ ಬೃಹದಾಕಾರದ ಸುಂದರ ಬಿಡಿ ಶಿಲ್ಪಗಳಿವೆ.

**ಪಟ್ಟದಕಲ್ಲು:** ತಾಲೂಕು ಕೇಂದ್ರ ಬಾದಾಮಿಯಿಂದ ೨೨ ಕಿ.ಮೀ ಹಾಗೂ ಬೆಂಗಳೂರಿನಿಂದ ೫೧೪ ಕಿ.ಮೀ. ದೂರದಲ್ಲಿರುವ ಪಟ್ಟದಕಲ್ಲು ಬಾದಾಮಿಯ ಚಾಲುಕ್ಯರ ವಾಸ್ತುಶಿಲ್ಪಕಲೆಯು ಪೂರ್ತಿ ಅರಳಿರುವ ಸ್ಥಳ. ಇಲ್ಲಿರುವ ಉತ್ಕೃಷ್ಟ ವಿರೂಪಾಕ್ಷ (ಲೋಕೇಶ್ವರ) ಹಾಗೂ ಮಲ್ಲಿಕಾರ್ಜುನ (ತ್ರೈಲೋಕ್ಯೇಶ್ವರ) ದೇವಾಲಯಗಳನ್ನು ಇಮ್ಮಡಿ ವಿಕ್ರಮಾದಿತ್ಯನು (ಕ್ರಿ.ಶ. ೭೩೩-೪೪) ಪಲ್ಲವರ ರಾಜಧಾನಿ ಕಾಂಚಿಯನ್ನು ಮೂರು ಬಾರಿ ಗೆದ್ದುದರ ಸ್ಮರಣಾರ್ಥವಾಗಿ ಅವನ ರಾಣಿಯರು ಕಟ್ಟಿಸಿದರು. ಬಹುಸುಂದರವಾದ ಶಿಲ್ಪಗಳನ್ನು ಛತ್ತಿ ಮತ್ತು ಚೌಕ ಕಂಬಗಳ ಮೇಲೆ ಹೊಂದಿರುವ ಈ ದೇವಾಲಯಗಳು ಕೆಂಪು ಮರಳುಶಿಲೆಯಿಂದ ನಿರ್ಮಿಸಲ್ಪಟ್ಟಿವೆ. ಇಲ್ಲಿಯ ಮಣ್ಣು ಮತ್ತು ಮರಳು ಶಿಲೆಯ ಬೆಟ್ಟಗಳು ಕೆಂಪು ಬಣ್ಣದ್ದಾಗಿರುವುದರಿಂದ ಪಟ್ಟದಕಲ್ಲನ್ನು ಮೂಲತಃ 'ಕಿಸುವೊಳಲ್' (ಕೆಂಪುಪಟ್ಟಣ) ಎಂದು ಕರೆಯಲಾಗುತ್ತಿತ್ತು. ಸಂಗಮೇಶ್ವರ, (ಶಾಸನೋಕ್ತ ವಿಜಯೇಶ್ವರ) ಪಾಪನಾಥ, ಚಂದ್ರಶೇಖರ, ಜಂಬುಲಿಂಗ, ಕಾಡಸಿದ್ಧೇಶ್ವರ ಮತ್ತು ಗಳಗನಾಥ ಇಲ್ಲಿಯ ಇತರ ಪ್ರಮುಖ ದೇವಾಲಯಗಳು. ಸುಂದರ ಆನೆಯ ಶಿಲ್ಪಗಳನ್ನು ಒಳಗೊಂಡಿರುವ ರಾಷ್ಟ್ರಕೂಟರ ಕಾಲದ ಜೈನಬಸದಿಯು ಪಟ್ಟದಕಲ್ಲಿನ ಅಂಚಿನಲ್ಲಿದೆ. ಗಳಗನಾಥ ದೇವಾಲಯವು, ಭಾಗಶಃ ಜೀರ್ಣವಾಗಿದ್ದು, ರೇಖಾನಾಗರ ಶಿಖರವನ್ನು ಹೊಂದಿದೆ. ಭಾರತದಲ್ಲಿ ಒಟ್ಟು ೨೮ ಸ್ಥಳಗಳನ್ನು (೨೩ ಸಾಂಸ್ಕೃತಿಕ + ೫ ನೈಸರ್ಗಿಕ) ವಿಶ್ವ ಪರಂಪರಾ ತಾಣಗಳೆಂದು ಘೋಷಿಸಿದೆ. ಪಟ್ಟದಕಲ್ಲು ಯುನೆಸ್ಕೊದ ವಿಶ್ವಪರಂಪರಾ ನೆಲೆಗಳ ಪಟ್ಟಿಗೆ ೧೯೮೭ರಲ್ಲಿ ಸೇರಿರುವುದು ಉಲ್ಲೇಖಾರ್ಹ. ರಾಜ್ಯದ ಇನ್ನೊಂದು ವಿಶ್ವ ಪರಂಪರಾ ತಾಣ, ಹಂಪಿ (೧೯೮೬) ಆಗಿದೆ. ಪಶ್ಚಿಮಘಟ್ಟ ಶ್ರೇಣಿ ೨೦೧೨ರಲ್ಲಿ ಈ ಪಟ್ಟಿಗೆ ಸೇರಿದೆ.

**ಬನವಾಸಿ:** ಉತ್ತರಕನ್ನಡ ಜಿಲ್ಲೆಯ ಶಿರಸಿ ತಾಲೂಕಿನಲ್ಲಿರುವ ಬನವಾಸಿಯು, ಹಿಂದೆ ಕದಂಬರ ರಾಜಧಾನಿಯಾಗಿದ್ದು, ವನವಾಸಿ, ವೈಜಯಂತಿ, ಬನವಸೆ, ಎಂದು ಹಲವು ಶಾಸನಗಳಲ್ಲಿ ಉಲ್ಲೇಖಿಸಲ್ಪಟ್ಟಿದೆ. ಇದು ಒಂದು ಪುರಾತನ ರಾಜಧಾನಿ. ಅಶೋಕನು ಬೌದ್ಧ ಧರ್ಮಪ್ರಚಾರಕರನ್ನು ವನವಾಸಿ ನಾಡಿಗೆ ಕಳಿಸಿದ್ದನೆಂದು ಶ್ರೀಲಂಕಾದ ಬೌದ್ಧ ಗ್ರಂಥಗಳು ಉಲ್ಲೇಖಿಸಿವೆ. ಶಾತವಾಹನರ ಸಾಮಂತರಾದ ಚುಟುಗಳು ಇಲ್ಲಿಂದ ಆಡಳಿತ ಮಾಡುತ್ತಿದ್ದರೆಂದು ಹೇಳಲಾಗಿದೆ. ಈ ಸ್ಥಳವು ವರದಾ ನದಿಯ ದಂಡೆಯ ಮೇಲಿದ್ದು, ಇಲ್ಲಿಯ ಜಂಬಿಟ್ಟಿಗೆ ಕಲ್ಲಿನಿಂದ (laterite) ಕಟ್ಟಲ್ಪಟ್ಟ ಕೋಟೆಯ ಮೂರು ಬದಿಗಳು ನದಿಯಿಂದ ಸುತ್ತುವರೆಯಲ್ಪಟ್ಟಿದೆ. ಇತ್ತೀಚಿನ ಉತ್ಖನನದಲ್ಲಿ ಇಟ್ಟಿಗೆಯಿಂದ ಕಟ್ಟಲ್ಪಟ್ಟ ಕೆಲವು ಬೌದ್ಧರ ಕಟ್ಟಡಗಳ ಅವಶೇಷಗಳು ದೊರೆತಿವೆ. ಇಲ್ಲಿರುವ ಒಂದು ಪ್ರಾಕೃತ ಶಾಸನದ ಪ್ರಕಾರ ಚುಟು ರಾಜಪುತ್ರ ನಾಗಶ್ರೀ ಇಲ್ಲಿ ಬೌದ್ಧ ವಿಹಾರ ಹಾಗೂ ಕೆರೆಯನ್ನು ಕಟ್ಟಿಸಿ ಒಂದು ನಾಗಮೂರ್ತಿಯನ್ನೂ ಪ್ರತಿಷ್ಠಾಪಿಸಿದನೆಂದು ಹೇಳಲಾಗಿದೆ. ಇಲ್ಲಿಯ ಕದಂಬೇಶ್ವರ ಗುಡಿಯಲ್ಲಿರುವ ಶಿವಲಿಂಗ ಕದಂಬರ ಕಾಲದ್ದಾಗಿದೆ. ಇಲ್ಲಿರುವ ಅತ್ಯಂತ ಸುಂದರವಾದ ಮಧುಕೇಶ್ವರ ದೇವಾಲಯವನ್ನು ಕಲ್ಯಾಣದ ಚಾಳುಕ್ಯ, ವಿಜಯನಗರ ಹಾಗೂ ಸೋದೆ ಅರಸರ ಕಾಲದಲ್ಲಿ ಪುನಶ್ಚೇತನಗೊಳಿಸಿ ಇನ್ನೂ ವಿಸ್ತಾರಗೊಳಿಸಲಾಗಿದೆ. ಗರ್ಭಗೃಹದ ಮೇಲೆ ಕದಂಬನಾಗರ (stepped pyramid) ಶಿಖರವಿದೆ. ಈ ಮುಖ್ಯ ದೇವಾಲಯದ ಸುತ್ತ ವಿಠೋಬ, ಗಣಪತಿ, ರಾಮ ಮುಂತಾದ ದೇವರುಗಳ ಸಣ್ಣಪುಟ್ಟ ಗುಡಿಗಳಿವೆ. ಇದರ ಎಡಬದಿ ಹಾಗೂ ಬಲಬದಿಗೆ ವಿಜಯನಗರ ಕಾಲದ ಪಾರ್ವತಿ ಹಾಗು ನರಸಿಂಹ ದೇವಾಲಯಗಳಿವೆ. ಈ ದೇವಾಲಯದಲ್ಲಿ ಸೋಂದೆಯ ರಘುನಾಥನಾಯಕನು ದಾನವಾಗಿ ನೀಡಿರುವ ಅತ್ಯಂತ ಸುಂದರವಾಗಿ ಹಾಗೂ ನಾಜೂಕಾಗಿ ಕೆತ್ತನೆ ಮಾಡಿರುವ ಆಕರ್ಷಕ ಶಿಲಾಮಂಚವಿದೆ. ಶಾಸನಗಳ ಪ್ರಕಾರ ಬೌದ್ಧ ಹಾಗು ಜೈನ ಮತಗಳು ಇಲ್ಲಿ ಪ್ರಖ್ಯಾತಿಯಲ್ಲಿದ್ದವು. ಬನವಾಸಿ ಸಮೀಪದ ಗುಡ್ನಾಪುರದಲ್ಲಿ ವಿಶಾಲವಾದ ಕೆರೆ ಹಾಗೂ ಈಗ ವೀರಭದ್ರನನ್ನು ಪ್ರತಿಷ್ಠಾಪಿಸಿರುವ ಪ್ರಾಚೀನ ಜೈನ ದೇವಾಲಯವಿದೆ. ಇತ್ತೀಚೆಗೆ ಸಿಕ್ಕಿದ ಕದಂಬ ರವಿವರ್ಮನ ಗುಡ್ನಾಪುರ ಶಾಸನದಿಂದ ಇಲ್ಲಿ ಮನ್ಮಥ ದೇವಾಲಯವಿದ್ದ ಸುಳಿಹು ದೊರೆತ್ತಿದ್ದು, ಉತ್ಖನನಗಳು ಅನೇಕ ಮಹತ್ವದ ಅಂಶಗಳನ್ನು ಬೆಳಕಿಗೆ ತಂದಿವೆ.

**ಬನ್ನೂರು:** ತಾಲೂಕು ಕೇಂದ್ರ ತಿ. ನರಸೀಪುರದಿಂದ ೧೮ ಕಿ.ಮೀ ದೂರದಲ್ಲಿರುವ ಹೋಬಳಿ ಕೇಂದ್ರ ತಲಕಾಡಿನ ಗಂಗರಷ್ಟು ಪ್ರಾಚೀನ ಸ್ಥಳ, ಗಂಗ, ಚೋಳ ವಿಜಯನಗರ ಹಾಗೂ ಮೈಸೂರು ಅರಸರ ಆಡಳಿತಕ್ಕೊಳಪಟ್ಟಿದ್ದ ಸ್ಥಳ.

**ಬಸರಾಳು:** ತಾಲೂಕು ಕೇಂದ್ರ ಮಂಡ್ಯದಿಂದ ಉತ್ತರಕ್ಕೆ ನಾಗಮಂಗಲ ರಸ್ತೆಯಲ್ಲಿ ೨೪ಕಿ.ಮೀ. ದೂರದಲ್ಲಿದ್ದು, ಹೊಯ್ಸಳರ ಕಾಲದಲ್ಲಿ ಇದು 'ಬಸುರಿವಾಳ' ಅಗ್ರಹಾರ ಎಂಬ ಹೆಸರಿನಿಂದ

ಕರೆಯಲ್ಪಡುತ್ತಿತ್ತು. ಇಲ್ಲಿರುವ ಮಲ್ಲಿಕಾರ್ಜುನ ದೇವಾಲಯವನ್ನು ಹೊಯ್ಸಳ ರಾಜ ಎರಡನೇ ನರಸಿಂಹನ ಕಾಲದಲ್ಲಿ ಹರಿಹರ ದಂಡನಾಯಕನು ತನ್ನ ತಂದೆಯ ಹೆಸರಿನಲ್ಲಿ ಕಟ್ಟಿಸಿದ್ದನು. ಶಾಸನಗಳ ಪ್ರಕಾರ, ಈ ದೇವಾಲಯಕ್ಕೆ ಎರಡನೆಯ ನರಸಿಂಹ, ವೀರಸೋಮೇಶ್ವರ, ಮೂರನೆಯ ನರಸಿಂಹ ಹಾಗೂ ಪಾಳೇಗಾರ ಕೆಂಪಭೈರರಸರಿಂದ ದತ್ತಿಗಳು ದೊರೆತಿದ್ದವು.

ಮಲ್ಲಿಕಾರ್ಜುನ ದೇವಾಲಯವು ಹೊಯ್ಸಳ ಕಲೆಯ ಒಂದು ಅತ್ಯುತ್ತಮ ಉದಾಹರಣೆಯಾಗಿದೆ. ಈ ದೇವಾಲಯವನ್ನು ಒಂದು ಮೀಟರ್ ಎತ್ತರದ ನಕ್ಷತ್ರಾಕಾರದ ಜಗುಲಿಯ ಮೇಲೆ ಕಟ್ಟಲಾಗಿದೆ. ಇದು ತ್ರಿಕೂಟಾಚಲ ಕಟ್ಟಡವಾಗಿದೆ. ಪಶ್ಚಿಮಕ್ಕಿರುವ ಗರ್ಭಗೃಹದ ಎದುರಿಗೆ ಸುಖನಾಸಿ ಇದ್ದು, ಉತ್ತರ ಹಾಗೂ ದಕ್ಷಿಣದ ಗರ್ಭಗೃಹಗಳ ಎದುರಿಗೆ ಪೂರ್ವಕ್ಕೆ ಹಬ್ಬಿಕೊಂಡಿರುವ ನವರಂಗವಿದೆ. ದಕ್ಷಿಣದ ಗರ್ಭಗೃಹದ ಮುಂದೆ ವೈಷ್ಣವ ದ್ವಾರಪಾಲಕರಿದ್ದಾರೆ. ವಿಷ್ಣುವಿನ ಮೂರ್ತಿಯಿದ್ದ ಜಾಗದಲ್ಲಿ ಈಗ ಸೂರ್ಯನ ವಿಗ್ರಹವನ್ನು ಇರಿಸಲಾಗಿದೆ. ನವರಂಗದ ಜಂತಿಯ ಮಧ್ಯದಲ್ಲಿ ತಾಂಡವೇಶ್ವರ ಮತ್ತು ಅವನ ಇಬ್ಬದಿಗಳಲ್ಲಿ ದ್ವಾರಪಾಲಕರ ಉಬ್ಬುಶಿಲ್ಪಗಳವೆ. ನವರಂಗದ ಗೋಡೆಯಲ್ಲಿ ಕಲಾತ್ಮಕವಾದ ಜಾಲಂಧ್ರಗಳವೆ. ಗೋಡೆಯ ಹೊರ ಮೈಯಲ್ಲಿರುವ ಕೋಷ್ಠಗಳಲ್ಲಿ ಸರಸ್ವತಿ, ಗಣೇಶ ಹಾಗೂ ಮಹಿಷಾಸುರಮರ್ಧಿನಿಯ ಮೂರ್ತಿಗಳವೆ. ಅಧಿಷ್ಠಾನದಲ್ಲಿ ಆನೆ, ಕುದುರೆ, ಸಿಂಹ, ಪುರಾಣದ ದೃಶ್ಯ, ಮೊಸಳೆ, ಹಂಸಗಳನೆ ಮುಂತಾದ ಆರು ಸಾಲು ಅಲಂಕಾರಿಕ ಪಟ್ಟಿಗಳವೆ. ದಕ್ಷಿಣದ ದ್ವಾರದಲ್ಲಿ ರಾಮಾಯಣ, ಮಹಾಭಾರತ ಹಾಗೂ ಭಾಗವತದ ಕಥನ ಚಿತ್ರಣವಿದೆ. ಗೋಡೆಯಲ್ಲಿರುವ ದುರ್ಗಾ, ಯೋಗಾನರಸಿಂಹ, ಭೈರವ, ಹಲಾಯುಧ, ಮನ್ಮಥ-ರತಿ, ಬಲಿ-ವಾಮನ ಮೂರ್ತಿಗಳು ವೀಕ್ಷಕರ ಕಣ್ಸೆಳೆಯುತ್ತವೆ. ಈ ದೇವಾಲಯದ ಬಳಿಯೇ ಹೊಯ್ಸಳರ ಕಾಲದ ವಿಷ್ಣುದೇವಾಲಯವಿದೆ.

**ಬಸವ ಕಲ್ಯಾಣ:** ಬೀದರಿನಿಂದ ೮೦ ಕಿ.ಮೀ ದೂರದಲ್ಲಿರುವ ತಾಲೂಕು ಕೇಂದ್ರವಾಗಿದ್ದು, ಇದು ಹಿಂದೆ ಕಲ್ಯಾಣ ಚಾಳುಕ್ಯರ ರಾಜಧಾನಿಯಾಗಿತ್ತು. ಇಲ್ಲಿರುವ ಪ್ರಾಚೀನ ಕೋಟೆಯನ್ನು ಬಹಮನಿ ಸುಲ್ತಾನರ ಕಾಲದಲ್ಲಿ ಪುನರುತ್ಥಾನ ಮಾಡಲಾಗಿತ್ತು. ಕೋಟೆಯೊಳಗೆ ಪುರಾತತ್ವ ಇಲಾಖೆಯ ವಸ್ತು ಸಂಗ್ರಹಾಲಯವಿದೆ. ಇಲ್ಲಿ ಊರಹೊರಗೆ ಇರುವ ಪಾಳುಬಿದ್ದ ನಾರಾಯಣ ದೇವಾಲಯವನ್ನು ಹೊರತುಪಡಿಸಿದರೆ, ಚಾಳುಕ್ಯ ಹಾಗು ಕಳಚೂರಿಗಳ ಕಾಲಕ್ಕೆ ಸೇರಿದ ಅಂತಹ ಮಹತ್ವದ ಕಟ್ಟಡಗಳೇನೂ ಉಳದಿಲ್ಲ. ಈಗ ಬಸವೇಶ್ವರರ ಆಧುನಿಕ ದೇವಾಲಯ, ಕಲ್ಯಾಣ ಚಾಳುಕ್ಯರ ಕಾಲದ ಪ್ರಸಿದ್ಧ ನ್ಯಾಯವಾದಿ ವಿಜ್ಞಾನೇಶ್ವರ ಗುಹೆ, ಪ್ರಭುದೇವರ ಗದ್ದುಗೆ, ಮಡಿವಾಳ ಮಾಚಯ್ಯನ ಕೆರೆ, ಅಕ್ಕನಾಗಮ್ಮನ ಗುಹೆ, ಪನರುತ್ಥಾನ ಮಾಡಿದ ಸಿದ್ದೇಶ್ವರ ದೇವಾಲಯ ಹಾಗೂ ಅನುಭವ ಮಂಟಪಗಳವೆ. ಇಲ್ಲಿರುವ ಖಾಜಿ ಮಸೀದಿಯು ಸುಂದರವಾದ ಕಟ್ಟಡವಾಗಿದ್ದು, ಅಲಿ ರಾಜಾಬಾಗ್ ಸವಾರ್ ದರ್ಗಾ ಇಲ್ಲಿದೆ. ಬಸವೇಶ್ವರರು ಹುಟ್ಟಿದ ಎಂಟನೇ ಶತಮಾನೋತ್ಸವದ ಅಂಗವಾಗಿ 'ಬಸವ ವನ'ವನ್ನೂ ಇತ್ತೀಚೆಗೆ ಇಲ್ಲಿ ರೂಪಿಸಲಾಗಿದೆ.

**ಬಸವನ ಬಾಗೇವಾಡಿ:** ಇದು ಜಿಲ್ಲಾಕೇಂದ್ರ ವಿಜಯಪುರದಿಂದ ೪೩ ಕಿ.ಮೀ ಪೂರ್ವಕ್ಕಿರುವ, ತಾಲೂಕು ಕೇಂದ್ರ. ಇಲ್ಲಿ ಶರಣ ಬಸವೇಶ್ವರ ಜನಿಸಿದ ಸ್ಥಳ ೧೨ ನೇ ಶತಮಾನದ ಆರಂಭದ ದಶಕದಲ್ಲಿ ಹುಟ್ಟಿದ್ದ ಸಮೀಪದ ಇಂಗಳೇಶ್ವರ ಇವರ ತಾಯಿಯ ತವರೂರು. ಹಿಂದೆ ಇದೊಂದು ಅಗ್ರಹಾರವಾಗಿತ್ತು. ಬಸವೇಶ್ವರರು, ಈ ಅಗ್ರಹಾರದ ಮುಖ್ಯಸ್ಥನ ಮಗನಾಗಿದ್ದು. ಇಲ್ಲಿರುವ ಮುಖ್ಯ ದೇವಾಲಯವು ಬಸವೇಶ್ವರನದು. ಇದು ಚಾಳುಕ್ಯ ಶೈಲಿಯಲ್ಲಿದ್ದು, ದಾಖಲೆಗಳಲ್ಲಿ ಇದನ್ನು ಸಂಗಮನಾಥ ಎಂದು ಹೆಸರಿಸಲಾಗಿದೆ. ಇಂಚಗೇರಿಯ ಆಧ್ಯಾತ್ಮಿಕ ಸಾಧಕರಾದ ಸಿದ್ಧರಾಮೇಶ್ವರ ಹಾಗೂ ಗುರುಪಾದೇಶ್ವರರ ಸಮಾಧಿಗಳು ಇಲ್ಲಿವೆ. ಇಲ್ಲಿದ್ದ ಬಸವೇಶ್ವರರ ಪೂರ್ವಜರ ಮನೆಯ ನಿವೇಶನ ಎಂದು ಹೇಳಲಾಗುವ ಸ್ಥಳವನ್ನು ರಕ್ಷಿತ ಪ್ರದೇಶವೆಂದು ಘೋಷಿಸಲಾಗಿದ್ದು ಸ್ಮಾರಕವನ್ನೂ ನಿರ್ಮಿಸಲಾಗಿದೆ.

**ಬಳ್ಳಾರಿ:** ಬಳ್ಳಾರಿಯು ಜಿಲ್ಲಾಕೇಂದ್ರವಾಗಿದ್ದು, ಬೆಂಗಳೂರಿನಿಂದ ೩೦೬ ಕಿ.ಮೀ. ವಾಯವ್ಯಕ್ಕಿದೆ. ಇದು ಎರಡು ಬೆಟ್ಟಗಳ ಸುತ್ತ ಹರಡಿದ್ದು, ಅದರಲ್ಲಿ ಬಲಹರಿ ಬೆಟ್ಟದಲ್ಲಿ ಒಂದು ದೇವಾಲಯವಿದೆ. ಈ ಗುಡ್ಡದ ಸುತ್ತ ಕಟ್ಟಿದ್ದ ವಿಜಯನಗರ ಕಾಲದ ಕೋಟೆಯು ಇನ್ನೂ ಸುಸ್ಥಿತಿಯಲ್ಲಿದೆ. ಹಿಂದೆ ಇದು ವಿಜಯಪುರ, ಮರಾಠಾ, ನಿಜಾಮ ಹಾಗೂ ಹೈದರನಿಗೆ ಹಸ್ತಾಂತರಗೊಂಡಿತ್ತು. ಟಿಪ್ಪುವಿನ ಪರಾಜಯದ ಬಳಿಕ ನಿಜಾಮನು ಇದನ್ನು ಬ್ರಿಟಿಷರಿಗೆ ಒಪ್ಪಿಸಿದನು. ಇಲ್ಲಿರುವ ದುರ್ಗಮ್ಮ (ಬಳ್ಳಾರಮ್ಮ) ದೇವಾಲಯದಲ್ಲಿ ಮಣ್ಣಿನ ಹುತ್ತವನ್ನೇ ದೇವರೆಂದು ಪೂಜಿಸಲಾಗುತ್ತದೆ. ಇಲ್ಲಿ ಎರಡು ದೊಡ್ಡ ಮಸೀದಿಗಳವೆ. ೧೯೬೧ರಲ್ಲಿ ಇಲ್ಲಿ ಸರಕಾರೀ ಮೆಡಿಕಲ್ ಕಾಲೇಜನ್ನು ಸ್ಥಾಪಿಸಲಾಯಿತು. ಬಳ್ಳಾರಿಯು ಈಗ ಆಧುನಿಕ ಯಂತ್ರೋಪಕೃತ ಉಡುಪು ತಯಾರಿಕೆಯ ದೊಡ್ಡ ಕೇಂದ್ರವಾಗಿ ಬೆಳೆದಿದೆ.

**ಬಂಕಾಪುರ:** ಜಿಲ್ಲಾಕೇಂದ್ರ ಹಾವೇರಿಯಿಂದ ೨೨ ಕಿ.ಮೀ ದೂರದಲ್ಲಿ ಶಿಗ್ಗಾಂವಿ ತಾಲೂಕಿನಲ್ಲಿದೆ. ಈ ಪಟ್ಟಣವನ್ನು ಅಮೋಘವರ್ಷ ನೃಪತುಂಗನ (ಒಂಬತ್ತನೇ ಶತಮಾನ) ದಳಪತಿ ಬಂಕೇಯ ನಿರ್ಮಿಸಿದ್ದು, ನಂತರ ಚಾಳುಕ್ಯರ ಕಾಲದಲ್ಲಿ ಸುಂದರವಾದ ದೇವಾಲಯಗಳನ್ನು ಇಲ್ಲಿ ಕಟ್ಟಿಸಲಾಯಿತು. ಅವುಗಳಲ್ಲಿ ಕೋಟೆಯಲ್ಲಿರುವ ಅದ್ಭುತವಾದ ನಗರೇಶ್ವರ ದೇವಾಲಯ ಉತ್ತಮ ಉದಾಹರಣೆಯಾಗಿದೆ. ಊರೊಳಗೆ ಚಾಳುಕ್ಯರ ಕಾಲದ ಆಕರ್ಷಕ ಸಿದ್ಧೇಶ್ವರ ದೇವಾಲಯವಿದೆ. ೧೫೬೭ ರಲ್ಲಿ ಅಲಿ ಆದಿಲ್‌ಶಾಹನು ಬಂಕಾಪುರವನ್ನು ವಶಪಡಿಸಿಕೊಂಡ ಮೇಲೆ ಇಲ್ಲಿದ್ದ ಬಹಳಷ್ಟು ದೇವಾಲಯಗಳನ್ನು ತಾನೇ ನಾಶಪಡಿಸಿದ್ದನ್ನು ದಾಖಲಿಸಿದ್ದಾನೆ. ಆದರೂ ನಗರೇಶ್ವರ ದೇವಾಲಯವು ತನ್ನ ಸೌಂದರ್ಯವನ್ನು ಉಳಿಸಿಕೊಂಡಿದೆ. ಕೋಟೆಯಲ್ಲಿ ಸುಂದರವಾದ ಮಸೀದಿ ಇದೆ. ಪಂಚರಬಾವಿ ಎಂಬ ಈಜುಗೊಳದಂತಹ ರಚನೆಯು ವಿಶಿಷ್ಟ ರಚನೆಯಾಗಿದೆ. ಬಂಕಾಪುರದಲ್ಲಿ ಕಿಲಾರಿ ತಳಿಯ ದನ ಹಾಗೂ ಮೊಲಗಳದ್ದು ಸಂತಾನೋತ್ಪತ್ತಿ ಕೇಂದ್ರ (Breeding Centre) ಕಚೇರಿಗಳೂ ಕೋಟೆಯೊಳಗೆ ಇವೆ. ವಿಜಯಪುರದ ದಳಪತಿಗಳು ಆರಂಭದಲ್ಲಿ ಇದನ್ನು ತಮ್ಮ ಕೇಂದ್ರವನ್ನಾಗಿ ಹೊಂದಿದ್ದರು. ನಂತರ ಸವಣೂರಿಗೆ ಸ್ಥಳಾಂತರಿಸಿ ಸವಣೂರು ನವಾಬರೆಂದೇ ಪ್ರಸಿದ್ಧಿ ಪಡೆದಿದ್ದರು.

**ಬಾಗಳಿ:** ದಾವಣಗೆರೆ ಜಿಲ್ಲೆ ಹರಪನ ಹಳ್ಳಿಯಿಂದ ಒಂಬತ್ತು ಕಿ.ಮೀ. ದೂರದಲ್ಲಿದೆ. ಇದು ಹಿಂದೆ 'ಬಾಗುಳಿ' ಎಂದು ಕರೆಯಲ್ಪಡುತ್ತಿತ್ತು. ಇಲ್ಲಿ ೧೧೧೩ರ ಶಾಸನದಲ್ಲಿ ಉಲ್ಲಿಖಿತ ಕಲ್ಲೇಶ್ವರ ದೇವಸ್ಥಾನ ಸಂಕೀರ್ಣವಿದೆ. ಇಲ್ಲಿ ನಂತರದ ಚಾಳುಕ್ಯರ ಅವಳ

ದೇವಾಲಯಗಳಿದ್ದು, ಅವುಗಳ ಗೋಡೆಯ ಹೊರಮೈಯಲ್ಲಿ ಅತ್ಯಂತ ಸುಂದರವಾದ ಹಾಗೂ ನಾಜೂಕಾದ ಮಿಥುನ ಶಿಲ್ಪಗಳಿವೆ. ಇಲ್ಲಿರುವ ನುಣುಪಾದ ೫೯ ಕಂಬಗಳ ಕಪೋತದಲ್ಲಿ ವಿಶಿಷ್ಟವಾದ ಕಾಮಕೇಳಿಯ ಶಿಲ್ಪಗಳಿವೆ. ರಾಜ್ಯ ಪುರಾತತ್ವ ಇಲಾಖೆಯು ಇಲ್ಲಿ ಪುರತಾತ್ವ ವಸ್ತುಸಂಗ್ರಹಾಲಯವನ್ನು ಆರಂಭಿಸಿದ್ದು, ವಿಶಿಷ್ಟ ಶಿಲ್ಪ ಸಂಗ್ರಹದಿಂದಾಗಿ ಗಮನಾರ್ಹವಾಗಿದೆ.

**ಬಾಗಲಕೋಟೆ:** ಹಿಂದೆ ಇದು ಬಾದಾಮಿ ಚಾಲುಕ್ಯರ ಕಾಲದಲ್ಲಿ ಪ್ರಮುಖ ನಗರವೂ ವ್ಯಾಪಾರ ಕೇಂದ್ರವೂ ಆಗಿದ್ದು ವಿಜಯಪುರ ಜಿಲ್ಲೆಯಲ್ಲಿತ್ತು. ಆದರೆ ೧೯೯೭ರಲ್ಲಿ ಹೊಸ ಜಿಲ್ಲೆಯಾಗಿ ರೂಪುಗೊಂಡು ಬಾಗಲಕೋಟೆಯು, ಕಸಬಾ ಬೀಳಗಿ, ಜಮಖಂಡಿ, ಮುಧೋಳ, ಹುನಗುಂದ ಹಾಗೂ ಬಾದಾಮಿ ತಾಲೂಕುಗಳನ್ನೊಳಗೊಂಡಿದ್ದು, ಸುಮಾರು ೬,೯೫೪ ಚದರ ಕಿ.ಮೀ. ಪ್ರದೇಶವನ್ನು ಹೊಂದಿದೆ. ಈ ಜಿಲ್ಲೆಯಲ್ಲಿ ತೇರದಾಳ, ಗೊಂಬಿಗುಡ್ಡ, ಪಟ್ಟದಕಲ್, ಎಲಹಟ್ಟಿ ಮುಂತಾದ ಪ್ರಾಗೈತಿಹಾಸಿಕ ನೆಲೆಗಳಿವೆ. ಈ ನಗರವಿಂದು ಆಲಮಟ್ಟಿ ಅಣೆಕಟ್ಟಿನ ಹಿನ್ನೀರಿನಿಂದಾಗಿ ಮುಳುಗಡೆಯಾಗಿ ನವನಗರ ಎಂಬ ಜಾಗಕ್ಕೆ ಭಾಗಶಃ ಸ್ಥಳಾಂತರಿಸಲ್ಪಟ್ಟಿದೆ. ಈ ನಗರವು ಕಲ್ಯಾಣದ ಚಾಳುಕ್ಯರ ಕಾಲದಲ್ಲಿ ಬಾಗಡೆಗೆ-೭೦ರ ರಾಜಧಾನಿಯಾಗಿದ್ದು ಮುಂದೆ ಆದಿಲ್‌ಶಾಹಿ ಹಾಗೂ ಮರಾಠರ ಆಳ್ವಿಕೆಗೂ ಒಳಪಟ್ಟಿತ್ತು. ಈಗ ಇದು ಸಿಮೆಂಟು ತಯಾರಿಕೆಗೆ ಪ್ರಸಿದ್ಧವಾಗಿದೆ.

**ಬಾದಾಮಿ:** ಹಿಂದೆ ಇದು ಬಾದಾಮಿ ಚಾಲುಕ್ಯರ ರಾಜಧಾನಿ ಪಟ್ಟಣವಾಗಿತ್ತು. ಬೆಂಗಳೂರಿನಿಂದ ೫೦೦ ಕಿ.ಮೀ. ಜಿಲ್ಲಾಕೇಂದ್ರ ಬಾಗಲಕೋಟೆಯಿಂದ ೩೦ ಕಿ.ಮೀ ದೂರದಲ್ಲಿರುವ ಇದು ಹಿಂದೆ ವಾತಾಪಿ ಎಂದು ಕರೆಯಲ್ಪಡುತ್ತಿತ್ತು. ಕ್ರಿ.ಶ. ೫೪೩ರಲ್ಲಿ ಒಂದನೇ ಪುಲಕೇಶಿಯು ಇಲ್ಲಿ ಕೋಟೆಯನ್ನು ಕಟ್ಟಿಸಿ ಅದನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡಿದ್ದನ್ನು ಅಲ್ಲೇ ಇರುವ ಶಿಲಾಶಾಸನ ದಾಖಲಿಸಿದೆ. ಕ್ರಿ.ಶ. ೭೫೭ರವರೆಗೂ ಇದು ಅವರ ರಾಜಧಾನಿಯಾಗಿತ್ತು. ವಿಶಿಷ್ಟವಾದ ಬಂಡೆಕಲ್ಲುಗಳಲ್ಲಿ ಕೊರೆಯಲಾಗಿರುವ ಗುಹಾಲಯಗಳಿಂದಾಗಿ ಇದೊಂದು ಪ್ರಸಿದ್ಧವಾಗಿದೆ. ಇಲ್ಲಿರುವ ಕೋಟೆಯನ್ನು ಹೈದರಾಲಿ ಪುನಶ್ಚೇತನಗೊಳಿಸಿದ್ದು. ಟಿಪ್ಪು ಇಲ್ಲಿ ಸುಂದರವಾದ ಮಸೀದಿಯನ್ನು ಕಟ್ಟಿಸಿದ್ದಾನೆ. ಇಲ್ಲಿರುವ ಒಂದನೇ ಗುಹಾಲಯದಲ್ಲಿ ೧೮ ಕೈಗಳುಳ್ಳ ವಿಶಿಷ್ಟ ಹಾಗೂ ಸುಂದರವಾದ ನಟರಾಜನ ತಾಂಡವನೃತ್ಯ ಶಿಲ್ಪವಿದೆ.ಈ ಶಿಲ್ಪದಲ್ಲಿ ಭರತ ನಾಟ್ಯಾದ ವಿವಿಧ ಭಂಗಿಗಳನ್ನು ಒಳಗೊಂಡಿದ್ದು ಶಿಲ್ಪಿಯ ಚತುರತೆಗೆ ಸಾಕ್ಷಿಯಾಗಿದೆ. ಈ ಗುಹೆಯ ಛತ್ತಿನಲ್ಲಿ ನಾಗರಾಜ ಹಾಗೂ ವಿದ್ಯಾಧರ ದಂಪತಿಗಳ ಶಿಲ್ಪವಿದೆ. ಇಲ್ಲಿ ವಿವಿಧ ಭಂಗಿಯಲ್ಲಿರುವ ಕುಬ್ಜರ ಶಿಲ್ಪಗಳು ನೋಡಲು ಸಿಗುತ್ತವೆ. ಎರಡನೆಯ ಗುಹಾಲಯದಲ್ಲಿ ಆಳೆತ್ತರಕ್ಕಿಂತಲೂ ದೊಡ್ಡದಾದ ಭೂವರಾಹ ಹಾಗೂ ತ್ರಿವಿಕ್ರಮ ಶಿಲ್ಪಗಳನ್ನು ಕಾಣಬಹುದು. ಮೂರನೆಯ ಗುಹಾಲಯವು ಮಹತ್ವದ್ದಾಗಿದ್ದು ಇದನ್ನು ಮಂಗಳೇಶನು ಕ್ರಿ.ಶ. ೫೭೮ರಲ್ಲಿ ಕೊರೆಯಿಸಿದನು. ಇದು ವೈಷ್ಣವ ಗುಹೆ ಎಂದೂ ಪ್ರಖ್ಯಾತಿ ಪಡೆದಿದೆ. ಇಲ್ಲಿ ಶೇಷನ ಮೇಲೆ ಕುಳಿತ ಪರವಾಸುದೇವ, ಭೂವರಾಹ, ನರಸಿಂಹ ಹಾಗೂ ಹರಿಹರರ ಆಳೆತ್ತರಕ್ಕಿಂತಲೂ ದೊಡ್ಡ ಹಾಗೂ ಸುಂದರವಾಗಿ ಕೆತ್ತಿರುವ ವಿವಿಧ ಭಂಗಿಯ ಶಿಲ್ಪಗಳನ್ನು ಕಾಣಬಹುದು. ಲೌಕಿಕ ದೃಶ್ಯಗಳನ್ನು ನಿರೂಪಿಸುವ ಮದನಿಕಾ ಶಿಲ್ಪಗಳು ಗುಹೆಯ ಕಂಬಗಳಲ್ಲಿವೆ. ಗುಡ್ಡದ ತುದಿಯಲ್ಲಿರುವ ಜೈನ ಗುಹಾಲಯದಲ್ಲಿ ಜೈನ ತೀರ್ಥಂಕರರ, ಯಕ್ಷಯಕ್ಷಿಯರ ಸಾಕಷ್ಟು ಶಿಲ್ಪಗಳಿವೆ. ಇಲ್ಲಿರುವ ಗೊಮ್ಮಟ ಶಿಲ್ಪಕ್ಕೆ ನೀಡಿದಾ ಕೇಶವಿದೆ. ಅಗಸ್ತ್ಯ ತೀರ್ಥದ ಆಚೇ ಬದಿಯ ಬೆಟ್ಟದ ಮೇಲಿನ ಕೋಟೆಯಲ್ಲಿರುವ 'ಮೇಲಣ ಶಿವಾಲಯವನ್ನು' ಅತ್ಯಂತ ಪ್ರಾಚೀನ ಕಟ್ಟಡ ಮಾದರಿಯ ವೈಷ್ಣವ ದೇವಾಲಯವೆಂದು ಗುರುತಿಸಲಾಗಿದೆ. ಮಾಲಗಿತ್ತಿ ಶಿವಾಲಯವನ್ನು ಸೂರ್ಯದೇವಾಲಯವೆಂದೂ, ಕೆಳಗಿನ ಶಿವಾಲಯವನ್ನು ಗಣಪತಿ ದೇವಾಲಯವೆಂದೂ ಗುರುತಿಸಲಾಗಿದೆ. ತ್ರಿಕೂಟ ಸ್ಥಾನಗಳಿಂದ ಕೂಡಿದ ದೇವಾಲಯವಾಗಿದೆ. ಊರ ನಡುವೆ ಇರುವ ಜಂಬುಲಿಂಗ ದೇವಾಲಯವನ್ನು ಒಂದು ಪ್ರಮುಖವಾದ ಕಟ್ಟವಾಗಿದೆ. ಇದನ್ನು ರಾಣಿ ವಿನಯವತಿ ಕ್ರಿ.ಶ. ೬೯೯ ರಲ್ಲಿ ಕಟ್ಟಿಸಿದಳು. ಬಾದಾಮಿಯ ಗುಹಾಲಯಗಳು ಕೆಂಪು ಮರಳುಶಿಲೆಯವಾಗಿದ್ದು ಶಿಲ್ಪಗಳು ಅಪೂರ್ವವೂ ಸುಂದರವೂ ಆಗಿವೆ. ಸಮೀಪದಲ್ಲಿರುವ ಬನಶಂಕರಿಯಲ್ಲಿ ರಾಷ್ಟ್ರಕೂಟರ ಕಾಲದ ಬನಶಂಕರಿಯ ದೇವಾಲಯವಿದ್ದು, ತೀರ್ಥಹೊಂಡವು ಕಲ್ಲಿನ ಕಂಬಗಳ ಮಂಟಪದಿಂದ ಸುತ್ತುವರೆಯಲ್ಪಟ್ಟಿದೆ. ಜನವರಿಯಲ್ಲಿ ಬನದ ಹುಣ್ಣಿಮೆಯಂದು ಇಲ್ಲಿ ವಾರ್ಷಿಕ ಜಾತ್ರೆ ನಡೆಯುತ್ತದೆ.

**ಬೀದರ್:** ಮಹಾಭಾರತ ಕಾಲದ ವಿದುರ ನಗರ ಇದೆಂಬ ಐತಿಹ್ಯವನ್ನು ಹೊಂದಿರುವ ಇದು ಜಿಲ್ಲಾ ಕೇಂದ್ರವಾಗಿದ್ದು ಬೆಂಗಳೂರಿನಿಂದ ೭೪೦ ಕಿ.ಮೀ. ದೂರದಲ್ಲಿ, ಸಮುದ್ರಮಟ್ಟದಿಂದ ೬೬೪ ಮೀ. ಎತ್ತರದಲ್ಲಿರುವ ಉತ್ತಮ ಹವಾಗುಣವನ್ನು ಹೊಂದಿರುವ ಚಾರಿತ್ರಿಕ ಮಹತ್ವದ ಸ್ಥಳ. ೧೪೨೬ರಲ್ಲಿ ಬಹಮನ್‌ಶಾಹಿ ಸುಲ್ತಾನ ರಾಜರು ಇದನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಕೋಟೆಯನ್ನು ಕಟ್ಟಿಸಿದರು. ಈ ಕೋಟೆಯು ಇಂದಿಗೂ ಸುಸ್ಥಿತಿಯಲ್ಲಿದೆ. ಕೋಟೆಯ ಒಳಗೆ ಸೋಲಾಕಂಬ್ ಮಸೀದಿ (೧೪೨೩), ತಖ್ತ್ ಮಹಲ್, ಚಿನ್ನಿ ಮಹಲ್ ಹಾಗೂ ರಂಗೀನ ಮಹಲ್ ಎಂಬ ಅರಮನೆಗಳಿವೆ. ಈ ಮಹಲುಗಳನ್ನು ಬಹು ಸುಂದರವಾಗಿ ಮೊಸಾಯಿಕ್ ಹಾಗೂ ಮರಗಳಿಂದ ಸಿಂಗರಿಸಲಾಗಿದೆ. ಕೋಟೆಗೆ ದೊಡ್ಡದಾದ ದ್ವಾರಗಳಿದ್ದು, ಬೃಹತ್ತಾದ ಬುರುಜುಗಳಿವೆ. ಪೇಟೆಯಲ್ಲಿರುವ ಮಹಮ್ಮದ್ ಗವಾನನ ಮದ್ರಸಾ ಬಹು ಸುಂದರವಾದ ಕಟ್ಟಡವಾಗಿದ್ದು, ಇಂಡೋ-ಸಾರಸೆನಿಕ್ ಶೈಲಿಯಲ್ಲಿದೆ. ಬಹುಮನಿಗಳ ಅವನತಿಯ ನಂತರ ಬರೀದ್ ಶಾಹಿಗಳು ಇದನ್ನು ಆಳಿದರು. ನಂತರ ಬೀದರನ್ನು ವಿಜಯಪುರದ ಅರಸರು ೧೬೧೯ರಲ್ಲಿ ವಶಪಡಿಸಿಕೊಂಡರು. ಆ ನಂತರ ಇದು ಔರಂಗಜೇಬನ ಆಳ್ವಿಕೆಗೆ ಒಳಪಟ್ಟು ಕೊನೆಗೆ ನಿಜಾಮರ ಕೈಸೇರಿತು. ಇಲ್ಲಿರುವ ಝರಣೀ ನರಸಿಂಹ(ನರಸಿಂಹಝರ) ದೇವಾಲಯವು ಪ್ರಸಿದ್ಧವಾಗಿದೆ. ಬೀದರಿನ ಬಳಿ ಇರುವ ಅಷ್ಟೂರಿನಲ್ಲಿ ಬಹುಮನಿ ಸುಲ್ತಾನರ ಬೃಹತ್ತಾದ ಸಮಾಧಿ ಗೋರಿಗಳಿದ್ದು, ಒಳಗೆವರ್ಣಚಿತ್ರಗಳೂ ಇವೆ. ಬೀದರನಲ್ಲಿ ನಾನಕ್ ಝೀರ ಎಂಬಲ್ಲಿ ಗುರುದ್ವಾರ ಇದ್ದು, ಇಲ್ಲಿ ಗುರುನಾನಕ್ ಅವರು ನೀರಿನ ಕಾರಂಜಿಯನ್ನು ಸೃಷ್ಟಿಸಿರೆಂದು ಹೇಳಲಾಗಿದೆ.

**ಬೆಳವಾಡಿ:** ಇದು ಚಿಕ್ಕಮಗಳೂರು ಜಿಲ್ಲೆಯಲ್ಲಿದ್ದು, ಹೊಯ್ಸಳರ ಕಾಲದ ವೀರನಾರಾಯಣ ದೇವಾಲಯ ತ್ರಿಕೂಟದೇವಾಲಯ ದಿಂದಾಗಿ ಪ್ರಸಿದ್ಧಿವಾಗಿದ್ದು. ಇಲ್ಲಿ ಸುಂದರವಾದ ವೀರನಾರಾಯಣ, ವೇಣುಗೋಪಾಲ ಹಾಗೂ ಯೋಗಾನರಸಿಂಹ ವಿಗ್ರಹಗಳಿವೆ. ಚಿಕ್ಕಮಗಳೂರಿನಿಂದ ೨೯ ಕಿ.ಮೀ. ದೂರದಲ್ಲಿರುವ ಈ ಸ್ಥಳದಲ್ಲಿ

೧೨೦೬ರ ಶಾಸನವಿದ್ದು ಈ ದೇವಾಲಯವು ಅದಕ್ಕಿಂತಲೂ ಮೊದಲಿನದು ಇಲ್ಲಿಯ ಜನರ ಪ್ರಕಾರ, ಈ ಊರು ಮಹಾಭಾರತ ಕಾಲದಲ್ಲಿ ಏಕಚಕ್ರ ನಗರವಾಗಿತ್ತು. ಇಲ್ಲಿ ಹುತ್ತದ ಗಣಪತಿ ಎಂದು ಕರೆಯಲ್ಪಡುವ ಗಣಪತಿಯ ಪ್ರಾಚೀನ ದೇವಾಲಯವಿದೆ.

**ಬೆಳಗಾವಿ:** ಪ್ರಾಚೀನ ಕಾಲದಲ್ಲಿ 'ವೇಣುಗ್ರಾಮ' (ಬಿದಿರಿನ ಊರು) ಎಂದು ಕರೆಯಲ್ಪಟ್ಟಿದ್ದ ಬೆಳಗಾವಿ ಇಂದು ಜಿಲ್ಲಾ ಕೇಂದ್ರವಾಗಿದ್ದು, ಪ್ರಾದೇಶಿಕ ಆಯುಕ್ತರ ಕೇಂದ್ರಸ್ಥಳವೂ ಆಗಿದೆ. ಇದು ಪುಣೆ-ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಬೆಂಗಳೂರಿನಿಂದ ೫೦೨ ಕಿ.ಮೀ ದೂರದಲ್ಲಿದೆ. ೧೨ನೇ ಶತಮಾನದಲ್ಲಿ ಸೌದತ್ತಿಯಿಂದ ರಟ್ಟರು ತಮ್ಮ ರಾಜಧಾನಿಯನ್ನು ಇಲ್ಲಿಗೆ ಸ್ಥಳಾಂತರ ಮಾಡಿದರು. ಇಲ್ಲಿಯ ಕೋಟೆಯ ಒಳಗೆ, ೧೨೦೪ರಲ್ಲಿ ರಟ್ಟರ ಅಧಿಕಾರಿ ಬೀಚಿರಾಜ ಕಲಾತ್ಮಕವಾಗಿ ಕಟ್ಟಿಸಿದ ಬಹು ಸುಂದರವಾದ ಹಾಗೂ ಅದ್ಭುತವಾದ ಕಮಲ ಬಸದಿ ಇದೆ. ಇದರ ಛತ್ತಿನಲ್ಲಿ ಹೊರಕ್ಕೆ ಚಾಚಿದಂತೆ ಕೆತ್ತಿರುವ ಕಮಲದ ದಳಗಳಿವೆ. ಈ ಸುಂದರ ಕಟ್ಟಡವು ಚಾಳುಕ್ಯ ಶೈಲಿಯಲ್ಲಿದ್ದು ಒಳಗೆ ನೇಮಿನಾಥ ತೀರ್ಥಂಕರನ ಮೂರ್ತಿಯಿದೆ. ಈ ಪಟ್ಟಣವು ಸೇವುಣರು (ದೇವಗಿರಿಯ ಯಾದವರು) ಹಾಗೂ ವಿಜಯನಗರ ಅರಸರಿಗೆ ಸೇರಿದ್ದು ನಂತರ ೧೪೭೪ರಲ್ಲಿ ಬಹಮನಿಯ ಅರಸರ ಪರವಾಗಿ ಮಹಮೂದ ಗವಾನನು ಇದನ್ನು ವಶಪಡಿಸಿಕೊಂಡನು. ಆನಂತರ ಈ ಕೋಟೆಯನ್ನು ಆದಿಲ್ ಶಾಹಿಗಳು ಇನ್ನಷ್ಟು ಬಲಪಡಿಸಿದರು. ಇಲ್ಲಿ ಆಕರ್ಷಕವಾದ ಮೂರು ದ್ವಾರಗಳಿರುವ ಸಾಫಾ ಮಸೀದಿ ಇದೆ. ಈ ಮಸೀದಿಯನ್ನು ಸುಂದರವಾದ ಹೂವು ಹಾಗೂ ಅಲಂಕಾರಿಕ ಬರಹಗಳಿಂದ ಅಲಂಕರಿಸಲಾಗಿದೆ. ಇಲ್ಲಿಯ ಎರಡು ಕಂಬಗಳ ಮೇಲ್ಮೈ ನಾಗರಿ ಲಿಪಿಯಲ್ಲಿರುವ ಕನ್ನಡ ಶಾಸನಗಳಿವೆ. ಒಂದು ರಟ್ಟರ ರಾಜ ನಾಲ್ಕನೇ ಕಾರ್ತವೀರ್ಯನ ೧೧೯೯ ಶಾಸನವಾದರೆ, ಇನ್ನೊಂದು ಸೇವುಣ (ಯಾದವ) ಕೃಷ್ಣನ ೧೨೬೧ರ ಶಾಸನವಾಗಿದೆ. ಅಲ್ಲೇ ಇರುವ ಪರ್ಷಿಯನ್ ಶಾಸನದ ಪ್ರಕಾರ, ಈ ಮಸೀದಿಯನ್ನು ಅಸದ್ ಖಾನ್ ಎಂಬ ವಿಜಾಪುರದ ಸೇನಾಪತಿಯು ಕಟ್ಟಿಸಿದ್ದನು. ಕೋಟೆಯಲ್ಲಿರುವ ಜಾಮಿಯಾ ಮಸೀದಿಯನ್ನು ಶೇರ್‌ಖಾನನು ೧೫೮೫-೮೬ರಲ್ಲಿ ಕಟ್ಟಿಸಿದನು. ಇದರ ಸನಿಹದಲ್ಲಿಯೇ ಕಂಜರ್ ವಲಿಯ ದರ್ಗಾ ಇದೆ. ನಂತರದ ದಿನಗಳಲ್ಲಿ ಬೆಳಗಾವಿಯು ಮೊಗಲರ (ಇದನ್ನು ಅವರು ಅಝುಮ್‌ನಗರ ಎಂದು ಕರೆದರು) ಹಾಗೂ ಆಮೇಲೆ ಮರಾಠರ ಆಳ್ವಿಕೆಗೆ ಒಳಪಟ್ಟಿತ್ತು. ೧೮೧೮ರಲ್ಲಿ ಇದನ್ನು ಬ್ರಿಟಿಷರು ವಶಪಡಿಸಿಕೊಂಡರು. ಬ್ರಿಟಿಷರು ಇಲ್ಲಿ ಕಂಟೋನ್ಮೆಂಟನ್ನು ಮಾಡಿ ಇದನ್ನು ಮರಾಠಾ ಲೈಟ್ ಇನ್‌ಫ್ಯಾಂಟ್ರಿಯ ಕೇಂದ್ರವನ್ನಾಗಿಸಿದರು. ಇಲ್ಲಿರುವ ಸೆಂಟ್ ಮೇರಿಸ್ ಚರ್ಚನ್ನು, ೧೮೬೯ರಲ್ಲಿ ಕಟ್ಟಲಾಯಿತು. ಇಲ್ಲಿಯ ಮಾರುತಿ ದೇವಾಲಯವು ಬಹಳ ವಿಸ್ತಾರವಾಗಿದ್ದು ಅದರಲ್ಲಿ ಚಾಳುಕ್ಯರ ಕಾಲದ ಪ್ರಾಚ್ಯವಸ್ತುಗಳಿವೆ. ಕೋಟೆಯ ತುಂಬ ಚಾಳುಕ್ಯಶೈಲಿಯ ಕಂಬಗಳಿವೆ. ಶಾಹಪುರದಲ್ಲಿರುವ ಚಾಳುಕ್ಯರ ಕಾಲದ ಕಪಿಲೇಶ್ವರ ದೇವಾಲಯವನ್ನು ಈಗ ಸಂಪೂರ್ಣ ಪುನರುತ್ಥಾನಗೊಳಿಸಲಾಗಿದೆ. ಇಲ್ಲಿ ೧೯೨೪ರಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷತೆಯನ್ನು ಮಹಾತ್ಮ ಗಾಂಧೀಜಿ ವಹಿಸಿದ್ದು, ಅದರ ನೆನಪಾಗಿ ಆಗ ನಿರ್ಮಿಸಿದ್ದ ಭಾವಿ ಹಾಗೂ ಸಮಾವೇಶ ನಡೆದ ಸ್ಥಳವನ್ನು ಸ್ಮಾರಕವನ್ನಾಗಿ ಸಂರಕ್ಷಿಸಲಾಗುತ್ತಿದ್ದು, ಗಾಂಧೀಜಿ ಬದುಕನ್ನು ಬಿಂಬಿಸುವ ಚಿತ್ರಕಲಾ ಸಂಗ್ರಹಾಲಯವಿಲ್ಲದೆ. ಬೆಳಗಾವಿಯ ಹೊರವಲಯದಲ್ಲಿರುವ ವಡಗಾಂವ-ಮಾಧವಪುರವು ಜೂನಿಯರ್ ಕುರಂದವಾಡ ಎಂಬ ಇನ್ನೊಂದು ರಾಜ್ಯಕ್ಕೆ ಸೇರಿತ್ತು. ವಡಗಾಂವ-ಮಾಧವಪುರದ ಉತ್ಖನನದಲ್ಲಿ ದೊರೆತಿರುವ ಪ್ರಾಚೀನ ನಗರದ ಅವಶೇಷಗಳ ಆಧಾರದ ಮೇಲೆ ಇದು ಶಾತವಾಹನರ ಕಾಲದಲ್ಲಿ ಪ್ರಾಚೀನ ಪಟ್ಟಣವಾಗಿತ್ತು ಎಂದು ಗುರುತಿಸಲಾಗಿದೆ. ಬುದ್ಧನ ಗಾರೆಯ ಮೂರ್ತಿಯೂ ಇಲ್ಲಿ ದೊರೆತಿದೆ. ಬೆಳಗಾವಿಯಲ್ಲಿ ನಗರಸಭೆ ಇದೆ. ಇಲ್ಲಿಯ ವಾತಾವರಣವು ಬಹಳ ಅಹ್ಲಾದಕರವಾಗಿದೆ. ಈ ಪಟ್ಟಣವು ಸ್ವಾತಂತ್ರ್ಯ ಹೋರಾಟದಲ್ಲಿ ಮಹತ್ವದ ಪಾತ್ರವನ್ನು ವಹಿಸಿತ್ತು. ಇಲ್ಲಿರುವ ಜವಾಹರಲಾಲ್ ನೆಹರೂ ಮೆಡಿಕಲ್ ಕಾಲೇಜಿನಲ್ಲಿ ರೋಗಗಳ ಬಗ್ಗೆ ಜ್ಞಾನ ನೀಡುವ ವಸ್ತುಸಂಗ್ರಹಾಲಯವಿದೆ (Pathological Museum).

**ಬಳ್ಳಿಗಾವಿ:** ಪುರಾತನ ಬನವಾಸಿ-೧೨,೦೦೦ ಆಡಳಿತ ವಿಭಾಗದ ರಾಜಧಾನಿಯಾಗಿದ್ದ ಪ್ರಾಚೀನ 'ಬಳ್ಳಿಗಾಂವೆ', 'ಬಳ್ಳಿಗಾವೆ' ಅಥವಾ 'ಬಲಿಗ್ರಾಮ'ವು ತಾಲೂಕು ಕೇಂದ್ರ ಶಿಕಾರಿಪುರದಿಂದ ೧೨ ಕಿ.ಮೀ. ಹಾಗೂ ಶಿರಾಳಕೊಪ್ಪದಿಂದ ಮೂರು ಕಿ.ಮೀ ದೂರದಲ್ಲಿದೆ. ಇದು ಅಲ್ಲಮಪ್ರಭುವಿನ ಜನ್ಮಸ್ಥಳವಾಗಿದ್ದು, ಇಲ್ಲಿಯೇ ಚಾಳುಕ್ಯ ರಾಜ್ಯಪಾಲ ಕೌಶಿಕ ಅಥವಾ ಕೇಶಿಮಯ್ಯನ ಜೊತೆ ಅಕ್ಕ ಮಹಾದೇವಿಯ ವಿವಾಹವಾಯಿತೆಂಬ ಅಭಿಪ್ರಾಯವಿದೆ. ಇಲ್ಲಿ ಕೋಡಿಮಠ ಅಥವಾ ವಿದ್ಯೆಗೆ ಪ್ರಸಿದ್ಧರಾದ ಕಾಳಾಮುಖ ಶೈವರ ಕೇದಾರೇಶ್ವರ ಮಠವಿದೆ. ಅವರು ಇಲ್ಲಿ ವಿದ್ಯಾ ಕೇಂದ್ರವಾದ ಘಟಿಕಾಸ್ಥಾನ ಅಥವಾ ವಿಶ್ವವಿದ್ಯಾಲಯವನ್ನು ನಡೆಸುತ್ತಿದ್ದರು. ಈ ಸುಂದರ ಮಠವು ಮೂರು ಗುಡಿಗಳನ್ನು ಹೊಂದಿದ್ದು, ಸರೋವರದ ದಂಡೆಯ ಮೇಲಿದೆ. ಪಂಚತಂತ್ರ ಕಥನಶಿಲ್ಪ ಹಾಗೂ ಮಿಥುನಶಿಲ್ಪಗಳಿರುವ ತ್ರಿಪುರಾಂತಕ ದೇವಾಲಯವು ಚಾಳುಕ್ಯರ ಇನ್ನೊಂದು ದೇವಾಲಯವಾಗಿದೆ. ಅಲ್ಲಮಪ್ರಭುವು ಈ ದೇವಾಲಯಕ್ಕೆ ಸಂಬಂಧಿಸಿದ್ದವನೆಂದು ಹೇಳಲಾಗಿದೆ. ಕಾಲದ ಹಿಂದೆ ಇದು ಐದು ವಿವಿಧ ಮತಗಳ ಮಠಗಳನ್ನೊಳಗೊಂಡಿದ್ದ ಸಮದರ್ಶಿ ಪಟ್ಟಣವಾಗಿತ್ತು.

ಬಳ್ಳಿಗಾವಿಯಲ್ಲಿ ಬೌದ್ಧರ ತಾರಾಭಗವತಿ ಮೂರ್ತಿಯೂ ದೊರೆತಿದೆ. ಇಲ್ಲಿ ಬೌದ್ಧ ವಿಹಾರವೂ ಹಿಂದೆ ಇತ್ತು. ಚಾಳುಕ್ಯರ ಕಾಲದ ನಗರೇಶ್ವರ ದೇವಾಲಯ, ಪಂಚಲಿಂಗೇಶ್ವರ ದೇವಾಲಯ ಹಾಗೂ ವೀರಭದ್ರೇಶ್ವರ ದೇವಾಲಯಗಳು ಇಲ್ಲಿವೆ. ಇಲ್ಲಿಯ ಕಾಳಿಕಾ ದೇವಾಲಯವು ವಿಜಯನಗರ ಕಾಲದ್ದು. ಹೊಯ್ಸಳ ವಿಷ್ಣುವರ್ಧನನ ಪಟ್ಟದ ರಾಣಿ ಶಾಂತಲಾ ಹಾಗೂ ದೇವಾಲಯವನ್ನು ಕಟ್ಟಿದ ದಾಸೋಜ ಮತ್ತು ಚಾವಣ ಇಲ್ಲಿಯವರಾಗಿದ್ದರು. ಚಾಳುಕ್ಯ ಸೇನಾಧಿಪತಿಯೊಬ್ಬನು ತನ್ನ ವಿಜಯವನ್ನು ಸಾರಲು ಇಲ್ಲಿ 'ಭೇರುಂಡ' ಸ್ತಂಭವನ್ನು ಸ್ಥಾಪಿಸಿದನು. ಇಲ್ಲಿ ಪುರಾತತ್ತ್ವ ಇಲಾಖೆಯ ವಸ್ತುಸಂಗ್ರಹಾಲಯವಿದೆ. ಹಿಂದೆ ಬಳ್ಳಿಗಾವಿಯು ವಿದ್ಯಾರ್ಜನೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳ ಕೇಂದ್ರವಾಗಿತ್ತು.

**ಬೆಂಗಳೂರು:** ೧೯೫೬ರಿಂದ ಬೆಂಗಳೂರು ಕರ್ನಾಟಕದ ರಾಜಧಾನಿಯಾಗಿದೆ. ಆದರೆ ಅದಕ್ಕೂ ಮೊದಲು ೧೮೩೧ರಲ್ಲಿ ಬ್ರಿಟಿಷ್ ಕಮಿಷನರರು ಮೈಸೂರು ರಾಜ್ಯದ ಆಡಳಿತವನ್ನು ಮೈಸೂರು ರಾಜರಿಂದ ವಹಿಸಿಕೊಂಡ ಮೇಲೆ ಬೆಂಗಳೂರು ರಾಜಧಾನಿಯಾಗಿತ್ತು. ಹಳೆಯ ಬೆಂಗಳೂರು ನಗರವು 'ವೃಷಭಾವತಿ' ನದಿಯ ದಂಡೆಯಮೇಲೆ ಇಮ್ಮಡಿ ಕೆಂಪೇಗೌಡನಿಂದ ಕಟ್ಟಲ್ಪಟ್ಟಿತ್ತು. ಇಲ್ಲಿರುವ ಒಂದು ಶಾಸನದ ಪ್ರಕಾರ ಈ ನದಿಯು

ಬಸವನಗುಡಿಯಲ್ಲಿರುವ ದೊಡ್ಡಬಸವಣ್ಣನ ಪಾದದಲ್ಲಿ ಹುಟ್ಟುತ್ತದೆ. ಬೇಗೂರಿನ ಕ್ರಿ.ಶ. ಒಂಬತ್ತನೇ ಶತಮಾನದ ಒಂದು ಶಾಸನದಲ್ಲಿ "ಬೆಂಗುಳೂರು" ಎಂಬ ಉಲ್ಲೇಖವಿದೆ. ಒಂಬತ್ತನೇ ಶತಮಾನದ ಈ ಶಾಸನದಲ್ಲಿ "ನಾಗತ್ತರನ ಮನೆಮಗನ್ ತಿಪ್ಪ ಓರ್ವಣ ಸೆಟ್ಟಿ 'ಬೆಂಗುಳೂರ' ಕಾಳಗದೊಳ್ ಸತ್ತನ್" ಎಂದು ಉಲ್ಲೇಖಿಸಿದೆ. 'ಬೆಂಗು' ಎಂದರೆ 'ರಕ್ತಹೊನ್ನೆ' (ಬೆಂಗೆ ಮರ) ಎಂಬ ಸಸ್ಯ. ಎರಡನೇ ಕೆಂಪೇಗೌಡ ತಾನು ಸ್ಥಾಪಿಸಿದ ಹೊಸ ನಗರಕ್ಕೆ ಬೆಂಗಳೂರು ಎಂದೇ ಹೆಸರಿಸಿದ. ನಂತರ ಆಂಗ್ಲರ ಪ್ರಭಾವದಿಂದಾಗಿ ಇದು ಬ್ಯಾಂಗಳೂರ್ ಎಂದು ರೂಢಿಗೆ ಬಂದಿತು ಎಂಬ ಅಭಿಪ್ರಾಯವಿದೆ. ಮೊದಲು ಇದು ವಿಜಯನಗರ ಅರಸರ ಸಾಮಂತರಾದ ಯಲಹಂಕ ನಾಡಪ್ರಭುಗಳ ರಾಜ್ಯಭಾರ ಕೇಂದ್ರವಾಗಿತ್ತು. ಇಲ್ಲಿ ಇವರು ಕಟ್ಟಿದ ಕೋಟೆ ಇದೆ. ಎರಡನೇ ಕೆಂಪೇಗೌಡನು ೧೫೩೭ರಲ್ಲಿ ವಿಜಯನಗರದ ಅರಸ ಅಚ್ಯುತರಾಯನ ಆದೇಶದ ಮೇರೆಗೆ ಇಲ್ಲಿ ಕೋಟೆ ಕಟ್ಟಿಸಿದನೆಂದು ಹೇಳಲಾಗಿದೆ.

ಗವಿಪುರದಲ್ಲಿರುವ ಗಂಗಾಧರ ಗುಹಾಲಯವನ್ನು ಗಂಗರ ಕಾಲದಲ್ಲಿ ನಿರ್ಮಿಸಲಾಗಿದ್ದು, ಇದನ್ನು ವಿಜಯನಗರ ಅರಸರ ಕಾಲದಲ್ಲಿ ವಿಸ್ತಾರಗೊಳಿಸಲಾಗಿತ್ತು. ಬಸವನಗುಡಿಯಲ್ಲಿರುವ ಬೃಹತ್ತಾದ ಏಕಶಿಲಾ ಬಸವಣ್ಣನನ್ನು ಈ ಅರಸರೇ ಕೆತ್ತಿಸಿದರೆಂದು ತಿಳಿದುಬರುತ್ತದೆ. ಪ್ರತೀ ವರ್ಷ ಕೊನೇ ಕಾರ್ತಿಕ ಸೋಮವಾರ ದೊಡ್ಡ ಬಸವಣ್ಣನ ಸನ್ನಿಧಿಯಲ್ಲಿ 'ಕಡಲೇಕಾಯಿ ಪರಿಷೆ' ಎಂಬ ಬೃಹತ್ ಜಾತ್ರೆಯು ಮೂರು ದಿನಗಳ ಕಾಲ ಜರುಗುತ್ತದೆ. ಆ ಸಂದರ್ಭದಲ್ಲಿ ಸುಮಾರು ಒಂದು ಲಕ್ಷ ಜನ ಸೇರುತ್ತಾರೆ. ಇದೇ ಅರಸರ ಕಾಲದಲ್ಲಿ ಅಲಸೂರಿನ ಬಳಿ ಇರುವ ಸುಂದರವಾದ ಸೋಮೇಶ್ವರ ದೇವಾಲಯವನ್ನು ಕಟ್ಟಲಾಗಿದೆ. ವಿಜಯನಗರದ ಅರಸರು ಬೆಂಗಳೂರಿನಲ್ಲಿ ಬಹಳಷ್ಟು ಕೆರೆಗಳನ್ನು ಕಟ್ಟಿಸಿದ್ದು, ಹಲಸೂರು ಕೆರೆ, ಧರ್ಮಾಂಬುಧಿ ಕೆರೆ (ಈಗಿರುವ ಬಸ್ ನಿಲ್ದಾಣ), ಚೆನ್ನಾಂಬಾ ಕೆರೆ (ಈಗಿನ ಚೆನ್ನಮ್ಮನ ಕೆರೆ, ಬನಶಂಕರಿ ೨ ಹಂತ) ಮತ್ತು ಕೆಂಪಾಂಬುಧಿ ಕೆರೆ ಅವುಗಳಲ್ಲಿ ಕೆಲವು. ೧೬೩೮ರಲ್ಲಿ ವಿಜಯಪುರದ ಸೈನ್ಯ ಬೆಂಗಳೂರನ್ನು ಗೆದ್ದು, ಅದನ್ನು ಶಿವಾಜಿಯ ತಂದೆಯಾದ ಶಾಹಜಿಗೆ ಜಾಗೀರಾಗಿ ಕೊಟ್ಟಿತು. ೧೬೮೭ರವರೆಗೆ ಬೆಂಗಳೂರು ಶಾಹಜಿ ಹಾಗೂ ಅವನ ಮಗ ಏಕೋಜಿಯ ಅಧಿಪತ್ಯದಲ್ಲಿತ್ತು.

೧೬೮೭ರಲ್ಲಿ ಮೊಗಲರ ಸೈನ್ಯ ಮೊಗಲ್ ಚಕ್ರವರ್ತಿ ಜಹಂಗೀರನ ಕಾಲದಲ್ಲಿ ಇದನ್ನು ವಶಪಡಿಸಿಕೊಂಡು ಚಿಕ್ಕದೇವ ರಾಯನಿಗೆ ಗೇಣಿಗೆ (Lease) ಕೊಟ್ಟಿತು. ಚಿಕ್ಕದೇವರಾಯನು ಇಲ್ಲಿ ವೆಂಕಟರಮಣ ದೇವಸ್ಥಾನ ಹಾಗೂ ಹಳೆಯ ಕೋಟೆಯ ಬಳಿಯಲ್ಲಿ ಇನ್ನೊಂದು ಹೊಸ ಕೋಟೆಯನ್ನು ಕಟ್ಟಸಿದನು. ಕೆಂಪೇಗೌಡನ ಪರಿವಾರ ಹಾಗೂ ಮರಾಠರ ಕೈಯಲ್ಲಿ ವ್ಯಾಪಾರ ಹಾಗೂ ಕೈಗಾರಿಕೆಯಲ್ಲಿ ಸಾಕಷ್ಟು ಉನ್ನತಿ ಕಂಡಿದ್ದ ಬೆಂಗಳೂರು, ಚಿಕ್ಕದೇವರಾಯನ ಕಾಲದಲ್ಲಿ ಇನ್ನಷ್ಟು ಪ್ರಗತಿಯನ್ನು ಕಂಡಿತು. ಇವನು ತಮಿಳು ನಾಡಿನ ಬಾರಾಮಹಲಿನಿಂದ ನೇಯ್ಗೆಯವರನ್ನು ಕರೆಸಿ ಇಲ್ಲಿಯೇ ಉಳಿಯುವಂತೆ ಮಾಡಿದ. ನಂತರದಲ್ಲಿ ಬೆಂಗಳೂರನ್ನು ಹೈದರ್‌ನಿಗೆ ಜಹಗೀರಾಗಿ ಕೊಡಲಾಯಿತು. ಮುಂದೆ ಹೈದರನು ಒಡೆಯರುಗಳಿಂದ ಅಧಿಕಾರವನ್ನು ಕಸಿದುಕೊಂಡು, ಕೋಟೆಯನ್ನು ಗ್ರಾನೈಟ್ ಕಲ್ಲುಗಳಿಂದ ಇನ್ನಷ್ಟು ಬಲಪಡಿಸಿ ವಿಸ್ತರಿಸಿದನು.

ಹೈದರನು ಅರಮನೆಯ ಹತ್ತಿರ ಪ್ರಸಿದ್ಧವಾದ ಸಸ್ಯಗಳ ಉದ್ಯಾನ ಲಾಲಬಾಗ್ ಅನ್ನು ರೂಪಿಸಿದನು. ನಂತರ ೧೮೯೮ರಲ್ಲಿ ಇಲ್ಲಿ ತೋಟಗಾರಿಕೆ ಇಲಾಖೆಯವರು ಇಂಗ್ಲೆಂಡಿನ ಕ್ರಿಸ್ಟಲ್ ಪ್ಯಾಲೇಸ್‌ನ ಮಾದರಿಯಲ್ಲಿ ಆಕರ್ಷಕವಾದ ಗಾಜಿನ ಮನೆಯನ್ನು ಕಟ್ಟಿಸಿದರು. ಇತ್ತೀಚೆಗೆ ಈ ಗಾಜಿನ ಮನೆಯನ್ನು ದುರಸ್ತಿಗೊಳಿಸಿ ಆಧುನೀಕರಿಸಿ ಫ್ರಾನ್ಸ್ ಮತ್ತು ಬೆಲ್ಜಿಯಂನಿಂದ ಆಮದು ಮಾಡಿದ ವರ್ಣರಂಜಿತ ಗಾಜುಗಳಿಂದ ಅಲಂಕರಿಸಲಾಯಿತು. ಈಗಲೂ (ನಿರ್ದೇಶಕರಾಗಿದ್ದ ಕ್ರುಂಬಿಗಲ್ ಕಾಲದಿಂದಲೂ) ವರ್ಷಕ್ಕೊಮ್ಮೆ ಗಣರಾಜ್ಯೋತ್ಸವ ಸಂದರ್ಭದಲ್ಲಿ ಹಾಗೂ ವಿಶೇಷ ಸಂದರ್ಭಗಳಲ್ಲಿ ಈ ಗಾಜಿನ ಮನೆಯಲ್ಲಿ ಆಕರ್ಷಕ ಹೂ ಮತ್ತು ಸಸ್ಯ ಸಂಪತ್ತಿನ ಪ್ರದರ್ಶನ ಜರುಗುತ್ತದೆ. ಆ ವೇಳೆಯಲ್ಲಿ ಸಹಸ್ರಾರು ಜನ ಲಾಲ್‌ಬಾಗ್‌ಗೆ ಭೇಟಿ ನೀಡುತ್ತಾರೆ. ೧೭೯೧ರಲ್ಲಿ ಲಾರ್ಡ್ ಕಾರ್ನವಾಲಿಸ್‌ನ ನೇತೃತ್ವದಲ್ಲಿ ಬ್ರಿಟೀಷ್ ಸೈನ್ಯ ಬೆಂಗಳೂರನ್ನು ವಶಪಡಿಸಿಕೊಂಡು, ಟಿಪ್ಪುವಿನೊಂದಿಗೆ ಒಪ್ಪಂದಕ್ಕೆ ಸಹಿ ಮಾಡಿಕೊಂಡು, ಅವನಿಗೆ ಹಿಂದಿರುಗಿಸಿತು. ಟಿಪ್ಪು ಮೊದಲು ಕೋಟೆಯನ್ನು ಕೆಡವಿಸಿದನು. ಯಾಕೆಂದರೆ, ಅದು ಅವನಿಗಿಂತ ವೈರಿಗಳಿಗೇ ಹೆಚ್ಚು ಅನುಕೂಲಕರವಾಗಿತ್ತು. ಹೈದರನ ಕಾಲದಲ್ಲಿ ಬೆಂಗಳೂರು ಒಂದು ಪ್ರಮುಖ ವ್ಯಾಪಾರಿ ಕೇಂದ್ರವಾಗಿ ಬೆಳೆದು ಶ್ರೀರಂಗಪಟ್ಟಣ ಆಸ್ಥಾನದ ಶ್ರೀಮಂತಿಕೆಯ ಐಶಾರಾಮು ಅಗತ್ಯಗಳನ್ನು ಪೂರೈಸುತ್ತಿತ್ತು. ಆದರೆ ಟಿಪ್ಪುವಿನ ಕಾಲಕ್ಕೆ ಇದರ ವ್ಯಾಪಾರವೂ ಕುಗ್ಗಿತು. ಟಿಪ್ಪುವನ್ನು ಸೋಲಿಸಿದ ಬ್ರಿಟೀಷರು ೧೭೯೯ರಲ್ಲಿ ಇದನ್ನು ಮೈಸೂರಿನ ಯುವರಾಜನಿಗೆ ಒಪ್ಪಿಸಿದರು. ದಿವಾನ ಪೂರ್ಣಯ್ಯನವರು ಹಾಳು ಬಿದ್ದ ಕೋಟೆಯನ್ನು ಪುನಃ ಕಟ್ಟಿಸಿದರು. ೧೮೦೯ರಲ್ಲಿ ಬ್ರಿಟಿಷರು ಹಲಸೂರಿನಲ್ಲಿ ತಮ್ಮ ಸೈನ್ಯವನ್ನು ಇರಿಸಿದರು. ಐರೋಪ್ಯರ ಜೀವನ ಶೈಲಿ ಹಾಗೂ ಅವರ ಆಧುನಿಕ ಚಿಂತನೆಗಳಿಂದಾಗಿ ಬೆಂಗಳೂರು ಕಂಟೋನ್ಮೆಂಟ್ ತಲೆಎತ್ತಿತು. ಅಠಾರಾ ಕಚೇರಿ, ಹೈಕೋರ್ಟ್, ಸೆಂಟ್ರಲ್ ಕಾಲೇಜ್ ಹಾಗೂ ವಸ್ತುಸಂಗ್ರಹಾಲಯ ಕಟ್ಟಡಗಳನ್ನು ಐರೋಪ್ಯ ಪುನರುಜ್ಜೀವನ ಯುಗದ ಓರಿಯಂಟಲ್ ಶೈಲಿಯಲ್ಲಿ ಕಟ್ಟಲಾಯಿತು. ಇಂಗ್ಲೀಷ್ ವಿದ್ಯಾಭ್ಯಾಸವನ್ನು ಬೆಂಗಳೂರಿನಲ್ಲಿ ಜಾರಿಗೆ ತರಲಾಯಿತು. ಈ ಅವಧಿಯಲ್ಲಿ ಬೆಂಗಳೂರಿನಲ್ಲಿ ಬಹಳಷ್ಟು ಚರ್ಚ್‌ಗಳನ್ನು ಯೂರೋಪಿನ ಪುನರುಜ್ಜೀವನ ಯುಗದ ಶೈಲಿಯಲ್ಲಿ ಕಟ್ಟಲಾಯಿತು. ಬಿನ್ನಿಮಿಲ್, ಹತ್ತಿಗಿರಣಿ, ಇತರೆ ಆಧುನಿಕ ಬಟ್ಟೆ ಕಾರ್ಖಾನೆಗಳನ್ನು ಸ್ಥಾಪಿಸಲಾಯಿತು. ೧೮೬೨ರಲ್ಲಿ ಮುನಿಸಿಪಾಲಿಟಿಯನ್ನು ಜಾರಿಗೆ ತರಲಾಯಿತು. ಬೆಂಗಳೂರು ಹಾಗೂ ಕಂಟೋನ್ಮೆಂಟ್ ಪ್ರದೇಶಗಳಿಗೆ ಸಿವಿಲ್ ಹಾಗೂ ಮಿಲಟರಿ ಸ್ಟೇಷನ್ ಎಂಬ ಪ್ರತ್ಯೇಕ ಮುನಿಸಿಪಾಲಿಟಿಗಳಿದ್ದವು. ಆದರೆ ೧೯೪೯ರಲ್ಲಿ ಎರಡನ್ನು ಒಂದುಗೂಡಿಸಿ ಬೆಂಗಳೂರು ಸಿಟಿ ಕಾರ್ಪೋರೇಷನ್ನಾಗಿ ಮಾಡಲಾಯಿತು. ಸ್ವಾತಂತ್ರ್ಯಾನಂತರ ಕೇಂದ್ರ ಸರ್ಕಾರವು ಹಲವು ಕಾರ್ಖಾನೆಗಳನ್ನು ಇಲ್ಲಿ ತೆರೆಯಿತು.

ಇಂದು ಬೆಂಗಳೂರು ನಗರದ ಭಾಗವೇ ಆಗಿರುವ ಬೇಗೂರು, ಮಡಿವಾಳ (ತಾವರೆಕೆರೆ), ಕಾಡುಗೋಡಿ, ಹೆಸರುಘಟ್ಟ ಹಾಗೂ ದೊಮ್ಮಲೂರುಗಳಲ್ಲಿ ಹಲವು ಪ್ರಾಚೀನ ದೇವಾಲಯಗಳಿವೆ. ಇವುಗಳ ಪೈಕಿ ಕಾಡುಗೋಡಿಯ ಶೈವ ದೇವಾಲಯವು ಗಂಗರ ಕಾಲದಲ್ಲಿ ರಚನೆಯಾಗಿದ್ದು ವೃತ್ತಾಕಾರದ ನಾಲ್ಕು ಸ್ಥಂಭಗಳನ್ನು ನವರಂಗದಲ್ಲಿ ಹೊಂದಿದೆ. ಅದೇರೀತಿ ದೊಮ್ಮಲೂರಿನ ಚೊಕ್ಕನಾಥ ದೇವಾಲಯವೂ ಸಹ ಇದೇ ಕಾಲಕ್ಕೆ ಸೇರಿದ್ದು ನಂತರ

ಚೋಳರ ಆಳ್ವಿಕೆಯಲ್ಲಿ ದುರಸ್ತಿಗೊಂಡಿರುವುದು ವ್ಯಕ್ತವಾಗುತ್ತದೆ. ಗಂಗರ ಕಾಲದಲ್ಲಿ ನಿರ್ಮಿತವಾದ ಗವಿಗಂಗಾಧರ ಗುಹಾಲಯ ಮತ್ತು ಬಸವನಗುಡಿಯಲ್ಲಿರುವ ಏಕಶಿಲಾ ನಂದಿ ಹಾಗೂ ೧೬೦೦ರಲ್ಲಿ ಕಟ್ಟಿದ ಅವೆನ್ಯೂ ರಸ್ತೆಯಲ್ಲಿರುವ ರಂಗನಾಥಸ್ವಾಮಿ ದೇವಾಲಯ, ಹಲಸೂರಿನಲ್ಲಿರುವ ಸೋಮೇಶ್ವರ ದೇವಾಲಯ, ಮಲ್ಲೇಶ್ವರಂನಲ್ಲಿರುವ ಕಾಡುಮಲ್ಲೇಶ್ವರ ದೇವಾಲಯಗಳು ನಗರದ ಇತರೇ ಕೆಲವು ಗಮನಾರ್ಹ ದೇವಾಲಯಗಳು. ಇದರ ಜೊತೆಗೆ ಹಲವು ಆಧುನಿಕ ದೇವಾಲಯಗಳು ನಂತರ ಕಟ್ಟಲ್ಪಟ್ಟವು. ಮೂರು ಪಂಗಡದವರ, ಧರ್ಮರಾಯ ದೇವಸ್ಥಾನದಲ್ಲಿ ಚೈತ್ರಹುಣ್ಣಿಮೆಯಂದು ಕರಗ ಉತ್ಸವವನ್ನು ಆಚರಿಸಲಾಗುತ್ತದೆ. ಕಾಡುಗೋಡಿಯಲ್ಲಿರುವ ಸತ್ಯಸಾಯಿಬಾಬಾ ಆಶ್ರಮ (ಬೃಂದಾವನ ಎಂದು ಕರೆಯಲ್ಪಡುವ) ಎರಡು ದಶಕಗಳ ಹಿಂದೆಯೇ ಕಟ್ಟಲ್ಪಟ್ಟಿತು. ಇಲ್ಲಿ, ಬಹಳ ದೊಡ್ಡದಾದ ಪ್ರಾರ್ಥನಾ ಮಂದಿರವಿದೆ. ಈ ಆಶ್ರಮ ಸಾಕಷ್ಟು ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿದ್ದು. ಹೈಟೆಕ್ ಮೆಗಾ ಪ್ರಸಿದ್ಧಿ ಪಡೆದಿದೆ. ಬೆಂಗಳೂರಿನ ಹೊರವಲಯದ ಕೆಂಚೇನಹಳ್ಳಿ ಬಳಿ ಇರುವ 'ಓಂಕಾರಬೆಟ್ಟ'ದಲ್ಲಿ, ದ್ವಾದಶ ಜ್ಯೋತಿರ್ಲಿಂಗ ದೇವಾಲಯಗಳ ಮಾದರಿಯಲ್ಲಿಯೇ ಸುಂದರ ದೇವಾಲಯಗಳನ್ನು ನಿರ್ಮಿಸ ಲಾಗಿದ್ದು ಸಾಕಷ್ಟು ಯಾತ್ರಿಕರನ್ನು ಆಕರ್ಷಿಸುತ್ತಿದೆ. ಇಲ್ಲಿಯ ಗುಡ್ಡದ ಮೇಲೆ ಬೃಹತ್ತಾದ ಆಲದಮರವಿದ್ದು ಸುತ್ತಲೂ ಸರ್ವಧರ್ಮ ಮಂಟಪಗಳನ್ನು ನಿರ್ಮಿಸಲಾಗಿದೆ. ಇವನ್ನು ಅವರವರ ಧರ್ಮಕ್ಕೆ ಅನುಸಾರವಾಗಿ ಕಟ್ಟಲಾಗಿದೆ. ಪ್ರತೀ ವರ್ಷವು ಸ್ವಾಮೀಜಿಯ ಹುಟ್ಟಿದ ದಿನದಂದು, ಸಾವಿರಾರು ಭಕ್ತರು ಇಲ್ಲಿಗೆ ಬರುತ್ತಾರೆ. ಎಚ್.ಎಮ್.ಟಿ. ಕಂಪನಿಯವರು ಇಲ್ಲಿ ಬೃಹತ್ತಾದ, ತಾಸಿಗೊಮ್ಮೆ ದೇವಸ್ಥಾನದ ಗಂಟೆ ಹಾಗೂ ಶಂಖವನ್ನು ಊದುವ ಎಲೆಕ್ಟ್ರಾನಿಕ್ ಗಡಿಯಾರವನ್ನು ಸ್ಥಾಪಿಸಿದ್ದಾರೆ. ಇದರ ಶಬ್ದ ೧-೫ ಕಿ.ಮೀ. ದೂರದವರೆಗೂ ಕೇಳಿಸುತ್ತದೆ. ನಗರದಿಂದ ಕೇವಲ, ೧೩ ಕಿ.ಮೀ. ದೂರವಿರುವ ಇದು, ಪ್ರಶಾಂತತೆಯನ್ನು ಬಯಸುವ ಜನರಿಗೆ ಮೆಚ್ಚಿನ ತಾಣವಾಗಿದೆ. ಕನಕಪುರ ರಸ್ತೆಯಲ್ಲಿರುವ 'ಆರ್ಟ್ ಆಫ್ ಲಿವಿಂಗ್' ಆಶ್ರಮವನ್ನು ರವಿಶಂಕರ್ ಗುರೂಜಿ ಅವರು ಇತ್ತೀಚೆಗೆ ಕಟ್ಟಿಸಿದ್ದಾರೆ. ಇಲ್ಲಿ ಭಜನೆ ಹಾಗೂ ಆರ್ಟ ಆಫ್ ಲಿವಿಂಗ್‌ನ ಕೋರ್ಸುಗಳು ವಾರದ ಶಿಬಿರಗಳಲ್ಲಿ ನಡೆಯುತ್ತವೆ. ಇತ್ತೀಚಿನ ದಿನಗಳಲ್ಲಿ ಇಲ್ಲಿಗೆ ಭಾರತದ ಇತರ ಭಾಗಗಳಿಂದಲೂ ವಿದೇಶಗಳಿಂದಲೂ ಪ್ರವಾಸಿಗರು ಬರುತ್ತಾರೆ. ಮೈಸೂರು ರಸ್ತೆಯಲ್ಲಿರುವ ಕೆಂಚೇನಹಳ್ಳಿಯಲ್ಲಿ ಬೃಹತ್ತಾದ ದ್ರಾವಿಡ ಶೈಲಿಯ ರಾಜರಾಜೇಶ್ವರಿ ದೇವಸ್ಥಾನ ಹಾಗೂ ಬನ್ನೇರುಘಟ್ಟ ರಸ್ತೆಯಲ್ಲಿರುವ ಮೀನಾಕ್ಷಿ ದೇವಸ್ಥಾನಗಳು ದಶಕಗಳ ಹಿಂದೆಯೇ ಕಟ್ಟಲ್ಪಟ್ಟಿದ್ದು, ಸಾಕಷ್ಟು ಜನರನ್ನು ಆಕರ್ಷಿಸುತ್ತಿವೆ. ಅಮೃತಾನಂದಮಯಿ ಆಶ್ರಮವು ತನ್ನ ಒಂದು ಶಾಖೆಯನ್ನು ಕೆಂಗೇರಿ ಉಪನಗರದ ಸ್ಥಾಪಿಸಿದ್ದು ಸಾವಿರಾರು ಭಕ್ತರು ಇಲ್ಲಿಗೂ ಬರುತ್ತಾರೆ.ನಗರದ ಸಿದ್ಧಯ್ಯ ರಸ್ತೆಯಲ್ಲಿರುವ ಶ್ರೀ ಕೊಳದಮಠ ಸಾಕಷ್ಟು ಜನಹಿತ ಕಾರ್ಯಗಳನ್ನು ಹಲವು ದಶಕಗಳಿಂದಲೇ ಮಾಡುತ್ತಾ ಬಂದಿದೆ. ಸಣ್ಣ ಗುಡ್ಡದ ಮೇಲಿರುವ **'ಇಸ್ಕಾನ್' ದೇವಾಲಯವು** ತುಂಬಾ ಆಕರ್ಷಕವಾಗಿದೆ. ಇದು ರಾಜಾಜಿನಗರದ ಪಶ್ಚಿಮ ಕಾರ್ಡ್‌ರಸ್ತೆಯಲ್ಲಿ ಏಳು ಎಕರೆಗಿಂತಲೂ ವಿಸ್ತಾರವಾದ ಜಾಗದಲ್ಲಿದ್ದು, ಉದ್ಯಾನನಗರಿಯ ಪ್ರಮುಖ ಪ್ರವಾಸಿ ಕೇಂದ್ರವಾಗಿದೆ. ಈ ದೇವಾಲಯ ಸಂಕೀರ್ಣವನ್ನು ಎಷ್ಟು ಚೆನ್ನಾಗಿ ರೂಪಿಸಿದ್ದಾರೆಂದರೆ ರಾತ್ರಿ ಹೊತ್ತು ಇಡೀ ಗುಡ್ಡವೇ ಬೆಳಗುತ್ತಿರುವ ಹಾಗೆ ಕಾಣುತ್ತದೆ. ಈ ದೇವಾಲಯ ಸಂಕೀರ್ಣವನ್ನು ಕಟ್ಟಿಸಿದ ಬಗ್ಗೆಯೂ ಕುತೂಹಲಕಾರಿಯಾದ ಘಟನೆ ಇದೆ. ೨೫ ವರ್ಷಗಳ ಹಿಂದೆ ಇಸ್ಕಾನ್ (೧೯೭೮) ತಿಂಗಳಿಗೆ ರೂ. ೨,೦೦೦ ಬಾಡಿಗೆಯ ಕಟ್ಟಡದಲ್ಲಿ ಶುರುವಾಗಿತ್ತು. ಕ್ರಮೇಣ ಕಾರ್ಯಕರ್ತರ ಶ್ರಮದಿಂದಾಗಿ ಪ್ರಸಿದ್ಧಿಯನ್ನು ಪಡೆದು ಈಗ ಪ್ರಪಂಚದಾದ್ಯಂತ ಇರುವ ೧೦೮ ಶಾಖೆಗಳಲ್ಲಿ ಇದ್ದು ಪ್ರಮುಖ ಶಾಖೆಯಾಗಿ ಉನ್ನತಿಯನ್ನು ಪಡೆದಿದೆ. ಇದು ನೈಸರ್ಗಿಕವಾಗಿ ಎತ್ತರದ ಪ್ರದೇಶದಲ್ಲಿ ಇರುವುದರಿಂದ, ಇದನ್ನು ಬಹಳ ಸುಂದರವಾಗಿ ಹಾಗೂ ಆಕರ್ಷಕವಾಗಿ ವಿನ್ಯಾಸ ಮಾಡಲಾಗಿದೆ. ಈ ಕಟ್ಟಡದಲ್ಲಿ ದ್ರಾವಿಡ ಶೈಲಿಯ ಐದು ಶಿಖರಗಳಿದ್ದು ಮೂರು ಬೇರೆ ಬೇರೆ ಹಂತಗಳಲ್ಲಿ ಕಟ್ಟಲಾಗಿದೆ. ಪ್ರವೇಶ ದ್ವಾರದಲ್ಲಿ ಆಕರ್ಷಕವಾದ ರಾಯಗೋಪುರವಿದೆ. ಮಧ್ಯ ಗರ್ಭಗೃಹವನ್ನು ಈಜಿಪ್ಟಿನ ಪಿರಾಮಿಡ್‌ನ ಮಾದರಿಯಲ್ಲಿ ರೂಪಿಸಲಾಗಿದ್ದು, ಇದರಲ್ಲಿ ಸಾಲಾಗಿ ಮೂರು ಗರ್ಭಗೃಹಗಳಿವೆ. ಮೊದಲನೆಯದರಲ್ಲಿ ಶ್ರೀನಿತಯಾ ಗೌರಾಂಗನ ಮೂರ್ತಿ, ನಡುವೆ ಶ್ರೀರಾಧಾಕೃಷ್ಣಚಂದ್ರನ ಮೂರ್ತಿ, ಬಲಬದಿಯ ಖಾನೆಯಲ್ಲಿ ಶ್ರೀಕೃಷ್ಣ-ಬಲರಾಮರ ಮೂರ್ತಿಗಳಿವೆ. ಈ ಗರ್ಭಗೃಹಗಳ ಎದುರಿಗೆ ವಿಶಾಲವಾದ ಅಷ್ಟಕೋನಾಕೃತಿಯ ಹಜಾರವಿದೆ. ಇದರ ಮೇಲೆ ಗೋಲಾಕೃತಿಯ ಛತ್ತು ಇದ್ದು, ಇದನ್ನು ಸ್ಟೈನ್ಡ್ ಗ್ಲಾಸ್ ಕಲಾಕೃತಿಗಳಿಂದ ಅಲಂಕರಿಸಲಾಗಿದ್ದು, ನಡುವೆ ಹಿತ್ತಾಳೆಯಿಂದ ವಿಭಜಿಸಲಾಗಿದೆ. ಪಂಚಕೋಣ ವಿಭಜನೆಯನ್ನು ಹೊಂದಿರುವ ಈ ಛತ್ತಿನಲ್ಲಿ ಮೈಸೂರು ಸಂಪ್ರದಾಯದ ಕೃಷ್ಣ ಚರಿತ್ರೆಯ ಉತ್ಕೃಷ್ಟ ಗಾಜಿನ ವರ್ಣಚಿತ್ರಗಳಿವೆ. ಈ ಪಂಚಕೋನಾಕಾರದ ಸಭಾಮಂಟಪದ ಕಲಾತ್ಮಕ ವಿನ್ಯಾಸವನ್ನು ಸೌಂದರ್ಯ ಪ್ರಜ್ಞೆಯನ್ನು ಬಿಂಬಿಸುವ ಸುಂದರ ನಿರ್ಮಾಣವೆಂದು ಪರಿಗಣಿಸಲಾಗಿದೆ.

ಇಸ್ಕಾನ್ ಪ್ರಾಂಗಣದಲ್ಲಿ ಶ್ರೀ ವೆಂಕಟೇಶ್ವರ ಹಾಗೂ ಶ್ರೀ ನರಸಿಂಹದೇವರಿಗೆ ಪ್ರತ್ಯೇಕವಾದ ದ್ರಾವಿಡ ಶೈಲಿಯ ಕಿರು ಶಿಖರವುಳ್ಳ ಗುಡಿಗಳಿವೆ. ಮುಖ್ಯ ದೇವಾಲಯದ ಎದುರಿಗೆ ೫೬ ಅಡಿ ಎತ್ತರದ, ಹಿತ್ತಾಳೆಯ ಕವಚವುಳ್ಳ ಧ್ವಜಸ್ತಂಭವಿದೆ. ಬೆಳಗ್ಗೆ, ಮಧ್ಯಾಹ್ನ ಹಾಗೂ ಸಂಜೆ ಇಲ್ಲಿ ವಿಶೇಷ ಪೂಜೆ ಮಾಡಲಾಗುತ್ತದೆ. ಗೋಕುಲಾಷ್ಟಮಿ, ನಂದೋತ್ಸವ ಹಾಗೂ ವೈಕುಂಠ ಏಕಾದಶಿಯಂದು ವಿಶೇಷ ಪೂಜೆಯನ್ನು ಮಾಡಲಾಗುತ್ತದೆ. ಇವರ 'ಅಕ್ಷಯಪಾತ್ರೆ' ಯೋಜನೆಯು ಸರಕಾರ್ ರಾಜ್ಯದ ವಿವಿಧ ಶಾಲೆಗಳಲ್ಲಿ ಓದುತ್ತಿರುವ ಮಕ್ಕಳಿಗಾಗಿ ಊಟವನ್ನು ಅಕ್ಷರ ದಾಸೋಹ ಯೋಜನೆಯಡಿ ಒದಗಿಸುತ್ತಿದೆ. ಇತ್ತೀಚೆಗೆ, ಈ ಯೋಜನೆಯನ್ನುಹುಬ್ಬಳ್ಳಿ ಹಾಗು ಸುತ್ತಮುತ್ತಲ ಊರುಗಳಿಗೂ ವಿಸ್ತರಿಸಲಾಗಿದೆ. ಪಟ್ಟಣದ ಒಳಗೇ ಇದ್ದರೂ ಭಕ್ತರಿಗೆ ಇಸ್ಕಾನ್ ಒಂದು ಸುಂದರವಾದ ಹಾಗು ಮನತಣಿಸುವ ಶಾಂತ ವಾತಾವರಣವನ್ನು ಒದಗಿಸುತ್ತದೆ. ಕೃಷ್ಣನ ಜೀವನದ ಘಟನೆಗಳು ಹಾಗೂ ಇತರ ವೈಷ್ಣವ ತತ್ವಶಾಸ್ತ್ರದ ಕುರಿತು ಭಾಷಣ ಸ್ಪರ್ಧೆಗಳನ್ನು ಕೂಡಾ ಇಸ್ಕಾನ್ ಏರ್ಪಡಿಸುತ್ತದೆ. ಅಲ್ಲದೆ ವರ್ಷದುದ್ದಕ್ಕೂ ಅನೇಕ ಸಾಂಸ್ಕೃತಿಕ ಚಟುವಟಿಕೆಗಳನ್ನು ಏರ್ಪಡಿಸುತ್ತದೆ. ವೈಷ್ಣವ ತತ್ವಶಾಸ್ತ್ರದ ಉದಾತ್ತ ತತ್ವಗಳ ಪ್ರಚಾರಕ್ಕಾಗಿ 'ಭಕ್ತಿವೇದಾಂತ' ಎಂಬ ಮಾಸಿಕ ಪತ್ರಿಕೆಯನ್ನುಹಾಗು ಇಸ್ಕಾನ್ ಸಂಸ್ಥೆಯ ಆಧ್ಯಾತ್ಮಿಕ ಆದರ್ಶಗಳನ್ನು ತಿಳಿಸುವ ಪುಸ್ತಕಗಳನ್ನು ನಿಯತಕಾಲಿಕವಾಗಿ ಪ್ರಕಾಶಿಸಲಾಗುತ್ತಿದೆ. ವಿಶ್ವಶಾಂತಿ ಧರ್ಮ, ಭಗವಾನ್ ಶಿವ (ವಿಮಾನ ನಿಲ್ದಾಣದ ಸಮೀಪ) ಇತ್ಯಾದಿಗಳು ಬೆಂಗಳೂರಿನ ದೇವಾಲಯಗಳ ಸುಧೀರ್ಘ ಪಟ್ಟಿಗೆ ಹೊಸ ಸೇರ್ಪಡೆಗಳಾಗಿವೆ.

ಕೆಂಗೇರಿ ಗ್ರಾಮದ ಪಕ್ಕದಲ್ಲಿರುವ ರಾಮೋಹಳ್ಳಿಯಲ್ಲಿ ದೊಡ್ಡ ಆಲದಮರದ ಸಮೀಪ ಇರುವ ಬೃಹತ್ 'ಮುಕ್ತಿನಾಗ' ದೇವಾಲಯವು ಚಿಕ್ಕಬೆಟ್ಟದ ಮೇಲೆ ಸುಂದರ ಪರಿಸರದಲ್ಲಿ ನಿರ್ಮಾಣಗೊಂಡಿದೆ. ಪಾರಂಪರಿಕವಾಗಿ ಈ ಸ್ಥಳವನ್ನು ಜುಂಜಪ್ಪ ನ ಬಯಲು, ಎಂದು ಕರೆಯಲಾಗುತ್ತಿದ್ದು, ಹಾವುಗಳು ಅಧಿಕ ಸಂಖ್ಯೆಯಲ್ಲಿ ವಾಸವಾಗಿದ್ದವೆಂದು ನಂಬಲಾಗಿದೆ. ರಾಮೋಹಳ್ಳಿಯು ಬೆಂಗಳೂರು-ಮೈಸೂರು ಹಾದಿಯಲ್ಲಿ ಬೆಂಗಳೂರಿನಿಂದ ಸುಮಾರು ೧೮ ಕಿ.ಮೀ ದೂರದಲ್ಲಿದೆ. ಈ ಸ್ಥಳವನ್ನು ತಲುಪಲು (ಹೆದ್ದಾರಿಯಿಂದ ಐದು ಕಿ.ಮಿ ದೂರದಲ್ಲಿ) ಕೆಂಗೇರಿ ದಾಟಿದ ತರುವಾಯ ಕುಂಬಳಗೋಡು ಗ್ರಾಮದ ಸಮೀಪ ಕವಲು ಹಾದಿ ಹಿಡಿಯ ಬೇಕಾಗುತ್ತದೆ. ರಾಮೋಹಳ್ಳಿ ಬಸ್ ನಿಲ್ದಾಣದಿಂದ ಇದು ಕೇವಲ ಒಂದು ಕಿ.ಮೀ ದೂರದಲ್ಲಿದೆ. ಸ್ಥಳದ ಪಾವಿತ್ರ್ಯಕ್ಕೆ ತಕ್ಕಂತೆ ಮುಕ್ತಿನಾಗ ದೇವಾಲಯದ ನಿರ್ಮಾಣ ನಡೆದಿದೆ. ಗರ್ಭಗೃಹದಲ್ಲಿ ಈಗ ಏಳು ಹೆಡೆಗಳುಳ್ಳ, ಎತ್ತರವಾದ ನಾಗಪ್ರತಿಮೆಯನ್ನು ಪ್ರತಿಷ್ಠಾಪಿಸಲಾಗಿದೆ. ಗರ್ಭಗೃಹದ ಎದುರಿಗೆ ಇರುವ ನವರಂಗವು ನಿರ್ಮಾಣ ಹಂತದಲ್ಲಿದೆ. ಇದನ್ನು ಶುದ್ಧ ದ್ರಾವಿಡ ಶೈಲಿಯಲ್ಲಿ ಗ್ರಾನೈಟ್ ಶಿಲೆಯನ್ನು ಬಳಸಿ ನಿರ್ಮಿಸಿದ ೨೪ ಕಂಭಗಳೊಂದಿಗೆ ನಿರ್ಮಿಸಲು ಯೋಜಿಸಲಾಗಿದೆ. ದೇವಾಲಯದ ಸುತ್ತ ಪಾರ್ವತಿದೇವಿ, ತ್ರಯಂಬಕೇಶ್ವರ, ಲಕ್ಷ್ಮೀನರಸಿಂಹ, ಪಟ್ಟಲದಮ್ಮ ಮುಂತಾದ ಚಿಕ್ಕ ಗುಡಿಗಳಿವೆ. ೨೦೦೫ರಲ್ಲಿ ನಿರ್ಮಾಣಗೊಂಡ ಬೃಹದಾಕಾರದ ಮುಕ್ತಿನಾಗ ದೇವಾಲಯವು ಧರ್ಮಾಧಿಕಾರಿ ದೈವಜ್ಞ ಸುಬ್ರಹ್ಮಣ್ಯಶಾಸ್ತ್ರಿ ಇವರ ನೇತೃತ್ವದಲ್ಲಿ ಸ್ವಾಯತ್ತ ಸಮಿತಿಯ ನಿಯಂತ್ರಣದಡಿ ಕಾರ್ಯನಿರ್ವಹಿಸುತ್ತಿದೆ.

ಮುಸಲ್ಮಾನರಿಗೆ ೧೬೮೭ರಲ್ಲಿ ಮೊಘಲ ಅಧಿಕಾರಿಯೊಬ್ಬ ಕಟ್ಟಿಸಿದ ಪ್ರಾಚೀನವೆನಿಸಿದ ತಾರಾಮಂಡಲ ಸಂಗೀನ ಜಾಮಿಯಾ ಮಸೀದಿ ಈ ನಗರದಲ್ಲಿದೆ. ಕುಂಬಾರಪೇಟೆಯಲ್ಲಿರುವ ಇಬ್ರಾಹಿಂ ಶಾಹ ಸಾಹಿಬ್ ಮಸೀದಿಯನ್ನು ೧೭೬೧ರಲ್ಲಿ ಕಟ್ಟಲಾಯಿತು. ಸಿಟಿ ಮಾರ್ಕೆಟ್‌ನಲ್ಲಿರುವ ಜಾಮಿಯಾ ಮಸೀದಿಯನ್ನು, ೧೯೪೦ರಲ್ಲಿ ಬಿಳಿ ಮಾರ್ಬಲ್‌ನಿಂದ ಕಟ್ಟಲಾಗಿದೆ. ಇದು, ಬಹಳ ದೊಡ್ಡದಿದ್ದು ಹಾಗೂ ಕುತೂಹಲಕಾರಿಯಾದ ಆಧುನಿಕ ಕಟ್ಟಡವಾಗಿದೆ. ಕಾಟನ್ ಪೇಟೆಯಲ್ಲಿರುವ ಮಸ್ತಾನಸಾಬ್-ವಲಿ ದರ್ಗಾವನ್ನು ಹಿಂದೂ ಹಾಗೂ ಮುಸ್ಲಿಮರು ಗೌರವಿಸುತ್ತಾರೆ.

ಶಿವಾಜಿನಗರದಲ್ಲಿರುವ ಸೈಂಟ್ ಮೇರಿ ಬ್ಯಾಸಿಲಿಕಾ ಬೆಂಗಳೂರಿನಲ್ಲಿರುವ ಅತ್ಯಂತ ಹಳೆಯ ಚರ್ಚ್ ಮೂಲತಃ ಇದನ್ನು ೧೬ನೇ ಶತಮಾನದಲ್ಲಿಯೇ ಕಟ್ಟಲಾಗಿತ್ತು, ಅದು ಈಗಿನ ಆಕಾರವನ್ನು ೧೮೩೨ರಲ್ಲಿ ಪಡೆಯಿತು. ಮಹಾತ್ಮಗಾಂಧಿ ರಸ್ತೆಯಲ್ಲಿ ಆಂಗ್ಲರ ಟ್ರಿನಿಟಿ ಚರ್ಚ್ ಇದೆ. ಅದೇ ರಸ್ತೆಯಲ್ಲಿ ಸೇಂಟ್ ಮಾರ್ಕ್ಸ್ ಕ್ಯಾಥೆಡ್ರಲ್ ಇದೆ. ಸೈಂಟ್ ಪ್ಯಾಟ್ರಿಕ್ ಇಗರ್ಜಿಯು ಮೊದಲಿಗೆ ಐರಿಶ್ ಕ್ಯಾಥೊಲಿಕ್ ಸೈನಿಕರಿಗಾಗಿ ನಿರ್ಮಾಣವಾಗಿತ್ತು. ಕಬ್ಬನ್ ರಸ್ತೆಯಲ್ಲಿರುವ ಸೈಂಟ್ ಜ್ಹೇವಿಯರ್ಸ್ ಕ್ಯಾಥೋಲಿಕ್ ಕ್ಯಾಥೆಡ್ರೆಲ್ ದೊಡ್ಡದಾದ ಗ್ರಾನೈಟ್ ಕಟ್ಟಡವಾಗಿದೆ. ಹಡ್ಸನ್ ಮೆಮೋರಿಯಲ್ ಚರ್ಚನ್ನು ಲಂಡನ್ ಮಿಶನ್ ಕಟ್ಟಿಸಿತು.

ನಗರದಲ್ಲಿ ಸಾಕಷ್ಟು ಜೈನಬಸದಿಗಳಿವೆ. ಅವುಗಳಲ್ಲಿ ಗಾಂಧಿನಗರ ಹಾಗೂ ಜಯನಗರದಲ್ಲಿರುವ ಬಸದಿಗಳು ಆಧುನಿಕ ಕಟ್ಟಡಗಳಾದರೂ ಕುತೂಹಲಕಾರಿಯಾಗಿವೆ. ಸಿಖ್ಖರಿಗೆ ಹಲಸೂರಿನಲ್ಲಿ ಗುರುದ್ವಾರವಿದೆ. ಹಾಗೂ ಪಾರ್ಸಿಗಳಿಗೆ ಅಗ್ನಿ ದೇವಾಲಯವಿದೆ. ಲಾಲ್‌ಬಾಗ್ ಹಾಗೂ ಕಬ್ಬನ್‌ಪಾರ್ಕ್ ಬೆಂಗಳೂರಿನ ಸುಂದರವಾದ ಉದ್ಯಾನವನಗಳು ಮಾತ್ರವಲ್ಲದೇ ಬೆಂಗಳೂರಿನ ಹೆಮ್ಮೆಯೂ ಆಗಿವೆ. ವಿಧಾನ ಸೌಧವು ದ್ರಾವಿಡ ಶೈಲಿಯಲ್ಲಿ ಗ್ರಾನೈಟಿನಿಂದ ಕಟ್ಟಿದ ಸುಂದರವಾದ ಬೃಹತ್ ಕಟ್ಟಡವಾಗಿದೆ. ಇದರ ಪಕ್ಕದಲ್ಲಿ 'ವಿಕಾಸ ಸೌಧ' ಎಂಬ ದ್ರಾವಿಡ ಶೈಲಿಯನ್ನೇ ಹೋಲುವ ಕಲ್ಲಿನ ಕಟ್ಟಡವನ್ನು ಸರಕಾರವು ಇತ್ತೀಚೆಗೆ ನಿರ್ಮಿಸಿದೆ. ಟಿಪ್ಪುವಿನ ಅರಮನೆಯು ಮರದ ಕಟ್ಟಡವಾಗಿದ್ದು ಬೆಂಗಳೂರು ಅರಮನೆಯ ಮಾದರಿಯಲ್ಲಿ ಕಟ್ಟಲಾಗಿದೆ. ಇದಲ್ಲದೇ ಬೆಂಗಳೂರಿನಲ್ಲಿ ಸರಕಾರಿ ವಸ್ತುಸಂಗ್ರಹಾಲಯ, ಸರ್ ಎಮ್. ವಿಶ್ವೇಶ್ವರಯ್ಯ ಕೈಗಾರಿಕಾ ವಸ್ತುಸಂಗ್ರಹಾಲಯ ಮತ್ತು ಜವಾಹರಲಾಲ್ ಪ್ಲಾನೆಟೋರಿಯಮ್ ಇದೆ. ಬೆಂಗಳೂರು ನಗರವು ರಸ್ತೆಗಳಿಂದ, ರೈಲುಗಳಿಂದ ಹಾಗು ವಿಮಾನಗಳಿಂದ ಸಮರ್ಪಕವಾಗಿ ಸಂಪರ್ಕ ಹೊಂದಿದ್ದು ಪ್ರವಾಸಿಗರು ಇಲ್ಲಿಗೆ ದೇಶವಿದೇಶಗಳಿಂದ ಬರುತ್ತಾರೆ. ಬೆಂಗಳೂರು ಅತ್ಯುತ್ತಮವಾದ ವಿದ್ಯಾಸಂಸ್ಥೆಗಳನ್ನು ಹೊಂದಿದ್ದು ದೇಶದ ಅತ್ಯುನ್ನತವಾದ ಕಾಲೇಜುಗಳು, ವಿಶ್ವವಿದ್ಯಾಲಯಗಳು ಇಲ್ಲಿವೆ. ಬೆಂಗಳೂರು ವಿಶ್ವವಿದ್ಯಾಲಯ, ಇಂದಿರಾಗಾಂಧಿ ರಾಷ್ಟ್ರೀಯ ಕಲಾ ಕೇಂದ್ರ (IGNCA) ದಕ್ಷಿಣವಲಯ ಕಛೇರಿ, ಜ್ಞಾನಭಾರತಿ, ಕೃಷಿ ವಿಶ್ವವಿದ್ಯಾಲಯ, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ (TATA Institute), ಇನ್‌ಸ್ಟಿಟ್ಯೂಟ್ ಫಾರ್ ಆಸ್ಟ್ರೋಫಿಸಿಕ್ಸ್, ಇಂಡಿಯನ್ ಸ್ಟ್ಯಾಟಿಸ್ಟಿಕಲ್ ಇನ್ಸ್ಟಿಟ್ಯೂಟ್, ಇನ್‌ಸ್ಟಿಟ್ಯೂಟ್ ಫಾರ್ ಸೋಷಿಯಲ್ ಆಂಡ್ ಎಕನಾಮಿಕ್ ಚೇಂಜ್(ISEC), ನ್ಯಾಷನಲ್ ಲಾ ಸ್ಕೂಲ್, ರೀಜನಲ್ ಇನ್‌ಸ್ಟಿಟ್ಯೂಟ್ ಆಫ್ ಇಂಗ್ಲೀಷ್, ನ್ಯಾಷನಲ್ ಏರೋನಿಟಿಕಲ್ ಲ್ಯಾಬೋರೇಟರಿ (ಎನ್.ಎ.ಎಲ್.), ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಇನ್‌ಫರ್ಮೇಶನ್ ಟೆಕ್ನಾಲಜಿ (IIAT), ಭಾರತೀಯ ಬಾಹ್ಯಾಕಾಶ ಸಂಸ್ಥೆ (ISRO) ಮತ್ತು ಇನಸ್ಟಿಟ್ಯೂಟ್ ಆಫ್ ಮ್ಯಾನೇಜಮೆಂಟ್ (IIM) ಇವು ಕೆಲವು ಪ್ರಮುಖವಾದವುಗಳು. ಇಲ್ಲಿ ಟ್ರ್ಯಾಕ್ಟರ್, ರೈಲ್ವೆ ಕೋಚ್, ಏರೋಪ್ಲೇನ್, ರೇಷ್ಮೆ ಸೀರೆ ಹಾಗೂ ಗಂಧದ ಮೂರ್ತಿಗಳನ್ನು ತಯಾರಿಸುವ ಕಾರ್ಖಾನೆಗಳೂ ಇವೆ. ಕಂಪ್ಯೂಟರ್ ವಿಜ್ಞಾನ ಹಾಗೂ ಮಾಹಿತಿ ತಂತ್ರಜ್ಞಾನ (Information Technology) ಇಲ್ಲಿ ಮಾಡಿರುವ ಅದ್ವಿತೀಯ ಸಾಧನೆಗಾಗಿ ಇದನ್ನು ಇಲೆಕ್ಟ್ರಾನಿಕ್ ಸಿಟಿ ಹಾಗೂ ಸಿಲಿಕಾನ್ ಸಿಟಿ ಎಂದು ವಿಶೇಷವಾಗಿ ಕರೆಯಲಾಗುತ್ತದೆ. **ಇಂಟರ್‌ನ್ಯಾಷನಲ್ ಟೆಕ್ನಲಾಜಿಕಲ್ ಪಾರ್ಕ್** (I.T.P.L.): ಬೆಂಗಳೂರು ನಗರದಿಂದ ೧೮ ಕಿ.ಮೀ. ಹಾಗೂ ವಿಮಾನ ನಿಲ್ದಾಣದಿಂದ ೧೨ ಕಿ.ಮಿ. ದೂರದ ವೈಟ್‌ಫೀಲ್ಡ್‌ನಲ್ಲಿ ೨೮ ಹೆಕ್ಟೇರ್ ಪ್ರದೇಶದಲ್ಲಿ ಇಂಟರ್‌ನ್ಯಾಶನಲ್ ಟೆಕ್ ಪಾರ್ಕ್ ಇದೆ. ಇಲ್ಲಿ ಪ್ರಮುಖವಾದ ನಾಲ್ಕು ಕಟ್ಟಡಗಳಿವೆ. 'ಡಿಸ್ಕವರರ್', 'ಇನೋವೇಟರ್', 'ಕ್ರಿಯೇಟರ್' ಹಾಗು'ಎಕ್ಸ್‌ಪ್ಲೋರರ್' ಇವು ೧.೬ ಮಿಲಿಯ ಚದರ ಅಡಿಯಷ್ಟುವಿಸ್ತೀರ್ಣವಿದ್ದು, ಕಚೇರಿ, ಉತ್ಪನ್ನ, ವಾಣಿಜ್ಯ ಮತ್ತು ಸಾಮಾನ್ಯ ವಹಿವಾಟುಗಳಿಗಾಗಿ ನಿಗದಿತವಾಗಿದೆ. ಈ ಎಲ್ಲ ಕಟ್ಟಡಗಳು ಕೇಂದ್ರೀಯ ಹವಾನಿಯಂತ್ರಣ ವ್ಯವಸ್ಥೆಯನ್ನು ಹೊಂದಿದ್ದು, ಆಕರ್ಷಕ ಹಿನ್ನೆಲೆಯಲ್ಲಿ ನಿರ್ಮಾಣವಾಗಿವೆ. ಈ ಕಟ್ಟಡಗಳ ಮುಮ್ಮುಖವು ಕೆಳಗಿನ ಮೂರು ಮಹಡಿಗಳಿಗೆ ಕಣಶಿಲೆಯ ಕಲ್ಲುಹಲಗೆಗಳನ್ನು ಹೊಂದಿದ್ದು, ಮೇಲಿನ ಮಹಡಿಗಳಿಗೆ ಗಾಜು ಮತ್ತು ಅಲ್ಯುಮಿನಿಯಂ ಫಲಕಗಳನ್ನು ಹೊಂದಿಸಲಾಗಿದೆ. ಈ ನಾಲ್ಕು ಕಟ್ಟಡಗಳು ಕೆಳಮಹಡಿಯಲ್ಲಿ ಒಂದಕ್ಕೊಂದು ಸಂಪರ್ಕ ಹೊಂದಿದ್ದು, ಅದರೊಳಗಡೆ ಟೆಕ್‌ಪಾರ್ಕ್

ಮಾಲ್ ಇದೆ. ಈ ಮಾಲ್‌ನಲ್ಲಿ ಅನೇಕ ಅನುಕೂಲತೆಗಳು, ಸೇವೆಗಳು, ಮನರಂಜನಾ ಕೇಂದ್ರ, ಮುಂತಾದವು, ದುಡಿದು ಜೀವಿಸಲು ಮತ್ತು ಆಟವಾಡುವ ಪರಿಸರಕ್ಕೆ ಪೂರಕವಾಗಿವೆ. ಕಚೇರಿಯ ಸ್ಥಳಾವಕಾಶ ಘಟಕಗಳನ್ನು ಆಯಾ ಬಾಡಿಗೆದಾರರ ಅವಶ್ಯಕತೆಗಳಿಗೆ ಸರಿಯಾಗಿ ನಿರ್ಮಿಸಲಾಗಿದ್ದು, ಅನೇಕ ರೀತಿಯಲ್ಲಿ ಅವುಗಳನ್ನು ಜೋಡಿಸುವ ಸಾಧ್ಯತೆಗಳಿವೆ. ಕಚೇರಿಗಳಿಗಾಗಿ ಘಟಕಗಳು ಭೋಗ್ಯಕ್ಕೆ ಇಲ್ಲವೆ ಖರೀದಿಗಾಗಿ ದೊರೆಯುತ್ತವೆ. ಜಾಗತಿಕ ಮಟ್ಟದ ಸೇವೆ ಅನುಕೂಲತೆಗಳಷ್ಟೆ ಅಲ್ಲದೇ ಈ ಕಟ್ಟಡಗಳಿಗೆ ವಿದ್ಯುಚ್ಛಕ್ತಿ, ನೀರು, ಸಂಪರ್ಕ ಜಾಲಗಳ ನಿರಂತರ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಇದನ್ನು ಪಾರ್ಕ್‌ನಲ್ಲಿರುವ ಐದು ಪ್ರಮುಖ ಸೇವಾ ಸಂಸ್ಥೆಗಳು ನೋಡಿಕೊಳ್ಳುತ್ತವೆ. ಐಟಿಪಿಎಲ್ ಪ್ಲಗ್-ಆಂಡ್-ಪ್ಲೇ ಪರಿಕಲ್ಪನೆಯನ್ನು ಆಧರಿಸಿ ಕಟ್ಟಲ್ಪಟ್ಟಿದ್ದು, ಬಾಡಿಗೆದಾರರಿಗೆ ಎಲ್ಲಾ ಅನುಕೂಲತೆಗಳನ್ನು, ಸಾಕಷ್ಟು ಕಾರು ನಿಲ್ದಾಣಗಳನ್ನು, ಸ್ಟೇಟ್ ಆಫ್ ದಿ ಆರ್ಟ್ ಬಿಲ್ಡಿಂಗ್ ಮ್ಯಾನೇಜಮೆಂಟ್ ವ್ಯವಸ್ಥೆಯನ್ನು ಒಳಗೊಂಡು ವ್ಯಾಪಾರ ವಿದ್ಯಮಾನವನ್ನು ಹರ್ಷದಾಯಕವಾಗಿಸಿದೆ. ಐ.ಟಿ. ಪಾರ್ಕ್, ಐ.ಟಿ. ವ್ಯವಸ್ಥೆಯಲ್ಲಿ ಒಂದು ಮೈಲುಗಲ್ಲಾಗಿದ್ದು, ಐಟಿ ವ್ಯಾಪಾರ ಅಥವಾ ಐ.ಟಿ.ಗೆ ಸಂಬಂಧಿಸಿದ ಸೇವೆಗಳಿಗೆ ಅವಶ್ಯಕ ತಾಣವೆನಿಸಿದೆ. ಇದರಲ್ಲಿ ೫೧ ಅಪಾರ್ಟಮೆಂಟ್‌ಗಳು, ಅಂತರ್‌ವ್ಯವಸ್ಥೆ ಮತ್ತು ಇತರ ಅನುಕೂಲತೆಗಳುಳ್ಳ ವಾಸದ ಕಟ್ಟಡಗಳಿವೆ. ತಮ್ಮ ಕಚೇರಿಗಳ ಹತ್ತಿರದಲ್ಲಿಯೇ ವಾಸವಾಗಿರಬೇಕೆಂದವರಿಗೆ ಇದು ಅತ್ಯುತ್ತಮ ವಸತಿ ಆಗಿದೆ. ಪ್ರತಿಯೊಂದು ಅಪಾರ್ಟಮೆಂಟಿಗೂ ಇಲ್ಲಿ ಪ್ರತ್ಯೇಕವಾದ ವಾಹನ ನಿಲ್ಲಿಸುವ ಸ್ಥಳವಿದೆ ಹಾಗೂ ಮಕ್ಕಳಿಗೆ ಆಟವಾಡಲು ಮೈದಾನವೂ ಇದೆ. ಇಲ್ಲಿ ವಾಸವಾಗಿರುವ ಜನರು ಟೆಕ್‌ಪಾರ್ಕ್ ಮಾಲ್‌ನ ಎಲ್ಲಾ ಅನುಕೂಲತೆಗಳನ್ನು ಅನುಭವಿಸುತ್ತಾರೆ. ಇದರಲ್ಲಿ, ಬ್ಯಾಂಕಿಂಗ್, ಶಾಪಿಂಗ್, ರೆಸ್ಟೋರೆಂಟ್, ಪ್ರವಾಸಕ್ಕಾಗಿ ಕಾಯ್ದಿರಿಸುವಿಕೆ ಹಾಗೂ ಆರೋಗ್ಯ ಕ್ಲಬ್ ಮುಂತಾದ ಎಲ್ಲಾ ವ್ಯಾಪಾರಿ ಅನುಕೂಲತೆಗಳಿವೆ. ವಸತಿ ಕಟ್ಟಡಗಳು ವಾಸಿಸಲು ಸುರಕ್ಷಿತ ಸ್ಥಳವಾಗಿದ್ದು, ಅಹೋರಾತ್ರಿ ಸಂರಕ್ಷಣಾ ವ್ಯವಸ್ಥೆಯನ್ನು ಹೊಂದಿವೆ. ಬೆಂಗಳೂರಿನ ಐಟಿ ಕಾರಿಡಾರ್ ಇಲೆಕ್ಟ್ರಾನಿಕ್ ಸಿಟಿಯಿಂದ ಹಳೆಮದ್ರಾಸ್ ರಸ್ತೆಯವರೆಗೆ ಹರಡಿದ್ದು, ನೂರಾರು ಸಾಫ್ಟ್‌ವೇರ್ ಮತ್ತು ಹಾರ್ಡ್‌ವೇರ್ ಕಂಪನಿಗಳಿವೆ. ಜಗತ್ತಿನ ಬೇರೆ ಬೇರೆ ಭಾಗಗಳಿಂದ ಬರುವ ಜನರಿಗೆ ಇದೊಂದು ಉತ್ತಮ ಪ್ರವಾಸೀ ಕೇಂದ್ರವಾಗಿದೆ.

ಪ್ರಸ್ತುತ ಈ ಮಹಾನಗರವು ಬೃಹತ್ ಮಹಾನಗರ ಪಾಲಿಕೆಯನ್ನು ಹೊಂದಿದ್ದು ಅಂತರಾಷ್ಟ್ರೀಯ ಮಟ್ಟದಲ್ಲಿ 'ಸಿಲಿಕಾನ್‌ನಗರ'ವೆಂದು ಜನಪ್ರಿಯತೆಯನ್ನು ಪಡೆದಿದೆ, ಜೊತೆಗೆ ಹಲವಾರು ಮೂಲಭೂತ ಸೌಕರ್ಯಗಳನ್ನು ವಿಶ್ವಮಟ್ಟದ ತಾಂತ್ರಿಕತೆಯೊಂದಿಗೆ ತೀವ್ರಗತಿಯಲ್ಲಿ ಒದಗಿಸಲಾಗುತ್ತಿದೆ. ಇತ್ತೀಚೆಗೆ 'ನಮ್ಮಮೆಟ್ರೋ' ಎಂಬ ಹೊಸ ರೈಲು ಹಾಗೂ ಮಾನೋ ರೈಲುಸೌಲಭ್ಯಗಳನ್ನು ಒದಗಿಸುವ ದಿಸೆಯಲ್ಲಿ ಸಾಕಷ್ಟು ಪ್ರಗತಿಯಾಗಿದ್ದು ಸಧ್ಯದಲ್ಲೇ ಈ ನಗರದ ಪೂರ್ವ-ಪಶ್ಚಿಮ ಹಾಗೂ ಉತ್ತರ-ದಕ್ಷಿಣ ದಿಕ್ಕುಗಳನ್ನು ಶೀಘ್ರವಾಗಿ ಸಂಪರ್ಕಿಸುವ ಮಹತ್ತರ ನಮ್ಮ ಮೆಟ್ರೋ ರೈಲು ಯೋಜನೆಯನ್ನು ಕಾರ್ಯಗತಗೊಳಿಸುವುದು ಮಹಾನಗರ ಪಾಲಿಕೆಯ ಉದ್ದೇಶವಾಗಿದೆ. ಈ ಸಂಬಂಧ ಈಗಾಗಲೇ ಬೈಯಪ್ಪನಹಳ್ಳಿ – ಮಹಾತ್ಮಗಾಂಧಿ ರಸ್ತೆ ವಿಧಾನಸೌಧ, ಮೆಜೆಸ್ಟಿಕ್, ಕೇಂದ್ರ ರೈಲು ನಿಲ್ದಾಣ, ಮಾಗಡಿ ರಸ್ತೆ, ವಿಜಯನಗರ ಕತ್ತರಿಗುಪ್ಪೆ ದೀಪಾಂಜಲಿನಗರ ಬಿಹೆಚ್‌ಇಎಲ್ ನಾಯಂಡಹಳ್ಳಿ ಮಾರ್ಗವು ಸಾರ್ವಜನಿಕ ಸೇವೆಯನ್ನು ಒದಗಿಸುತ್ತಿದೆ. ಇದೇ ರೀತಿ ನಾಗಸಂದ್ರ-ಯಶವಂತಪುರ-ಮಂತ್ರಿಮಹಲ್ ನಡುವಣ ಮೆಟ್ರೋ ಸೇವೆಯೂ ಲಭ್ಯವಿದೆ. ನಡುವೆ ಮೆಟ್ರೋ ಸಂಚಾರ ಆರಂಭವಾಗಿದೆ. ಇದಲ್ಲದೇ ಹಲವಾರು ವಾಹನ ದಟ್ಟಣೆಯಿರುವ ಸ್ಥಳಗಳಲ್ಲಿ ಮೇಲು ರಸ್ತೆ (Fly over) ಹಾಗೂ ಸುರಂಗ ರಸ್ತೆಗಳನ್ನು (Under Pass) ಅಳವಡಿಸಿರುವುದು ನಗರದ ಮಾದರಿ ಸಾರಿಗೆ-ಸಂಪರ್ಕ ವ್ಯವಸ್ಥೆಗೆ ಕೈಗನ್ನಡಿಯಾಗಿದೆ.

**ಮಂಗಳಗ್ರಹ ಪ್ರದಕ್ಷಿಣಾ ಮಿಷನ್:**–'ಮಂಗಳಯಾನ' ಯೋಜನೆಯಡಿ ನವೆಂಬರ್ ಐದು ೨೦೧೩ರಲ್ಲಿ ಇಸ್ರೊ ಉಡಾವಣೆ ಮಾಡಿದ ಕೃತಕ ಉಪಗ್ರಹವು ೨೪-೯-೧೪ ರಿಂದ ಮಂಗಳ ಗ್ರಹದ ಸುತ್ತ ಪ್ರದಕ್ಷಿಣೆ ಹಾಕುತ್ತಿದ್ದು, ವಿಶ್ವದಲ್ಲಿ ಈ ಸಾಧನೆಗೈದ ರಾಷ್ಟ್ರಗಳಲ್ಲಿ ನಾಲ್ಕನೆಯದಾಗಿದೆ. ಈ ಯೋಜನೆ ಮಾಡಿದ ೪೫೦ ಕೋಟಿ ರೂ. ಅತ್ಯಂತ ಕಡಿಮೆ ವೆಚ್ಚ ಇದು ಒಂದು ಮೈಲಿಗಲ್ಲು ಆಗಿದೆ. ಇದನ್ನು ಬೆಂಗಳೂರು ಇಸ್ರೋ ಕೇಂದ್ರದಿಂದ ನಿರ್ವಹಿಸಲಾಗುತ್ತಿದೆ.

**ಬೇಲೂರು:** ಹಾಸನ ಜಿಲ್ಲೆಯಲ್ಲಿರುವ ಬೇಲೂರು (ಬೆಂಗಳೂರಿನಿಂದ ೨೨೨ ಕಿ.ಮೀ.) ತಾಲೂಕು ಕೇಂದ್ರವಾಗಿದ್ದು ಹೊಯ್ಸಳರ ಕಾಲದ ದೇವಾಲಯ ಸಂಕೀರ್ಣದಿಂದಾಗಿ ಪ್ರಸಿದ್ಧಿ ಪಡೆದಿದೆ. ಹೊಯ್ಸಳ ವಿಷ್ಣುವರ್ಧನನು ಚೋಳರ ಮೇಲೆ ವಿಜಯವನ್ನು ಸಾಧಿಸಿದ ನೆನಪಾಗಿ ಕ್ರಿ.ಶ. ೧೧೧೭ರಲ್ಲಿ ಇಲ್ಲಿ ಚೆನ್ನಕೇಶವ ದೇವಾಲಯವನ್ನು ಕಟ್ಟಿಸಿ, ದೇವರನ್ನು ವಿಜಯನಾರಾಯಣ ಎಂದು ಕರೆದನು. ಈ ಅದ್ಭುತವಾದ ಮೂರ್ತಿಯು ೩.೭ ಮೀಟರ್ ಎತ್ತರವಿದೆ. ಜಗತಿಯ ಮೇಲೆ ನಿಂತಿರುವ ಈ ದೇವಾಲಯದ ಹೊರಗೋಡೆಗಳಲ್ಲಿ ಚಿತ್ತಾಕರ್ಷಕ ಶಿಲ್ಪಕಲಾಕೃತಿಗಳಲ್ಲದೇ ವಿವಿಧ ಭಂಗಿಗಳಲ್ಲಿ ನರ್ತಿಸುತ್ತಿರುವ ಮದನಿಕೆಯರ ಪ್ರಮಾಣಬದ್ಧ ಶಿಲ್ಪಗಳು. ಕಪ್ಪೆಚೆನ್ನಿಗ, ಆಂಡಾಳ್, ಸೌಮ್ಯನಾಯಕಿ ಮುಂತಾದವರ ಸಣ್ಣ ಗುಡಿಗಳು ಈ ದೇವಾಲಯದ ವಿಶಾಲವಾದ ಆವರಣದಲ್ಲಿದ್ದು ಅದನ್ನು ಪ್ರಾಕಾರವು ಸುತ್ತುವರೆದಿದೆ. ಮುಂದೆ ವಿಜಯನಗರದ ಸಾಮಂತರಾಗಿದ್ದ ಬೇಲೂರು ನಾಯಕರು ಕಟ್ಟಿಸಿದ ಗೋಪುರವಿದೆ. ಬೇಲೂರು, ಹೊಯ್ಸಳ ಅರಸರ ರಾಜಧಾನಿಯಾಗಿದ್ದು ಹೊಯ್ಸಳಕಲೆಗೆ ಅತ್ಯುತ್ತಮ ಉದಾಹರಣೆಯನ್ನೊದಗಿಸಿದೆ.

**ಭದ್ರಾವತಿ:** ತಾಲೂರು ಕೇಂದ್ರವಾದ ಇದು ಕೈಗಾರಿಕಾ ನಗರವಾಗಿದ್ದು, ಶಿವಮೊಗ್ಗ ಜಿಲ್ಲೆಗೆ ಸೇರಿದೆ. ಬೆಂಗಳೂರಿನಿಂದ ೨೫೩ ಕಿ.ಮೀ. ದೂರದಲ್ಲಿದೆ. ಹಿಂದೆ 'ಬೆಂಕಿಪುರ' ಎಂದು ಕರೆಯಲ್ಪಡುತ್ತಿತ್ತು. ಇಲ್ಲಿ ಹೊಯ್ಸಳ ಶೈಲಿಯ ಸುಮಾರು ೧೩ನೇ ಶತಮಾನದ ಲಕ್ಷ್ಮೀನರಸಿಂಹ ದೇವಾಲಯವಿದೆ. ಭದ್ರಾ ನದಿಯ ದಂಡೆಯಲ್ಲಿ ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ, ಸಿಮೆಂಟು ಕಾರ್ಖಾನೆ (೧೯೩೮) ಹಾಗೂ ಮೈಸೂರು ಕಾಗದ ಕಾರ್ಖಾನೆಗಳು (೧೯೩೫) ಕೆಲಸ ಮಾಡುತ್ತಿವೆ.

**ಭಾಗಮಂಡಲ:** ಕೊಡಗು ಜಿಲ್ಲೆಯಲ್ಲಿರುವ ಪ್ರಸಿದ್ಧ ತೀರ್ಥಕ್ಷೇತ್ರವಾಗಿದ್ದು ಬೆಂಗಳೂರಿನಿಂದ ೨೮೮ ಕಿ.ಮೀ. ತಾಲೂಕು ಕೇಂದ್ರ ಹಾಗೂ ಮಡಿಕೇರಿಯಿಂದ ೩೫ ಕಿ.ಮೀ ದೂರದಲ್ಲಿ, ಕಾವೇರಿ ನದಿಯ ದಂಡೆಯ ಮೇಲಿದೆ. ಇಲ್ಲಿ ಭಗಂಡೇಶ್ವರನೆಂಬ

ಪ್ರಾಚೀನ ಶಿವಾಲಯವಿದೆ. ಇದಕ್ಕೆ ಇಳಿಜಾರಾದ ಚಾವಣಿ ಇದ್ದು, ತಾಮ್ರದ ತಗಡನ್ನು ಹೊದಿಸಲಾಗಿದೆ. ಶಿವಪುರಾಣದಿಂದಾಯ್ದ ಕಥಾನಕಗಳನ್ನು ಒಳಗೊಂಡ ಬಣ್ಣ ಹಚ್ಚಲಾಗಿರುವ ನೈಪುಣ್ಯತೆಯಿಂದ ಕೆತ್ತಲಾದ ಆಕರ್ಷಕವಾದ ಕಾಷ್ಟ ಶಿಲ್ಪಗಳು ಇದರಲ್ಲಿವೆ. ಆಕರ್ಷಕವಾದ ದೊಡ್ಡ ಹಾಗೂ ಸಣ್ಣ ಕಾಷ್ಟ ಮೂರ್ತಿಗಳು ನೋಡುಗರ ಕಣ್ಮನಗಳನ್ನು ಸೆಳೆಯುತ್ತವೆ. ಇಲ್ಲಿ ಗಣಪತಿ, ವಿಷ್ಣು ಹಾಗೂ ಸುಬ್ರಹ್ಮಣ್ಯ ದೇವಾಲಯಗಳು ಇವೆ. ಶಾಂತವಾದ ಹಾಗೂ ನಿಸರ್ಗ ಸುಂದರವಾದ ಈ ತಾಣದಲ್ಲಿ ತುಲಾ ಸಂಕ್ರಮಣದಲ್ಲಿ ದೊಡ್ಡ ಜಾತ್ರೆ ನಡೆಯುತ್ತದೆ. ಕಾವೇರಿ ನದಿಯ ಉಗಮ ಸ್ಥಾನವಾದ ತಲಕಾವೇರಿಗೆ ಇಲ್ಲಿಂದಲೇ ತೆರಳಬೇಕು.

**ಮಡಿಕೇರಿ:** ಬೆಂಗಳೂರಿನಿಂದ ೨೫೦ ಕಿ.ಮೀ. ದೂರದಲ್ಲಿರುವ ಮಡಿಕೇರಿಯು ಪಶ್ಚಿಮ ಘಟ್ಟದ ಸಾಲಿನಲ್ಲಿದ್ದು, ಕೊಡಗು ಜಿಲ್ಲೆಯ ಕೇಂದ್ರಸ್ಥಾನವಾಗಿದೆ. ಇದು ಹಾಲೇರಿ ರಾಜವಂಶದವರ ರಾಜಧಾನಿಯಾಗಿದ್ದು, ಇವರ ಆಡಳಿತವನ್ನು ಬ್ರಿಟಿಷರು ೧೮೩೪ರಲ್ಲಿ ಅಂತ್ಯಗೊಳಿಸಿದರು. ಇಲ್ಲಿ ಕೋಟೆ ಹಾಗೂ ಅರಮನೆಯ ಕಟ್ಟಡಗಳಿದ್ದು ಅದರಲ್ಲಿ ಈಗ ಜಿಲ್ಲಾ ಕಚೇರಿಯು ಕಾರ್ಯನಿರ್ವಹಿಸುತ್ತಿದೆ. ಈ ಕಟ್ಟಡದ ಗೋಡೆಗಳಲ್ಲಿ ಕೆಲವು ವರ್ಣಚಿತ್ರಗಳಿವೆ. ಕೋಟೆಯೊಳಗೆ ಒಂದು ಹಳೆಯ ಚರ್ಚ್ ಇದ್ದು, ಇದರಲ್ಲಿ ರಾಜ್ಯ ಪುರಾತತ್ವ ವಸ್ತು ಸಂಗ್ರಹಾಲಯವಿದೆ. ಇಲ್ಲಿರುವ ಓಂಕಾರೇಶ್ವರ ದೇವಾಲಯ ಹಾಗು ಕೊಡಗು ರಾಜರಾದ ದೊಡ್ಡ ವೀರರಾಜೇಂದ್ರ ಮತ್ತು ಲಿಂಗರಾಜೇಂದ್ರರ ಗೋರಿಗಳು ಇಂಡೋ-ಸಾರಸೆನಿಕ್ ಶೈಲಿಯಲ್ಲಿವೆ. ರಾಜಾಸೀಟ್ ಎಂದು ಕರೆಯಲಾಗುವ ನಿಸರ್ಗ ರಮಣೀಯ ಪ್ರವಾಸಿ ತಾಣದಲ್ಲಿ ಪ್ರಕೃತಿಯ ವಿಹಂಗಮ ದೃಶ್ಯಗಳನ್ನು ರಾಜಾ-ರಾಣಿ ಕುಳಿತು ವೀಕ್ಷಿಸಲು ನಿರ್ಮಿಸಿರುವ ಆಸನವು ಕೊಳ್ಳಕ್ಕೆ ಮುಖಮಾಡಿದ್ದು, ಸುತ್ತಲಿನ ಕಾಫಿ ಮತ್ತು ಭತ್ತದ ಬೆಳೆಯುಳ್ಳ ದಟ್ಟ ಹಸಿರು ಭೂಮಿಯ ವಿಶಾಲ ಅಮೋಘ ದೃಶ್ಯವು ಕಣ್ಣೆದುರಿಗೆ ಗೋಚರಿಸುತ್ತದೆ. ಕೊಡವರಿಗೆ ತಮ್ಮದೇ ಆದ ವಿಶಿಷ್ಟವಾದ ಸಂಸ್ಕೃತಿ ಹಾಗೂ ಜಾನಪದ ಕಲೆಗಳಿವೆ. ಇವರು ಆತಿಥ್ಯಕ್ಕೆ ಹಾಗೂ ಶೌರ್ಯಕ್ಕೆ ಪ್ರಸಿದ್ಧರಾಗಿದ್ದಾರೆ. ಮಡಿಕೇರಿಯ ಬಳಿ ಇರುವ ದಿವಂಗತ ಫೀಲ್ಡ್ ಮಾರ್ಷಲ್ ಕೆ.ಎಮ್. ಕಾರಿಯಪ್ಪ ಅವರ ಮನೆ 'ರೋಶನಾರ' ಸುಸ್ಥಿತಿಯಲ್ಲಿದ್ದು ಸಂರಕ್ಷಿಸಲಾಗಿದೆ. ಅಬ್ಬಿ ಜಲಪಾತವು ಇಲ್ಲಿಗೆ ಅನತಿ ದೂರದಲ್ಲಿದೆ.

**ಮದ್ದೂರು:** ಜಿಲ್ಲಾ ಕೇಂದ್ರ ಮಂಡ್ಯದಿಂದ ೨೦ ಕಿ.ಮೀ ದೂರದಲ್ಲಿರುವ ಮದ್ದೂರು ಒಂದು ತಾಲೂಕು ಕೇಂದ್ರ. ಪ್ರಾಚೀನ ತಮಿಳು ಶಾಸನಗಳಲ್ಲಿ ಇದನ್ನು 'ಮರಂದೂರು'(ತಮಿಳಿನಲ್ಲಿ 'ಮರಂದು'ಎಂದರೆ ಔಷಧ ಎಂದರ್ಥ) ಕರೆಯಲಾಗಿದೆ. ಅಲ್ಲಿರುವ ದೇವಾಲಯದ ದೇವರನ್ನು 'ವೈಜನಾಥ ಅಥವಾ ವೈದ್ಯನಾಥ' (ಔಷಧ ದೇವತೆ) ಎಂದು ಉಲ್ಲೇಖಿಸಲಾಗಿದೆ. ಸಂಪ್ರದಾಯದ ಪ್ರಕಾರ ಕದಂಬಮುನಿ ಮತ್ತು ಅರ್ಜುನರಿಗೆ ಅನ್ವಯಿಸಲಾಗುವ ಈ ಊರನ್ನು ಹೊಯ್ಸಳರ ಶಾಸನಗಳಲ್ಲಿ 'ನರಸಿಂಹ ಚತುರ್ವೇದಿ ಮಂಗಲಂ' ಎಂಬ ಅಭಿದಾನದೊಂದಿಗೆ ಕರೆಯಲಾಗಿದೆ. ಮದ್ದೂರಮ್ಮ ಇಲ್ಲಿಯ ಗ್ರಾಮದೇವತೆ. ಇಲ್ಲಿರುವ ಹೊಯ್ಸಳರ ಕಾಲದ ನರಸಿಂಹ ದೇವಾಲಯದಲ್ಲಿ ಏಳು ಅಡಿ ಎತ್ತರದ ನರಸಿಂಹ ವಿಗ್ರಹವಿದೆ. ವರದರಾಜ ದೇವಾಲಯವು ಚೋಳರ ಕಾಲದ ರಚನೆಯಾಗಿದ್ದು, ಗರ್ಭಗೃಹದಲ್ಲಿ ೧೨ ಅಡಿ ಎತ್ತರದ ವರದರಾಜ ವಿಗ್ರಹವಿದೆ. ಮದ್ದೂರಿನಿಂದ ಐದು ಕಿ.ಮೀ ದೂರದಲ್ಲಿ ಶಿಂಷಾನದಿಯ ತೀರದಲ್ಲಿರುವ ವೈದ್ಯನಾಥಪುರವು ಚೋಳರ ಕಾಲದ ವೈದ್ಯನಾಥ ದೇವಾಲಯದಿಂದ ಪ್ರಸಿದ್ಧವಾಗಿದೆ. ಮದ್ದೂರಿಗೆ ರೈಲು ನಿಲ್ದಾಣವನ್ನು ಒದಗಿಸಿರುವ ಶಿವಪುರವು ೧೯೩೮ರಲ್ಲಿ ಮೈಸೂರು ಕಾಂಗ್ರೆಸ್‌ನ ಮೊದಲನೇ ಸಮ್ಮೇಳನ ಹಾಗೂ ಧ್ವಜ ಸತ್ಯಾಗ್ರಹ ನಡೆದ ಸ್ಥಳವಾಗಿದೆ. ಅದರ ನೆನಪಿಗಾಗಿ ಧ್ವಜ ಸತ್ಯಾಗ್ರಹ ಸೌಧವೆಂಬ ಸ್ಮಾರಕ ಕಟ್ಟಡವನ್ನು ನಿರ್ಮಿಸಲಾಗಿದೆ.

**ಮಧುಗಿರಿ:** ತುಮಕೂರು ಜಿಲ್ಲೆಯಲ್ಲಿರುವ ಮಧುಗಿರಿಯು ತುಮಕೂರಿನಿಂದ ೪೩ ಕಿ.ಮೀ ದೂರದಲ್ಲಿರುವ ತಾಲೂಕು ಕೇಂದ್ರ ಇದು ಬೃಹತ್ತಾದ ಗಿರಿದುರ್ಗಕ್ಕೆ ಪ್ರಸಿದ್ಧವಾಗಿದೆ. ಇದರ ಪ್ರಾಚೀನ ಹೆಸರು ಮದ್ದಗಿರಿಯಾಗಿದ್ದು, ಇಲ್ಲಿ ವಿಜಯನಗರದ ಸಾಮಂತರಸರು ಕಟ್ಟಿಸಿದ ವೆಂಕರಮಣ ಹಾಗೂ ಮಲ್ಲೇಶ್ವರ ದೇವಾಲಯಗಳಲ್ಲದೇ ಇಲ್ಲಿ ಮಲ್ಲಿನಾಥ ಬಸದಿಯೂ ಇದೆ. ಕೆಳದಿಯ ರಾಣಿ ವೀರಮ್ಮಾಜಿಯನ್ನು ಹೈದರ್‌ಅಲಿಯು ಇಲ್ಲಿ ಬಂಧಿಯಾಗಿ ಇರಿಸಿದ್ದ. ನಂತರ ಮರಾಠರು ಅವಳನ್ನು ಬಿಡುಗಡೆ ಮಾಡಿದರು. ಆದರೆ ಪುಣೆಗೆ ಹೋಗುವಾಗ ದಾರಿಯಲ್ಲಿ ಅವಳು ಮೃತಪಟ್ಟಳು. ಇಲ್ಲಿಯ ಕೋಟೆಗೆ ಭವ್ಯವಾದ ಪ್ರವೇಶ ದ್ವಾರಗಳಿದ್ದು, ಅಂತರಾಳದ ಬಾಗಿಲು, ದಿಡ್ಡಿಬಾಗಿಲು, ಮೈಸೂರು ಗೇಟ್ ಇತ್ಯಾದಿಯಾಗಿ ಕರೆಯಲ್ಪಡುತ್ತವೆ. ಇಲ್ಲಿಂದ ೧೯ ಕಿ.ಮೀ. ದೂರದಲ್ಲಿರುವ ಮಿಡಿಗೇಶಿಯಲ್ಲಿ ಎತ್ತರವಾದ ಮಧ್ಯಕಾಲೀನ ಗಿರಿದುರ್ಗವಿದೆ.

**ಮಹದೇಶ್ವರ ಬೆಟ್ಟ:** ಪೂರ್ವದ ಘಟ್ಟಗಳಿಗೆ ಸಮೀಪದಲ್ಲಿರುವ ಮಹದೇಶ್ವರ ಬೆಟ್ಟವು ಬೆಂಗಳೂರಿನಿಂದ ೨೨೦ ಕಿ.ಮೀ. ಹಾಗೂ ಮೈಸೂರಿನಿಂದ ೧೪೨ ಕಿ.ಮೀ. ದೂರದಲ್ಲಿ ಚಾಮರಾಜ ನಗರ ಜಿಲ್ಲೆಯಲ್ಲಿದೆ. ಹುಲಿಯನ್ನು ಸವಾರಿ ಮಾಡಬಲ್ಲವನಾಗಿದ್ದ ಮಹದೇಶ್ವರನೆಂಬ ಸುಮಾರು ೧೪-೧೫ನೇ ಶತಮಾನದ ಯತಿಯ ಗದ್ದುಗೆ ಇಲ್ಲಿದೆ. ಬೆಟ್ಟವು ದಟ್ಟ ಅರಣ್ಯಗಳಿಂದ ಆವೃತವಾಗಿದ್ದು, ಅತಿಥಿ ಗೃಹಗಳೇ ಮುಂತಾದ ಅನೂಕೂಲತೆಗಳು ಇರುವ ಈ ಸ್ಥಳವನ್ನು ಸಾವಿರಾರು ಯಾತ್ರಿಗಳು ಸಂದರ್ಶಿಸುತ್ತಾರೆ. ಇದು ನಿಸರ್ಗ ರಮಣೀಯ ಆಕರ್ಷಕ ತಾಣವಾಗಿದೆ. ಅನತಿ ದೂರದಲ್ಲಿರುವ ನಾಗಮಲೈ, ಇನ್ನೊಂದು ಪ್ರಮುಖ ಯಾತ್ರಾ ಸ್ಥಳವಾಗಿದೆ. ತಮಿಳುನಾಡಿನಲ್ಲಿರುವ ಮೆಟ್ಟೂರು ಜಲಾಶಯವನ್ನು ನೋಡ ಬಚ್ಚಿಸುವವರಿಗೆ ಇಲ್ಲಿಂದ ಸುಲಭವಾಗಿ ಹೋಗಬಹುದು.

**ಮಂಗಳೂರು:** ಹಿಂದೆ 'ಮಂಗಳಾಪುರ' ಎಂದು ಕರೆಯಲಾಗುತ್ತಿದ್ದ ಪ್ರಾಚೀನ ಪಟ್ಟಣ ಇದಾಗಿದ್ದು, ಕರಾವಳಿ ಕರ್ನಾಟಕದ ಹಳೇ ಮತ್ತು ಹೊಸ ಬಂದರುಗಳು ಇಲ್ಲಿವೆ. ಇದು ದಕ್ಷಿಣ ಕನ್ನಡ ಜಿಲ್ಲೆಯ ಕೇಂದ್ರ ಸ್ಥಾನ. ಬಹುಕಾಲದವರೆಗೆ ಆಳುಪರ ರಾಜಧಾನಿಯಾಗಿತ್ತು. ವಿಜಯನಗರದ ಅರಸರು ಇಲ್ಲಿ ಅಧಿಕಾರಿಯನ್ನು ನೇಮಿಸಿದ್ದರು. ನಂತರ ಇದು ಬಂಗ ಸಾಮಂತರಸರ ಕೈಗೆ ಬಂದಿತು. ಪೋರ್ಚುಗೀಸರು ಇಲ್ಲಿ ವ್ಯಾಪಾರಕ್ಕಾಗಿ ಫ್ಯಾಕ್ಟರಿಯನ್ನು ಸ್ಥಾಪಿಸಿ ರೋಮನ್ ಕ್ಯಾಥೋಲಿಕ್ ಧರ್ಮವನ್ನು ಪರಿಚಯಿಸಿದರು. ಹೈದರನು ಇದನ್ನು ಗೆದ್ದ ಮೇಲೆ ಅದು ಮೈಸೂರಿನ ಮುಖ್ಯ ಬಂದರಾಯಿತು. ಬಂದರಿನ ಸಮೀಪದಲ್ಲಿರುವ ಸುಲ್ತಾನಬತೇರಿ ಅವನ ಆಳ್ವಿಕೆಯನ್ನು ನೆನಪಿಸುತ್ತದೆ. ೧೭೯೯ರಲ್ಲಿ ಇದು ಬ್ರಿಟಿಷರ ಕೈವಶವಾದ ಮೇಲೆ ಅವರು ಇದನ್ನು ಕೆನರಾ ಜಿಲ್ಲೆಯ ಕೇಂದ್ರವನ್ನಾಗಿಸಿದರು. ೧೮೩೪ರಲ್ಲಿ ಇಲ್ಲಿಗೆ ಬಂದ ಬ್ಯಾಸೆಲ್ ಮಿಶನ್, ಇಂಗ್ಲೀಷ್ ಶಾಲೆ, ಮುದ್ರಣಯಂತ್ರ, ಹೆಂಚಿನ ಕಾರ್ಖಾನೆ ಹಾಗು ನೇಯ್ಗೆಯನ್ನು ಪ್ರಾರಂಭಿಸಿ ಸ್ಥಳದ ನವೀಕರಣಕ್ಕೆ ಸಹಾಯ ಮಾಡಿತು.

ಮೊದಲನೆಯ ಕನ್ನಡ ವೃತ್ತಪ್ರತಿಕೆ ಎನಿಸಿದ 'ಮಂಗಳೂರು ಸಮಾಚಾರ' (೧೮೩೪) ಪ್ರಕಟಿಸಿದ್ದು ಈ ಕ್ರೈಸ್ತಸಂಸ್ಥೆಯ ಪ್ರಮುಖ ಸಾಧನೆಯಾಗಿದೆ.

ಮಂಗಳೂರಿನಲ್ಲಿ ಪ್ರಾಚೀನ ಮಂಗಳಾ ದೇವಿ ದೇವಾಲಯ ಹಾಗೂ ಒಂದು ಕಾಲಕ್ಕೆ ಬೌದ್ಧರು ವಾಸಿಸಿದ್ದ ಕದ್ರಿ ಮಂಜುನಾಥ ದೇವಾಲಯಗಳಿವೆ. ಕದ್ರಿ ದೇವಾಲಯದಲ್ಲಿ ಅವಲೋಕಿತೇಶ್ವರ ಮತ್ತು ಧ್ಯಾನಿ ಬುದ್ಧನ ಕಂಚಿನ ಉತ್ಕೃಷ್ಟ ವಿಗ್ರಹಗಳಿವೆ. ಸುತ್ತಲೂ ಕೆಲವು ಜಂಬಿಟ್ಟಿಗೆ ಕಲ್ಲಿನ ಗುಹೆಗಳಿವೆ. ವೆಂಕಟರಮಣ ದೇವಾಲಯ, ಮಹಾಮಾಯಿ ದೇವಾಲಯ ಹಾಗೂ ಬೃಹತ್ತಾಕಾರದ ಆಧುನಿಕ ಗೋಕರ್ಣನಾಥ ದೇವಾಲಯ ಮಂಗಳೂರಿನ ಕೆಲವು ಪ್ರಮುಖ ದೇವಾಲಯಗಳು. ಮಂಗಳೂರಿನ ಸಮೀಪದ ಕುದ್ರೋಳಿಯಲ್ಲಿ ಸುಂದರವಾದ ಗೋಕರ್ಣನಾಥ ದೇವಾಲಯವಿದ್ದು ನವರಾತ್ರಿ ಸಮಯದಲ್ಲಿ ವಿಜೃಂಭಣೆಯಿಂದ ಪೂಜೆಗಳು ಜರುಗುತ್ತವೆ. ಇದೊಂದು ಆಕರ್ಷಕ ಉತ್ಸವವಾಗಿದೆ. ಬೆಂಗ್ರೆಯಲ್ಲಿ ಸುಂದರವಾದ ಕಡಲತೀರ ತಾಣವಿದೆ. ಲೈಟ್ ಹೌಸ್ ಬೆಟ್ಟದಲ್ಲಿ ಈದ್ಗಾ ಇದೆ. ಸೈಂಟ್ ಅಲೋಸಿಯಸ್ ಕಾಲೇಜಿನಲ್ಲಿ ಸುಂದರವಾದ ವರ್ಣಚಿತ್ರಗಳುಳ್ಳ ಚಾಪೆಲ್ ಇದೆ. ಸೈಂಟ್ ರೋಜಾರಿಯೋ ಚರ್ಚ್, ಚರ್ಚ್ ಆಫ್ ಮೋಸ್ಟ್ ಹೋಲಿ ರೊಸರಿ ಹಾಗೂ ಮಿಲಾಗ್ರೆಸ್ ಚರ್ಚ್ ಇಲ್ಲಿರುವ ಕ್ರಿಶ್ಚಿಯನ್ ಕಟ್ಟಡಗಳು. ಬ್ಯಾಸೆಲ್ ಮಿಶನ್ ಅವರ ಕ್ಯಾಥೆಡ್ರಲ್ ಕೂಡಾ ಪ್ರಸಿದ್ಧವಾಗಿದೆ. ಬಂದರು ಪ್ರದೇಶದಲ್ಲಿ ಕಾಷ್ಠದ ಕೆತ್ತನೆಯಿರುವ ಸುಂದರವಾದ ಮಸೀದಿ ಇದೆ. ಡೊಂಗರಕೇರಿಯಲ್ಲಿ ಶಮೀರ್ ಮಸೀದಿ ಇದೆ. ಮಂಗಳೂರು ಸಮುದ್ರ ಆಹಾರ ಹಾಗೂ ವಿಶಿಷ್ಟವಾದ ಸುವಾಸನೆಯುಳ್ಳ ಮಲ್ಲಿಗೆಗಾಗಿಯೂ ಪ್ರಸಿದ್ಧವಾಗಿದೆ. ಮದ್ರಾಸ್ ಸರಕಾರವು ೧೮೬೯ರಲ್ಲಿ ಮಂಗಳೂರಿನಲ್ಲಿ ಸ್ಥಾಪಿಸಿದ ಸೆಕೆಂಡ್ ಗ್ರೇಡ್ ಕಾಲೇಜ್ ಜಿಲ್ಲೆಯಲ್ಲಿಯೇ ಪ್ರಥಮವಾಗಿದೆ. ಈಗ ಮಂಗಳೂರಿನಲ್ಲಿ ವಿಶ್ವವಿದ್ಯಾಲಯವೂ ಇದೆ. ಇಲ್ಲಿ ವಿಶಿಷ್ಟವಾದ ಹಾಗೂ ಜನಪ್ರಿಯತೆ ಗಳಿಸಿರುವ ಹೆಂಚುಗಳನ್ನು ತಯಾರಿಸಲಾಗುತ್ತದೆ. ಕಾಫಿ, ಮೀನು ಮತ್ತು ಗೋಡಂಬಿ ಪರಿಷ್ಕರಣ ಘಟಕಗಳಲ್ಲಿವೆ. ಬೀಡಿ ತಯಾರಿಕೆಯು ಇಲ್ಲಿಯ ಪ್ರಮುಖ ಗೃಹ ಉದ್ಯಮವಾಗಿದೆ. ಮಂಗಳೂರು ಫರ್ಟಿಲೈಜರ್ಸ್ ಹಾಗೂ ಪೆಟ್ರೊ ಕೆಮಿಕಲ್ಸ್ ಇಲ್ಲಿಯ ಪ್ರಧಾನ ಸಾರ್ವಜನಿಕ ಉದ್ಯಮಗಳಾಗಿವೆ. ಮಂಗಳೂರಿನಲ್ಲಿ ನಗರಸಭೆ ಇದ್ದು ಮೂಲಭೂತ ಸೌಕರ್ಯವನ್ನು ಜನತೆಗೆ ಒದಗಿಸುವ ದಿಸೆಯಲ್ಲಿ ಶ್ರಮಿಸುತ್ತಿದೆ. ಇಲ್ಲಿರುವ ಹಳೆಯ ಮಂಗಳೂರು ಬಂದರು ಹಾಗೂ ಅನತಿ ದೂರದಲ್ಲಿರುವ ಪಣಂಬೂರಿನ ನವಮಂಗಳೂರು ಬಂದರುಗಳು ಅಂತರಾಷ್ಟ್ರೀಯ ವ್ಯಾಪಾರ ವಹಿವಾಟಿಗೆ ಹೆಸರಾಗಿವೆ.

**ಮಂಡ್ಯ:** ೧೯೩೯ರಲ್ಲಿ ಮೈಸೂರು ಜಿಲ್ಲೆಯಿಂದ ಬೇರ್ಪಡಿಸಿ ಸೃಜಿಸಲ್ಪಟ್ಟ ಮಂಡ್ಯ ಜಿಲ್ಲೆಯ ಕೇಂದ್ರವಾಗಿರುವ ಈ ಸ್ಥಳವು ಬೆಂಗಳೂರಿನಿಂದ ನೈಋತ್ಯಕ್ಕೆ ೧೦೦ ಕಿ.ಮೀ. ಹಾಗೂ ಮೈಸೂರಿನ ವಾಯವ್ಯಕ್ಕೆ ೪೫ ಕಿ.ಮೀ ದೂರದಲ್ಲಿ ಮೈಸೂರು–ಬೆಂಗಳೂರು ರಾಜ್ಯ ಹೆದ್ದಾರಿಯಲ್ಲಿದೆ. ರೈಲು ಮಾರ್ಗದಿಂದಲೂ ಇದಕ್ಕೆ ಸಂಪರ್ಕವಿದೆ. ಪ್ರಾಚೀನ ಶಾಸನದಲ್ಲಿ ಈ ಸ್ಥಳವನ್ನು 'ಮಂಟೆಯ' ಎಂದು ಹೆಸರಿಸಲಾಗಿದ್ದು, ಹಿಂದೆ ಇದೊಂದು ಅಗ್ರಹಾರವಾಗಿತ್ತು. ಮಂಡ್ಯವು ಪ್ರಮುಖ ಔದ್ಯಮಿಕ ಮತ್ತು ವಾಣಿಜ್ಯ ಕೇಂದ್ರವಾಗಿದೆ. ಮಂಡ್ಯದ ಮೈಸೂರು ಸಕ್ಕರೆ ಕಂಪನಿಯು(೧೯೩೩) ಭಾರತದಲ್ಲಿಯೇ ಮೊದಲನೆಯದೆನಿಸಿದೆ. ಮಂಡ್ಯ ಮತ್ತು ಅದರ ಸುತ್ತಮುತ್ತಲಿನ ಹಳ್ಳಿಗಳು, ಕೆ.ಆರ್. ಸಾಗರ ಆಣೆಕಟ್ಟೆಯ ನಿರ್ಮಾಣದ ನಂತರ ಹಸಿರುಮಯವಾದವು. ರೈತರು ಉತ್ತಮ ಸಹಕಾರಿ ಸಂಸ್ಥೆಗಳನ್ನು ಮತ್ತು ಶೈಕ್ಷಣಿಕ ಸಂಸ್ಥೆಗಳನ್ನು ಕಟ್ಟಿದರು. ಇಂದು ಮಾತ್ಯ ನಗರದ ಬಡಾವಣೆಯೇ ಆಗಿರುವ ಗುತ್ತಲು (ಅಕ್ವೇಶ್ವರ ನಗರ) ಹೋಯ್ಸಳರ ಕಾಲದಷ್ಟು ಪ್ರಾಚೀನ ನೆಲೆಯಾಗಿದೆ. ಅಲ್ಲಿರುವ ದೇವಿರಮ್ಮನ ಗುಡಿ ಗಂಗರ ಕಾಲದ ಸಪ್ತಮಾತೃಕಾ ಶಿಲ್ಪಗಳನ್ನು ಹೊಂದಿದೆ. ಜಿಲ್ಲೆಯು ಬನ್ನೂರು (ಕುರಿ) ಮಾಂಸಕ್ಕಾಗಿ ಪ್ರಸಿದ್ಧವಾಗಿದ್ದು, ವಿಶಿಷ್ಟ ರುಚಿಯುಳ್ಳ ಇದನ್ನು ಸ್ಥಳೀಯ ಹೊಟೇಲ್‌ಗಳಲ್ಲಿ ನೀಡಲಾಗುತ್ತದೆ. ಇಲ್ಲಿಯ ಜನಾರ್ದನ ಸ್ವಾಮಿಯ ದೇವಾಲಯವನ್ನು ಪವಿತ್ರವೆಂದು ಪರಿಗಣಿಸಲಾಗಿದ್ದು, ಬೇಸಿಗೆಯಲ್ಲಿ ನಡೆಯುವ ಇದರ ಜಾತ್ರೆಗೆ ಸಾವಿರಾರು ಜನರು ಸೇರುತ್ತಾರೆ. ಸ್ಥಳೀಯ ಸಂಪ್ರದಾಯದ ಪ್ರಕಾರ ಈ ಊರನ್ನು ಪೌರಾಣಿಕವಾಗಿ ಮಾಂಡವ್ಯ ಋಷಿಗಳು ಜೀವಿಸಿದ್ದ ವೇದಾರಣ್ಯ ಎಂದು ಭಾವಿಸಲಾಗುತ್ತದೆ.

**ಮಾಗಡಿ:** ರಾಮನಗರ ಜಿಲ್ಲೆಯ ತಾಲೂಕು ಕೇಂದ್ರರುವ ನಗರ ಇದು ಬೆಂಗಳೂರಿನಿಂದ ೪೧ ಕಿ.ಮೀ. ದೂರದಲ್ಲಿದೆ. ೧೬೩೮ರಲ್ಲಿ ಕೆಂಪೇಗೌಡ ಬೆಂಗಳೂರನ್ನು ಬಲವಂತದಿಂದ ಬಿಡಲೇಬೇಕಾಗಿ ಬಂದಾಗ ಅವನು ಮಾಗಡಿಯನ್ನು ತನ್ನ ಕೇಂದ್ರವನ್ನಾಗಿ ಮಾಡಿಕೊಂಡನು. ಇಲ್ಲಿ ಅವನ ಕುಟುಂಬದವರು ಕಟ್ಟಿದ ಕೋಟೆ ಹಾಗೂ ರಾಮೇಶ್ವರ ದೇವಾಲಯವಿದೆ. ೧೭೧೨ರಲ್ಲಿ ಕಟ್ಟಿದ ಸೋಮೇಶ್ವರ ದೇವಾಲಯದ ಬಳಿ ಕೆಂಪೇಗೌಡನ ಹಜಾರವಿದೆ. ಇದರ ಗೋಡೆಯಲ್ಲಿರುವ ವರ್ಣಚಿತ್ರಗಳು ಮಾಸಿವೆ. ಪಟ್ಟಣದ ಬಳಿಯಿರುವ ತಿರುಮಲ ಬೆಟ್ಟದಲ್ಲಿ ವಿಶಾಲವಾದ ರಂಗನಾಥ ದೇವಾಲಯ ಇದೆ. ಆದರೆ ಇಲ್ಲಿ ಪೂಜಿಸಲ್ಪಡುವ ದೇವರು ಶ್ರೀನಿವಾಸ. ಶ್ರೀನಿವಾಸನು ಸಮಭಂಗಿಯಲ್ಲಿ ನಿಂತಿದ್ದು, ಶಿಲ್ಪಶಾಸ್ತ್ರದ ಪ್ರಕಾರ ಕೈಗಳಲ್ಲಿ ಶಂಖ, ಚಕ್ರ, ವರದ ಹಾಗೂ ಕಟಿಹಸ್ತವಿದೆ. ಇತ್ತೀಚೆಗೆ ಹಿರಿಯ ಕೊದೇಗೌಡನ ಸಮಾಧಿಯು ಪಟ್ಟಣದಿಂದ ಅನತಿ ದೂರದಲ್ಲಿದೆ.

**ಮೇಲುಕೋಟೆ:** ಮಂಡ್ಯ ಜಿಲ್ಲೆಯ ತಾಲೂಕು ಕೇಂದ್ರ ಪಾಂಡಪುರದಿಂದ ಮೇಲುಕೋಟೆಯು ಪ್ರಸಿದ್ಧ ಶ್ರೀವೈಷ್ಣವ ಯಾತ್ರಾ ಸ್ಥಳವಾಗಿದೆ. ಇಲ್ಲಿರುವ ಚೆಲುವರಾಯ ಸ್ವಾಮಿಯನ್ನು ಆಚಾರ್ಯ ರಾಮಾನುಜರು (ಸುಮಾರು ೧೨ನೇ ಶತಮಾನ) ಬಹು ಕಾಲದವರೆಗೆ ಪೂಜಿಸುತ್ತಿದ್ದರು ಎಂದು ನಂಬಲಾಗುತ್ತದೆ. ಈ ದೇವಾಲಯವನ್ನು ವಿಜಯನಗರ ಹಾಗೂ ಮೈಸೂರು ಅರಸರ ಕಾಲದಲ್ಲಿ ವಿಸ್ತರಿಸಲಾಗಿದೆ. ಮೈಸೂರು ಅರಸರು ಈ ದೇವಾಲಯಕ್ಕೆ ವಜ್ರಖಚಿತ ವೈರಮುಡಿ ಹಾಗೂ ಇತರ ಅಮೂಲ್ಯ ಆಭರಣಗಳನ್ನು ನೀಡಿದ್ದರು. ಇಲ್ಲಿಯ ಗುಡ್ಡದ ಮೇಲೆ ನರಸಿಂಹ ದೇವಾಲಯವಿದೆ. ಮೇಲುಕೋಟೆಯು ಸಾಂಪ್ರಾದಾಯಿಕ ಸಂಸ್ಕೃತ ಅಧ್ಯಯನದ ಮಹತ್ವದ ಕೇಂದ್ರವಾಗಿದ್ದು, ಇಲ್ಲಿ ಇತ್ತೀಚೆಗೆ ಸಂಸ್ಕೃತ ಅಕಾಡೆಮಿಯನ್ನು ಸ್ಥಾಪಿಸಲಾಗಿದೆ. ಈ ಅಕಾಡೆಮಿಯಲ್ಲಿ ಆಧುನಿಕ ಕಂಪ್ಯೂಟರ್ ತಂತ್ರಾಂಶ ಬಳಸಿ ಸಂರಕ್ಷಿಸಲಾದ ಪ್ರಾಚೀನ ತಾಳೆಗರಿ ಹಸ್ತಪ್ರತಿಗಳ ದೊಡ್ಡ ಸಂಗ್ರಹವೇ ಇದೆ. ಇಲ್ಲಿ ವರುಷಕ್ಕೊಮ್ಮೆ ನಡೆಯುವ ವೈರಮುಡಿ ಉತ್ಸವ ವಿಶ್ವಖ್ಯಾತಿ ಪಡೆದಿದೆ.

**ಮೈಸೂರು:** ಜಿಲ್ಲಾ ಹಾಗೂ ಪ್ರಾಂತೀಯ ಕೇಂದ್ರವಾದ ಮೈಸೂರು, ಪ್ರಾಚೀನ ಒಡೆಯರ್ ಅರಸರ ರಾಜಧಾನಿಯಾಗಿದ್ದು, ಉದ್ಯಾನ ನಗರಿಯೂ ಆಗಿದ್ದು ಬೆಂಗಳೂರಿನಿಂದ ೧೩೯ ಕಿ.ಮೀ.

ಪಶ್ಚಿಮಕ್ಕೆ ಇದೆ. ಹಿಂದೆ 'ಮಹಿಷಪುರ' ಎಂದು ಕರೆಯಲ್ಪಟ್ಟಿರುವ, ಈ ಊರಿಗೂ ಮಹಿಷ, ಅಥವಾ ಮಹಿಷಾಸುರನಿಗೆ ಏನೂ ಸಂಬಂಧವಿದ್ದ ಹಾಗಿಲ್ಲ. ಇಲ್ಲಿ ಹಾಗೂ ಇತರ ಕಡೆಗಳಲ್ಲಿ ದೊರೆತಿರುವ ಪ್ರಾಚೀನ ಶಾಸನಗಳಲ್ಲಿ ಈ ಸ್ಥಳವನ್ನು "ಮಯಿಸೂರು" ಎಂದು ಕರೆಯಲಾಗಿದೆ. "ಮಯು" ಎಂದರೆ ಜಿಂಕೆ ಹಾಗೂ ಊರು ಎಂದರೆ ಸ್ಥಳ. ಈ ನಗರದ ಹಿನ್ನೆಲೆಯಲ್ಲಿ ಕಾಣುವ ಚಾಮುಂಡಿ ಬೆಟ್ಟವು ಗಂಗ ಹಾಗೂ ಹೊಯ್ಸಳ ಶಾಸನಗಳಲ್ಲಿ 'ಮಾರ್ಬಾಲಬೆಟ್ಟ' ಅಥವಾ 'ಮಹಾಬಲಬೆಟ್ಟ' ವೆಂದು ಉಲ್ಲೇಖಿಸಲ್ಪಟ್ಟಿದೆ. ಬೆಟ್ಟವನ್ನು ಹತ್ತಿಕೊಂಡು ಹೋಗುವ ಮಾರ್ಗದ ಮಧ್ಯದಲ್ಲಿ ಗಂಗರ (ಕ್ರಿ.ಶ. ೯ನೇ ಶತಮಾನದಲ್ಲಿ) ಕಾಲದಲ್ಲಿ ನಿರ್ಮಿತವಾದ ಮಹಾಬಲೇಶ್ವರ ದೇವಾಲಯದ ಅವಶೇಷಗಳು ಇಂದಿಗೂ ಕಾಣಸಿಗುತ್ತವೆ. ಆದರೆ, ಇತಿಹಾಸದಲ್ಲಿ ಬರುವ ಮೈಸೂರು ಅರಸ ಚಾಮರಾಜ (ಬೋಳ) ಒಡೆಯನಿಗೆ ಬೇಟೆಗಾಗಿ ಈ ಬೆಟ್ಟಕ್ಕೆ ಬಂದಿದ್ದಾಗ ತಲೆಯ ಹಿಂಭಾಗಕ್ಕೆ ಸಿಡಿಲು ಹೊಡೆದ ಕಾರಣ ಮನೆದೇವಿಯಾದ ಚಾಮುಂಡಿ ದೇವಾಲಯವನ್ನು ನಿರ್ಮಿಸಿದನೆಂದು ಪ್ರತೀತಿಯಿದೆ. ಕಾಲಕ್ರಮೇಣ ಮಾರ್ಬಾಲ ಬೆಟ್ಟವು ಚಾಮುಂಡಿ ಬೆಟ್ಟವೆಂದು ಮೈಸೂರು ಅರಸರ ಕಾಲದಲ್ಲಿ ರೂಢಿಗೆ ಬಂದಿತೆಂದು ಅಭಿಪ್ರಾಯಪಡಲಾಗುತ್ತದೆ. ಮೈಸೂರು ನಗರದ ಹೃದಯ ಭಾಗದಲ್ಲಿರುವ ಅಂಬಾವಿಲಾಸ ಅರಮನೆಯು ಇಂಡೋ-ಸಾರಸೆನಿಕ್ ಶೈಲಿಯಲ್ಲಿದ್ದು, ಒಳಗಡೆ ಹೊಯ್ಸಳ ಶೈಲಿಯಲ್ಲಿದೆ. ಇದು ಇಲ್ಲಿಯ ಪ್ರಮುಖ ಆಕರ್ಷಣ ಕೇಂದ್ರವಾಗಿದ್ದು, ೧೮೯೭ರಲ್ಲಿ ಹಳೆಯ ಅರಮನೆಯು ಬೆಂಕಿ ಆಕಸ್ಮಿಕದಿಂದಾಗಿ ನಾಶವಾದ ನಂತರ ಅದೇ ಸ್ಥಳದಲ್ಲಿ ನಿರ್ಮಿಸಲ್ಪಟ್ಟ ಈ ಅರಮನೆಯ ಕೆಲಸವು ೧೯೧೨ರಲ್ಲಿ ಪೂರ್ಣಗೊಂಡಿತಾದರೂ ಸೇತುವೆ ವಿಸ್ತರಣೆಗಳು ೧೯೪೦ರವರೆಗೆ ನಡೆದಿದೆ. ೧೯೩೫ರಲ್ಲಿ ಅರಮನೆಗೆ ದೀಪಾಲಂಕೃತ ಮೆರುಗನ್ನು ನೀಡಲಾಯಿತು. ಮುಂದೆ ೧೯೪೦ರಲ್ಲಿ ಅರಮನೆಯ ಮುಂಭಾಗಕ್ಕೆ ಗ್ಯಾಲರಿಯನ್ನು ಸೇರಿಸಲಾಯಿತು. ಆನಂತರದಲ್ಲಿ ಪೋರ್ಟಿಕೊ ಮೊಗಸಾಲೆಯ ಸೇರ್ಪಡೆಯಾಯಿತು. ಸಾರ್ವತ್ರಿಕ ರಜಾದಿನಗಳಲ್ಲಿ ಸಂಜೆಯ ಹೊತ್ತು ಇದನ್ನು ದೀಪಾಲಂಕೃತ ಗೊಳಿಸಲಾಗುತ್ತದೆ. ಅರಮನೆಯ ಕಲ್ಯಾಣ ಮಂಟಪದಲ್ಲಿ ೧೯೩೦ ಹಾಗೂ ೧೯೪೦ರಲ್ಲಿ ಅರಮನೆಯ ಕಲಾಕಾರರು ರಚಿಸಿದ ಸುಂದರವಾದ ದಸರಾ ಮೆರವಣಿಗೆ ಹಾಗೂ ದರ್ಬಾರಿನ ದೃಶ್ಯದ ವರ್ಣಚಿತ್ರಗಳಿವೆ.

ಇತ್ತೀಚೆಗೆ, ಮೈಸೂರು ಅರಮನೆಯ ಆವರಣದಲ್ಲಿ ಮೈಸೂರು ಅರಸರ ಇತಿಹಾಸವನ್ನು ಅರಹುವ ಒಂದು ಗಂಟೆ ಅವಧಿಯ "ಲೈಟ್ ಅಂಡ್ ಸೌಂಡ್" ಕಾರ್ಯಕ್ರಮವನ್ನು ಎರಡನೆ ಶನಿವಾರ ರವಿವಾರ ಹಾಗೂ ಸಾರ್ವತ್ರಿಕ ರಜಾದಿನಗಳನ್ನು ಹೊರತುಪಡಿಸಿ ಉಳಿದ ದಿನಗಳಲ್ಲಿ ಸಂಯೋಜಿಸಲಾಗಿದ್ದು ಪ್ರೇಕ್ಷಕರಿಗೆ ಪ್ರವೇಶ ಶುಲ್ಕವನ್ನು ವಿಧಿಸಲಾಗುತ್ತದೆ. ಅರಮನೆಯ ಆವರಣದಲ್ಲಿರುವ ದೇವಾಲಯಗಳಲ್ಲದೇ ಕೋಟೆ ಆಂಜನೇಯ, ಕೋಟೆ ಮಾರಮ್ಮ, ಪಾರ್ಶ್ವನಾಥ (ಕಾರ್ಪೊರೇಶನ್ ಬಳಿ) ಕನ್ಯಕಾ ಪರಮೇಶ್ವರಿ (ದೊಡ್ಡ ಪೇಟೆ ಮತ್ತು ಶಿವರಾಮಪೇಟೆ), ಇಟ್ಟಿಗೇಗೂಡಿನ ರೇಣುಕಾ ಎಲ್ಲಮ್ಮ (ಮೈಸೂರು ಕರಗಕ್ಕೆ ಪ್ರಸಿದ್ಧ), ಸತ್ಯನಾರಾಯಣ (ಒಂಟಿಕೊಪ್ಪಲು) ರಾಘವೇಂದ್ರಮಠ ಇತ್ಯಾದಿ ನಗರದಲ್ಲಿರುವ ಇತರ ಪ್ರಮುಖ ದೇವಾಲಯಗಳು. ಚಾಮುಂಡಿ ಬೆಟ್ಟದಲ್ಲಿ ಸಿಮೆಂಟಿನಿಂದ ಮಾಡಲಾದ ಮಹಿಷಾಸುರ ಮೂರ್ತಿ ಇದೆ.

ಇಲ್ಲಿಯ ಚಾಮುಂಡಿ ದೇವಾಲಯಕ್ಕೆ ಬೃಹತ್ತಾದ ದ್ವಾರಗೋಪುರವಿದೆ. ಈ ದೇವಾಲಯವಲ್ಲದೇ ಇಲ್ಲಿ ಸುಮಾರು ೧೦ನೇ ಶತಮಾನದ ಮಹಾಬಲ ದೇವಾಲಯವಿದ್ದು, ಶಾಸನಗಳಲ್ಲಿ ಈ ಬೆಟ್ಟವನ್ನು 'ಮಾರ್ಬಲ ಬೆಟ್ಟ' ಎಂದು ಕರೆಯಲಾಗಿದೆ. ಗುಡ್ಡ ಹತ್ತಲು ಮೆಟ್ಟಿಲುಗಳು ಇದ್ದು, ದಾರಿಯಲ್ಲಿ ದೊಡ್ಡದಾದ ಏಕಶಿಲಾ ನಂದಿ ವಿಗ್ರಹವಿದೆ. ಇದಕ್ಕೆ ಇತ್ತೀಚೆಗೆ ವರ್ಷದಾನೇ ತುಜನಾಭಿಷೇಕವನ್ನು ವಿಜೃಂಭಣೆಯಿಂದ ಆಚರಿಸಲಾಗುತ್ತದೆ. ಬೆಟ್ಟದ ಮೇಲೆ ರಾಜೇಂದ್ರ ವಿಲಾಸ ಅರಮನೆ ಇದೆ. ಲಲಿತ ಮಹಲ್ ಅರಮನೆಯನ್ನು ಈಗ ಹೊಟೇಲ್ ಮಾಡಲಾಗಿದೆ. ಚೆಲುವಾಂಬ ಅರಮನೆಯು ಪಾರಂಪರಿಕ ಕಟ್ಟಡವಾಗಿದ್ದು, ಈಗ ಅದರಲ್ಲಿ ಸಿ.ಎಫ್.ಟಿ.ಆರ್.ಐ. ಕೆಲಸ ನಿರ್ವಹಿಸುತ್ತಿದೆ. ಜಗಮೋಹನ ಆರ್ಟ್‌ಗ್ಯಾಲರಿಯೂ ಹಿಂದೆ ಅರಮನೆ ಆಗಿತ್ತು. ಇದರ ಬಳಿ ಇರುವ ಪರಕಾಲಮಠವು ಆಕರ್ಷಕ ಕಟ್ಟಡವಾಗಿದೆ. ಮೈಸೂರಿನಲ್ಲಿ ಪ್ರಸಿದ್ಧವಾದ ಚಾಮರಾಜೇಂದ್ರ ಪ್ರಾಣಿ ಸಂಗ್ರಹಾಲಯವೂ ಇದೆ. ಪ್ರಾಚ್ಯ ಸಂಶೋಧನಾ (ಸುಮಾರು ೨೦,೦೦೦ ತಾಡೋಲೆ ಹಸ್ತಪ್ರತಿಗಳು) ಸಂಸ್ಥೆಯು ಆಕರ್ಷಕ ಕಟ್ಟಡದಲ್ಲಿದೆ. ಇಲ್ಲಿಯ ವಿಶ್ವವಿದ್ಯಾಲಯವನ್ನು ೧೯೧೬ರಲ್ಲಿ ಸ್ಥಾಪಿಸಲಾಯಿತು. ಸುತ್ತೂರು ಮಠ, ರೈಲ್ವೇ ವಸ್ತುಸಂಗ್ರಹಾಲಯ, ಪ್ರೀಮಿಯರ್ ಸ್ಟುಡಿಯೋ, ರಾಮಕೃಷ್ಣ ಆಶ್ರಮ, ಹಾಗೂ ಸಚ್ಚಿದಾನಂದ ಗಣಪತಿ (ದತ್ತಾತ್ರೆಯ) ನಗರದ ಇತರೇ ಆಕರ್ಷಣೆಗಳು. ಎನ್.ಆರ್. ಮೊಹಲ್ಲಾದಲ್ಲಿರುವ ಸೈಂಟ್ ಫಿಲೋಮಿನಾ ಚರ್ಚ್ ಸುಂದರವಾದ ಗೋಥಿಕ್ ಶೈಲಿಯಲ್ಲಿದ್ದು, ಎತ್ತರವಾದ ಗೋಪುರಗಳಿವೆ. ಮೈಸೂರು ಕರ್ನಾಟಕದ ಪ್ರಮುಖ ಪ್ರವಾಸಿ ಕೇಂದ್ರವಾಗಿದ್ದು, ಇಲ್ಲಿ ನಡೆಯುವ ದಸರಾ ಉತ್ಸವವು ಆಕರ್ಷಕವಾದ ಮೆರವಣಿಗೆಯಾಗಿದೆ. ಮೈಸೂರಿನ ಇಟ್ಟಿಗೆಗೂಡು ಕರಗ ಅಷ್ಟೆ ಪ್ರಮುಖವಾದುದು. ಸಂಗೀತ ಕಾರಂಜಿಯಿರುವ ಬೃಂದಾವನ ಉದ್ಯಾನ ಮೈಸೂರು ಪಟ್ಟಣಕ್ಕೆ ಸಮೀಪದಲ್ಲಿಯೇ ಇದೆ. ರೈಲ್ವೇ ವರ್ಕ್‌ಶಾಪ್, ಬಿ.ಇ.ಎಮ್.ಎಲ್. ಘಟಕ, ವಿಕ್ರಾಂತ್ ಟಯರ್ಸ್ ಮುಂತಾದವುಗಳಿಂದಾಗಿ ಮೈಸೂರು ಕೈಗಾರಿಕಾ ಕೇಂದ್ರವಾಗಿಯೂ ಬೆಳೆದಿದೆ. ಇತ್ತೀಚೆಗೆ ಮೈಸೂರನ್ನು ಅಂತಾರಾಷ್ಟ್ರೀಯ ಮಟ್ಟದ ಎರಡನೇಯ ಮಾಹಿತಿ ತಂತ್ರಜ್ಞಾನ ಕೇಂದ್ರವನ್ನಾಗಿ ಅಭಿವೃದ್ಧಿಗೊಳಿಸಲಾಗಿದೆ. ಇಲ್ಲಿ ಇನ್‌ಫೋಸಿಸ್ ಸಂಸ್ಥೆಯು ಹೊರವಲಯದಲ್ಲಿ ವಿಶಾಲವಾದ ಹಾಗೂ ಆಕರ್ಷಕವಾದ ಸಂಕೀರ್ಣವನ್ನು ನಿರ್ಮಿಸಿದೆ. ಇದಲ್ಲದೇ ವಿಪ್ರೋ ಮುಂತಾದ ಅನೇಕ ಸಾಫ್ಟ್‌ವೇರ್ ಸಂಸ್ಥೆಗಳು ಅಭಿವೃದ್ಧಿ ಹೊಂದುತ್ತಿವೆ. ಸಿದ್ದಾರ್ಥ ಬಡಾವಣೆಯ ಡಿ.ಎಫ್.ಆರ್.ಎಲ್. ಬಳಿಯಿರುವ ನೈಸರ್ಗಿಕ ವಸ್ತುಸಂಗ್ರಹಾಲಯ ಹಾಗೂ ಬೆಂಗಳೂರು ರಸ್ತೆಯಲ್ಲಿರುವ ಜಿ.ಆರ್.ಎಸ್. ಫ್ಯಾಂಟಸಿ ಪಾರ್ಕ್ ಇತ್ತೀಚಿನ ಸೇರ್ಪಡೆಗಳಾಗಿದ್ದು, ಪ್ರವಾಸಿಗರನ್ನು ಆಕರ್ಷಿಸುತ್ತಿವೆ. ಇಲ್ಲಿ ನಗರ ಮುನಿಸಿಪಲ್ ಕಾರ್ಪೋರೇಶನ್ ಇದೆ. ಇತ್ತೀಚೆಗೆ ಮೈಸೂರನ್ನು ರಾಜ್ಯ ಪರಂಪರಾ ನಗರವೆಂದು ಘೋಷಿಸಲಾಗಿದ್ದು ಆ ಪ್ರಕಾರ ಎಲ್ಲಾ ಪ್ರಾಚೀನ ಕಟ್ಟಡ ಹಾಗೂ ಅರಮನೆಗಳ ರಕ್ಷಣೆಯೊಂದಿಗೆ ಅತಿಕ್ರಮಣ ತಡೆಯುವುದು ಪರಂಪರೆ ಇಲಾಖೆಯ ಪ್ರಮುಖ ಕರ್ತವ್ಯವಾಗಿರುತ್ತದೆ.

**ಎಡೆಯೂರು:** ತುಮಕೂರು ಜಿಲ್ಲೆಯ ೧೪ ಕಿ.ಮೀ ದೂರದ ಇಸ್ಕಾನ್‌ಧಾರ್ಮಿಕ ಕೇಂದ್ರ ಕುಣಿಗಲ್ ತಾಲೂಕಿನಲ್ಲಿರುವ ಈ ಸ್ಥಳದಲ್ಲಿ ೧೬ ನೇ ಶತಮಾನದ ಪ್ರಸಿದ್ಧ ವೀರಶೈವ ಯತಿ ತೋಂಟದ ಸಿದ್ಧಲಿಂಗೇಶ್ವರಂ ಸಮಾಧಿ (ಮಠ) ಇದೆ. ನೂರಾರು ಸಂಖ್ಯೆಯಲ್ಲಿ

ಪ್ರತೀ ದಿನವೂ ಭೇಟಿ ನೀಡುವ ಯಾತ್ರಾರ್ಥಿಗಳಿಗಾಗಿ ಉಚಿತ ಪ್ರಸಾದ ಹಾಗು ವಿಶ್ರಾಂತಿ ಗೃಹಗಳಿವೆ. ಈ ಮಠದ ಸುಂದರವಾದ ಮರದ ರಥದಲ್ಲಿ ಕುತೂಹಲಕಾರಿ ಶಿಲ್ಪಗಳಿವೆ. ಇದಲ್ಲದೇ ವರದರಾಜ ದೇವಾಲಯ ಮತ್ತು ಎರಡು ವೀರಶೈವ ಮಠಗಳೂ ಇಲ್ಲಿವೆ. ಮಠದ ಭಿತ್ತಿಗಳಲ್ಲಿ ಹಳೆಯ ವರ್ಣಚಿತ್ರಗಳಿವೆ. ಬೆಂಗಳೂರು– ಹಾಸನ ನೂತನ ರೈಲು ಮಾರ್ಗದ ನಿರ್ಮಾಣ ಕಾರ್ಯವು ಪ್ರಗತಿಯಲ್ಲಿದ್ದು ಎಡೆಯೂರಿಗೂ ರೈಲು ಸೌಲಭ್ಯ ಲಭಿಸಿದೆ. ಎಡೆಯೂರಿಗೆ ಎಂಟು ಕಿ.ಮೀ ದೂರದಲ್ಲಿರುವ ಕಗ್ಗೆರೆ ಸಿದ್ಧಲಿಂಗೇಶ್ವರ ಮೂರ್ತಿಗಳ ತಪೋವನ ಹಾಗೂ ದೇವಾಲಯಗಳಿಂದಾಗಿ ಪ್ರಸಿದ್ಧವಾಗಿದೆ.

**ಯಾಣ:** ಉತ್ತರ ಕನ್ನಡ ಜಿಲ್ಲೆಯ ತಾಲೂಕು ಕೇಂದ್ರ ಕುಮಟಾದಿಂದ ೨೪ ಕಿ.ಮೀ. ಹಾಗೂ ಶಿರಸಿಯಿಂದ ೪೫ ಕಿ.ಮೀ. ದೂರದಲ್ಲಿರುವ ಈ ಕಂದಾಯ ಗ್ರಾಮವನ್ನು ಕುಮಟಾ–ಶಿರಸಿ ರಸ್ತೆಯಲ್ಲಿರುವ ಕತಗಾಲ್–ಹರಿಟಾ ಮೂಲಕ ಹರಿಟಾದ ಸಮೀಪ ಎಡಕ್ಕೆ ಸಾಗಿ ತಲುಪಬಹುದು. ಬೇಸಿಗೆಯಲ್ಲಿ ಮಾತ್ರ ತೆರೆದಿರುವ ಸಂರಕ್ಷಿತ ಅರಣ್ಯ ಹಾದಿಯಲ್ಲಿ ಒಂಬತ್ತು ಕಿ.ಮೀ.ನಷ್ಟು ಹಿಂದೆ ನಡೆಯಬೇಗಿತ್ತು ಪ್ರಸ್ತುತ ಸುಮಾರು ಒಂದು ಕಿ.ಮೀ ನಡೆಯಬೇಕಾಗುತ್ತದೆ. ಇದು ಆಳವಾದ ಕೊಳ್ಳಕ್ಕೆ ಹಾದಿ ಮಾಡಿದ್ದು, ಅಲ್ಲಿಂದ ವಡ್ಡಿಕೊಳ್ಳವನ್ನು ದಾಟಿ, ಯಾಣವನ್ನು ತಲುಪಬಹುದು. ಅಲ್ಲದೆ ಶಿರಸಿಯಿಂದ ದೇವಿಮನೆ ಘಾಟ್ ಮತ್ತು ಹರಿಟಾದ ಮೂಲಕ ಹಾಗೂ ಹೆಗಡೆಘಟ್ಟಾದಿಂದ ಒಂಬತ್ತು ಕಿ.ಮೀ. ಘಟ್ಟದಲ್ಲಿ ನಡೆದು ಸಹ ಇದನ್ನು ತಲುಪಬಹುದು. ಬೆಟ್ಟದ ಪಾದದಲ್ಲಿ ನಿಂತು ೯೦ ರಿಂದ ೧೨೦ ಮೀ. ಎತ್ತರವಿರುವ ಬಹು ಸುಂದರವಾದ ಎರಡು ಶಿಲಾಬೆಟ್ಟಗಳನ್ನು ನೋಡಬಹುದು. ಸ್ಥಳೀಯವಾಗಿ ಇವುಗಳನ್ನು ಮೋಹಿನಿ ಶಿಖರ ಮತ್ತು ಭೈರವೇಶ್ವರ ಶಿಖರ ಎಂದು ಕರೆಯಲಾಗುತ್ತದೆ. ಈ ಬಂಡೆಗಳು ಕಪ್ಪು ಬಣ್ಣದ ಸ್ಫಟಿಕ ರೂಪದ ಸುಣ್ಣಶಿಲೆಯ ಘನ ರಚನೆಗಳಾಗಿದ್ದು, ಅವುಗಳ ಪಾರ್ಶ್ವವು ಹವೆಯಿಂದಾಗಿ ಒರಟಾಗಿವೆ. ಒಂದು ಕಾಲುದಾರಿಯ ಮೂಲಕ ಅರ್ಧದಷ್ಟು ದೊಡ್ಡ ಬಂಡೆಯ ಪಾರ್ಶ್ವದಲ್ಲಿ ಹತ್ತಿ ಹೋದರೆ, ಸುಮಾರು ಮೂರು ಮೀ. ಅಗಲ ಪ್ರವೇಶವಿರುವ ಆಳವಾದ ಗುಹೆ ಇದೆ. ಬಂಡೆಯ ಮೂತಿಗಳಲ್ಲಿ ಎತ್ತರದಲ್ಲಿ ಹತ್ತಿರ ಹತ್ತಿರವಾಗಿ ಜೇನುಗೂಡುಗಳು ಜೋತು ಬಿದ್ದಿರುತ್ತವೆ. ಗುಹೆಯ ಮಧ್ಯದಲ್ಲಿ ಭೈರವೇಶ್ವರ ಎಂದು ಕರೆಯಲಾಗುವ ಎರಡು ಮೀ. ಎತ್ತರದ ಶಿವಲಿಂಗವಿದ್ದು, ಅದರ ಮೇಲಿರುವ ಬಂಡೆಯ ಚಾಚಿನಿಂದ ನೀರು ಲಿಂಗದ ಮೇಲೆ ಬೀಳುತ್ತದೆ. ಇದನ್ನು ಗಂಗೋದ್ಭವ ಎಂದು ಕರೆಯುತ್ತಾರೆ. ಇದರ ದಕ್ಷಿಣಕ್ಕೆ ಸಣ್ಣ ಗುಹೆಯಲ್ಲಿ ಚಂಡಿಕಾ ಮತ್ತು ದುರ್ಗೆಯ ಕಂಚಿನ ಪ್ರತಿಮೆ ಇದೆ. ಬಂಡೆಗಳ ಮಧ್ಯದಿಂದ ಚಂಡಿಹೊಳೆ ಅಥವಾ ಬೆಳ್ಳಹಳ್ಳ ಎಂದು ಕರೆಯಲಾಗುವ ಹೊಳೆಯು ಹರಿದು ಉಪ್ಪಿನ ಪಟ್ಟಣದ ಹತ್ತಿರ ಅಘನಾಶಿನಿ ನದಿಯನ್ನು ಸೇರುತ್ತದೆ. ಪರಂಪರೆಯ ಪ್ರಕಾರ ಭಸ್ಮಾಸುರನು ತಾನು ಮುಟ್ಟಿದ್ದೆಲ್ಲ ಬೂದಿಯಾಗಬೇಕೆಂಬ ವರವನ್ನು ಶಿವನಿಂದ ಪಡೆದ ಮೇಲೆ ಈ ವರವನ್ನು ಶಿವನ ಮೇಲೆಯೇ ಪ್ರಯೋಗಿಸಲು ಹೊರಟಾಗ ಶಿವನು ಈ ಬೆಟ್ಟಗಳಲ್ಲಿ ಆಶ್ರಯ ಪಡೆದನೆಂದು ಪ್ರತೀತಿ. ನಂತರ ಮೋಹಿನಿಯ ರೂಪದಲ್ಲಿ ವಿಷ್ಣು ಭಸ್ಮಾಸುರನು ಬೂದಿಯಾಗುವಂತೆ ಮಾಡಿದನು. ಈ ಸ್ಥಳದ ಸುತ್ತಲೂ ದೊರೆಯುವ ಬಿಳಿ ಬೂದಿಯಂತಿರುವ ಮಣ್ಣು ಆ ಅಸುರನು ಸುಟ್ಟು ಹೋದುದರಿಂದ ಉಂಟಾಯಿತೆಂದು ಹೇಳಲಾಗುತ್ತದೆ. ಶಿವರಾತ್ರಿಯಲ್ಲಿ ನಡೆಯುವ ವಾರ್ಷಿಕ ಜಾತ್ರೆಯು ಸಾವಿರಾರು ಜನರನ್ನು ಆಕರ್ಷಿಸುತ್ತದೆ. ಇಲ್ಲಿಯ ದಂಡೀತೀರ್ಥ ಹೊಳೆಯಲ್ಲಿ ಸ್ನಾನ ಮಾಡಿ ಪವಿತ್ರ ನೀರನ್ನು ಕೊಂಡೊಯ್ದು ಗೋಕರ್ಣದ ಮಹಾಬಲೇಶ್ವರ ದೇವರನ್ನು ಪೂಜಿಸುವುದು ಭಕ್ತರ ಮುಖ್ಯ ಆಚರಣೆಯಾಗಿದೆ.

**ಯಾದಗಿರಿ:** ಕಲಬುರಗಿ ಜಿಲ್ಲೆ ೨೦೧೯ರಲ್ಲಿ ವಿಭಜನೆಯಿಂದಾಗಿ, ಯಾದಗಿರಿಯನ್ನು ಜಿಲ್ಲಾ ಕೇಂದ್ರವನ್ನಾಗಿ ಹೊಂದಿರುವ ಯಾದಗಿರಿ ಜಿಲ್ಲೆಯು ಅಸ್ತಿತ್ವಕ್ಕೆ ಬಂದಿತು. ಕಲ್ಯಾಣದ ಚಾಳುಕ್ಯರ ಕಾಲದಲ್ಲಿ ರಾಜಧಾನಿಯಾಗಿದ್ದ ಇದನ್ನು ಶಾಸನಗಳಲ್ಲಿ ಏತಗಿರಿ ಎಂದು ಹೆಸರಿಸಲಾಗಿದೆ. ಯಾದಗಿರಿಯೇ ಕೋಟೆಯು ಮೂರು ಸುತ್ತಿನದಾಗಿದ್ದು ಇಂದು ಶಿಥಿಲಾವಸ್ಥೆಯಲ್ಲಿದೆ.

**ರಾಯಚೂರು:** ಜಿಲ್ಲಾಕೇಂದ್ರವೂ ಆಗಿರುವ ರಾಯಚೂರು, ರಾಜಧಾನಿ ಬೆಂಗಳೂರಿನಿಂದ ೪೭೫ ಕಿ.ಮೀ. ದೂರದಲ್ಲಿದೆ. ಇಲ್ಲಿರುವ ಗಿರಿದುರ್ಗವು ವಾರಂಗಲ್ಲಿನ ಕಾಕತೀಯರ ಅಧಿಕಾರಿಯೊಬ್ಬನಿಂದ ೧೨೯೪ರಲ್ಲಿ ನಿರ್ಮಿಸಲ್ಪಟ್ಟು, ಮುಂದೆ ಬಹಮನಿ ಅರಸರಿಂದ ವಿಸ್ತೃತಗೊಂಡಿತು. ರಾಯಚೂರು ಬಸ್‌ನಿಲ್ದಾಣದ ಸಮೀಪ ಕೋಟೆಯ ಗೋಡೆಯಲ್ಲಿ ಸೇರಿಸಲ್ಪಟ್ಟಿರುವ ೪೧ ಅಡಿ ಉದ್ದದ ಕಲ್ಲು ಫಲಕದ ಮೇಲಿರುವ ತೆಲುಗು ಶಾಸನ ಹಾಗೂ ದೊಡ್ಡ ದೊಡ್ಡ ಕಲ್ಲುಗಳನ್ನು ಕೋಣಗಳಿಂದ ಎಳೆಯಲ್ಪಡುವ ಬಂಡಿಗಳ ಸಹಾಯದಿಂದ ಹೇಗೆ ಗುಡ್ಡದ ಮೇಲಕ್ಕೆ ಕೊಂಡೊಯಲ್ಪಟ್ಟವೆಂಬುದನ್ನು ತೋರಿಸುವ ಶಿಲ್ಪಗಳನ್ನೊಳಗೊಂಡಿದೆ. ಕೋಟೆಯ ಹೊರ ಸುತ್ತಿಗೆ ಐದು ಭವ್ಯ ಪ್ರವೇಶ ದ್ವಾರಗಳಿದ್ದು, ಸಿಕಂದರಿ ದರವಾಜಾ ಹಾಗೂ ಸೈಲಾ ದರವಾಜಾ ಆಕರ್ಷಕವಾಗಿವೆ. ನವರಂಗಿ ದರವಾಜಾವನ್ನು ವಿಜಯನಗರದ ಅರಸರು ನಿರ್ಮಿಸಿದ್ದು, ವಿಜಯನಗರದ ದರ್ಬಾರಿನ ಹಲವು ದೃಶ್ಯಗಳ ಶಿಲ್ಪಗಳನ್ನೊಳಗೊಂಡಿದೆ. ಊರಲ್ಲಿ ಮಹಮದ್ ಶಾ ಬಹುಮನಿಯ ಕಾಲದ ಭವ್ಯ ಏಕ್ ಮಿನಾರ್ ಮಸೀದಿ ಇದೆ. ಇದರ ಮಿನಾರ್ ಸುಮಾರು ೬೫ ಅಡಿ ಎತ್ತರವಿದೆ. ಇಲ್ಲಿಯ ಜಾಮೀಯಾ ಮಸೀದಿ ಬಹು ದೊಡ್ಡದು. ಈಚೀನ ಅನೇಕ ದೇವಾಲಯಗಳು ಇಲ್ಲಿದ್ದು ಮಾಣಿಕಪ್ರಭು ಹಾಗೂ ರಾಮಲಿಂಗೇಶ್ವರ ದೇವಾಲಯಗಳು ಗಮನಾರ್ಹವಾಗಿವೆ.

**ಲಕ್ಕುಂಡಿ:** ಲಕ್ಕುಂಡಿಯು ಜಿಲ್ಲಾ ಕೇಂದ್ರ ಗದಗದಿಂದ ೧೨ ಕಿ.ಮೀ. ದೂರದಲ್ಲಿದ್ದು, ಕಲ್ಯಾಣದ ಚಾಳುಕ್ಯರ ಕಾಲದಿಂದಲೂ ಚಾರಿತ್ರಿಕ ಮಹತ್ವದ ವಾಸ್ತುಶಿಲ್ಪ ಕೇಂದ್ರವಾಗಿ ಪ್ರಸಿದ್ಧಿ ಪಡೆದಿದೆ. ಇಲ್ಲಿ ಚಿತ್ತಾಕರ್ಷಕವಾದ ಕಾಶೀ ವಿಶ್ವೇಶ್ವರ ದೇವಾಲಯವಿದೆ. ತುಸು ಹಾಳಾಗಿರುವ ಇದು, ದ್ವಿಕೂಟವಾಗಿದ್ದು, ಮುಖ್ಯ ಗರ್ಭಗೃಹದಲ್ಲಿ ಶಿವಲಿಂಗವಿದೆ. ಅದರ ಎದುರುಗಡೆ ಇರುವ ಚಿಕ್ಕ ಗರ್ಭಗೃಹದಲ್ಲಿ ಮೂಲತಃ ಸೂರ್ಯನ ವಿಗ್ರಹವಿತ್ತು. ಇಲ್ಲಿರುವ ಇನ್ನೊಂದು ಗಮನಾರ್ಹ ಸ್ಮಾರಕವೆಂದರೆ ಬೃಹತ್ ಬ್ರಹ್ಮಜಿನಾಲಯ. ಇದನ್ನು 'ದಾನಚಿಂತಾಮಣಿ' ಬಿರುದಾಂಕಿತ ಅತ್ತಿಮಬ್ಬೆಯು ನಿರ್ಮಿಸಿದಳು. ಈ ಚಿಕ್ಕ ಊರು ಮಲ್ಲಿಕಾರ್ಜುನ, ಲಕ್ಷ್ಮೀನಾರಾಯಣ, ಮಾಣಿಕೇಶ್ವರ, ವೀರಭದ್ರ, ನನ್ನೇಶ್ವರ, ಸೋಮೇಶ್ವರ, ನೀಲಕಂಠೇಶ್ವರ ಇತ್ಯಾದಿ ದೇವಾಲಯಗಳಿಂದ ತುಂಬಿಕೊಂಡಿದೆ. ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆಯ ಪ್ರಾಚ್ಯವಸ್ತು ಸಂಗ್ರಹಾಲಯವು ಲಕ್ಕುಂಡಿಯಲ್ಲಿದೆ. ಜಿಂದೇಶಾವಲಿ ದರ್ಗಾ ಕೂಡಾ ಇಲ್ಲಿದೆ. ಈ ಸ್ಥಳದಲ್ಲಿರುವ ಕಲ್ಯಾಣಚಾಳುಕ್ಯ ಶೈಲಿಯ ದೇವಾಲಯಗಳು ಕಲಾ ಪರಿಪೂರ್ಣತೆಯ ಅತ್ಯುತ್ತಮ ಪ್ರತೀಕವಾಗಿದ್ದು, ಇಲ್ಲಿ ದುಡಿದ

ಶಿಲ್ಪಿಗಳ ಒಕ್ಕೂಟವೇ ನಂತರ ಹೊಯ್ಸಳ ಶೈಲಿಯ ದೇವಾಲಯಗಳ ನಿರ್ಮಾಣದಲ್ಲೂ ಶ್ರಮಿಸಿದುದು ಪ್ರಶಂಸನೀಯವಾಗಿದೆ.

**ಲಕ್ಷ್ಮೇಶ್ವರ:** ಧಾರವಾಡದಿಂದ ೭೨ ಕಿ.ಮೀ ದೂರದಲ್ಲಿ, ಶಿರಹಟ್ಟಿ ತಾಲ್ಲೂಕಿನಲ್ಲಿರುವ ಲಕ್ಷ್ಮೇಶ್ವರ ಪ್ರಾಚೀನ ಕಾಲದಲ್ಲಿ 'ಹುಲಿಗೆರೆ' ಅಥವಾ 'ಪುಲಿಗೆರೆ' ಎಂದು ಪ್ರಸಿದ್ಧವಾಗಿದ್ದು, ಪುಲಿಗೆರೆ-೩೦೦ ಆಡಳಿತ ವಿಭಾಗದ ಕೇಂದ್ರಸ್ಥಳವಾಗಿತ್ತು. ಇಲ್ಲಿಯ ಸೋಮನಾಥ ಮತ್ತು ಲಕ್ಷ್ಮಣೇಶ್ವರ ದೇವಾಲಯಗಳು ಪ್ರಸಿದ್ಧವಾಗಿದ್ದು, ೫೦ಕ್ಕೂ ಹೆಚ್ಚು ಸಂಖ್ಯೆಯಲ್ಲಿರುವ ಶಾಸನಗಳು ಊರಿನ ಸಾಂಸ್ಕೃತಿಕ ಮಹತ್ವವನ್ನು ಸಾರುತ್ತವೆ. ಇದು ಬಾದಾಮಿಯ ಚಾಲುಕ್ಯರ ಕಾಲದಲ್ಲಿ ಜೈನ ಕೇಂದ್ರವಾಗಿತ್ತು. ಇಲ್ಲಿರುವ ಅದೇ ಕಾಲದ ಶಂಖಬಸದಿಯು ಕಾಲಕಾಲಕ್ಕೆ ಜೀರ್ಣೋದ್ಧಾರಗೊಂಡಿದೆ. ವಿಜಯಪುರದ ದಂಡನಾಯಕ ಅಂಕುಶಖಾನನು ನಿರ್ಮಿಸಿದ ಖಾಲಿ ಮಸೀದಿಯು ಅಲಂಕಾರಪೂರಿತ ರಚನೆಯಾಗಿದೆ. ಸ್ವಾತಂತ್ರ್ಯ ಪೂರ್ವದಲ್ಲಿ ಈ ಊರು ಮಿರಜ್‌ನ ಪಟವರ್ಧನರ ಸಂಸ್ಥಾನಕ್ಕೆ ಸೇರಿತ್ತು.

**ವಜ್ರಪೋಹ ಜಲಪಾತ:** ಬೆಳಗಾವಿ ಜಿಲ್ಲೆಯ ಖಾನಾಪುರದಿಂದ ೨೩ ಕಿ.ಮೀ. ದೂರದಲ್ಲಿರುವ ಈ ಮನಮೋಹಕ ಸ್ಥಳ ಜಾಂಬೋಟಿ ಅರಣ್ಯದ ಬೆಟ್ಟಗಳ ಪರಿಸರದಲ್ಲಿದ್ದು, ಸರಳವಾಗಿ ತಲುಪುವುದು ಕಷ್ಟ. ಜಾಂಬೋಟಿಯಿಂದ ಚಾಪೋಲಿ ತಲುಪಿ ನಾಲ್ಕು ಕಿ.ಮೀ. ಮುಂದೆ ಸಾಗಿದ ಮೇಲೆ ಮಹಾದಾಯಿ ನದಿಯನ್ನು ದಾಟಿದರೆ ಎತ್ತರವಾದ ಸಮತಟ್ಟಾದ ಬೆಟ್ಟವನ್ನು ತಲುಪಬಹುದು. ಹಾವಿನಂತೆ ಹರಿಯುವ ನದಿಯು ಮೊದಲು ೬೦ ಮೀಟರ್ ಎತ್ತರದಿಂದ ಧವಳಮಯವಾಗಿ ಧುಮ್ಮಿಕ್ಕಿ ನಂತರ ಬಂಡೆಗಳಿಂದ ಆವೃತವಾದ ಕೊಳ್ಳಕ್ಕೆ ಗುಡುಗುಟ್ಟುತ್ತಾ ಧುಮುಕುತ್ತದೆ. ಇಲ್ಲಿಂದ ಮತ್ತೆ ೫೦ ಮೀಟರ್‌ನಷ್ಟು ಆಳಕ್ಕೆ ಎರಡು ಬಾರಿ ಧುಮುಕುತ್ತದೆ. ಆದರೆ ಎರಡನೆಯ ಧುಮುಕು ಇಲ್ಲಿಂದ ಕಾಣುವುದಿಲ್ಲ. ಖಾನಾಪೂರ ಸಮೀಪದಲ್ಲಿರುವ ಆಸೋಗ ಗ್ರಾಮದಿಂದ ಆರು ಕಿ.ಮೀ. ನಡೆದರೆ, ಎರಡನೆಯ ಜಲಪಾತವನ್ನು ಕಾಣಬಹುದು. ನವೆಂಬರ್ ಮತ್ತು ಜನವರಿ ತಿಂಗಳುಗಳ ನಡುವೆ ಈ ಸ್ಥಳವು ಭೇಟಿಕೊಡುವುದು ಸೂಕ್ತ.

**ವರಕೋಡು:** ಮೈಸೂರು ಜಿಲ್ಲೆಯ ಕಸಬಾದಿಂದ ೧೨ ಕಿ.ಮೀ ದೂರದಲ್ಲಿರುವ ಚಾರಿತ್ರಿಕ ಮಹತ್ವದ ಸ್ಥಳವನ್ನು ಮೈಸೂರಿನಿಂದ ಬನ್ನೂರು ಹಾಗೂ ನರಸೀಪುರ ರಸ್ತೆ ಮೂಲಕ ತಲುಪಬಹುದಾಗಿದೆ. ಹಿಂದೆ ಇದೊಂದು ಹೋಬಳಿ ಕೇಂದ್ರ ವಾಗಿತ್ತು. ತಾಲೂಕಿನ ಕುಮಾರಿಬೇಡಿನಲ್ಲಿರುವ ಹೊಯ್ಸಳ ವಿಷ್ಣುವರ್ಧನನ ಕಾಲದ ಶಾಸನದಲ್ಲಿ ಈ ಊರು 'ಒರೆಕೊಡು' ಎಂದು ಉಲ್ಲೇಖಿತಗೊಂಡಿದೆ. ವಿಶಾಲವಾದ ಪ್ರಾಕಾರದಿಂದ ನಡುವೆ ಇರುವ ಅವೃತ್ತವಾಗಿರುವ ಇಲ್ಲಿಯ ವರದರಾಜ ದೇವಾಲಯವು ಅಂತಾರಾಳ, ದ್ವಿದ್ವಾಶ ನವರಂಗ ಹಾಗೂ ಮುಖಮಂಟಪಗಳನ್ನು ಹೊಂದಿದೆ. ಪುಷ್ಕರಣಿಯಿಂದಾಗಿಯೂ ಪ್ರಸಿದ್ಧವಾಗಿದೆ. ಇತ್ತೀಚೆಗೆ ರಾಜ್ಯ ಪುರಾತತ್ವ ಇಲಾಖೆಯು ಇವುಗಳ ಜೀರ್ಣೋದ್ಧಾರ ಕಾರ್ಯವನ್ನು ಮಲಗಿಸಿದ್ದು ಗದುಹಳ್ಳಿ ಮೂಲಮೂರ್ತಿಗಳ ಪ್ರತಿಷ್ಠಾಪನೆ ಆಗಬೇಕಿದೆ. ಸಾರ್ವಜನಿಕ ಪ್ರವೇಶಕ್ಕೆ ಅವಕಾಶ ಕಲ್ಪಿಸಬೇಕಿದೆ.

**ವರುಣ:** ಮೈಸೂರು ಜಿಲ್ಲೆಯ ಕಸಬಾದಿಂದ ೧೦ ಕಿ.ಮೀ ದೂರದಲ್ಲಿ, ನರಸಿಂಹಪುರ ರಸ್ತೆಯಲ್ಲಿರುವ ಇದೊಂದು ಚಾರಿತ್ರಿಕ ಮಹತ್ವದ ಸ್ಥಳವಾಗಿದ್ದು ತಲಕಾಡಿನ ಗಂಗರ ಕಾಲದಷ್ಟು ಪ್ರಾಚೀನವಾಗಿದೆ. ಚಾಲುಕ್ಯರ ಶಾಖೆಯೊಂದರ ರಾಜಧಾನಿಯಾಗಿದ್ದ ಇದ್ದು ಹಿಂದೆ ಜೈನಕೇಂದ್ರವಾಗಿತ್ತು. ಅಲ್ಲಿರುವ ಮಹಾಲಿಂಗೇಶ್ವರ ಹಾಗೂ ದೇವರಮ್ಮ ಗುಡಿಗಳಿಂದಾಗಿ ಇಂದು ಪ್ರಸಿದ್ಧವಾಗಿದೆ. ಇಲ್ಲಿಯ ಮಹಾದೇವಮ್ಮ ಗುಡಿಯು ಬಾಗಿಲನ ವರಷದಲ್ಲೊ ಶಿವರಾತ್ರಿ ಸಂದರ್ಭದು ಮಂಗಳವಾರದಾದು ಮಾತ್ರ ತೆರೆದು ಪೂಜಿಸಲಾಗಿದೆ.

**ವಿಜಯಪುರ:** ಜಿಲ್ಲಾ ಕೇಂದ್ರವಾದ ವಿಜಾಪುರವು ಬೆಂಗಳೂರಿನಿಂದ ೫೭೯ ಕಿ.ಮೀ ದೂರದಲ್ಲಿದ್ದು ಇಂಡೋ-ಸಾರ್ಸೆನಿಕ್ ಕಲಾ ಶೈಲಿಯ ಮುಖ್ಯ ಕೇಂದ್ರವಾಗಿದೆ. ಇದು ಆದಿಲ್‌ಶಾಹಿಗಳ (೧೪೮೯-೧೬೮೬) ರಾಜಧಾನಿಯಾಗಿತ್ತು. ೧೨ನೇ ಶತಮಾನದ ಒಂದು ಶಾಸನದಲ್ಲಿ ಈ ಊರನ್ನು 'ವಿಜಯಪುರ' ಎಂದು ಕರೆಯಲಾಗಿದ್ದು ಹಿಂದೆ ಇದೊಂದು ರಾಜಧಾನಿಪಟ್ಟಣವಾಗಿದ್ದು ಅಂಶ ಶಾಸನಗಳಿಂದ ವೇದ್ಯವಾಗುತ್ತದೆ. ಇಲ್ಲಿರುವ ಗೋಳಗುಮ್ಮಟವು ಭಾರತದಲ್ಲಿಯೇ ಅತಿದೊಡ್ಡದಾದ ೧೨೬ ಅಡಿ ವ್ಯಾಸವುಳ್ಳ ಗುಮ್ಮಟವನ್ನು ಹೊಂದಿದೆ. ಇದರಲ್ಲಿ ಮಹಮದ್ ಆದಿಲ್‌ಶಾಹನ(೧೬೨೬-೫೬) ಗೋರಿಯಿದೆ. ಅತೀ ಆಶ್ಚರ್ಯಕರ ಪಿಸುಗುಟ್ಟುವ ಗ್ಯಾಲರಿ ಇದರಲ್ಲಿದೆ. ಗೋಳಗುಮ್ಮಟವು ೧೫,೦೦೦ ಚದುರ ಅಡಿಯಷ್ಟು ಪ್ರದೇಶವನ್ನು ವ್ಯಾಪಿಸಿದೆ. ಇಬ್ರಾಹಿಂ ರೋಜಾವು ಎರಡನೇಯ ಇಬ್ರಾಹಿಂನ (೧೫೮೦-೧೬೨೬) ಸಮಾಧಿಯಾಗಿದ್ದು, ಕಮಾನುಗಳ ಆಧಾರದ ಮೇಲೆ ನಿಂತಿದೆ. ಇದರ ಒಂದು ಅಂಚಿನಲ್ಲಿ ಮಸೀದಿ ಇದ್ದು, ಇನ್ನೊಂದು ಅಂಚಿನಲ್ಲಿ ಗೋರಿಯಿದೆ. ಹೆನ್ರಿ ಕಸಿನ್ಸ್ ಇದನ್ನು ದಕ್ಷಿಣದ ತಾಜಮಹಲ್ ಎಂದು ಕರೆದಿದ್ದಾನೆ. ಆನಂದ ಮಹಲ್, ಗಗನ ಮಹಲ್, ಅಸರ್ ಮಹಲ್ ಮುಂತಾದವು ಇಲ್ಲಿರುವ ಇತರ ಪ್ರಮುಖ ಕಟ್ಟಡಗಳು. ಇಲ್ಲಿ ಸುಂದರವಾದ ತಾಜ್ ಬಾವಡಿ ಹಾಗೂ ಚಾಂದ್ ಬಾವಡಿ ಎಂಬ ಬಾವಿ(ಕಲ್ಯಾಣಿ)ಗಳಿವೆ. ಅಸರ್ ಮಹಲಿನಲ್ಲಿ ಸುಂದರವಾದ ವರ್ಣಚಿತ್ರಗಳಿವೆ. ಆದರೆ ಇಂದು ಅವು ಮಸುಕಾಗಿವೆ. ಪಟ್ಟಣದ ಸುತ್ತ ಇರುವ ಕೋಟೆಯಲ್ಲಿ ೯೬ ಬುರುಜುಗಳಿದ್ದು ಆರು ಪ್ರವೇಶ ದ್ವಾರಗಳಿವೆ. ಮಾಲಿಕ್-ಎ ಮೈದಾನ್ ಎಂಬ ಬೃಹತ್ತಾದ ೫೫ ಟನ್ ತೂಕದ ತೋಪು ಇದೆ. ಗೋಲ್‌ಗುಂಬಜ್ ಸಮೀಪ ವಸ್ತುಸಂಗ್ರಹಾಲಯವಿದೆ. ಈ ಪಟ್ಟಣವು ಪುರಸಭೆಯ ಆಡಳಿತಕ್ಕೊಳಪಟ್ಟಿದ್ದು ಇಲ್ಲಿ ಕಾಲೀ ಮಸೀದಿ, ಮಕ್ಕಾ ಮಸೀದಿ, ಮಲಿಕ್ ಜಹಾನ್ ಮಸೀದಿ, ಜುಮ್ಮಾ ಮಸೀದಿ ಮುಂತಾದ ಕಲಾತ್ಮಕವಾದ ಮಸೀದಿಗಳಿವೆ. ಇವುಗಳಲ್ಲಿ ಜಾಮಿಯಾ ಮಸೀದಿಯು ದೊಡ್ಡದಾಗಿದ್ದು, ಇದಕ್ಕೆ ಪ್ರಮಾಣಬದ್ಧವಾದ ದೊಡ್ಡ ಗುಮ್ಮಟವಿದೆ. ಇದರ ಪ್ರವೇಶದಲ್ಲಿರುವ ಮಹತರ್ ಮಹಲ್‌ನಲ್ಲಿ ಸೂಕ್ಷ್ಮ ಕೆತ್ತನೆಯುಳ್ಳ ಕಲ್ಲಿನ ಕಲಾಡುಗಳಿವೆ. ಕೋಟೆಯ ಪಶ್ಚಿಮಕ್ಕಿರುವ ದತ್ತಾತ್ರೇಯ ಗುಡಿಯನ್ನು ಎರಡನೆಯ ಇಬ್ರಾಹಿಂನು ಕಟ್ಟಿಸಿದನು. ಈ ದೇವಾಲಯದಲ್ಲಿ ನೃಸಿಂಹ ಸರಸ್ವತಿಯ ಪಾದುಕೆಗಳನ್ನು ಪೂಜೆ ಮಾಡಲಾಗುತ್ತದೆ. ಪಟ್ಟಣದಲ್ಲಿ ಪಾರ್ಶ್ವನಾಥ ಬಸದಿ(೧೯೨೭) ಇದೆ. ಅಲ್ಲದೇ ಸಾಕಷ್ಟು ಆಧುನಿಕ ದೇವಾಲಯಗಳು ಇವೆ. ಅವುಗಳಲ್ಲಿ ೭೦ ಶಿವಲಿಂಗಗಳುಳ್ಳ ದೇವಾಲಯ(೧೯೫೪) ಗಮನಾರ್ಹವಾಗಿದೆ. ವಿಜಾಪುರವು ಉತ್ತುಂಗದಲ್ಲಿದ್ದಾಗ ೧೦ ಲಕ್ಷದಷ್ಟು ಜನಸಂಖ್ಯೆ ಇತ್ತು. ಪ್ರಮುಖ ವ್ಯಾಪಾರ ಕೇಂದ್ರವಾಗಿದ್ದ ಇದನ್ನು 'ದಕ್ಷಿಣದ ರಾಣಿ' ಎಂದು ಕರೆಯುತ್ತಿದ್ದರು. ಔರಂಗಜೇಬನು ವಶಪಡಿಸಿಕೊಂಡ

ಮೇಲೆ ಇದರ ಪ್ರಾಮುಖ್ಯತೆ ಕುಂದಿತು. ೧೮೭೦ರ ದಶಕದಲ್ಲಿ ಬ್ರಿಟಿಷರು ಇದನ್ನು ಜಿಲ್ಲಾ ಕೇಂದ್ರವನ್ನಾಗಿ ಮಾಡಿದ ಮೇಲೆ ಇದರ ಪ್ರಾಮುಖ್ಯತೆ ಮರಳಿತು.

**ಶ್ರವಣಬೆಳಗೊಳ:** ಬೆಂಗಳೂರಿನಿಂದ ೧೫೭ ಕಿ.ಮೀ ದೂರದಲ್ಲಿರುವ ಶ್ರವಣಬೆಳಗೊಳ ಹಾಸನ ಜಿಲ್ಲೆಯ ಮಹತ್ವದ ಚನ್ನರಾಯಪಟ್ಟಣ ತಾಲೂಕಿನಲ್ಲಿರುವ ಹಾಗೂ ಪ್ರಾಚೀನ ಜೈನಕೇಂದ್ರ. ಇಲ್ಲಿ ವಿಶಾಲವಾದ ಪುಷ್ಕರಿಣಿ, ಚಂದ್ರಗಿರಿ ಮತ್ತು ಇಂದ್ರಗಿರಿ ಎಂದು ಕರೆಯಲಾಗುವ ಎರಡು ಶಿಲಾಬೆಟ್ಟಗಳಿವೆ. ಚಂದ್ರಗಿರಿಯಲ್ಲಿ ಗಂಗರ ಕಾಲದ ಚಂದ್ರಗುಪ್ತ ಬಸದಿ ಇದ್ದು, ಪಾರ್ಶ್ವನಾಥ ಬಸದಿಯು ಬಹು ದೊಡ್ಡದಾಗಿದೆ. ಬೆಟ್ಟದ ಬುಡದಲ್ಲಿರುವ ಜೈನಮಠದ ಗೋಡೆಗಳಲ್ಲಿ ಪ್ರಾಚೀನ ಭಿತ್ತಿಚಿತ್ರಗಳಿವೆ. ಇಂದ್ರಗಿರಿಯ ಮೇಲಿರುವ ೫೮ ಅಡಿ ಎತ್ತರದ ಏಕಶಿಲಾ ಗೊಮ್ಮಟ ಮೂರ್ತಿಯನ್ನು ಗಂಗ ದಂಡನಾಯಕನೂ ವಿದ್ವಾಂಸನೂ ಆಗಿದ್ದ ಚಾವುಂಡರಾಯನು ಕ್ರಿ.ಶ. ೯೮೨ರಲ್ಲಿ ಪ್ರತಿಷ್ಠಾಪಿಸಿದನು. ಇದಲ್ಲದೇ ಸಿದ್ಧರ ಬಸದಿ, ಒದೆಗಲ್ ಬಸದಿ, ಚೆನ್ನಮ್ಮ ಬಸದಿ, ಚೌವೀಸ ತೀರ್ಥಂಕರ ಬಸದಿ ಹಾಗೂ ಸುಂದರ ಬಳ್ಳಿಗಳಿಂದ ಅಲಂಕೃತವಾಗಿರುವ ತ್ಯಾಗದ ಬ್ರಹ್ಮದೇವನ ಕಂಬಗಳಿವೆ. ಊರಿನ ಉತ್ತರಕ್ಕೆ ಇರುವ ಜಿನನಾಥಪುರದಲ್ಲಿ ಹೊಯ್ಸಳರ ಕಾಲದ ಅರೆಗಲ್ ಬಸದಿ ಮತ್ತು ಶಾಂತಿನಾಥ ಬಸದಿಗಳಿವೆ. ಶ್ರವಣಬೆಳಗೊಳದಲ್ಲಿ ೫೦೦ಕ್ಕೂ ಹೆಚ್ಚು ಶಾಸನಗಳಿದ್ದು, ಅವುಗಳಲ್ಲಿ ಕೆಲವು ಜೈನ ಮುನಿಗಳ ಹಾಗೂ ಶ್ರಾವಕರ ಸಮಾಧಿ ಮರಣವನ್ನು ದಾಖಲಿಸುತ್ತವೆ. ಇಲ್ಲಿಯ ಗೊಮ್ಮಟ ವಿಗ್ರಹವು ಬಹುಸುಂದರವಾದ ಅನನ್ಯ ಶಿಲ್ಪ. ೧೨ ವರ್ಷಗಳಿಗೊಮ್ಮೆ ಇದರ ಮಹಾಮಸ್ತಕಾಭಿಷೇಕ ಅದ್ದೂರಿಯಿಂದ ನಡೆಯುತ್ತದೆ. ಅನತಿ ದೂರದಲ್ಲಿರುವ ಜೈನಬಸದಿಗಳಿವೆ.

**ಶಿರಸಿ:** ಉತ್ತರ ಕನ್ನಡ ಜಿಲ್ಲೆಯಲ್ಲಿರುವ ಈ ತಾಲೂಕು ಕೇಂದ್ರ ಕಾರವಾರದಿಂದ ೯೦ ಕಿ.ಮೀ. ದೂರದಲ್ಲಿದೆ. ಕ್ರಿ.ಶ. ೧೧೫೦ರ ತಮ್ಮಡಿ ಕಲ್ಹಾಳದ (ಸಿದ್ದಾಪುರ ತಾಲೂಕು) ಶಾಸನದಲ್ಲಿ ಇದನ್ನು "ಸಿರಸೆ" ಎಂದು ಹೆಸರಿಸಲಾಗಿದೆ. ಊರಲ್ಲಿ ಶಂಕರ, ಗಣಪತಿ ಮತ್ತು ವೀರಭದ್ರ ದೇವರ ಪ್ರಾಚೀನ ಗುಡಿ ಹಾಗೂ ತ್ರ್ಯೈಯಂಬಕೇಶ್ವರ ಮತ್ತು ಗೋಪಾಲಕೃಷ್ಣ ದೇವರ ಇತ್ತೀಚಿನ ಗುಡಿಗಳೂ ಇವೆ. ೧೬೮೯ರಲ್ಲಿ ನಿರ್ಮಿಸಿದ್ದರೆಂದು ಹೇಳಲಾಗುವ ಮಾರಿಕಾಂಬಾ ದೇವಾಲಯ ಗಮನಾರ್ಹವಾದುದು. ಅದರ ವಾಸ್ತುಶಿಲ್ಪವು ಅದ್ಭುತವಾಗಿದೆ. ಎರಡು ವರ್ಷಕ್ಕೊಮ್ಮೆ ಮಾಘಮಾಸದಲ್ಲಿ ನಡೆಯುವ ರಥೋತ್ಸವದಲ್ಲಿ ಸಾವಿರಾರು ಭಕ್ತರು ಪಾಲ್ಗೊಳ್ಳುತ್ತಾರೆ. ಸ್ವಾತಂತ್ರ್ಯ ಚಳವಳಿಯ ಮುಖ್ಯ ಕೇಂದ್ರವಾಗಿದ್ದರಿಂದ ಮಹಾತ್ಮಗಾಂಧಿಯವರು ೧೯೩೪ರಲ್ಲಿ ಇಲ್ಲಿಗೆ ಬಂದಿದ್ದರು. ಈ ಊರಿನ ಮಾರಿಕಾಂಬ ದೇವಾಲಯದಲ್ಲಿ ಕೋಣವನ್ನು ಬಲಿಕೊಡುವ ಕ್ರೂರ ಪದ್ಧತಿಯು ಹಲವಾರು ವರ್ಷಗಳಿಂದ ರೂಢಿಯಲ್ಲಿತ್ತು. ಇದನ್ನು ತಕ್ಷಣ ನಿಲ್ಲಿಸುವಂತೆ ಮನವಿ ಮಾಡಿ ಮಹಾತ್ಮ ಗಾಂಧೀಜಿಯವರು ಉಪವಾಸ ಸತ್ಯಾಗ್ರಹ ಹೂಡಿದರು. ಇವರ ಒತ್ತಾಯಕ್ಕೆ ಮಣಿದು ಸ್ಥಳೀಯರು ಕೋಣವನ್ನು ಬಲಿಕೊಡುವ ಪದ್ಧತಿಯನ್ನು ಅಂದಿನಿಂದ ಕೈಬಿಟ್ಟರೆಂದು ಪ್ರತೀತಿಯಿದೆ.

**ಶಿವಗಂಗೆ:** ಬೆಂಗಳೂರಿನಿಂದ ೬೦ ಕಿ.ಮೀ ದೂರದಲ್ಲಿರುವ ಶಿವಗಂಗೆ ನೆಲಮಂಗಲ ತಾಲೂಕು ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿರುವ ಪ್ರಧಾನ ಯಾತ್ರಾಸ್ಥಳ. ಇದೊಂದು ಶಂಖುವಿನ ಆಕಾರದ ಬೆಟ್ಟ. ಇಲ್ಲಿರುವ ಒಂದು ಗುಹೆಯಲ್ಲಿ ಶಿವಗಂಗಾಧರ ಗುಡಿ ಇದೆ. ಇನ್ನೊಂದು ಗುಹೆಯಲ್ಲಿ ಹೊನ್ನಾದೇವಿ ಇದ್ದು, ಇದು ಮೂಲತಃ ಗಂಗರ ಕಾಲದ ನೈಸರ್ಗಿಕ ಗುಹೆಯಾಗಿದ್ದು, ಮುಂದೆ ಹೊಯ್ಸಳರು ಮತ್ತು ಬೆಂಗಳೂರಿನ ಕೆಂಪೇಗೌಡರೂ ಸೇರಿದಂತೆ ಇತರ ರಾಜವಂಶಗಳ ಆಳ್ವಿಕೆಯಲ್ಲಿ ವಿಸ್ತಾರವಾಗಲು ಕಾರಣರಾಗಿದ್ದಾರೆ. ಪರಂಪರೆಯ ಪ್ರಕಾರ ಇದು ಕಕುದ್ಗಿರಿ ಎಂದು ಕರೆಯಲ್ಪಡುತ್ತಿತ್ತು. ಇನ್ನೂ ಮೇಲಕ್ಕೆ ಬೆಟ್ಟವನ್ನು ಹತ್ತಿದರೆ ವಿಜಯನಗರ ಶೈಲಿಯ ಕಂಬಗಳುಳ್ಳ ಕೆಂಪೇಗೌಡನ ಹಜಾರ ಹಾಗೂ ಬೆಟ್ಟದ ತುದಿಯಲ್ಲಿ ಕುಂಭಿಬಸವ ವಿಗ್ರಹ ಇವೆ. ಬೆಟ್ಟದ ಪಾದದಲ್ಲಿ ಶಾಂತೇಶ್ವರ (ಶಿವ) ದೇವಾಲಯ, ಶೃಂಗೇರಿ ಸಂಪ್ರದಾಯದ ಶಂಕರಮಠ ಹಾಗೂ ಮಹಾಭಾರತ ರಾಮಾಯಣ ದೃಶ್ಯಗಳ ಉಬ್ಬುಶಿಲ್ಪಗಳುಳ್ಳ ಬೃಹತ್ ಪುಷ್ಕರಿಣಿ ಇವೆ. ಬೆಟ್ಟದ ಮೇಲೆ ವೀರಶೈವರ ಮಹಾಂತ ಮಠವಿದ್ದು ಮುಂಚೆ ೬೪ ಅಂಗಾಯತ ಮಠಗಳು ಇಲ್ಲಿದ್ದವೆಂದು ಹೇಳಲಾಗಿದೆ. ಶಿವದೇವಾಲಯದಲ್ಲಿರುವ ಅನೇಕ ವಿಗ್ರಹಗಳಲ್ಲಿ ಕೆಂಪೇಗೌಡನ ಭಕ್ತ ಶಿಲ್ಪ ಗಮನಾರ್ಹವಾದುದು.

**ಶಿವಮೊಗ್ಗ:** ಜಿಲ್ಲಾ ಕೇಂದ್ರವಾಗಿರುವ ಶಿವಮೊಗ್ಗವು ತುಂಗಾನದಿಯ ದಂಡೆಯ ಮೇಲಿದ್ದು, ಬೆಂಗಳೂರಿನಿಂದ ೨೭೪ ಕಿ.ಮೀ. ದೂರದಲ್ಲಿದೆ. ಇದು ಕೆಳದಿ ನಾಯಕರ ಕಾಲದಲ್ಲಿ ಗಮನಾರ್ಹ ಕೇಂದ್ರವಾಗಿತ್ತು. ಅವರ ಅರಮನೆಯು ಈಗ ರಾಜ್ಯ ಸರಕಾರದ ಪ್ರಾಚ್ಯವಸ್ತು ಇಲಾಖೆಯ ವಸ್ತುಸಂಗ್ರಹಾಲಯವಾಗಿ ಬಳಕೆಯಾಗುತ್ತಿದೆ. ಕೋಟೆ ಸೀತಾರಾಮಾಂಜನೇಯ ಗುಡಿ ಹಾಗೂ ರಾಘವೇಂದ್ರ ಮಠ ಊರಿನ ಹಳೆಯ ಸ್ಮಾರಕಗಳಾಗಿವೆ. ಶಿವಮೊಗ್ಗವು ಭತ್ತ ಮತ್ತು ಅಡಿಕೆಯ ವ್ಯಾಪಾರ ಕೇಂದ್ರವಾಗಿದ್ದು, ಸರಕಾರಿ ಗಂಧದ ಎಣ್ಣೆಯ ಕಾರಖಾನೆಯೂ ಅಲ್ಲಿದೆ. ಪಶ್ಚಿಮ ಘಟ್ಟಗಳ ಸಮೀಪದಲ್ಲಿರುವ ಈ ಸ್ಥಳ ತಂಪಾಗಿದೆ. ಇಲ್ಲಿ ಭೀಮೇಶ್ವರ, ಲಕ್ಷ್ಮೀನಾರಾಯಣ, ಗುಡ್ಡೆಕಲ್ ಸಿದ್ದೇಶ್ವರ ದೇವಾಲಯಗಳು ಮತ್ತು ಕ್ಯಾಥೋಲಿಕ್ ಕ್ರಿಶ್ಚಿಯನ್ ಸಂಪ್ರದಾಯದ ಸೇಕ್ರೆಡ್ ಹಾರ್ಟ್ ಚರ್ಚ್ ಹಾಗೂ ಮಸೀದಿಗಳು ಇವೆ.

**ಶಿರಾ:** ತುಮಕೂರು ಜಿಲ್ಲೆಯ ಶಿರಾ ಒಂದು ತಾಲೂಕು ಕೇಂದ್ರವಾಗಿದ್ದು, ತುಮಕೂರಿನಿಂದ ೫೨ ಕಿ.ಮೀ. ದೂರದಲ್ಲಿದೆ. ವಿಜಯನಗರದ ಸಾಮಂತ ರತ್ನಗಿರಿಯ ರಂಗಪ್ಪನಾಯಕನು ಸಿರಿಯ ಎಂಬ ಪಟ್ಟಣವನ್ನು ಸ್ಥಾಪಿಸಿದನು. ಮುಂದೆ ೧೬೮೬ ರಲ್ಲಿ ಮೊಘಲರು ಅದನ್ನು ಗೆದ್ದುಕೊಂಡು ಖಾನ್‌ಬಾಗ್ ಎಂಬ ಸುಂದರ ಉದ್ಯಾನವನ್ನು ರೂಪಿಸಿದರು. ಇಲ್ಲಿರುವ ಜುಮ್ಮಾ ಮಸೀದಿಯು ೧೬೮೯ರಲ್ಲಿ ಕಟ್ಟಲ್ಪಟ್ಟ ಆಕರ್ಷಕ ಸ್ಮಾರಕ. ಮಲಿಕ್ ರಿಹಾನ್‌ನ ಗೋರಿಯು ಕೂಡ ಸುಂದರ ಕಟ್ಟಡವಾಗಿದೆ. ಮೊಘಲರಿಂದ ವಿಸ್ತರಿಸಲ್ಪಟ್ಟ ಈ ಕೋಟೆಯ ಭಾಗಗಳು ಅಲ್ಲಲ್ಲಿ ಇಂದಿಗೂ ಉಳಿದಿವೆ. ಇಲ್ಲಿರುವ ಗೋಪಾಲಕೃಷ್ಣ ದೇವಾಲಯದಲ್ಲಿ ಈಗ ವಿಗ್ರಹವಿಲ್ಲ. ಅದನ್ನು ನಾರಾಯಣ ದೇವಾಲಯದಲ್ಲಿ ಇರಿಸಲಾಗಿದೆಯೆಂದು ಹೇಳಲಾಗಿದೆ. ಈ ಊರು ಮೊಘಲರ ಫೌಜುದಾರಿ ಕೇಂದ್ರವಾಗಿದ್ದು, ಖಾಸೀಮ ಖಾನನು ಮೊದಲ ಫೌಜುದಾರನಾಗಿದ್ದನು. ಮುಂದೆ ಇದು ಹೈದರನಿಗೆ ಕಾಣಿಕೆಯಾಗಿ ಬಂತು. ಶಿರಾದ ದಕ್ಷಿಣಕ್ಕೆ ೨೪ ಕಿ.ಮೀ. ದೂರಲ್ಲಿರುವ **ಸಿಬಿ** (ಶಿರಾ ತಾಲೂಕು) ಮೊದಲು ಸಿಬ್ಬೂರು ಎಂದು ಕರೆಯಲ್ಪಟ್ಟಿದ್ದು, ಇಲ್ಲಿ ೧೮ನೇ ಶತಮಾನದಲ್ಲಿ ಹೈದರನ ಕರಣಿಕನಾಗಿದ್ದ ನಲ್ಲಪ್ಪನು ಕಟ್ಟಿಸಿದ ನರಸಿಂಹ ಸ್ವಾಮಿಯ ದೇವಾಲಯವಿದೆ. ನಲ್ಲಪ್ಪನು ಕನ್ನಡದಲ್ಲಿ "ಹೈದರನಾಮೆ"ಯನ್ನು

ಬರೆದಿದ್ದಾನೆ. ಈ ದೇವಾಲಯವು ರಾಮಾಯಣ, ಮಹಾಭಾರತ, ದಶಾವತಾರ ಮುಂತಾದ ಸುಂದರ ಪೌರಾಣಿಕ ಭಿತ್ತಿಚಿತ್ರಗಳಿಂದ ಅಲಂಕೃತವಾಗಿದೆ. ಇದಲ್ಲದೆ ಆಕರ್ಷಕ ಮಿಥುನ ಚಿತ್ರಗಳೂ ಸೇರಿದಂತೆ ಅನೇಕ ಲೌಕಿಕ ಚಿತ್ರಗಳೂ ಇವೆ. ಸಿಬಿ ನರಸಿಂಹಸ್ವಾಮಿ ದೇವಾಲಯದ ಮಹಾದ್ವಾರದ ಮೇಲ್ಛಾವಣಿಯಲ್ಲಿ ಅರಣ್ಯವೊಂದರ ದೃಶ್ಯವಿದ್ದು ಅದರಲ್ಲಿ ಬೇಟೆಗೆ ಸಂಬಂಧಿಸಿದ ಕೆಲವು ಸುಂದರ ದೃಶ್ಯಗಳಿವೆ. ಅವುಗಳಲ್ಲೊಂದರಲ್ಲಿ ಬಂಡೆಗಳ ಮರೆಯಿಂದ ಪ್ರಾಣಿಗಳಿಗೆ ಗುರಿ ಇಡುತ್ತಿರುವ ಬೇಟೆಗಾರರನ್ನು ಚಿತ್ರಿಸಲಾಗಿದೆ.

**ಶ್ರೀರಂಗಪಟ್ಟಣ:** ಮಂಡ್ಯ ಜಿಲ್ಲೆಯಲ್ಲಿರುವ ಚಾರಿತ್ರಿಕ ಮಹತ್ವದ ತಾಲೂಕುಕೇಂದ್ರ. ಇದು ಹಿಂದೆ ಮೈಸೂರು ಅರಸರ ರಾಜಧಾನಿಯಾಗಿತ್ತು. ಹೈದರ್ ಮತ್ತು ಟಿಪ್ಪು ಕಾಲದಲ್ಲಿ ೧.೫೦ ಲಕ್ಷ ಜನಸಂಖ್ಯೆ ಇಲ್ಲಿತ್ತು. ಇದು ಮೈಸೂರಿನಿಂದ ೧೪ ಕಿ.ಮೀ. ದೂರದಲ್ಲಿರುವ ಕಾವೇರಿ ನದಿಯ ಎರಡು ಕವಲುಗಳ ನಡುವಣ ನಡುಗಡ್ಡೆ. ಇಲ್ಲಿಯ ರಂಗನಾಥ ದೇವಾಲಯವನ್ನು ಸುಮಾರು ಒಂಬತ್ತನೇ ಶತಮಾನದಲ್ಲಿ ತಲಕಾಡು ಗಂಗರ ದಂಡನಾಯಕನೊಬ್ಬನು ಕಟ್ಟಿಸಿದನೆಂದು ಪ್ರತೀತಿ. ಮುಂದೆ ೧೨ನೇ ಶತಮಾನದಲ್ಲಿ ಹೊಯ್ಸಳ ವಿನಯಾದಿತ್ಯನು ಈ ದೇವಾಲಯವನ್ನು ವಿಸ್ತರಿಸಿದನು. ಇಲ್ಲಿಯ ಕೋಟೆ ೧೪೫೪ರಲ್ಲಿ ನಿರ್ಮಾಣವಾದುದು. ೧೬೧೦ರಲ್ಲಿ ವಿಜಯನಗರದ ಅಧಿಕಾರಿಯಿಂದ ಇದನ್ನು ಕಸಿದುಕೊಂಡು ರಾಜಒಡೆಯರ ಕಾಲದಲ್ಲಿ ಮೈಸೂರು ಅರಸರು ಇದನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡರು.

ಕಾವೇರಿ ನದಿಯು ತನ್ನ ಪಾತ್ರದಲ್ಲಿ ಮೂರು ದ್ವೀಪಗಳನ್ನು (ನಡುಗಡ್ಡೆ) ಸೃಜಿಸಿದ್ದು ಮೊದಲನೆಯದು ಶ್ರೀರಂಗಪಟ್ಟಣವಾಗಿದ್ದು ಇಲ್ಲಿಯ ರಂಗನಾಥ ಸ್ವಾಮಿ 'ಆದಿರಂಗ'ವೆಂದು, ಶಿವನಸಮುದ್ರದಲ್ಲಿ ಎರಡನೆಯ ದ್ವೀಪವಿದ್ದು ರಂಗನಾಥಸ್ವಾಮಿಯ 'ಮಧ್ಯರಂಗ'ವೆಂದು ಹಾಗೂ ತಮಿಳುನಾಡಿನ ಶ್ರೀರಂಗದಲ್ಲಿರುವ ಮೂರನೇ ದ್ವೀಪದಲ್ಲಿ ರಂಗನಾಥಸ್ವಾಮಿಯ ದೇವಾಲಯವಿದ್ದು 'ಅಂತ್ಯರಂಗ'ವೆಂದು ಕರೆಯಲಾಗುತ್ತದೆ. ಶ್ರೀರಂಗಪಟ್ಟಣದ ರಂಗನಾಥನ ದೇವಾಲಯವು ಹೊಯ್ಸಳ, ವಿಜಯನಗರ ಮತ್ತು ನಂತರದ ಲಕ್ಷಣಗಳನ್ನು ವ್ಯಕ್ತಪಡಿಸುತ್ತಿದ್ದು, ಗೋಪುರವು ವಿಜಯನಗರ ಶೈಲಿಯಲ್ಲಿದೆ ಇಲ್ಲಿ ಗಂಗಾಧರೇಶ್ವರ ಜ್ಯೋತಿಮಹೇಶ್ವರ ಲಕ್ಷ್ಮಿ ನಾರಾಯಣ ಗುಡಿಗಳಲ್ಲದೆ ಪಾರ್ಶ್ವನಾಥನ ಬಸದಿಂದಲೂ ಇದೆ. ಇಲ್ಲಿ ಜೋಡಿ ಬಹುಮುಖ ಮಿನರೆಟ್ಟುಗಳಿರುವ ಸುಂದರ ಮಸೀದಿ ಇದೆ. ಊರ ಹೊರ ವಲಯದಲ್ಲಿರುವ ಗಂಜಾಂನಲ್ಲಿ ಟಿಪ್ಪುವಿನ ದರಿಯಾ ದೌಲತ್ ಅರಮನೆ ಹಾಗೂ ಹೈದರನ ಸಮಾಧಿಯಿರುವ ಗುಂಬಜ್ ಇದ್ದು, ಇವೆರಡೂ ಸಹ ಇಂಡೋ-ಸಾರ್ಸೆನಿಕ್ ಶೈಲಿಯ ಆಕರ್ಷಕ ಕಟ್ಟಡಗಳಾಗಿವೆ. ಅರಮನೆಯಲ್ಲಿ ವರ್ಣಚಿತ್ರಗಳು, ಸುಂದರ ಮರಗೆಲಸವಿದ್ದು, ವಸ್ತು ಸಂಗ್ರಹಾಲಯವಿದೆ. ನದಿಯ ಪಶ್ಚಿಮ ವಾಹಿನಿಯ ದಂಡೆಯಲ್ಲಿ ಅನೇಕ ದೇವಾಲಯಗಳು ಹಾಗೂ ಹಳೆಯ ವಿಶ್ರಾಂತಿ ಗೃಹಗಳಿದ್ದು, ಮನಮೋಹಕ ಸ್ಥಳವಾಗಿದೆ. ಅಬ್ಬೆ ದುಬೇ ಚರ್ಚ್ ಹಾಗೂ ನರಸಿಂಹ ದೇವಸ್ಥಾನಗಳು ನೋಡಲು ಯೋಗ್ಯವಾಗಿವೆ. ಅನತಿದೂರದಲ್ಲಿರುವ ನಿಮಿಷಾಂಬ ದೇವಾಲಯ, ಗೋಸಾಯಿಘಾಟ್, ಹಾಗೂ ಸಂಗಮಗಳು ಉಲ್ಲೇಖಾರ್ಹ ಸ್ಥಳಗಳಾಗಿವೆ.

**ಶೃಂಗೇರಿ:** ಬೆಂಗಳೂರಿನಿಂದ ೩೩೪ ಕಿ.ಮೀ. ದೂರದಲ್ಲಿರುವ ಈ ಸ್ಥಳ ಚಿಕ್ಕಮಗಳೂರು ಜಿಲ್ಲೆಯಲ್ಲಿರುವ ಪ್ರಮುಖ ತಾಲೂಕು ಕೇಂದ್ರ. ಆಚಾರ್ಯ ಶಂಕರರು ಪ್ರಾರಂಭಿಸಿದ ಮಠಗಳಿರುವ ನಾಲ್ಕು ಕೇಂದ್ರಗಳಲ್ಲಿ ಶೃಂಗೇರಿಯೂ ಒಂದು. ಶೃಂಗೇರಿಯಲ್ಲಿ ಪ್ರಾಚೀನ ಪಾರ್ಶ್ವನಾಥ ಬಸದಿಯಿದೆ. ಆದಿಶಂಕರಾಚಾರ್ಯರು ಸ್ಥಾಪಿಸಿದರೆಂದು ಹೇಳಲಾಗುವ ಶಾರದಾಂಬಾ ದೇವಾಲಯ ಇಲ್ಲಿದೆ. ಅಲ್ಲದೆ ತುಂಗಾನದಿಯ ದಂಡೆಯಮೇಲೆ ಸುಮಾರು ೧೪ನೇ ಶತಮಾನದಲ್ಲಿ ನಿರ್ಮಿಸಲಾದ ಬಹು ಸುಂದರವಾದ ವಿದ್ಯಾಶಂಕರ ದೇವಾಲಯವಿದೆ. ಇದರಲ್ಲಿ ರಾಶಿ ಕಂಬಗಳೆಂದು ಕರೆಯಲಾಗುವ ೧೨ ಕಂಬಗಳಿದ್ದು, ಚಾಂದ್ರಮಾನ ಮಾಸದ ಬೆಳಗ್ಗೆ ಒಂದೊಂದು ಕಂಬದ ಮೇಲೆ ಸೂರ್ಯಕಿರಣಗಳು ಬೀಳುತ್ತವೆ. ಈ ರಾಶಿ ಕಂಬಗಳ (ದ್ವಾದಶ ಕಂಬಗಳು) ರಚನೆಯು ವಾಸ್ತುಶಿಲ್ಪ ರಚನೆಯ ಚಾಕಚಕ್ಯತೆಯನ್ನು ಹಾಗೂ ವೈಜ್ಞಾನಿಕ ಪರಿಪೂರ್ಣತೆಯನ್ನು ಬಿಂಬಿಸುತ್ತದೆ. ಸಚ್ಚಿದಾನಂದ ವಿಲಾಸ ಆಶ್ರಮ, ಕಾಲಭೈರವ ದೇವಾಲಯ, ನರಸಿಂಹಭಾರತಿ ಮತ್ತು ಚಂದ್ರಶೇಖರ ಭಾರತಿ ಯತಿಗಳ ಸ್ಮರಣಾರ್ಥ ನಿರ್ಮಿಸಿದ ದೇವಾಲಯಗಳು ಇಲ್ಲಿವೆ. ವಿಜಯನಗರ ಮತ್ತು ಮೈಸೂರು ಸಂಸ್ಥಾನಗಳು ಹಾಗೂ ಇತರ ವಂಶಜರು ನೀಡಿದ ಸಮೃದ್ಧ ದಾನ-ದತ್ತಿಗಳಿಂದಾಗಿ ಶೃಂಗೇರಿಮಠವು ಜಹಗೀರಾಗಿ ಅಭಿವೃದ್ಧಿ ಹೊಂದಿತು. ಟಿಪ್ಪು ಕೂಡ ಈ ಮಠಕ್ಕೆ ಧಾರಾಳವಾಗಿ ದಾನ ನೀಡಿದ್ದನು. ಶೃಂಗೇರಿಯು ಶಾಂತ ಸುಂದರ ಸ್ಥಳವಾಗಿದ್ದು, ಅತಿಥಿಗೃಹಗಳ ಅನುಕೂಲವನ್ನೂ ಹೊಂದಿದೆ. ಶೃಂಗೇರಿ ಮಠದಲ್ಲಿ ಉತ್ತಮವಾದ ಹಸ್ತಪ್ರತಿ ಸಂಗ್ರಹಾಲಯವಿದೆ. ಇದು ಸಂಸ್ಕೃತ ಅಧ್ಯಯನ ಕೇಂದ್ರವೂ ಹೌದು. ಅನತಿ ದೂರದಲ್ಲಿಕಿಗ್ಗ ಪ್ರವಾಸಯೋಗ್ಯ ಕ್ಷೇತ್ರವಾಗಿದೆ.

**ಸನ್ನತಿ:** ಕಲಬುರಗಿ ಜಿಲ್ಲೆಯಲ್ಲಿರುವ ತಾಲೂಕು ಕೇಂದ್ರ ಚಿತ್ತಾಪೂರದಿಂದ ೪೮ ಕಿ.ಮೀ. ಹಾಗೂ ನಾಲವಾರ ರೇಲ್ವೆ ನಿಲ್ದಾಣದಿಂದ ೧೮ ಕಿ.ಮೀ ದೂರದಲ್ಲಿರುವ ಸನ್ನತಿಯು ಭೀಮಾನದಿಯ ಎಡದಂಡೆಯ ಮೇಲಿರುವ ಕರ್ನಾಟಕದ ಪ್ರಮುಖ ಪ್ರಾಗೈತಿಹಾಸಿಕ ಮತ್ತು ಇತಿಹಾಸ ಕಾಲದ ನೆಲೆಯಾಗಿದೆ. ಮೌರ್ಯ ಮತ್ತು ಶಾತವಾಹನರ ಕಾಲದಲ್ಲಿ ಇದು ಪ್ರಮುಖ ಬೌದ್ಧ ಕೇಂದ್ರವಾಗಿತ್ತು. ಈ ಸ್ಥಳದಲ್ಲಿ ಅಶೋಕನ ನಾಲ್ಕು ಪ್ರಧಾನ ಶಾಸನಗಳು ಸಿಕ್ಕಿವೆ. ಹತ್ತಿರದಲ್ಲಿರುವ ಕನಗನಹಳ್ಳಿಯಲ್ಲಿ ಮೌರ್ಯ-ಶಾತವಾಹನರ ಕಾಲದ ಬೌದ್ಧ ಸ್ತೂಪಗಳ ಅವಶೇಷಗಳು ಉತ್ಖನನ ಸಂದರ್ಭದಲ್ಲಿ ಪತ್ತೆಯಾಗಿವೆ. ಇವು ಅಶೋಕನ ಕಾಲದ ಸ್ತೂಪಗಳಾಗಿರಬಹುದೆಂಬ ಅಭಿಪ್ರಾಯ ಪುರಾತತ್ವಜ್ಞರಲ್ಲಿದೆ. ಇಲ್ಲಿಯ ಉತ್ಖನನದಿಂದ ಶಾತವಾಹನರ ಕಾಲದಲ್ಲಿ ಇದು ದೊಡ್ಡ ನಗರವಾಗಿತ್ತೆಂದು ಸಿದ್ಧವಾಗಿದೆ. ಇಲ್ಲಿಯ ಕೆಲವು ಶೋಧಗಳಿಂದ ರೋಮ್‌ನೊಂದಿಗೆ ಸಂಪರ್ಕವಿದ್ದುದು ಬೆಳಕಿಗೆ ಬಂದಿದೆ. ಮರೆತುಹೋಗಿದ್ದ ಈ ನೆಲೆಯ ವೈಭವವನ್ನು ಈಗ ಚಂದ್ರಲಾಂಬ ದೇವಾಲಯ ಮರಳಿಸಿದಂತಿದೆ. ಮೌರ್ಯರ ಕಾಲದ ಅವಶೇಷಗಳ ಮೇಲೆ ನಿಂತಿರುವ ಈ ದೇವಾಲಯವು ರಾಷ್ಟ್ರಕೂಟರ ಕಾಲದಲ್ಲಿ ನಿರ್ಮಿಸಲ್ಪಟ್ಟು ಕಲ್ಯಾಣದ ಚಾಳುಕ್ಯರ ಕಾಲದಲ್ಲಿ ವಿಸ್ತೃತಗೊಂಡಿತು. ಸಂಕ್ರಮಣ, ಶ್ರಾವಣ ಮತ್ತು ನವರಾತ್ರಿಯಲ್ಲಿ ವಿವಿಧ ಸ್ಥಳಗಳಿಂದ ಜನರು ಇಲ್ಲಿಗೆ ಬಂದು ನಡೆದುಕೊಳ್ಳುತ್ತಾರೆ.

**ಸಂಡೂರು:** ಬಳ್ಳಾರಿ ಜಿಲ್ಲೆಯಲ್ಲಿರುವ ತಾಲೂಕು ಕೇಂದ್ರ ಸಂಡೂರು, ಬೆಟ್ಟಗಳಿಂದ ಸುತ್ತುವರಿಯಲ್ಪಟ್ಟಿರುವ ಕೊಳ್ಳದಲ್ಲಿದ್ದು, ಈ ಬೆಟ್ಟಗಳಲ್ಲಿ ಕಬ್ಬಿಣ ಮತ್ತು ಮ್ಯಾಂಗನೀಸ್ ಅದಿರು

ಸಮೃದ್ಧವಾಗಿದೆ. ಸಂಡೂರಿನ ಹೆಸರು ಕನ್ನಡ 'ಸಂದು' ಎಂಬ ಪದದಿಂದ ಹುಟ್ಟಿದ್ದು. 'ಸಂದು' ಎಂದರೆ ಇಕ್ಕಟ್ಟಾದ ಹಾದಿ ಎಂದರ್ಥ. ೧೯೪೭ರವರೆಗೆ ಇದು ಘೋರ್ಪಡೆ ಎಂಬ ಮರಾಠ ಅರಸರ ಕೈಯಲ್ಲಿದ್ದು, ಕೋಟೆಯಿಂದ ಸುತ್ತುವರೆಯಲ್ಪಟ್ಟಿರುವ ಅರಮನೆಯು ಆಕರ್ಷಕ ಕಟ್ಟಡವಾಗಿದೆ. ಊರಲ್ಲಿ ಆಕರ್ಷಕ ಕಂಬಗಳಿರುವ ವಿಠೋಬಾ ಗುಡಿ ಇದೆ. ಅನತಿ ದೂರದಲ್ಲಿರುವ ಬೆಟ್ಟದ ಸಾಲಿನಲ್ಲಿ ಕುಮಾರಸ್ವಾಮಿ ಮತ್ತು ಪಾರ್ವತಿಯ ಸುಂದರ ಗುಡಿಗಳಿವೆ. ಪಾರ್ವತಿ ದೇವಾಲಯವು ಪ್ರಾಯಶಃ ಬಾದಾಮಿಯ ಚಾಲುಕ್ಯರ ಕಾಲದ ಕುಮಾರಸ್ವಾಮಿಯ ಮೂಲ ದೇಗುಲವಾಗಿದ್ದು, ನಂತರದಲ್ಲಿ ಇತ್ತೀಚಿನ ಪಾರ್ವತಿಯ ವಿಗ್ರಹವನ್ನೊಳಗೊಂಡಿದೆ. ನೆರೆಯ ಕುಮಾರಸ್ವಾಮಿ ದೇವಾಲಯವು ಷಣ್ಮುಖನ ಆಧುನಿಕ ವಿಗ್ರಹವಿರುವ ರಾಷ್ಟ್ರಕೂಟರ ಕಾಲದ ದೇವಾಲಯವಾಗಿದೆ. ಈ ಜೋಡಿ ದೇವಾಲಯಗಳು ಅತ್ಯಂತ ಮನಮೋಹಕ ಪರಿಸರದಲ್ಲಿದ್ದು, ಉದ್ಯಾನದಿಂದ ಸುತ್ತುವರಿಯಲ್ಪಟ್ಟಿವೆ. ಈ ಸ್ಥಳ ಸಂಡೂರಿನಿಂದ ೧೨ ಕಿ.ಮೀ ದೂರದಲ್ಲಿದೆ. ಹತ್ತಿರದಲ್ಲಿಯೇ ಕಲಬುರಗಿ ವಿಶ್ವವಿದ್ಯಾಲಯದ ನಂದೀಹಳ್ಳಿ ಸ್ನಾತಕೋತ್ತರ ಕೇಂದ್ರವಿದೆ. ಸಂಡೂರಿನಿಂದ ೧೬ ಕಿ.ಮೀ. ದೂರದಲ್ಲಿ ರಾಮನದುರ್ಗ ಅಥವಾ ರಾಮಗಡವಿದೆ. ದೆಹಲಿಯ ಸುಲ್ತಾನನ ಸೈನ್ಯದೊಂದಿಗೆ ಹೋರಾಡಿ ವೀರಮರಣವನ್ನಪ್ಪಿದ ಕುಮಾರರಾಮನ ಸ್ಮರಣಾರ್ಥವಾಗಿ ನಿರ್ಮಿಸಿರುವ ರಾಮದೇವಾಲಯವು ಈ ತಂಪಾದ ಗಿರಿಧಾಮದಲ್ಲಿದೆ.

**ಸಿರವಾಳ:** ತಾಲೂಕು ಕೇಂದ್ರ ಶಹಾಪುರದಿಂದ ೧೫ ಕಿ.ಮೀ. ದೂರದಲ್ಲಿರುವ ಸಿರವಾಳವು ಭೀಮಾ ನದಿಯ ದಂಡೆಯ ಮೇಲಿರುವ ಚಾರಿತ್ರಿಕ ಸ್ಥಳವಾಗಿದ್ದು, ೨೦ಕ್ಕೂ ಹೆಚ್ಚು ಪ್ರಾಚೀನ ದೇವಾಲಯಗಳು ಇಲ್ಲಿ ಇವುಗಳಲ್ಲಿ ಒಟ್ಟು ೧೦ ದೇವಾಲಯಗಳು ಊರಲ್ಲಿವೆ. ಅವುಗಳಲ್ಲಿ ಏಳು ಅಣಬಿ ರಸ್ತೆಯಲ್ಲಿದ್ದು, ಉಳಿದ ಮೂರು ದೇಗುಲಗಳು ಸುಜ್ಞಾನೇಶ್ವರ, ನನ್ನಯ್ಯ ಹಾಗೂ ನಾಗಯ್ಯ ದೇಗುಲಗಳೆಂದು ಹೆಸರು ಹೊತ್ತಿವೆ. ನನ್ನಯ್ಯ ಹಾಗೂ ನಾಗಯ್ಯ ದೇವಾಲಯಗಳು ರಾಷ್ಟ್ರಕೂಟರ ಕಾಲದವು. ಅಣಬಿ ರಸ್ತೆಯಲ್ಲಿ ಹರಡಿರುವ ದೇವಾಲಯಗಳಲ್ಲಿ ಐದು ಏಕಕೂಟ ಮತ್ತು ಎರಡು ದ್ವಿಕೂಟ ದೇವಾಲಯಗಳಾಗಿದ್ದು, ಇವು ಜೀರ್ಣಾವಸ್ಥೆಯಲ್ಲಿವೆ. ಸುಜ್ಞಾನೇಶ್ವರ ಹಾಗೂ ಅಣಬಿ ರಸ್ತೆಯಲ್ಲಿರುವ ದೇವಾಲಯಗಳ ಪುಷ್ಕರಣಿಗಳು ಪಂಚತಂತ್ರದ ಸುಂದರ ಕಥಾನಿರೂಪಕ ಶಿಲ್ಪಗಳನ್ನು ಹೊಂದಿವೆ. ಊರಲ್ಲಿರುವ ೧೦ ದೇವಾಲಯಗಳಲ್ಲಿ ಸಿದ್ಧಲಿಂಗೇಶ್ವರ ದೇವಾಲಯವು ಅಪರೂಪದ ಸರ್ವತೋಭದ್ರ ತಲವಿನ್ಯಾಸವನ್ನು ಹೊಂದಿದೆ. ಇದು ಪಂಚಕೂಟ ದೇವಾಲಯವಾಗಿದ್ದು, ಮಧ್ಯದಲ್ಲಿ ಮುಖ್ಯ ಗರ್ಭಗೃಹ ಹಾಗೂ ಅದರ ನಾಲ್ಕು ದಿಕ್ಕುಗಳಲ್ಲಿ ಉಳಿದ ನಾಲ್ಕು ಗರ್ಭಗೃಹಗಳಿವೆ. ಇವುಗಳನ್ನು ಬಹಳ ಸುಂದರ ವಿನ್ಯಾಸಗಳಿಂದ ಅಲಂಕರಿಸಲಾಗಿದೆ. ಇಲ್ಲಿರುವ ಒಂದು ಶಾಸನದಲ್ಲಿ ಶರಣ ರೇವಣಸಿದ್ಧಯ್ಯ ಹಾಗೂ ಅವನ ತಂದೆ ಶಿವಯೋಗಿ ಶಾಂತಿಮಯ್ಯನ ಉಲ್ಲೇಖವಿದ್ದು, ಈ ಸ್ಥಳದೊಂದಿಗೆ ಅವರಿಗಿದ್ದ ಸಂಬಂಧವನ್ನು ಸ್ಪಷ್ಟಪಡಿಸುತ್ತದೆ. ಪ್ರಸಿದ್ಧ ಶರಣ ಸಿರಿಯಾಳಸೆಟ್ಟಿಯು ಇಲ್ಲಿಯವನೆಂದು ಸ್ಥಳೀಯ ಪರಂಪರೆ ನಂಬುತ್ತದೆ. ಇದಲ್ಲದೇ ಬಲಭೀಮೇಶ್ವರ, ಮಲ್ಲಿಕಾರ್ಜುನ, ನೆಲದಡಿಯ ದೇವಾಲಯ, ಹನುಮಂತ ದೇವಾಲಯ ಹಾಗೂ ನಿರ್ದಿಷ್ಟ ಹೆಸರಿರದ ಇನ್ನೊಂದು ದೇವಾಲಯ ಇದ್ದು, ಅವೆಲ್ಲ ಈಗ ಜೀರ್ಣಾವಸ್ಥೆಯಲ್ಲಿದ್ದರೂ ಗಮನಾರ್ಹವಾಗಿವೆ. ಇಲ್ಲಿಯ ಕಲ್ಯಾಣಿಯೊಂದರಲ್ಲಿರುವ ಪಂಚತಂತ್ರ ಕಥಾನಕ ಶಿಲ್ಪಗಳು ಉಲ್ಲೇಖಾರ್ಹವಾಗಿವೆ. ಇಲ್ಲಿಂದು ಹೊಳೆದಾಟಿ ಸನ್ನತಿಯನ್ನು ಸುಲಭವಾಗಿ ತಲುಪಬಹುದಾಗಿದೆ.

**ಸುರಪುರ:** ನೂತನವಾಗಿ ಅಸ್ತಿತ್ವಕ್ಕೆ ಬಂದಿರುವ ಯಾದಗಿರಿ ಜಿಲ್ಲೆಯಲ್ಲಿರುವ ಒಂದು ತಾಲೂಕು ಕೇಂದ್ರ. ಬೆಂಗಳೂರಿನಿಂದ ೫೨೦ ಕಿ.ಮೀ. ದೂರದಲ್ಲಿದೆ. ಅದರ ಶಾಸನೋಕ್ತ ಹೆಸರು ಸುರಪುರ ಎಂದಿದ್ದು, ಸಾಮಂತ ನಾಯಕರ ಕೇಂದ್ರವಾಗಿ ಸಗರ ನಾಡಿನ ಹೃದಯ ಭಾಗದಲ್ಲಿತ್ತು. ಊರಿಗೆ ಉತ್ತಮ ಕೋಟೆಯಿದ್ದು, ಅರಮನೆಯ ಭಾಗಗಳನ್ನು ತೆಗೆದು ಹಾಕಲಾಗುತ್ತಿದೆ. ಅದರ ಅರಸ ವೆಂಕಟಪ್ಪನಾಯಕನು ೧೮೫೮ರಲ್ಲಿ ಬ್ರಿಟಿಷರ ವಿರುದ್ಧ ದಂಗೆಯೆದ್ದಿದ್ದನು. ಮೆಡೋಸ್ ಟೇಲರ್ ಇಲ್ಲಿ ಬ್ರಿಟಿಷ್ ಪ್ರತಿನಿಧಿಯಾಗಿ ಸೇವೆ ಸಲ್ಲಿಸಿದ್ದನು. ಅವನು ವಾಸವಾಗಿದ್ದ"ಟೇಲರ್‌ಮಂಜಿಲ್" ಮನೆ ಚಿಕ್ಕಗುಡ್ಡದ ಮೇಲಿದ್ದು, ಈಗ ಅತಿಥಿಗೃಹವಾಗಿ ಬಳಕೆಯಾಗುತ್ತಲಿದೆ. ಊರಲ್ಲಿ ಗೋಪಾಲಸ್ವಾಮಿಯ ಸುಂದರ ದೇವಾಲಯವಿದೆ.

**ಸೋಮನಾಥಪುರ:** ಜಿಲ್ಲಾ ಕೇಂದ್ರ ಮೈಸೂರಿನಿಂದ ೪೦ ಕಿ.ಮೀ. ಹಾಗೂ ತಾಲೂಕು ಕೇಂದ್ರ ಟಿ.ನರಸೀಪುರದಿಂದ ೧೦ ಕಿ.ಮೀ. ದೂರದಲ್ಲಿ ಬನ್ನೂರು ರಸ್ತೆಯ ಬದಿಯಲ್ಲಿರುವ ಸೋಮನಾಥಪುರವು ಹೊಯ್ಸಳರ ದೇವಾಲಯ ವಾಸ್ತುಕಲೆ ಉತ್ತುಂಗದಲ್ಲಿದ್ದಾಗ ನಿರ್ಮಾಣಗೊಂಡ ಆಕರ್ಷಕ ದೇವಾಲಯವನ್ನು ಹೊಂದಿದೆ. ಇಲ್ಲಿಯ ಪ್ರಸಿದ್ಧ ಕೇಶವ ದೇವಾಲಯದ ಮೂರೂ ವೇಸರ ಶಿಖರಗಳು ಸುಸ್ಥಿತಿಯಲ್ಲಿವೆ. ಸೋಮನಾಥಪುರವು ವಿದ್ಯಾನಿಧಿ ಅಗ್ರಹಾರವೆಂದು ಕರೆಯಲ್ಪಟ್ಟಿದ್ದು, ಹೊಯ್ಸಳ ಮುಮ್ಮಡಿ ನರಸಿಂಹನ ದಂಡನಾಯಕ ಸೋಮನಾಥ ದಂಡನಾಯಕನು ಇಲ್ಲಿ ತ್ರಿಕೂಟ ವಿಷ್ಣು ದೇವಾಲಯವನ್ನು ಕಟ್ಟಿಸಿ, ಊರಿಗೆ ತನ್ನ ಹೆಸರನ್ನಿಟ್ಟನು. ಪಂಚಲಿಂಗೇಶ್ವರ, ಲಕ್ಷ್ಮೀನಾರಾಯಣ ಹಾಗೂ ನರಸಿಂಹೇಶ್ವರ ದೇವಾಲಯಗಳು ಇಲ್ಲಿರುವ ಇತರ ಹೊಯ್ಸಳ ದೇವಾಲಯಗಳು. ಕೇಶವ ದೇವಾಲಯವು ೨೧೫ ಅಡಿ ಉದ್ದ ೧೭೭ ಅಡಿ ಅಗಲವುಳ್ಳ ಪ್ರಾಕಾರದೊಳಗೆ ನಿರ್ಮಿತವಾಗಿದೆ. ಎತ್ತರದ ಜಗತಿಯ ಮೇಲೆ ಮೂರು ಗರ್ಭಗೃಹಗಳನ್ನು ಹೊಂದಿರುವ ಈ ದೇಗುಲಕ್ಕೆ ಮೂರು ಭವ್ಯ ಶಿಖರಗಳಿವೆ. ಮೂರೂ ಗರ್ಭಗೃಹಗಳು ಒಂದೇ ನವರಂಗದಲ್ಲಿ ತೆರೆದುಕೊಂಡಿದ್ದು, ಇದಕ್ಕೆ ಒಂದೇ ಪ್ರವೇಶವಿದೆ. ದೇವಾಲಯದ ಗೋಡೆಯ ತುಂಬ ಕುಶಲಪೂರ್ಣ ಕೆತ್ತನೆಯ ಅಲಂಕಾರವಿದ್ದು, ನಾಟ್ಯಸರಸ್ವತಿ, ನಾಟ್ಯ ಗಣಪತಿ, ಮಹಿಷಮರ್ದಿನಿ, ವರಾಹ, ಈಶ್ವರ, ಇಂದ್ರ, ಇತ್ಯಾದಿ ಪ್ರತಿಮೆಗಳ ಸಾಲುಗಳು ಹಾಗೂ ವೈಷ್ಣವ ಪುರಾಣಗಳ ಕಥಾನಿರೂಪಕ ಚಿಕಣಿ ಶಿಲ್ಪಗಳೂ ಇವೆ. ನವರಂಗದಲ್ಲಿ ಬಹು ಸುಂದರ ಬಳ್ಳಿ ಮತ್ತು ವಿವಿಧ ಕೋನಾಕಾರದ ಚಿತ್ರಗಳುಳ್ಳ ಅಲಂಕಾರಪೂರಿತ ೧೬ ಅಂಕಣಗಳಿವೆ. ಮುಖ್ಯಗರ್ಭಗೃಹದಲ್ಲಿದ್ದ ಮೂಲ ಕೇಶವ ವಿಗ್ರಹವು ಈಗ ಇಲ್ಲ. ಆದರೆ ಉಳಿದೆರಡು ಗರ್ಭಗೃಹಗಳಲ್ಲಿರುವ ಜನಾರ್ಧನ ಮತ್ತು ವೇಣುಗೋಪಾಲ ವಿಗ್ರಹಗಳು ಮನಮೋಹಕವಾಗಿವೆ. ಶಿಖರಗಳು ಅಲಂಕಾರ ಪೂರಿತ ರಥಗಳಂತೆ ಕಂಗೊಳಿಸುತ್ತವೆ. ಕೇಶವ ದೇವಾಲಯದ ಗೋಡೆಯ ಶಿಲ್ಪ ಪಟ್ಟಿಕೆಗಳಲ್ಲಿ ಮಲ್ಲಿತಮ, ಬಲಯ್ಯ, ಚೌಡಯ್ಯ, ಚಾಮಯ್ಯ, ಬರ್ಮಯ್ಯ, ನಂಜಯ್ಯ ಎಲಸಮಯ್ಯ ಮುಂತಾದ ಓಜರ ಹೆಸರುಗಳಿರುವುದು ದಾಖಲಾರ್ಹ. ಅತಿ ಆಕರ್ಷಕ ವಾಸ್ತುಶಿಲ್ಪ ರಚನೆಯನ್ನು ಹೊಂದಿರುವ ಈ ತ್ರಿಕೂಟಾಚಲ ಕೇಶವ ದೇವಾಲಯವು ಹೊಯ್ಸಳ ಕಲಾ

ಪ್ರಿಯರಿಗೆ ನೋಡಲೇಬೇಕಾದ ದೇವಾಲಯವಾಗಿದೆ. ಪಂಚಲಿಂಗ ದೇವಾಲಯವು ಹೆಚ್ಚು ಅಲಂಕೃತವಲ್ಲದ ದೇವಾಲಯವಾಗಿದ್ದರೂ ನಾಲ್ಕು ಗರ್ಭಗುಡಿಗಳನ್ನು ಒಂದೇ ಸಾಲಿನಲ್ಲಿ ಹೊಂದಿದೆ.

**ಸೋಂದಾ:** ಇದು ಉತ್ತರ ಕನ್ನಡ ಜಿಲ್ಲೆಯ ತಾಲೂಕು ಕೇಂದ್ರ ಶಿರಸಿಯಿಂದ ೩೫ ಕಿ.ಮೀ. ದೂರದಲ್ಲಿದೆ. ಇದು ಹಿಂದೆ ವಿಜಯನಗರದ ಸಾಮಂತರಾಗಿದ್ದ ಸೋಂದೆ ಅರಸರ ರಾಜಧಾನಿಯಾಗಿತ್ತು. ೧೭೬೩ ರಲ್ಲಿ ಹೈದರನು ಆಕ್ರಮಿಸಿದ ಮೇಲೆ, ಹಿಂದೆ ಪ್ರಮುಖ ಪಟ್ಟಣವಾಗಿದ್ದ ಈ ಊರು ತನ್ನ ಮಹತ್ವವನ್ನು ಕಳೆದುಕೊಂಡಿತು. ಇಲ್ಲಿಯ ಅನೇಕ ಹಳೆಯ ಸ್ಮಾರಕ ಅರಣ್ಯದಲ್ಲಿ ಅಲ್ಲಲ್ಲಿ ಹರಡಿಕೊಂಡಿವೆ. ಹಿಂದೆ ಇದೊಂದು ಜೈನ ಕೇಂದ್ರವಾಗಿದ್ದು, ೧೬೦೪ ರಲ್ಲಿ ತೀರಿಕೊಂಡ ಭಟ್ಟಾಕಳಂಕನ ಸಮಾಧಿ ಹಾಗೂ ಜೈನ ಮಠಗಳು ಇಲ್ಲಿವೆ. ಸಮೀಪದಲ್ಲಿರುವ ಸ್ವರ್ಣವಲ್ಲಿ ಮಠವು ಸ್ಮಾರ್ತ ಹವ್ಯಕ ಸಂಪ್ರದಾಯದ್ದು. ಅರಸಪ್ಪ ನಾಯಕನು ಮಾಧ್ವಪರಂಪರೆಯ ಪ್ರಸಿದ್ಧ ಯತಿ ವಾದಿರಾಜ ತೀರ್ಥರ ಭಕ್ತನಾಗಿದ್ದನು. ವಾದಿರಾಜತೀರ್ಥರು (೧೪೮೦–೧೬೦೦) ಅಷ್ಟಮಠಗಳಲ್ಲಿ ಒಂದಾದ ತಮ್ಮ ಮಠವನ್ನು ಉಡುಪಿಯಿಂದ ಇಲ್ಲಿಗೆ ಸ್ಥಳಾಂತರಿಸಿದರು. ಅವರ ಸಜೀವ ಬೃಂದಾವನವೂ ಇಲ್ಲಿದೆ. ವಾದಿರಾಜರನ್ನು ಮಂತ್ರಾಲಯದ ರಾಘವೇಂದ್ರ ಸ್ವಾಮಿಗಳಿಗಿಂತ ಬಹಳ ಮುಂಚೆಯೇ ಬೃಂದಾವನವನ್ನು ಸಜೀವವಾಗಿ ಪ್ರವೇಶಿಸಿದ ಮೊದಲ ಯತಿಯೆಂದು ಭಾವಿಸಲಾಗಿದೆ. ಈ ರೀತಿ ಜೀವಂತವಾಗಿ ಬೃಂದಾವನ ಪ್ರವೇಶ ಮಾಡುವ ಕ್ರಿಯೆಗೆ 'ಪ್ರಾಯೋಪ್ರವೇಶ'ವೆಂದು ಕರೆಯಲಾಗುತ್ತದೆ. ವಾದಿರಾಜರು ನಿರ್ಮಿಸಿದ ತ್ರಿವಿಕ್ರಮ ದೇವಾಲಯವಿಲ್ಲಿದೆ. ಸೋಂದೆಯ ಸಮೀಪದಲ್ಲಿರುವ ಹವ್ಯಕ ಬ್ರಾಹ್ಮಣರ ಸ್ವರ್ಣವಲ್ಲಿ ಮಠವು ಸಾಂಪ್ರದಾಯಿಕ ತಾಳೆಯೋಲೆ (ತಾಡೋಲೆ) ಹಸ್ತಪ್ರತಿಗಳ ದೊಡ್ಡ ಸಂಗ್ರಹವನ್ನು ಹೊಂದಿದೆ. ಇವಲ್ಲದೇ ಶಂಕರನಾರಾಯಣ ದೇವಾಲಯ ಮತ್ತು ಗದ್ದುಗೆಮಠ ಕೂಡ ಇಲ್ಲಿವೆ. ಸುಮಾರು ೯೧ ಅಡಿ ಎತ್ತರದಿಂದ ಧುಮುಕುವ ಶಿವಗಂಗಾ ಜಲಪಾತವನ್ನು ಶಾಲ್ಮಲಾ ನದಿಯು ರೂಪಿಸಿದ್ದು, ಸೋಂದಾದಿಂದ ಇದು ಐದು ಕಿ.ಮೀ. ದೂರದಲ್ಲಿದೆ. ಶಿಲಾಪಥದಲ್ಲಿ ಹರಿಯುವ ಈ ನದಿಯ ತೀರದುದ್ದಕ್ಕೂ ಸಹಸ್ರಲಿಂಗಗಳನ್ನು ಕಟೆದಿದ್ದು, ಇದರ ಪರಿಸರವು ಮನಮೋಹಕವಾಗಿದೆ. ಸೋದೆಗೆ ಭೇಟಿ ನೀಡುವ ಸಾವಿರಾರು ಜನ ಭಕ್ತಿಯಿಂದ ಇದಕ್ಕೂ ನಡೆದುಕೊಳ್ಳುತ್ತಾರೆ.

**ಸೌಂದತ್ತಿ:** ಬೆಳಗಾವಿ ಜಿಲ್ಲೆಯ ಸೌಂದತ್ತಿ ಒಂದು ತಾಲೂಕು ಕೇಂದ್ರವಾಗಿದ್ದು, ಬೆಳಗಾವಿಯಿಂದ ೭೪ ಕಿ.ಮೀ. ದೂರದಲ್ಲಿದೆ. ಊರ ಬೆಟ್ಟದಲ್ಲಿ ಸುಮಾರು ೧೮ ನೇ ಶತಮಾನದಲ್ಲಿ ಸಿರಸಂಗಿ ದೇಸಾಯಿ ನಿರ್ಮಿಸಿದ ಎಂಟು ಬುರುಜುಗಳುಳ್ಳ ಕೋಟೆಯಿದೆ. ಹಿಂದೆ ಅದು ರಟ್ಟರ ರಾಜಧಾನಿಯೂ ಆಗಿತ್ತು. ನಂತರ ಅವರು ಬೆಳಗಾವಿಗೆ ರಾಜಧಾನಿಯನ್ನು ಸ್ಥಳಾಂತರಿಸಿದರು. ಸೌಂದತ್ತಿಯಲ್ಲಿ ರಟ್ಟರ ಕಾಲದ ಎರಡು ಬಸದಿಗಳು, ಅಂಕೇಶ್ವರ, ಪುರದೇಶ್ವರ, ಮಲ್ಲಿಕಾರ್ಜುನ, ವೆಂಕಟೇಶ್ವರ, ಮತ್ತು ವೀರಭದ್ರ ದೇವಾಲಯಗಳಿವೆ. ಪುರದೇಶ್ವರ ಗುಡಿಯು ಕಲ್ಯಾಣದ ಚಾಳುಕ್ಯರ ಕಾಲದ ದೇವಾಲಯವಾಗಿದ್ದು ಈಗ ಶಿಥಿಲವಾಗಿದೆ. ಅಂಕೇಶ್ವರ ದೇವಾಲಯವು ೧೦೪೮ ರಲ್ಲಿ ರಟ್ಟರಿಂದ ನಿರ್ಮಿತವಾಗಿದ್ದು, ಕಲ್ಯಾಣದ ಚಾಳುಕ್ಯರ ಶೈಲಿಯಲ್ಲಿದೆ. ಮಲಪ್ರಭಾನದಿಗೆ ಕಟ್ಟಲಾದ ನವಿಲುತೀರ್ಥ ಅಣೆಕಟ್ಟಿನಿಂದಾಗಿ ಮೂಡಿರುವ ರೇಣುಕಾಸಾಗರದ ನೀರು ಸೌಂದತ್ತಿಯ ಹೊರವಲಯವನ್ನು ಸ್ಪರ್ಶಿಸುತ್ತಿದೆ. ಸೌಂದತ್ತಿಯಿಂದ ೧೨ ಕಿ.ಮೀ ದೂರದಲ್ಲಿರುವ ಎಲ್ಲಮ್ಮನ ಗುಡ್ಡವು ಬೆಟ್ಟದ ಮೇಲಿದೆ. ಇಲ್ಲಿರುವ ರಾಷ್ಟ್ರಕೂಟರ ಕಾಲದ ಬಸದಿಯು ಈಗ ಎಲ್ಲಮ್ಮ ಅಥವಾ ರೇಣುಕಾ ದೇವಾಲಯವಾಗಿ ಪರಿವರ್ತಿತವಾಗಿದ್ದು, ದಿನನಿತ್ಯವೂ ನೂರಾರು ಭಕ್ತರು ಸಂದರ್ಶಿಸುತ್ತಾರೆ. ಎರಡು ಕಿ.ಮೀ. ದೂರದಲ್ಲಿರುವ **ಪರಸಗಡವು** ಅದ್ಭುತ ಗಿರಿದುರ್ಗವಾಗಿದ್ದು, ಶಿವಾಜಿಯಿಂದ ವಿಸ್ತೃತಗೊಂಡಿತು. ಈಗ ಅದು ಶಿಥಿಲವಾಗತೊಡಗಿದೆ.

**ಹರಿಹರ:** ತುಂಗಭದ್ರಾ ನದಿಯದಂಡೆಯಲ್ಲಿರುವ ಇದು ಚಿತ್ರದುರ್ಗ ಜಿಲ್ಲೆಯಲ್ಲಿರುವ ತಾಲೂಕು ಕೇಂದ್ರವಾಗಿದ್ದು, ಬೆಂಗಳೂರಿನಿಂದ ೨೭೭ ಕಿ.ಮೀ. (ಪುಣೆ–ಬೆಂಗಳೂರು ರಾಷ್ಟ್ರೀಯ ಹೆದ್ದಾರಿ) ದೂರದಲ್ಲಿದೆ. ಹರಿದ್ರಾ ಉಪನದಿ ಇಲ್ಲಿ ಸೇರುವುದರಿಂದ ಇದನ್ನು ಕೂಡಲೂರು ಎಂದೂ ಕರೆಯುತ್ತಿದ್ದು, ೧೨೨೩ ರಲ್ಲಿ ಹೊಯ್ಸಳ ನರಸಿಂಹನ ಕಾಲದಲ್ಲಿ ಪೊಳಾಳ್ವ ದಂಡನಾಯಕನು ತುಂಗಭದ್ರಾ ನದಿದಂಡೆ ಮೇಲೆ ಕಟ್ಟಿಸಿದ ಹರಿಹರೇಶ್ವರ ದೇವಾಲಯದಿಂದಾಗಿ ಇದು ಹರಿಹರ ಎಂದೇ ಕರೆಯಲ್ಪಡುತ್ತದೆ. ಕಲಾತ್ಮಕವಾದ ಹೊಯ್ಸಳ ಶೈಲಿಯ ವಾಸ್ತುರಚನೆಯನ್ನು ಇದು ಹೊಂದಿದ್ದು, ಉತ್ಕೃಷ್ಟ ಮಟ್ಟದ ವಾಸ್ತು ಶಿಲ್ಪಕ್ಕೆ ಪ್ರತಿನಿಧಿಯಾಗಿದೆ. ಇದಲ್ಲದೇ ಇಲ್ಲಿ ಶ್ರೀರಾಮ, ದತ್ತಾತ್ರೇಯ ಹಾಗೂ ಈಶ್ವರ ದೇವಾಲಯಗಳೂ ಇವೆ. ಕಿರ್ಲೋಸ್ಕರ್ ಕಾರ್ಖಾನೆ ಪ್ರಾರಂಭವಾದ ಮೇಲೆ ಇದು ಕೈಗಾರಿಕಾ ಕೇಂದ್ರವಾಗಿಯೂ ಬೆಳೆಯಿತು. ಸನಿಹದಲ್ಲಿಯೇ ಇರುವ ಕುಮಾರಪಟ್ಟಣದಲ್ಲಿ ಹರಿಹರ ಪಾಲಿಫೈಬರ್ಸ್ ಕಾರ್ಖಾನೆಯೂ ಕಾರ್ಯ ನಿರ್ವಹಿಸುತ್ತಿದೆ.

**ಹಲಸಿ:** ಇದು ಬೆಳಗಾವಿ ಜಿಲ್ಲೆಯ ಖಾನಾಪುರ ತಾಲೂಕಿನಲ್ಲಿದ್ದು ಖಾನಾಪುರ ರೇಲ್ವೆ ನಿಲ್ದಾಣದಿಂದ ೧೪ ಕಿ.ಮೀ ದೂರದಲ್ಲಿದೆ. ಹಲಸಿಯು ಬನವಾಸಿ ಕದಂಬರ ಎರಡನೇಯ ರಾಜಧಾನಿಯಾಗಿತ್ತು. ಜೈನ ಧರ್ಮಕ್ಕೆ ಪ್ರೋತ್ಸಾಹ ನೀಡಿದ ಆದಿ ಕದಂಬರು ಇಲ್ಲಿ ಕಟ್ಟಿಸಿದ ಪ್ರಾಚೀನ ಜೈನ ಬಸದಿಯಿಂದು ಹಾಳು ಬಿದ್ದಿದೆ. ಇಲ್ಲಿರುವ ಬೃಹತ್ತಾದ ಭೂವರಾಹ ನರಸಿಂಹ ದೇವಾಲಯವನ್ನು ಗೋವೆಯ ಕದಂಬರು ಸುಮಾರು ೧೨ನೆಯ ಶತಮಾನದಲ್ಲಿ ಕಟ್ಟಿಸಿದರು. ಈ ದೇವಾಲಯದಲ್ಲಿ ಸುಂದರವೂಎತ್ತರವೂ ಆದ ವರಾಹ, ದ್ವಿಬಾಹು ನರಸಿಂಹ (ಪ್ರಾಚೀನ ಶೈಲಿಯ), ಯೋಗನಾರಾಯಣ ಹಾಗು ಸೂರ್ಯ ವಿಗ್ರಹಗಳಿವೆ. ಕಲ್ಯಾಣದ ಚಾಳುಕ್ಯರ ಆಳ್ವಿಕೆಯಲ್ಲಿ ಹಲಸಿಯು, ಹಲಸಿಗೆ–೧೨೦೦೦ ಆಡಳಿತ ವಿಭಾಗದ ಕೇಂದ್ರವಾಗಿತ್ತು. ಇಲ್ಲಿ ಕೋಟೆ ಗೋಕರ್ಣೇಶ್ವರ, ಕಪಿಲೇಶ್ವರ, ಸ್ವರ್ಣೇಶ್ವರ, ಹಾಗೂ ಹಾಟಕೇಶ್ವರ, ದೇವಾಲಯಗಳಿವೆ. ಪಶ್ಚಿಮ ಘಟ್ಟದ ಹಿನ್ನೆಲೆಯಲ್ಲಿರುವ ಇದು ಎಲ್ಲೆಡೆ ಹಸಿರಿನಿಂದ ಕೂಡಿದೆ.

**ಹಳೇಬೀಡು:** ಬೇಲೂರು ತಾಲೂಕಿನ ಹಳೇಬೀಡು (ಶಾಸನೋಕ್ತ ದೋರಸಮುದ್ರ) ಜಿಲ್ಲಾ ಕೇಂದ್ರ ಹಾಸನದಿಂದ ೨೭ ಕಿ.ಮೀ ದೂರದಲ್ಲಿದೆ. ಇದು ಬೇಲೂರಿನ ನಂತರ ಹೊಯ್ಸಳರ ರಾಜಧಾನಿಯಾಗಿತ್ತು. ಇಲ್ಲಿ ವಿಷ್ಣುವರ್ಧನನ ಸೇನಾಪತಿ ಕೇತಮಲ್ಲ ಕ್ರಿ.ಶ. ೧೧೨೧ರಲ್ಲಿ ಕಟ್ಟಿಸಿದ ಸುಂದರವಾದ ದೇವಾಲಯವಿದೆ. ಇಲ್ಲಿರುವ ಅವಳಿ ಶಿವದೇವಾಲಯದಲ್ಲಿ ಒಂದೇ ಜಗತಿಯ ಮೇಲೆ ಎರಡು ಗರ್ಭಗೃಹಗಳಿದ್ದು, ವಿಶಾಲವಾದ ಒಂದೇ ಸಭಾಮಂಟಪವಿದೆ. ಒಂದರಲ್ಲಿ ವಿಷ್ಣುವರ್ಧನ ಹೊಯ್ಸಳೇಶ್ವರ ಲಿಂಗವೂ ಇನ್ನೊಂದರಲ್ಲಿ ಶಾಂತಲೇಶ್ವರ ಲಿಂಗವೂ ಇವೆ. ಹೊಯ್ಸಳೇಶ್ವರದ ಎದುರು ನಂದಿಮಂಟಪವಿದ್ದು, ಅದರ ಹಿಂದೆ

ಎರಡು ಮೀಟರ್ ಎತ್ತರದ ಸೂರ್ಯ ವಿಗ್ರಹವಿರುವ ಸೂರ್ಯನ ಗುಡಿಯಿದೆ. ದೇವಾಲಯದ ದ್ವಾರಬಂಧಗಳು ಬಹಳಷ್ಟು ಅಲಂಕಾರಯುಕ್ತವಾಗಿವೆ. ಹೊರಗಿನ ಗೋಡೆಯಲ್ಲಿ ಸಾಲಾಗಿ ರಾಮಾಯಣ, ಮಹಾಭಾರತ ಹಾಗೂ ಭಾಗವತದ ಕಥೆಗಳನ್ನು ಆಧರಿಸಿದ ಸುಂದರ ಉಬ್ಬುಶಿಲ್ಪ ಕೆತ್ತನೆಗಳಿವೆ. ಇಲ್ಲಿರುವ ಪಾರ್ಶ್ವನಾಥ ಬಸದಿಯಲ್ಲಿ ಚೆನ್ನಾಗಿ ಹೊಳಪು ನೀಡಿರುವ ಕಂಬಗಳಿದ್ದು, ವೀಕ್ಷಕರು ಪ್ರತಿಬಿಂಬವು ಕಾಣಿಸುತ್ತದೆ. ಇಲ್ಲಿ ಕೇಂದ್ರ ಪ್ರಾಚ್ಯವಸ್ತು ಇಲಾಖೆಯ ವಸ್ತುಸಂಗ್ರಹಾಲಯವಿದೆ. ಇಲ್ಲಿರುವ ಕೇದಾರೇಶ್ವರ ದೇವಾಲಯವನ್ನು ಎರಡನೇ ಬಲ್ಲಾಳನ ರಾಣಿ ಕೇತಲದೇವಿ ಕಟ್ಟಿಸಿದಳು. ಸಮೀಪದಲ್ಲಿಯೇ ಇರುವ ಚಟಚಟ್ಟನಹಳ್ಳಿಯಲ್ಲಿ ಆಕರ್ಷಕವೂ ಕಲಾತ್ಮಕವೂ ಆದಲೂ ತ್ರಿಕೂಟ ದೇವಾಲಯವಿದ್ದು, ಇದನ್ನು ಚಟ್ಟ ದಂಡನಾಯಕನು ಕ್ರಿ.ಶ. ೧೨೨೦ರಲ್ಲಿ ಕಟ್ಟಿಸಿದನು.

**ಹಂಪಿ:** ವಿಜಯನಗರದ ಅರಸರ ರಾಜಧಾನಿಯಾಗಿದ್ದ (೧೩೩೬) ಇದು ಬಳ್ಳಾರಿ ಜಿಲ್ಲೆಯಲ್ಲಿದ್ದು ತಾಲೂಕು ಕೇಂದ್ರ ಹೊಸಪೇಟೆಯಿಂದ ೧೦ ಕಿ.ಮೀ. ದೂರದಲ್ಲಿದೆ. ಇದು ಪುರಾತನ ನಗರವಾಗಿದ್ದು, ಹಿಂದೆ ಶಿರಾಯುಗ ಮಾನವರ ನೆಲೆಯಾಗಿದ್ದಕ್ಕೆ ಕುರುಹುಗಳಿದ್ದು ಇಲ್ಲಿ ಕ್ರಿ.ಸ್ತಶಕದ ಪ್ರಾರಂಭಕ್ಕೆ ಸೇರಿದ ಬೌದ್ಧ ಅವಶೇಷಗಳಿವೆ. ಇಲ್ಲಿರುವ ಪಂಪಾದೇವಿ ದೇವಾಲಯದಿಂದಾಗಿ ಪಂಪಾಕ್ಷೇತ್ರವೆಂದೂ ಕರೆಯಲ್ಪಡುವ ಇದು ತುಂಗಭದ್ರಾ ನದಿಯ ದಂಡೆಯ ಮೇಲಿದೆ. ಇಲ್ಲಿಯ ಕಲ್ಯಾಣದ ಚಾಳುಕ್ಯರ ಕಾಲದ ವಿರೂಪಾಕ್ಷ ದೇವಾಲಯದ ಹಿಂಬದಿಯಲ್ಲಿರುವ ಹೇಮಕೂಟ ಬೆಟ್ಟದ ಮೇಲೆ ಬಾದಾಮಿ ಚಾಲುಕ್ಯರ ಕಾಲದ ಪ್ರಾಚೀನ ದೇವಾಲಯವಿದೆ. ಕನ್ನಡದ ಕವಿ ಹರಿಹರ ೧೨ನೆಯ ಶತಮಾನದಲ್ಲಿ ವಿರೂಪಾಕ್ಷ ದೇವರನ್ನು ಹೊಗಳಿ ಬರೆದಿದ್ದಾನೆ. ಈ ಕಲ್ಲುಗುಡ್ಡಗಳ ಪ್ರದೇಶವನ್ನು ರಾಮಾಯಣದ ಕಿಷ್ಕಿಂಧೆ ಎಂದು ಗುರುತಿಸಲಾಗಿದೆ. ನದಿಯ ಉತ್ತರಕ್ಕೆ ಆನೆಗೊಂದಿ ಇದೆ. ಕೃಷ್ಣದೇವರಾಯನು (೧೫೦೯–೧೫೨೯) ವಿಜಾಪುರದ ಸುಲ್ತಾನರನ್ನು ಹಾಗೂ ಗಜಪತಿಗಳನ್ನು ಸೋಲಿಸಿ ವಿಜಯಗಳಿಸಿದ ಖುಷಿಯಲ್ಲಿ ವಿರೂಪಾಕ್ಷ ದೇವಾಲಯಕ್ಕೆ ವಿಶಾಲವಾದ ಕಲ್ಯಾಣ ಮಂಟಪವನ್ನು ಕಟ್ಟಿಸಿದನು. ಈ ಮಂಟಪದಲ್ಲಿ ಸುಂದರವಾಗಿ ಕೆತ್ತಿದ ಏಕಶಿಲಾ ಕಂಬಗಳಿವೆ. ಭಿಷ್ಟಪ್ಪಯ್ಯನ ಗೋಪುರವೆಂದು ಕರೆಯಲ್ಪಡುವ ಈ ದೇವಾಲಯದ ದ್ವಾರವು ಮುಂದೆ ರಾಯಗೋಪುರವೆಂದು ಕರೆಯಲ್ಪಟ್ಟು ದಕ್ಷಿಣಭಾರತದ ವಿಜಯನಗರ ದೇವಾಲಯಗಳಿಗೆ ಮಾದರಿಯಾಗಿದೆ. 'ಬಯಲು ವಸ್ತು ಸಂಗ್ರಹಾಲಯ' ಎಂದೂ ಕರೆಯಲ್ಪಡುವ ಹಂಪೆಯಲ್ಲಿ ಕೃಷ್ಣಸ್ವಾಮಿ ದೇವಾಲಯ, ಹಜಾರರಾಮಸ್ವಾಮಿ ದೇವಾಲಯ, ರಂಗನಾಥನಿರುವ ತಿರುಮಲ ದೇವಾಲಯವನ್ನು ಹೋಲುವ ಅಚ್ಯುತರಾಯ ದೇವಾಲಯ ಗುಂಪು, ಕೋದಂಡರಾಮಸ್ವಾಮಿ ದೇವಾಲಯ, ವಿಜಯ ವಿಠಲಸ್ವಾಮಿ ದೇವಾಲಯ, ಇರುಗಪ್ಪ ಬಸದಿ (ಗಾಣಗಿತ್ತಿ ಜಿನಾಲಯ, ೧೩೮೫) ಉದ್ದಾನ ವೀರಭದ್ರ ದೇವಾಲಯ, ಏಕಶಿಲಾ ಲಕ್ಷ್ಮೀ ನರಸಿಂಹ (೨೯ ಅಡಿ ಉಳ್ಳ ಇದನ್ನು ಕೃಷ್ಣದೇವರಾಯನು ೧೫೨೯ ರಲ್ಲಿ ಸ್ಥಾಪಿಸಿದನು) ಬೃಹತ್ತಾದ ಬಡವಿಲಿಂಗ, ಕಮಲ ಮಹಲ್, ಆನೆಗಳ ಲಾಯ, ಮಹಾನವಮಿ ದಿಬ್ಬ, ಏಕಶಿಲಾ ಕಡಲೆ ಕಾಳು ಗಣೇಶ, ಸಾಸಿವೆ ಕಾಳು ಗಣೇಶ ವಿಗ್ರಹಗಳೇ ಮುಂತಾದ ಅನೇಕ ಸ್ಮಾರಕಗಳಿವೆ. ವಿಜಯ ವಿಠಲ ದೇವಾಲಯವು ಕರ್ನಾಟಕ ಶಾಸ್ತ್ರೀಯ ಸಂಗೀತದ ಶೈಲಿಯನ್ನು ಶಿಲೆಗಳಲ್ಲಿ ಅಳವಡಿಸಿದ ದೇವಾಲಯವಾಗಿದ್ದು, ಇದರ ವೈಜ್ಞಾನಿಕ ವಾಸ್ತು ರಚನೆಯು ವಿಶ್ವದ ಕಲಾತಜ್ಞರನ್ನು ಬೆರಗುಗೊಳಿಸಿರುವುದು ವಿಜಯನಗರ ವಾಸ್ತುಶೈಲಿಯ ಉತ್ತಮ ಸಾಧನೆಯಾಗಿದೆ. ಇತ್ತೀಚೆಗೆ ನಡೆದ ಉತ್ಖನನದಲ್ಲಿ ಅರಮನೆಗಳ ಅಡಿಪಾಯ, ಸುಂದರವಾದ ಮೆಟ್ಟಿಲುಗಳುಳ್ಳ ಪುಷ್ಕರಿಣಿ ಹಾಗೂ ಅರಮನೆಯ ಆವರಣ, ಮಂತ್ರಿ ವರ್ಗದವರ ವಾಸಸ್ಥಾನ, ಜೈನ ಬಸದಿ ಹಾಗೂ ಬೌದ್ಧ ಶಿಲ್ಪಫಲಕಗಳು ಬೆಳಕಿಗೆ ಬಂದಿವೆ. ಮುಸ್ಲಿಮರ ವಸತಿಯಲ್ಲಿ ಮಸೀದಿಯೂ ಇದೆ. ೧೫–೧೬ನೇ ಶತಮಾನದಲ್ಲಿ ಇಲ್ಲಿಗೆ ಬಂದ ವಿದೇಶಿ ಪ್ರವಾಸಿಗರು ಇದನ್ನು ರೋಮ್ ನಗರಕ್ಕಿಂತಲೂ ದೊಡ್ಡದಾಗಿದೆ ಎಂದು ಬಣ್ಣಿಸಿದ್ದಾರೆ. ಇಲ್ಲಿ ನಡೆಯವ ಮಹಾನವಮಿ ಉತ್ಸವದ ವೈಭವವನ್ನು ಹಾಗೂ ಈ ಪಟ್ಟಣದ ವ್ಯಾಪಾರವನ್ನು ನೋಡಿ ಅವರು ಮಂತ್ರಮುಗ್ದರಾಗಿದ್ದರು. ಪೂರ್ವ ಪಶ್ಚಿಮದ ಜನರು ಇಲ್ಲಿದ್ದರು. ೧೫೬೫ರಲ್ಲಿ ಈ ಪಟ್ಟಣ ಧ್ವಂಸಗೊಂಡಿತಾದರೂ ಇಲ್ಲಿರುವ ಕಟ್ಟಡಗಳ ಅವಶೇಷಗಳು ೨೫ ಚದರ ಕಿ.ಮೀ. ಪ್ರದೇಶದಲ್ಲಿ ಇಂದಿಗೂ ಉಳಿದಿವೆ. ಕಮಲಾಪುರದಲ್ಲಿ ಕೇಂದ್ರ ಪುರಾತತ್ತ್ವ ಇಲಾಖೆಯ ವಸ್ತು ಸಂಗ್ರಹಾಲಯವಿದೆ. ಕಮಲಾಪುರಕ್ಕೆ ಅನತಿ ದೂರದ 'ವಿದ್ಯಾರಣ್ಯ'ದಲ್ಲಿ ಕನ್ನಡ ವಿಶ್ವವಿದ್ಯಾಲಯವು ಕಾರ್ಯನಿರ್ವಹಿಸುತ್ತಿದೆ. ಹಂಪೆಯನ್ನು ಯುನೆಸ್ಕೋದವರು ವಿಶ್ವಪರಂಪರೆಯ ನೆಲೆಯಾಗಿ ೧೯೮೬ರಲ್ಲಿ ಘೋಷಿಸಿದ್ದಾರೆ. ಹೊಸ ಪೇಟೆಯಿಂದ ಕಮಲಾಪುರಕ್ಕೆ ಹೊಗುವ ಮಾರ್ಗದಲ್ಲಿರುವ ಅನಂತಶಯನ ದೇವಾಲಯ ವಿಜಯನಗರ ಕಾಲದಾಗಿದ್ದು ಗಮನಾರ್ಹ ರಚನೆಯಾಗಿದೆ.

**ಹಾನಗಲ್ಲು:** ಹಾವೇರಿ ಜಿಲ್ಲೆಯಲ್ಲಿರುವ ಇದು ತಾಲ್ಲೂಕು ಕೇಂದ್ರವಾಗಿದೆ. ಹಿಂದೆ, ಇದು ಕಲ್ಯಾಣದ ಚಾಲುಕ್ಯರ ಸಾಮಂತರಾದ ಹಾನಗಲ್ಲು ಕದಂಬರ ರಾಜಧಾನಿ ಆಗಿತ್ತು. ಪ್ರಾಚೀನ ಶಾಸನಗಳಲ್ಲಿ ಇದನ್ನು 'ಪಾನುಂಗಲ್' ಎಂದು ಕರೆಯಲಾಗಿದೆ. ಸ್ಥಳೀಯ ಪರಂಪರೆಯ ಪ್ರಕಾರ ಇದು ಮಹಾಭಾರತ ಕಾಲದ ವಿರಾಟನಗರ. ಜಿಲ್ಲಾ ಕೇಂದ್ರ ಹಾವೇರಿಯಿಂದ ಸುಮಾರು ೩೦ ಕಿ.ಮೀ. ದೂರದಲ್ಲಿರುವ ಇದು ಹಿಂದೆ ಪಾನುಂಗಲ್–೫೦೦ ಎಂದು ಕರೆಯಲ್ಪಡುತ್ತಿದ್ದ ಆಡಳಿತ ವಿಭಾಗದ ಕೇಂದ್ರವಾಗಿತ್ತು. ಇಲ್ಲಿರುವ ತಾರಕೇಶ್ವರ ದೇವಾಲಯವು ಬೃಹತ್ ರಚನೆಯಾಗಿದ್ದು, ಒಳಗೆ ಸುಂದರವಾದ ಮೂರ್ತಿಗಳನ್ನೂ ಚಾಳುಕ್ಯ ಶೈಲಿಯ ನುಣುಪಾದ ಕಂಬಗಳನ್ನೂ ಹೊಂದಿದೆ. ವೀರಭದ್ರ, ಬಿಲ್ಲೇಶ್ವರ, ರಾಮಲಿಂಗ, ಮುಂತಾದವು ಇಲ್ಲಿರುವ ಇತರ ದೇವಾಲಯಗಳು. ತಾರಕೇಶ್ವರ ದೇವಾಲಯದ ಬಳಿ ಇರುವ ಗಣೇಶ ದೇವಾಲಯಕ್ಕೆ ಔತ್ತರೇಯ ರೇಖಾನಾಗರ ಶಿಖರವಿದೆ. ಈ ಪಟ್ಟಣವು ಧರ್ಮಾನದಿಯ ಎಡದಂಡೆಯ ಮೇಲಿದ್ದು, ನದಿಯ ದಂಡೆಯ ಮೇಲೆ ಕೋಟೆಯ ಅವಶೇಷಗಳಿವೆ. ಇಲ್ಲಿ ಪ್ರಸಿದ್ಧವಾದ ವೀರಶೈವರ ಕುಮಾರಸ್ವಾಮಿ ಮಠವೂ ಇದೆ.

**ಹಾವೇರಿ:** ಈಗ ಜಿಲ್ಲಾ ಕೇಂದ್ರವಾಗಿರುವ ಹಾವೇರಿಯು ರಾಷ್ಟ್ರೀಯ ಹೆದ್ದಾರಿ ನಾಲ್ಕರಲ್ಲಿದ್ದು ಬೆಂಗಳೂರಿನಿಂದ ಸುಮಾರು ೩೪೦ ಕಿ.ಮೀ ದೂರದಲ್ಲಿದೆ. ಊರಿನಿಂದ ೨.೫ ಕಿ.ಮೀ ದೂರದಲ್ಲಿರುವ ಸುಮಾರು ೧೦–೧೧ ನೇ ಶತಮಾನದಲ್ಲಿ ನಿರ್ಮಿತವಾದ ಕೆರೆಯಿಂದಾಗಿ ಹಾವೇರಿ ಎಂಬ ಹೆಸರು ಇದಕ್ಕೆ ಬಂದಿದೆ. ಇಲ್ಲಿ ಕೆಲವು ಪ್ರಾಚೀನ ದೇವಾಲಯಗಳಿದ್ದು, ಕಲ್ಯಾಣಚಾಳುಕ್ಯರ ಕಾಲದ ಸಿದ್ಧೇಶ್ವರ ದೇವಾಲಯ ಸಂಕೀರ್ಣವು ಶಿಲ್ಪಾಲಂಕಾರಗಳಿಗಾಗಿ ಪ್ರಸಿದ್ಧವಾಗಿದ್ದು, ಉಗ್ರನರಸಿಂಹ ಹಾಗೂ ಕಲ್ಲೇಶ್ವರ ದೇವಾಲಯಗಳು ಇತರ ಪ್ರಮುಖ

ಪ್ರಾಚೀನ ದೇವಾಲಯಗಳೆನಿಸಿವೆ. ಇಲ್ಲಿ ವಿರಕ್ತ ಮಠ, ಹುಕ್ಕೇರಿ ಮಠ, ಹೊಸಮಠ, ಮುರುಘಾಸ್ವಾಮಿ ಮಠ ಹಾಗೂ ಮಾಧ್ವ ಸಂಪ್ರದಾಯದ ರಾಘವೇಂದ್ರ ಮಠಗಳಿವೆ. ಹುಕ್ಕೇರಿಮಠದ ವಾರ್ಷಿಕ ಜಾತ್ರೆಯು ಜನವರಿ ತಿಂಗಳಲ್ಲಿಯೂ, ಸಿದ್ಧೇಶ್ವರ ಜಾತ್ರೆಯು ದಸರಾ ಸಂದರ್ಭದಲ್ಲಿಯೂ ನಡೆಯುತ್ತದೆ. ಇತ್ತೀಚಿನವರೆಗೆ ಯಾಲಕ್ಕಿ ಪರಿಷ್ಕರಣೆಗಾಗಿ ಪ್ರಸಿದ್ಧವಾಗಿದ್ದ ಈ ಊರು ಈಗ ಸುಂದರವಾದ ಯಾಲಕ್ಕಿ ಹಾರಗಳಿಗೆ ಪ್ರಸಿದ್ಧಿ ಪಡೆದಿದೆ.

**ಹಾಸನ:** ಜಿಲ್ಲಾ ಕೇಂದ್ರವಾಗಿರುವ ಇದು ಬೆಂಗಳೂರಿನಿಂದ ೧೫೦ ಕಿ.ಮೀ. ದೂರದಲ್ಲಿ ಮಲೆನಾಡಿನ ಸೆರಗಿನಲ್ಲಿ ರಾಷ್ಟ್ರೀಯ ಹೆದ್ದಾರಿಯ ಮೇಲಿದ್ದು ಬಸ್ಸು ಹಾಗೂ ರೈಲು ಸೌಲಭ್ಯಗಳಿವೆ. ಇಲ್ಲಿ ಎಲ್ಲಾ ರೀತಿಯ ಆಧುನಿಕ ಸೌಲಭ್ಯಗಳಿದ್ದು, ತಂಗಲು ಹೊಟೇಲುಗಳೂ ಇವೆ. ಮೂಲತ: ಹನ್ನೊಂದನೇ ಶತಮಾನದಲ್ಲಿ ಮುಕ್ಕಣ್ಣನಾಯಕನೆಂಬ ಚೋಳ ಅಧಿಕಾರಿಯಿಂದ ಸ್ಥಾಪಿಸಲ್ಪಟ್ಟ ಈ ಊರಿಗೆ ಹಿಂದೆ ಚನ್ನಪಟ್ಟಣ ಎಂದು ಹೆಸರಿತ್ತು. ಅವನು ತನ್ನ ಶಿಬಿರವಿದ್ದ ಸ್ಥಳದಲ್ಲಿ ಒಂದು ಕೋಟೆಯನ್ನು ಮತ್ತು ಪೇಟೆಯನ್ನು ನಿರ್ಮಿಸಿದನು. ಚನ್ನಪಟ್ಟಣ ಎಂದರೆ, ಸುಂದರನಗರ ಎಂದು ಅರ್ಥ. ಅಲ್ಲದೆ ಒಂದು ದೊಡ್ಡ ಕೆರೆಯನ್ನು ಅವನು ಇಲ್ಲಿ ಕಟ್ಟಿಸಿದನು. ಪರಂಪರೆಯ ಪ್ರಕಾರ ಹೊಯ್ಸಳರು ಈ ಸ್ಥಳವನ್ನು ಸಂಜೀವ ಕೃಷ್ಣಪ್ಪನಾಯಕನಿಗೆ ಕೊಟ್ಟಿದ್ದರು. ಅವನಿಗೆ ಕೋಟೆಯೊಂದನ್ನು ಕಟ್ಟಿಸುವಂತೆ ಹಸನ್ಮುಖಿ ಹಾಸನಮ್ಮ ದೇವತೆ ಆದೇಶಿಸಿದಳಂತೆ. ನಾಯಕನು ಆ ಆದೇಶವನ್ನು ಪಾಲಿಸಿ ಕೋಟೆ ಪ್ರದೇಶಕ್ಕೆ ಹಾಸನ ಎಂದೇ ಹೆಸರಿಟ್ಟನಂತೆ. ಹೀಗೆ ಹನ್ನೆರಡನೇ ಶತಮಾನದ ಅಂತ್ಯದ ಹೊತ್ತಿಗೆ ಈ ಸ್ಥಳ ಅಸ್ತಿತ್ವಕ್ಕೆ ಬಂದಿತು. ಸ್ಥಳಪುರಾಣದ ಪ್ರಕಾರ ಈ ಸ್ಥಳವು ಸಿಂಹಾಸನವೆಂದು ಕರೆಯಲ್ಪಟ್ಟಿದ್ದು ಕುರುವಂಶದ ಜನಮೇಜಯನಿಗೆ ಸಂಬಂಧಿಸಿತ್ತೆಂಬ ಐತಿಹ್ಯವಿದೆ. ಹೊಯ್ಸಳರ ಪ್ರಮುಖ ಕೇಂದ್ರಗಳಲ್ಲಿ ಇದು ಒಂದಾಗಿತ್ತು. ಗಂಗರ ಕಾಲದಿಂದಲೂ ಅನೇಕ ವಂಶದವರಿಂದ ಆಳಲ್ಪಟ್ಟಿತ್ತು. ಕ್ರಿ.ಶ. ೧೬೯೦ರಲ್ಲಿ ಚಿಕ್ಕದೇವರಾಜನು ಇದನ್ನು ಗೆದ್ದುಕೊಂಡನು. ಇಲ್ಲಿರುವ ಎರಡು ಹೊಯ್ಸಳ ದೇವಾಲಯಗಳು ಚನ್ನಕೇಶವ ಮತ್ತು ವಿರೂಪಾಕ್ಷೇಶ್ವರ ದೇವರಿಗೆ ಮುಡಿಪಾಗಿವೆ. ಚನ್ನಕೇಶವ ದೇವಾಲಯವನ್ನು ಮೊದಲನೇಯ ನರಸಿಂಹನ ಅಧಿಕಾರಿ ಪ್ರಧಾನ ಹೆಗ್ಗಡೆ ಲಕುಮಯ್ಯನು ಕಟ್ಟಿಸಿದನು. ವಿರೂಪಾಕ್ಷೇಶ್ವರ ದೇವಾಲಯವನ್ನು ಶೃಂಗೇರಿ ಮಠಾಧಿಪತಿಗಳಾಗಿದ್ದ, ವಿದ್ಯಾರಣ್ಯರು ಜೀರ್ಣೋದ್ಧಾರ ಮಾಡಿಸಿದರೆಂದು ನಂಬಲಾಗಿದೆ. ಹಾಸನಾಂಬ ದೇವಾಲಯವು ವಿಜಯನಗರೋತ್ತರ ಕಾಲದ ರಚನೆಯಾಗಿದೆ. ಇದರ ಅಧಿದೇವತೆ ಒಂದು ಹುತ್ತದ ರೂಪದಲ್ಲಿದೆ. ದೇವಾಲಯವು ವಾಸ್ತುದೃಷ್ಟಿಯಿಂದ ತೀರ ಸರಳವಿದೆ. ಈ ದೇವಾಲಯ ಸಂಕೀರ್ಣದಲ್ಲಿ ಒಂದು ಗುಡಿಯನ್ನು ಸಿದ್ಧೇಶ್ವರ ದೇವರಿಗಾಗಿ ನಿರ್ಮಿಸಲಾಗಿದೆ. ದೇವಾಲಯವು ವರ್ಷಕ್ಕೊಂದು ಬಾರಿ ಮಾತ್ರ ಅಶ್ವಯುಜ ಬಹುಳ ಬಿದಿಗೆಯಿಂದ ಒಂದು ವಾರದವರೆಗೆ ತೆರೆದಿರುತ್ತದೆ. ಈ ದೇವಾಲಯಗಳೊಂದಿಗೆ ಕೊಳಲು ಗೋಪಾಲಕೃಷ್ಣ ಮತ್ತು ಗಂಗಾಧರೇಶ್ವರ ಗುಡಿಗಳು ದೇವಿಗೆರೆ ಎಂಬ ಕೆರೆಯ ದಂಡೆಯ ಮೇಲಿವೆ. ಸುಮಾರು ೯೦೦ ವರ್ಷ ಹಳೆಯದಾದ ಒಂದು ಜೈನ ಬಸದಿಯೂ ಇದೆ. 'ಬಡವರ' ಊಟಿ' ಎಂದು ಪ್ರಸಿದ್ಧವಾಗಿರುವ ಈ ಊರು ಪ್ರವಾಸಿ ಮಹತ್ವವನ್ನು ಪಡೆಯುತ್ತಿದ್ದು ಸರಕಾರಿ ಅತಿಥಿಗೃಹ ಮತ್ತು ಹೋಟೆಲುಗಳು ಪ್ರವಾಸಿಗರಿಗೆ ಅನುಕೂಲ ಒದಗಿಸಿವೆ. ಬೆಂಗಳೂರು, ಮೈಸೂರು, ಮಡಿಕೇರಿ, ಮಂಗಳೂರು, ಹುಬ್ಬಳ್ಳಿ ಮತ್ತು ಶಿವಮೊಗ್ಗಗಳಿಂದ ನಿಯತಕಾಲಿಕವಾಗಿ ಬಸ್ಸು ಸೌಲಭ್ಯವಿದೆ. ಇಲ್ಲಿಂದ ಬೇಲೂರು, ಹಳೆಬೀಡು ಮತ್ತಿತರ ಹೊಯ್ಸಳ ಕಲಾಕೇಂದ್ರಗಳನ್ನು ತಲುಪುವುದು ಸರಳ. ಇಲ್ಲಿ ನಿರ್ಮಿಸಿರುವ ರಾಜ್ಯಸಾರಿಗೆ ಸಂಸ್ಥೆಯ ಬಸ್ ನಿಲ್ದಾಣ, ಏಷ್ಯಾದೇಶದಲ್ಲಿರುವ ಎರಡನೆಯ ದೊಡ್ಡ ನಿಲ್ದಾಣವಾಗಿದೆ.

**ಹುಬ್ಬಳ್ಳಿ:** ಇದು ಹುಬ್ಬಳ್ಳಿ-ಧಾರವಾಡ ಅವಳಿ ನಗರಗಳ ಭಾಗವಾಗಿದ್ದು ಬೆಂಗಳೂರು-ಪುಣೆ ಹೆದ್ದಾರಿಯ ಮೇಲೆ, ಬೆಂಗಳೂರಿನಿಂದ ೪೦೮ ಕಿ.ಮೀ ದೂರದಲ್ಲಿದೆ. ಈ ಪಟ್ಟಣವು ಪ್ರಮುಖ ರೈಲು ಜಂಕ್ಷನ್ ಹಾಗೂ ಉದ್ಯಮ ನಗರವೂ ಆಗಿದೆ. ರಾಯರ ಹುಬ್ಬಳ್ಳಿ ಹಳೆಯ ಹುಬ್ಬಳ್ಳಿ ಪ್ರದೇಶವಾಗಿದ್ದು, ಇದನ್ನು ಶಾಸನಗಳಲ್ಲಿ 'ಎಲೆಯ ಪೂರ್ವದ ಹಳ್ಳಿ,' 'ಪೂರ್ಬಳ್ಳಿ' ಮುಂತಾಗಿ ಕರೆಯಲಾಗಿದೆ. ಇಲ್ಲಿ ಭವಾನಿ ಶಂಕರ ಮತ್ತು ಜೈನ ಬಸದಿಗಳಿವೆ. ವಿಜಯನಗರದ ಅರಸರ ಕಾಲದಲ್ಲಿ ಹುಬ್ಬಳ್ಳಿಯು ವಾಣಿಜ್ಯ ಕೇಂದ್ರ ವಾಗಿ ಬೆಳೆದು ಹತ್ತಿ, ಸಾಲ್ಟ್ ಪೀಟರ್ ಮತ್ತು ಕಬ್ಬಿಣದ ವ್ಯಾಪಾರಕ್ಕಾಗಿ ಪ್ರಸಿದ್ಧ ವಾಗಿತ್ತು. ಈ ಪ್ರದೇಶವು ಆದಿಲ್ ಶಾಹಿಗಳ ಹಿಡಿತಕ್ಕೆ ಬಂದಿತು ಮುಂದೆ ಬ್ರಿಟಿಷರು ಇಲ್ಲೊಂದು ಫ್ಯಾಕ್ಟರಿಯನ್ನು ತೆರೆದರು. ೧೬೭೩ ರಲ್ಲಿ ಈ ಫ್ಯಾಕ್ಟರಿಯನ್ನು ಶಿವಾಜಿಯು ಲೂಟಿ ಮಾಡಿದನು. ಮೊಗಲರು ಇದನ್ನು ಗೆದ್ದುಕೊಂಡ ತರುವಾಯ ಈ ಊರು ಸವಣೂರ ನವಾಬನಿಗೆ ಸೇರಿತು. ನವಾಬನು ಮಜೀದ್ಪುರ ಎಂಬ ಹೊಸ ಬಡಾವಣೆಯನ್ನು ಕಟ್ಟಿಸಿದನು. ಬಸಪ್ಪಶೆಟ್ಟಿ ಎಂಬ ವ್ಯಾಪಾರಿಯು ದುರ್ಗದಬೈಲಿನ ಸುತ್ತ ಹೊಸಹುಬ್ಬಳ್ಳಿಯನ್ನು ನಿರ್ಮಿಸಿದನು. ೧೭೫೫-೫೬ರಲ್ಲಿ ಸವಣೂರಿನ ನವಾಬನಿಂದ ಮರಾಠರು ಹುಬ್ಬಳ್ಳಿಯನ್ನು ಗೆದ್ದುಕೊಂಡರು. ನಂತರ ಹೈದರನು ಇದನ್ನು ಗೆದ್ದುಕೊಂಡನಾದರೂ ೧೭೯೦ರಲ್ಲಿ ಮರಾಠರು ಮತ್ತೆ ಅದನ್ನು ಮರಳಿ ಗೆದ್ದುಕೊಂಡರು. ಪೇಶ್ವೆಗಳ ಕಾಲದಲ್ಲಿ ಹಳೆಯ ಊರನ್ನು ಫಡಕೆ ಎಂಬವನು ಹಾಗೂ ಹೊಸ ಊರನ್ನು ಸಾಂಗ್ಲಿಯ ಪಟವರ್ಧನನು ನೋಡಿ ಕೊಳ್ಳುತ್ತಿದ್ದರು. ೧೮೧೭ರಲ್ಲಿ ಬ್ರಿಟಿಷರು ಹಳೆಯ ಹುಬ್ಬಳ್ಳಿಯನ್ನು ಹಿಡಿದುಕೊಂಡರು. ೧೮೨೦ರಲ್ಲಿ ಹೊಸ ಪಟ್ಟಣವನ್ನು ಇತರ ೪೭ ಗ್ರಾಮಗಳೊಂದಿಗೆ ಸಾಂಗ್ಲಿಯ ಪಟವರ್ಧನನು ಅವರಿಗೆ ಸಹಾಯಧನಕ್ಕೆ ಬದಲಾಗಿ ಹಸ್ತಾಂತರಿಸಿದನು. ಹುಬ್ಬಳ್ಳಿಯು ಕೈಮಗ್ಗದ ಸಮೃದ್ಧ ಕೇಂದ್ರವಾಗಿದ್ದು ಬಟ್ಟೆ ತಯಾರಿಸುವ ಘಟಕವನ್ನು ಹೊಂದಿದೆ. ೧೮೮೦ ರಲ್ಲಿ ಇಲ್ಲಿ ರೈಲ್ವೇ ಕಾರ್ಯಗಾರ ಪ್ರಾರಂಭವಾಗಿ ಹುಬ್ಬಳ್ಳಿಯನ್ನು ಪ್ರಮುಖ ಔದ್ಯಮಿಕ ಕೇಂದ್ರವನ್ನಾಗಿಸಿತು. ಹಳೇ ಹುಬ್ಬಳ್ಳಿಯ ಬನಶಂಕರಿ ದೇವಾಲಯ ಹಾಗೂ ಉಣಕಲ್ಲಿನ ಆಕರ್ಷಕ ಚಂದ್ರಮೌಳೇಶ್ವರ ದೇವಾಲಯ ಕಲ್ಯಾಣದ ಚಾಳುಕ್ಯರ ಕಾಲದ ಉತ್ಕೃಷ್ಟಕಲಾಕೃತಿಯಾಗಿದೆ. ಸಿದ್ಧಾರೂಢ ಸ್ವಾಮಿ (೧೮೩೬-೧೯೨೯) ಮಠವು ಹಳೆಯ ಹುಬ್ಬಳ್ಳಿಯಲ್ಲಿದ್ದು, ನೂರಾರು ಜನ ಭಕ್ತರು ಅಲ್ಲಿಗೆ ಬರುತ್ತಾರೆ. ಆಕರ್ಷಕವಾದ ಮೂರುಸಾವಿರ ಮಠದ ಜೊತೆಗೆ ರುದ್ರಾಕ್ಷಿ ಮಠ, ಹನ್ನೆರಡು ಎತ್ತಿನಮಠಗಳೂ ಇಲ್ಲಿವೆ. ಬಂಡಿವಾಡ ಅಗಸಿಯಲ್ಲಿ ಮಹದೀ ಮಸೀದಿ ಹಾಗೂ ಹಳೇಹುಬ್ಬಳ್ಳಿಯಲ್ಲಿ ಮಸ್ತಾನ್ ಸೋಫಾ ಮಸೀದಿಗಳಿವೆ. ಇಲ್ಲಿಯ ಚರ್ಚ್ ಆಫ್ ಅಸೆನ್ಶನ್ (೧೯೦೫) ಚರ್ಚ್ ಆಫ್ ಹೋಲಿ ನೇಮ್ (೧೯೨೮), ಸೇಂಟ್ ಜೋಸೆಫ್ಸ್ (೧೮೫೮)ಇಗರ್ಜಿ, ಸೇಂಟ್ ಆಂಡ್ರೋಸ್ (೧೮೯೦) ಚ್‌ರ್ಚ್‌ಗಳು ಗಮನಾರ್ಹವಾಗಿವೆ. ಉಣಕಲ್ಲಿನಲ್ಲಿ ಬಾಸೆಲ್ ಮಿಶನ್ ಚರ್ಚ್ ಇದೆ. ವಿದ್ಯಾನಗರದಲ್ಲಿ ಸಿಖ್ಖರ ಗುರುದ್ವಾರಾ ಇದೆ. ಎಲ್ಲಾ ಶಿಕ್ಷಣ ಸೌಲಭ್ಯವಿರುವ

ಸರಕಾರಿ ವೈದ್ಯಕೀಯ ಮಹಾವಿದ್ಯಾಲಯ ಹಾಗೂ ಇತರ ಮಹಾವಿದ್ಯಾಲಯಗಳು ಇಲ್ಲಿವೆ. ಇಂದಿರಾ ಗಾಂಧಿ ಸ್ಮಾರಕ ಗಾಜಿನ ಮನೆ ಇದೆ ಹಾಗೂ ನೆರೆಯ ಉಣಕಲ್ ಬೆಟ್ಟದ ಮೇಲೆ ನೃಪತುಂಗ ಉದ್ಯಾನವನ ಇದೆ. ಹುಬ್ಬಳ್ಳಿಯ ದಕ್ಷಿಣಕ್ಕೆ ೧೫ ಕಿ.ಮೀ. ದೂರದಲ್ಲಿರುವ ಕುಂದಗೋಳದಲ್ಲಿ ಕಲ್ಯಾಣದ ಚಾಳುಕ್ಯರ ಕಾಲದ ಆಕರ್ಷಕ ಶಂಭುಲಿಂಗ ದೇವಾಲಯವಿದೆ.

**ಹೊರನಾಡು:** ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲೂಕಿನಲ್ಲಿರುವ ಹೊರನಾಡು, ಕಳಸದಿಂದ ೧೫ ಕಿ.ಮೀ. ದೂರದಲ್ಲಿದೆ. ಸ್ಥಳಿಯ ಇತಿಹಾಸಕ್ಕಷ್ಟೇ ಅಲ್ಲದೆ ಇದು ಅನ್ನಪೂರ್ಣೇಶ್ವರಿ ದೇವಾಲಯ ಹಾಗೂ ಪ್ರಕೃತಿ ಸೌಂದರ್ಯಕ್ಕಾಗಿ ಪ್ರಸಿದ್ಧವಾಗಿದೆ. ದೇಶದ ವಿವಿಧ ಭಾಗಗಳಿಂದ ದೊಡ್ಡ ಪ್ರಮಾಣದಲ್ಲಿ ವರ್ಷದುದ್ದಕ್ಕೂ ಯಾತ್ರಾರ್ಥಿಗಳು ಇಲ್ಲಿಗೆ ಬರುತ್ತಾರೆ. ಈ ದೇವಾಲಯಕ್ಕೆ ಬರುವ ಭಕ್ತರಿಗೆ ಊಟ ವಸತಿ ವ್ಯವಸ್ಥೆ ಲಭ್ಯವಿದೆ. ಇದು ದೇವಾಲಯದ ಅಧಿದೈವದ ಹೆಸರಿಗೆ ಅನ್ವರ್ಥಕವಾಗಿದೆ.

**ಹೊಸಹೊಳಲು:** ತಾಲೂಕು ಕೇಂದ್ರ ಕೃಷ್ಣರಾಜಪೇಟೆಯಿಂದ ಪೂರ್ವಕ್ಕೆ ಹೊಳಲು ವೃತ್ತದಿಂದ ಎರಡು ಕಿ.ಮಿ. ದೂರದಲ್ಲಿರುವ ಇದು ಹೊಯ್ಸಳರ ಕಾಲದಲ್ಲಿ ಪ್ರಸಿದ್ಧ ಅಗ್ರಹಾರವಾಗಿತ್ತು. ಲಕ್ಷ್ಮೀನಾರಾಯಣ ದೇವಾಲಯ, ಹರಿಹರೇಶ್ವರ ದೇವಾಲಯ, ವೀರಾಂಜನೇಯ ದೇವಾಲಯ, ಪಾರ್ಶ್ವನಾಥ ಬಸದಿ ಹಾಗೂ ಊರ ಸುತ್ತಲಿನ ಕೋಟೆಯ ಅವಶೇಷಗಳು ಇಲ್ಲಿ ನೋಡಬಹುದಾದಂತಹ ತಾಣಗಳು. ಇಲ್ಲಿಯ ಲಕ್ಷ್ಮೀನಾರಾಯಣ ದೇವಾಲಯವು ತ್ರಿಕೂಟಾಚಲವಾಗಿದ್ದು ಮಧ್ಯದ ಗರ್ಭಗೃಹದಲ್ಲಿ ಲಕ್ಷ್ಮೀನಾರಾಯಣದ ಪ್ರತಿಮೆ ಇದೆ. ಬಲಗಡೆಯ ಗರ್ಭಗೃಹದಲ್ಲಿ ಲಕ್ಷ್ಮೀನರಸಿಂಹ ಹಾಗೂ ಎಡಗಡೆಯ ಗರ್ಭಗೃಹದಲ್ಲಿ ಮೂಲತ: ವೇಣುಗೋಪಾಲನ ವಿಗ್ರಹವಿತ್ತು. ಈಗ ಅದರಲ್ಲಿ ಯಾವ ವಿಗ್ರಹವೂ ಇಲ್ಲ. ಮೂರೂ ಗರ್ಭಗೃಹಗಳಿಗೂ ಸೇರಿದಂತೆ ಒಂದೇ ನವರಂಗವಿದೆ. ನವರಂಗದ ದೇವಕೋಷ್ಟಗಳಲ್ಲಿ ಗಣಪತಿ ಮತ್ತು ಮಹಿಷಾಸುರ ಮರ್ಧಿನಿಯ ಶಿಲ್ಪಗಳಿವೆ. ಕಂಬಗಳು ಹೊಯ್ಸಳ ಶೈಲಿಯಲ್ಲಿದ್ದು ಬಹಳಷ್ಟು ಹೊಳಪು ನೀಡಲಾಗಿದೆ. ಕಂಬಗಳ ಮೇಲ್ಗಡೆ ಹೊಯ್ಸಳ ಕಲೆಯ ವಿಶಿಷ್ಟ ಲಕ್ಷಣವೆನಿಸಿದ ಮದನಿಕೆಯರ ಸುಂದರ ವಿಗ್ರಹಗಳಿವೆ. ನವರಂಗದ ಮುಂದುಗಡೆ ಸಭಾಮಂಟಪ ಮತ್ತು ಮುಖಮಂಟಪಗಳಿವೆ. ದೇವಾಲಯವು ಎತ್ತರದ ಜಗತಿಯ ಮೇಲೆ ನಿಂತಿದ್ದು ಅಧಿಷ್ಠಾನದ ಪಟ್ಟಿಕೆಗಳಲ್ಲಿ ಸಮೃದ್ಧ ಕುಸುರಿನ ಕೆತ್ತನೆಗಳುಳ್ಳ ಆನೆ, ಕುದುರೆ, ಬಳ್ಳಿ, ಮಕರ, ಹಂಸ, ಪೌರಾಣಿಕ ದೃಶ್ಯಗಳೇ ಮುಂತಾದ ಸಾಲುಪಟ್ಟಿಕೆಗಳಿವೆ. ಭಿತ್ತಿಯನ್ನು ಎರಡು ಹಂತಗಳಲ್ಲಿ ವರ್ಗಿಕರಿಸಿದ್ದು ಕೆಳಹಂತವು ಬ್ರಹ್ಮ, ವಿಷ್ಣು, ಲಕ್ಷ್ಮೀನಾರಾಯಣ, ಕೇಶವ, ಚತುರ್ವಿಂಶತಿ ಮೂರ್ತಿಗಳು, ಪರವಾಸುದೇವ, ಯೋಗಾನರಸಿಂಹ, ಲಕ್ಷ್ಮೀನರಸಿಂಹ, ಇಂದ್ರ, ರಾಮಲಕ್ಷ್ಮಣ, ಹರಿಹರ, ಭೈರವ, ಭೈರವಿ, ಕಾಳಿ ಆದಿಶಕ್ತಿ, ಗೋವರ್ಧನಧಾರಿ ಕೃಷ್ಣ, ಕಾಳಿಂಗಮರ್ದನ, ಲಕ್ಷ್ಮೀ, ನಾಟ್ಯಸರಸ್ವತಿ ಮುಂತಾದ ದೇವಾನುದೇವತಾ ಶಿಲ್ಪಗಳಿಂದ ಅಲಂಕೃತವಾಗಿದೆ. ಭಿತ್ತಿಯ ಮೇಲಿನ ಹಂತದಲ್ಲಿ ಸ್ತಂಭಪಂಜರ, ಕೋಷ್ಟಪಂಜರ, ದೇವಕೋಷ್ಠಗಳು, ರಾಮಾಯಣ ಮಹಾಭಾರತಗಳ ಘಟನೆಗಳು ಕಾಣುತ್ತವೆ. ಕೆಲವು ದೇವಕೋಷ್ಠಗಳಲ್ಲಿ ದೇವತೆಗಳ ವಿಗ್ರಹಗಳಿವೆ. ಇತ್ತೀಚೆಗೆ ದೇವಾಲಯದ ಎಡಪಾರ್ಶ್ವದಲ್ಲಿ ದೇವಿಯ ಗುಡಿಯನ್ನು ನಿರ್ಮಿಸಲಾಗಿದೆ. ಈ ದೇವಾಲಯಕ್ಕೆ ಸಂಬಂಧಿಸಿದ ಯಾವುದೇ ಶಾಸನಗಳಿಲ್ಲ. ಆದರೆ ಶೈಲಿಯ ಆಧಾರದ ಮೇಲೆ ಅದನ್ನು ಸುಮಾರು ಕ್ರಿ.ಶ.೧೩ ನೇ ಶತಮಾನಕ್ಕೆ ಅನ್ವಯಿಸಬಹುದು. ಈ ದೇವಾಲಯದ ಎಡಬದಿಗೆ ಕೋಟೆಯ ಮುಖ್ಯ ಪ್ರವೇಶದ್ವಾರಕ್ಕೆ ಹೋಗುವ ಹಾದಿಯಲ್ಲಿ ಪಾರ್ಶ್ವನಾಥ ಬಸದಿ ಇದೆ. ಇದನ್ನು ಇತ್ತೀಚೆಗೆ ಜೀರ್ಣೋದ್ಧಾರ ಮಾಡಲಾಗಿದೆ. ಗರ್ಭಗೃಹದಲ್ಲಿ ಪಾರ್ಶ್ವನಾಥ, ಅನಂತನಾಥ ಹಾಗೂ ಪದ್ಮಾವತಿ ಯಕ್ಷಿಯ ವಿಗ್ರಹಗಳಿವೆ. ನವರಂಗದಲ್ಲಿ ಧರಣೇಂದ್ರ ಯಕ್ಷ ಹಾಗೂ ಪದ್ಮಾವತಿ ಯಕ್ಷಿಯ ಸುಂದರ ಶಿಲ್ಪಗಳು ಹಾಗೂ ಭಿನ್ನಗೊಂಡಿರುವ ಬಾಹುಬಲಿಯ ಶಿಲ್ಪಗಳಿದ್ದು ಇವುಗಳನ್ನು ಸನಿಹದ ಬಿಳಿಬೆಟ್ಟದಿಂದ ತಂದವುಗಳೆಂದು ಹೇಳಲಾಗುತ್ತದೆ.

## ಪ್ರವಾಸೋದ್ಯಮ ಇಲಾಖೆ

**ಧ್ಯೇಯ:**ರಾಜ್ಯದಲ್ಲಿ ವಿಶ್ವದರ್ಜೆಯ ಪ್ರವಾಸಿ ಸೌಲಭ್ಯಗಳನ್ನು ಕಲ್ಪಿಸುವುದು, ಪ್ರಕೃತಿ/ವನ್ಯಜೀವಿ, ಸಾಹಸ, ಸಂಸ್ಕೃತಿ, ಆರೋಗ್ಯ, ನಗರ, ಕ್ಷೇಮ, ಆಧ್ಯಾತ್ಮಿಕ ಹಾಗೂ ಇತರೆ ಪ್ರವಾಸೋದ್ಯಮ ಉತ್ಪನ್ನಗಳಲ್ಲಿ ಮಾನವ ಸಂಪನ್ಮೂಲ ಹೆಚ್ಚಿಸುವ ಸಂಬಂಧ ಪರಿಣಾಮಕಾರಿ ಮಾರುಕಟ್ಟೆ ಯೋಜನೆಗಳು ಹಾಗೂ ಕಾರ್ಯಕ್ರಮಗಳಿಗೆ ಬೆಂಬಲ ನೀಡುವುದು.

**ಉದ್ದೇಶಗಳು:** ರಾಜ್ಯಕ್ಕೆ ಹೆಚ್ಚು ಪ್ರವಾಸಿಗರನ್ನು ಆಕರ್ಷಿಸಲು ರಾಜ್ಯದ ಪ್ರಮುಖ ಪ್ರವಾಸಿ ತಾಣಗಳನ್ನು ಕುರಿತಂತೆ ದೇಶೀಯ ಹಾಗೂ ವಿದೇಶೀಯ ಮಾರುಕಟ್ಟೆಗಳಲ್ಲಿ ಪ್ರವಾಸೋದ್ಯಮ ಉತ್ತೇಜನ ಮತ್ತು ಪ್ರಚಾರ ಕೈಗೊಳ್ಳುವುದು.ಪ್ರವಾಸಿ ತಾಣಗಳ ಅಂತಿಮ ಹಂತದ ರಸ್ತೆ ಅಭಿವೃದ್ಧಿಪಡಿಸುವುದು ಮತ್ತು ಪ್ರವಾಸಿಗರಿಗೆ ಮೂಲ ಸೌಲಭ್ಯಗಳನ್ನು ಕಲ್ಪಿಸುವುದು.ಪ್ರವಾಸೋದ್ಯಮ ಸಂಬಂಧಿ ಉತ್ಪನ್ನಗಳಾದ ಆತಿಥ್ಯ ಹಾಗೂ ಪ್ರವಾಸ ಕ್ಷೇತ್ರಗಳಲ್ಲಿ ಬೆಳವಣಿಗೆ ಹಾಗೂ ಅಭಿವೃದ್ಧಿಪಡಿಸಲು ಹೂಡಿಕೆಗಳನ್ನು ಉತ್ತೇಜಿಸುವುದು.

**ಪ್ರವಾಸೋದ್ಯಮ – ಸಾಂಸ್ಥಿಕ ಚೌಕಟ್ಟು:** ಪ್ರವಾಸೋದ್ಯಮ ಇಲಾಖೆ: ಕರ್ನಾಟಕದಲ್ಲಿ ಪ್ರವಾಸೋದ್ಯಮ ಉತ್ತೇಜಿಸಲು ಸಾಂಸ್ಥಿಕ ರಚನೆಯನ್ನು ಹೊಂದಲಾಗಿದೆ. ಪ್ರವಾಸೋದ್ಯಮ ಇಲಾಖೆಯು ನೂತನ ಪ್ರವಾಸಿ ಸೌಲಭ್ಯಗಳನ್ನು ಕಲ್ಪಿಸುವುದು, ಪ್ರವಾಸೋದ್ಯಮ ಉತ್ತೇಜನ ಮತ್ತು ಪ್ರಚಾರ, ಹೂಡಿಕೆದಾರರಿಗೆ ವಿನಾಯಿತಿ ನೀಡಿ ಪ್ರೋತ್ಸಾಹಿಸುವುದು ಹಾಗೂ ಸಾಮರ್ಥ್ಯ ವೃದ್ಧಿಸುವುದು.

**ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ:** ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮವು ಪ್ರವಾಸಿ ತಾಣಗಳನ್ನು ಜನಪ್ರಿಯಗೊಳಿಸಲು ಪ್ರವಾಸಿಗರಿಗೆ ಬಜೆಟ್ ದರ್ಜೆಯ ಹೋಟೆಲ್‌ಗಳನ್ನು ನಡೆಸುವುದು ಹಾಗೂ ಪ್ರವಾಸಿ ಪ್ಯಾಕೇಜ್‌ಗಳನ್ನು ಒದಗಿಸುತ್ತದೆ.

**ಅರಣ್ಯ ವಸತಿ ಮತ್ತು ವಿಹಾರಧಾಮಗಳ ಸಂಸ್ಥೆ:** ಸರ್ಕಾರಿ ಒಡೆತನದ ಸಂಸ್ಥೆಯಾದ ಅರಣ್ಯ ವಸತಿ ಮತ್ತು ವಿಹಾರಧಾಮಗಳ ಕಂಪನಿಯು ಪರಿಸರ ಪ್ರವಾಸೋದ್ಯಮ ರೆಸಾರ್ಟ್‌ಗಳನ್ನು ನಡೆಸುತ್ತದೆ. ಸದರಿ ಸಂಸ್ಥೆಯು ಮೈಸೂರು ಜಿಲ್ಲೆಯ ಕಬಿನಿ ಪ್ರದೇಶದಲ್ಲಿ ನಡೆಸುತ್ತಿರುವ ಪ್ರವಾಸಿ ಸೌಲಭ್ಯವು ವಿಶ್ವ ದರ್ಜೆಯಾಗಿರತ್ತದೆ.

**ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರ:** ದಸರಾವನ್ನು ಜನಪ್ರಿಯಗೊಳಿಸಲು ಕರ್ನಾಟಕದ ಕಲೆ, ಕುಶಲ ಕಲೆ, ಸಂಸ್ಕೃತಿಯನ್ನು ಜನಪ್ರಿಯಗೊಳಿಸುವ ವಸ್ತುಪ್ರದರ್ಶನಗಳನ್ನು ಆಯೋಜಿಸಲು ಮೈಸೂರಿನಲ್ಲಿ ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರವನ್ನು ಸ್ಥಾಪಿಸಲಾಗಿದೆ.

**ಇಂದು ಪ್ರವಾಸೋದ್ಯಮ:** ೧) ಯು.ಎನ್.ಡಬ್ಲ್ಯೂ.ಟಿ.ಒ ಸಂಸ್ಥೆಯು ಸರ್ವೆ ನಡೆಸಿರುವ ಪ್ರಕಾರ ಪ್ರವಾಸೋದ್ಯಮವು ವಿಶ್ವದಲ್ಲಿಯೇ ಹೆಚ್ಚು ಉದ್ಯೋಗ ಸೃಷ್ಟಿಸುವ ಹಾಗೂ ಆದಾಯ ವೃದ್ಧಿಸುವ ವಲಯವಾಗಿರುತ್ತದೆ. ೨) ವಯಸ್ಸು, ಲಿಂಗ, ವಿದ್ಯಾಭ್ಯಾಸ, ಕೌಶಲ್ಯಗಳ ಹಾಗೂ ನೆಲ ಭೇದವಿಲ್ಲದೆ ಸಮಾಜದ ಎಲ್ಲರಿಗೂ ಪ್ರವಾಸೋದ್ಯಮ ಉದ್ಯೋಗಾವಕಾಶವನ್ನು ಒದಗಿಸುತ್ತದೆ, ೩) ಚೀನಾ ಹೊರತುಪಡಿಸಿ ಇಡೀ ವಿಶ್ವದಲ್ಲಿಯೇ ಉದ್ಯೋಗಾವಕಾಶ ಸೃಷ್ಟಿಸುವ ಉದ್ಯಮಗಳಲ್ಲಿ ಪ್ರವಾಸೋದ್ಯಮವು ಎರಡನೆಯ ಸ್ಥಾನದಲ್ಲಿ ಇದೆ ಎಂಬುದಾಗಿ ವರ್ಲ್ಡ್ ಟ್ರಾವೆಲ್ ಟೂರಿಸಂ ಕೌನ್ಸಿಲ್ ಸಂಸ್ಥೆಯು ತಿಳಿಸಿರುತ್ತದೆ (೮.೯ ಮಿಲಿಯನ್), ೪) ಯೋಜನಾ ಆಯೋಗದ ಅಂದಾಜಿನ ಪ್ರಕಾರ ೧೨ನೇ ಪಂಚವಾರ್ಷಿಕ ಯೋಜನೆ ಅವಧಿಯಲ್ಲಿ ಪ್ರವಾಸೋದ್ಯಮ ವಲಯದಲ್ಲಿ ೨೪.೫ ಮಿಲಿಯನ್ ನೇರ ಹಾಗೂ ಪರೋಕ್ಷ ಉದ್ಯೋಗ ಸೃಷ್ಟಿಸಲು ಅವಕಾಶಗಳಿರುತ್ತವೆ.

**ಕರ್ನಾಟಕದಲ್ಲಿ ಪ್ರವಾಸೋದ್ಯಮ:** ಕರ್ನಾಟಕ ರಾಜ್ಯದಲ್ಲಿ ಪ್ರವಾಸೋದ್ಯಮ ಇಲಾಖೆಯು ಈವರೆಗೆ ೩೧೯ ಪ್ರವಾಸಿ ತಾಣಗಳನ್ನು ಗುರುತಿಸಿರುತ್ತದೆ.ರಾಜ್ಯದಲ್ಲಿ ಪ್ರವಾಸಿ ತಾಣಗಳಲ್ಲಿ ಮೂಲಸೌಕರ್ಯಗಳನ್ನು ಅಭಿವೃದ್ಧಿಪಡಿಸಲು ಪ್ರವಾಸೋದ್ಯಮ ಇಲಾಖೆಯು ತನ್ನ ಮೊದಲ ಆದ್ಯತೆಯನ್ನು ನೀಡುತ್ತಿದೆ. ಪ್ರವಾಸೋದ್ಯಮ ಇಲಾಖೆಯು ಪ್ರವಾಸಿ ಸೌಲಭ್ಯಗಳನ್ನು ಕಲ್ಪಿಸಲು ಹಲವಾರು ಕ್ರಮಗಳನ್ನು ವಹಿಸಿರುತ್ತದೆ. ಇದರ ಜೊತೆಗೆ ಪ್ರವಾಸೋದ್ಯಮ ಪ್ರಚಾರ ಹಾಗೂ ಉತ್ತಮ ಮಾರುಕಟ್ಟೆ ದೊರಕಿಸಿಕೊಳ್ಳಲು ತನ್ನ ಎಲ್ಲಾ ಪ್ರಯತ್ನಗಳನ್ನು ಒಟ್ಟುಗೂಡಿಸಿ ಕ್ರಮವಹಿಸುತ್ತಿದೆ.

**ಕರ್ನಾಟಕ ಪ್ರವಾಸೋದ್ಯಮದ ಸಾಮರ್ಥ್ಯ:** ಕರ್ನಾಟಕ ರಾಜ್ಯವು ಪಾರಂಪರಿಕ ತಾಣಗಳು, ವನ್ಯಜೀವಿಧಾಮಗಳು ಹಾಗೂ ಗಿರಿಧಾಮಗಳನ್ನು ಒಳಗೊಂಡ ರಾಜ್ಯವಾಗಿರುತ್ತದೆ. ೩೨೦ ಕಿ.ಮೀ. ಉದ್ದದ ಕರಾವಳಿ ತೀರ ಪ್ರದೇಶವನ್ನೂ ಸಹ ಹೊಂದಿರುತ್ತದೆ. ರಾಜ್ಯವು ವಿಶ್ವಪರಂಪರಾ ಪ್ರವಾಸಿ ತಾಣಗಳಾದ ಹಂಪಿ, ಪಟ್ಟದಕಲ್ಲು ಹಾಗೂ ಪಶ್ಚಿಮ ಘಟ್ಟಗಳನ್ನು ಹೊಂದಿರುತ್ತದೆ. ಇದರ ಜೊತೆಗೆ ಶ್ರೀರಂಗಪಟ್ಟಣ, ಬೇಲೂರು, ಡೆಕ್ಕನ್ ಸುಲ್ತಾನೇಟ್, ಹೊಯ್ಸಳ ವಾಸ್ತುಶಿಲ್ಪಗಳನ್ನೂ ಯುನೆಸ್ಕೊ ಸಂಸ್ಥೆಯ ತಾತ್ಕಾಲಿಕ ವಿಶ್ವಪರಂಪರಾ ತಾಣಗಳ ಪಟ್ಟಿಯಲ್ಲಿ ಸೇರಿಸಲಾಗಿದೆ. ಕರ್ನಾಟಕ ರಾಜ್ಯವು ವೈದ್ಯಕೀಯ ಹಾಗೂ ವೆಲ್‌ನೆಸ್ ಪ್ರವಾಸೋದ್ಯಮಕ್ಕೆ ಹೆಸರಾಗಿರುತ್ತದೆ. ಹಂಪಿ, ಪಟ್ಟದಕಲ್ಲು, ಬಾದಾಮಿ, ಐಹೊಳೆ, ವಿಜಯಪುರ, ಮೈಸೂರು, ಹಾಸನ, ಶ್ರೀರಂಗಪಟ್ಟಣಗಳಂತಹ ಪರಂಪರಾ ತಾಣಗಳು ರಾಜ್ಯದಲ್ಲಿರುತ್ತವೆ. ಕಬಿನಿ, ಬನ್ನೇರುಘಟ್ಟ, ದುಬಾರೆ, ದೇವಭಾಗ್, ಭದ್ರಾ ಮುಂತಾದ ಪರಿಸರ ಪ್ರವಾಸೋದ್ಯಮ ಪ್ರದೇಶಗಳನ್ನು ಹೊಂದಿರುತ್ತದೆ.

ಕೊಡಗು, ಶಿವಮೊಗ್ಗ ಜಿಲ್ಲೆಯಲ್ಲಿರುವ ಆಗುಂಬೆ ಮತ್ತು ಕೊಡಚಾದ್ರಿ, ಚಿಕ್ಕಮಗಳೂರು ಜಿಲ್ಲೆಯ ಕೆಮ್ಮಣ್ಣುಗುಂಡಿ, ಚಿಕ್ಕಬಳ್ಳಾಪುರ ಜಿಲ್ಲೆಯ ನಂದಿಬೆಟ್ಟ ಹಾಗೂ ಚಾಮರಾಜನಗರ ಜಿಲ್ಲೆಯ ಬಿಳಿಗಿರಿರಂಗನ ಬೆಟ್ಟ ಮುಂತಾದ ಗಿರಿಧಾಮ ಪ್ರದೇಶಗಳನ್ನು ಹೊಂದಿರುತ್ತದೆ. ರಾಜ್ಯವು ಧಾರ್ಮಿಕ ಪ್ರವಾಸೋದ್ಯಮಕ್ಕೆ ಪ್ರಸಿದ್ಧವಾಗಿದ್ದು, ಶ್ರವಣಬೆಳಗೊಳ, ಧರ್ಮಸ್ಥಳ, ಶೃಂಗೇರಿ, ಕುಕ್ಕೆ ಸುಬ್ರಮಣ್ಯ, ಮೇಲುಕೋಟೆ ಮುಂತಾದ ಧಾರ್ಮಿಕ ಕ್ಷೇತ್ರಗಳನ್ನು ರಾಜ್ಯವು ಒಳಗೊಂಡಿರುತ್ತದೆ.

**ಪ್ರವಾಸೋದ್ಯಮ ಇಲಾಖೆಯು ಕೈಗೊಂಡಿರುವ ಯೋಜನೆಗಳು:** ಇಲಾಖೆಯು ಕೆಳಕಂಡ ಯೋಜನೆಗಳನ್ನು ಜಾರಿಗೊಳಿಸುತ್ತಿದೆ, ೧) ಪ್ರವಾಸಿ ತಾಣಗಳಲ್ಲಿ ಮೂಲಸೌಲಭ್ಯಗಳು ಹಾಗೂ ಅಂತಿಮ ಹಂತದ ರಸ್ತೆ ಅಭಿವೃದ್ಧಿ ಒಳಗೊಂಡಂತೆ ಪ್ರವಾಸಿ ಸೌಲಭ್ಯಗಳನ್ನು ಒದಗಿಸುವುದು, ೨) ಪ್ರವಾಸೋದ್ಯಮ ನೀತಿ ಅಡಿಯಲ್ಲಿ ಪ್ರವಾಸೋದ್ಯಮ ಯೋಜನೆಗಳಲ್ಲಿ ಹೂಡಿಕೆ ಮಾಡುವ ಖಾಸಗಿ ಹೂಡಿಕೆದಾರರಿಗೆ ವಿನಾಯಿತಿ ಹಾಗೂ ರಿಯಾಯಿತಿಗಳನ್ನು ನೀಡಿ ಪ್ರೋತ್ಸಾಹಿಸುವುದು, ೩) ರಾಜ್ಯದಲ್ಲಿರುವ ಪ್ರವಾಸಿ ತಾಣಗಳನ್ನು ಜನಪ್ರಿಯಗೊಳಿಸಲು ಉತ್ತೇಜನ ಹಾಗೂ ಪ್ರಚಾರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು, ೪) ಫಲಾನುಭವಿ ಆಧಾರಿತ ಕಾರ್ಯಕ್ರಮಗಳು, ೫) ಭಾರತ ಸರ್ಕಾರದ ಪ್ರವಾಸೋದ್ಯಮ ಮಂತ್ರಾಲಯದ ಧನ ಸಹಾಯದಲ್ಲಿ ಪ್ರವಾಸಿ ಸೌಲಭ್ಯಗಳ ಅಭಿವೃದ್ಧಿ.

**ಪ್ರವಾಸಿ ತಾಣಗಳನ್ನು ದತ್ತು ನೀಡುವ ಯೋಜನೆ:** ಈ ವಿಶಿಷ್ಟ ಯೋಜನೆಯನ್ನು ಕಾರ್ಪೋರೇಟ್ ಸಂಸ್ಥೆಗಳ ಸಹಯೋಗದೊಂದಿಗೆ ಕೈಗೆತ್ತಿಕೊಳ್ಳಲಾಗಿದೆ. ಮೊದಲ ಹಂತದಲ್ಲಿ ೪೬ ಪ್ರವಾಸಿ ತಾಣಗಳನ್ನು ಕಾರ್ಪೋರೇಟ್ ಸಂಸ್ಥೆಗಳಿಗೆ ದತ್ತು ನೀಡಲು ಗುರುತಿಸಲಾಗಿದೆ. ಈ ಯೋಜನೆಯಡಿ ರಂಗನತಿಟ್ಟು ಪಕ್ಷಿಧಾಮವನ್ನು ಸಂಡೂರು ಮ್ಯಾಂಗನೀಸ್ ಅಂಡ್ ಐರನ್ ಓರ್ಸ್ ಸಂಸ್ಥೆಯು, ವೆಂಕಟಪ್ಪ ಆರ್ಟ್ ಗ್ಯಾಲರಿಯನ್ನು ತಸ್ವೀರ್ ಫೌಂಡೇಷನ್ ಸಂಸ್ಥೆಯು, ಬೆಂಗಳೂರು ಮ್ಯೂಸಿಯಂ ಅನ್ನು ಜಿಂದಾಲ್ ಫೌಂಡೇಷನ್, ಬೇಲೂರು ಮತ್ತು ಹಳೇಬೀಡುಗಳನ್ನು ಕಾಫಿಡೇ ಹೋಟೆಲ್ಸ್ ಅಂಡ್ ರೆಸಾರ್ಟ್ಸ್ ಪ್ರೈ.ಲಿ. ಸಂಸ್ಥೆಯು ಮತ್ತು ಲಾಲ್‌ಬಾಗ್‌ನ್ನು ಬೆಂಗಳೂರು ಛೇಂಬರ್ಸ್ ಆಫ್ ಇಂಡಸ್ಟ್ರೀಸ್ ಅಂಡ್ ಕಾಮರ್ಸ್ ಸಂಸ್ಥೆಗಳೊಂದಿಗೆ ತ್ರಿಪಕ್ಷೀಯ ಒಪ್ಪಂದಗಳಿಗೆ ಸಹಿ ಮಾಡಲಾಗಿದೆ. ಇತರೆ ಪ್ರವಾಸಿ ತಾಣಗಳನ್ನು ಕಾರ್ಪೋರೇಟ್‌ಗಳಿಗೆ ದತ್ತು ನೀಡಲು ಪ್ರಯತ್ನ ಮುಂದುವರೆದಿದೆ.

**ಪ್ರವಾಸಿ ಮಿತ್ರ ಯೋಜನೆ:** ಪ್ರವಾಸಿಗರ ಸುರಕ್ಷತೆ ಹಾಗೂ ರಕ್ಷಣೆಯ ದೃಷ್ಟಿಯಿಂದ "ಪ್ರವಾಸಿ ಮಿತ್ರ" (ಟೂರಿಸ್ಟ್ ಪೊಲೀಸ್) ಯೋಜನೆಗೆ ಗೃಹ ಇಲಾಖೆ ಹಾಗೂ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ಹಾಗೂ ಗೃಹ ಇಲಾಖೆಗೆ ಸಹಯೋಗದೊಂದಿಗೆ ಚಾಲನೆ ನೀಡಲಾಗಿದೆ. ೧೭೪ ಹೋಂಗಾರ್ಡ್ಸ್ ಸಿಬ್ಬಂದಿಗೆ ಕೆ.ಎಸ್.ಟಿ.ಡಿ.ಸಿ. ತರಬೇತಿ ನೀಡಿ ೧೩ ಜಿಲ್ಲೆಗಳಲ್ಲಿರುವ ಪ್ರಮುಖ ಪ್ರವಾಸಿ ತಾಣಗಳಿಗೆ ನಿಯೋಜಿಸಲಾಗಿದೆ.

**ನೂತನ ಪ್ರವಾಸೋದ್ಯಮ ನೀತಿ ೨೦೧೫-೨೦:** ಇಲಾಖೆಯು ನೂತನ ಪ್ರವಾಸೋದ್ಯಮ ನೀತಿ ೨೦೧೫-೨೦ ನ್ನು ಜಾರಿಗೊಳಿಸಿರುತ್ತದೆ. ಸದರಿ ನೀತಿಯಲ್ಲಿ ಪ್ರವಾಸೋದ್ಯಮ ವಲಯದಲ್ಲಿ ೨೦ ಪ್ರವಾಸಿ ಉತ್ಪನ್ನಗಳನ್ನು ಖಾಸಗಿ ಹೂಡಿಕೆಗಾಗಿ ಉತ್ತೇಜನಕ್ಕಾಗಿ ಗುರುತಿಸಲಾಗಿದೆ.

**ಪ್ರವಾಸಿ ಪ್ಯಾಕೇಜ್‌ಗಳು:** ಮೈಸೂರಿನಿಂದ ವಿವಿಧ ಪ್ರವಾಸಿ ತಾಣಗಳಿಗೆ ಪ್ರವಾಸ ಪ್ಯಾಕೇಜ್‌ಗಳನ್ನು ಪ್ರಾರಂಭಿಸಲು ಕೆ.ಎಸ್.ಟಿ.ಡಿ.ಸಿಯು ಆರು ನೂತನ ಡಿಲಕ್ಸ್ ಬಸ್ಸುಗಳನ್ನು ಹಾಗೂ ಕಲಬುರಗಿ, ವಿಜಯಪುರ ಜಿಲ್ಲೆಗಳಲ್ಲಿ ವಾರಾಂತ್ಯದಲ್ಲಿ ಪ್ಯಾಕೇಜ್ ಪ್ರವಾಸಗಳನ್ನು ಪ್ರಾರಂಭಿಸಲು ಮೂರು ಡಿಲಕ್ಸ್ ಬಸ್ಸುಗಳನ್ನು ಖರೀದಿಸಿರುತ್ತದೆ.

**ಹೋಂ ಸ್ಟೇ:** ಇಲಾಖೆಯಲ್ಲಿ ಬಾಕಿ ಇರುವ ಹೋಂ ಸ್ಟೇ ಅರ್ಜಿಗಳನ್ನು ಸರ್ವೆ ಮಾಡಲು ಸರ್ಟಿಫಿಕೇಷನ್ ಏಜೆನ್ಸಿಯನ್ನು ನೇಮಿಸಲಾಗಿದೆ. ಸರ್ವೆ ಮುಗಿದ ಮೇಲೆ ಏಜೆನ್ಸಿಯು ೨೩೨ ಹೋಂ ಸ್ಟೇಗಳಿಗೆ ಶಿಫಾರಸ್ಸು ಮಾಡಿರುತ್ತದೆ. ಇದರಲ್ಲಿ ೪೧ ಹೋಂ ಸ್ಟೇಗಳು ಗೋಲ್ಡ್ ಕ್ಯಾಟಗರಿಗೂ ಹಾಗೂ ೧೯೨ ಹೋಂ ಸ್ಟೇಗಳು ಸಿಲ್ವರ್ ಕ್ಯಾಟಗರಿಗೂ ಸೇರಿರುತ್ತವೆ.ಹೋಂಸ್ಟೇಗಳನ್ನು ಪ್ರಮಾಣೀಕರಿಸಲು ನೂತನ ಮಾರ್ಗಸೂಚಿಗಳನ್ನು ಸರ್ಕಾರದ ಆದೇಶ ಸಂಖ್ಯೆ:ಟಿಎಫ್/೪೨೯/ಟಿಟಿಟಿ/೨೦೧೫, ದಿನಾಂಕ ೩೧-೦೩-೨೦೧೬ ರಲ್ಲಿ ಹೊರಡಿಸಲಾಗಿದೆ. ಇನ್ನು ಮುಂದೆ ಇಲಾಖೆಯು ಯಾವುದೇ ಹೋಂಸ್ಟೇಗಳಿಗೆ ಪ್ರಮಾಣ ಪತ್ರಗಳನ್ನು ನೀಡುವುದಿಲ್ಲ. ಸದರಿ ಪ್ರಮಾಣ ಪತ್ರಗಳನ್ನು ರೇಟಿಂಗ್ ಏಜೆನ್ಸಿಗಳೇ ನೀಡುತ್ತವೆ.

**ರೇಟಿಂಗ್ ಏಜೆನ್ಸಿಗಳ ನೇಮಕಾತಿ:** ವಿವಿಧ ಪ್ರವಾಸೋದ್ಯಮ ಉತ್ಪನ್ನಗಳಿಗೆ ರೇಟಿಂಗ್ ನೀಡಲು ಪ್ರವಾಸೋದ್ಯಮ ಇಲಾಖೆಯು ಬ್ರೀಕ್ ವರ್ಕ್ ರೇಟಿಂಗ್ ಇಂಡಿಯಾ ಲಿಮಿಟೆಡ್, ಇಂಡಿಯಾ ರೇಟಿಂಗ್ & ರಿಸರ್ಚ್ ಪ್ರೈವೇಟ್ ಲಿಮಿಟೆಡ್, ಸ್ಮೇರಾ ರೇಟಿಂಗ್ ಲಿಮಿಟೆಡ್, ಕ್ರೆಡಿಟ್ ಎನಾಲಿಸಸ್ & ರಿಸರ್ಚ್ ಲಿಮಿಟೆಡ್ (ಕೇರ್) ಎಂಬ ನಾಲ್ಕು ರೇಟಿಂಗ್ ಏಜೆನ್ಸಿಗಳನ್ನು ಎಂಪ್ಯಾನಲ್ ಮಾಡಲಾಗಿದೆ.

**ಕರ್ನಾಟಕ ಪ್ರವಾಸೋದ್ಯಮ ವ್ಯಾಪಾರ (ಸೌಲಭ್ಯ ಮತ್ತು ನಿಯಂತ್ರಣ) ವಿಧೇಯಕ:** ಪ್ರವಾಸೋದ್ಯಮ ವಲಯದಲ್ಲಿ ಸೇವೆ ಸಲ್ಲಿಸುವವರು, ಪ್ರವಾಸಿ ಮಾರ್ಗದರ್ಶಿಗಳು, ಪ್ರವಾಸಿ ಮಿತ್ರರು ಮುಂತಾದವರಿಗೆ ನೋಂದಾವಣಿ ಸೌಲಭ್ಯ ಕಲ್ಪಿಸಲು ಕರ್ನಾಟಕ ಪ್ರವಾಸೋದ್ಯಮ ಮೂಲ (ಸೌಲಭ್ಯ ಮತ್ತು ನಿಯಂತ್ರಣ) ವಿಧೇಯಕ-೨೦೧೫ನ್ನು ಜಾರಿಗೆ ತರಲಾಗಿದೆ. ಈ ಕಾಯಿದೆಯಿಂದಾಗಿ ಪ್ರವಾಸಿಗರಿಗೆ ಉತ್ತಮ ಸೇವೆ ಲಭ್ಯವಾಗುವುದರ ಜೊತೆಗೆ ಪ್ರವಾಸಿಗರ ಶೋಷಣೆ ಕಡಿಮೆಯಾಗುತ್ತದೆ. ಈ ಸಂಬಂಧ ನಿಯಮಗಳನ್ನು ರಚಿಸಲಾಗುತ್ತಿದೆ.

**ಕಾವೇರಿ ಆರ್ಟ್ ಗ್ಯಾಲರಿ ಸ್ಥಾಪನೆ:** ಕರ್ನಾಟಕ ಜ್ಞಾನ ಆಯೋಗದ ಶಿಫಾರಸ್ಸಿನ ಪ್ರಕಾರ ಪ್ರವಾಸೋದ್ಯಮ ಇಲಾಖೆಯು ರೂ.೩೫೦.೦೦ ಲಕ್ಷಗಳ ಅಂದಾಜು ವೆಚ್ಚದಲ್ಲಿ ಮೈಸೂರಿನಲ್ಲಿರುವ ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಆವರಣದಲ್ಲಿರುವ ಕನ್ನಡ ಕಾರಂಜಿ ಕಟ್ಟಡದಲ್ಲಿ ರಾಷ್ಟ್ರೀಯ ವಿಜ್ಞಾನ ಅಕಾಡೆಮಿ ಅಲಹಾಬಾದ್ ಹಾಗೂ ರಾಷ್ಟ್ರೀಯ ವಸ್ತು ಸಂಗ್ರಹಾಲಯ, ಕೋಲ್ಕತ್ತ ಸಂಸ್ಥೆಗಳ ಸಹಯೋಗದೊಂದಿಗೆ ಸ್ಥಾಪಿಸಲು ಕ್ರಮವಹಿಸಲಾಗಿದೆ. ಈ ಸಂಬಂಧ ದಿನಾಂಕ ೦೬-೦೧-೨೦೧೬ ರಂದು ಪರಸ್ಪರ ಒಡಂಬಡಿಕೆಗೆ ಸಹಿ ಮಾಡಲಾಗಿದೆ. ಕಾಮಗಾರಿ ಪ್ರಾರಂಭಿಸಲು ರೂ.೫೦.೦೦ ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

**ಕರ್ನಾಟಕ ಪ್ರವಾಸೋದ್ಯಮ ಮೂಲ ಸೌಲಭ್ಯ ನಿಗಮ (ಕೆ.ಟಿ.ಐ.ಎಲ್):** ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಪ್ರವಾಸೋದ್ಯಮ ಇಲಾಖೆಯ ಮಂಚೂಣಿ ಯೋಜನೆಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಕರ್ನಾಟಕ ಪ್ರವಾಸೋದ್ಯಮ ಮೂಲ ಸೌಲಭ್ಯ ನಿಗಮವನ್ನು ಸ್ಥಾಪಿಸಲಾಗಿದೆ.

**ಕಾವೇರಿ ಪ್ರವಾಸೋದ್ಯಮ ಅಭಿವೃದ್ಧಿ ಪ್ರಾಧಿಕಾರ:** ಕಾವೇರಿ ನದಿ ಪಾತ್ರದಲ್ಲಿ, ಮೈಸೂರು, ಮಂಡ್ಯ, ಚಾಮರಾಜನಗರ, ಕೊಡಗು ಹಾಗೂ ರಾಮನಗರ ಜಿಲ್ಲೆಯ ಕನಕಪುರ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ಪ್ರವಾಸಿ ತಾಣಗಳಲ್ಲಿ ಮೂಲ ಸೌಲಭ್ಯಗಳನ್ನು ಕಲ್ಪಿಸಲು ಕಾವೇರಿ ಪ್ರವಾಸೋದ್ಯಮ ಅಭಿವೃದ್ಧಿ ಪ್ರಾಧಿಕಾರವನ್ನು ರಚಿಸಲಾಗಿದೆ. ಸದರಿ ಪ್ರಾಧಿಕಾರಕ್ಕೆ ೨೦೧೫-೧೬ನೇ ಸಾಲಿನಲ್ಲಿ ರೂ.೧೦೦ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

**ಹೋಟೆಲ್ ಮ್ಯಾನೇಜ್‌ಮೆಂಟ್ ಸಂಸ್ಥೆ:** ಹಂಪಿ, ಕಾರವಾರ ಹಾಗೂ ಕಲಬುರಗಿಯಲ್ಲಿ ರಾಜ್ಯ ಹೋಟೆಲ್ ಮ್ಯಾನೇಜ್‌ಮೆಂಟ್ ಸಂಸ್ಥೆಗಳನ್ನು ಸ್ಥಾಪಿಸಲು ಕ್ರಮವಹಿಸಲಾಗಿದೆ. ಸಮಗ್ರ ಪ್ರವಾಸಿ ಮಾರ್ಗದರ್ಶಿ ತರಬೇತಿ:೨೦೧೫-೧೬ನೇ ಸಾಲಿನಲ್ಲಿ ಸಂವಹನ ಕೌಶಲ್ಯ, ಶಿಷ್ಟಾಚಾರ, ಇತಿಹಾಸ, ಸಂಸ್ಕೃತಿ ಮತ್ತು ವಿದೇಶಿ ಭಾಷೆಗಳಲ್ಲಿ ಮಾತನಾಡುವ ವಿವಿಧ ಕಲೆಗಳನ್ನು ಒಳಗೊಂಡ ಪ್ರವಾಸಿ ಮಾರ್ಗದರ್ಶಿ ತರಬೇತಿ ನೀಡುವ ಯೋಜನೆಯನ್ನು ಜಾರಿಗೊಳಿಸಲಾಗಿದೆ. ಈ ಯೋಜನೆಯನ್ನು ಪ್ರಥಮವಾಗಿ ೫ ವಿಶ್ವವಿದ್ಯಾಲಯಗಳು ಅಂದರೆ, ಮೈಸೂರು, ಬೆಂಗಳೂರು, ಮಂಗಳೂರು, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ ಹಾಗೂ ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿಗಳಲ್ಲಿ ಪ್ರಾರಂಭಿಸಲಾಗಿದೆ. ಈ ಯೋಜನೆಯಡಿ ೨೪೦ ಅಭ್ಯರ್ಥಿಗಳನ್ನು ತರಬೇತಿಗಾಗಿ ಗುರುತಿಸಲಾಗಿದೆ. ಈ ಯೋಜನೆಯನ್ನು ಇತರೆ ಕಾಲೇಜುಗಳಿಗೂ ವಿಸ್ತರಿಸಲಾಗುತ್ತಿದೆ.

**ಪ್ರವಾಸಿ ಪ್ಲಾಜಾ ಹಾಗೂ ನಿರ್ವಚನಾ ಕೇಂದ್ರಗಳು:** ಒಂದೇ ಸೂರಿನಡಿ ಎಲ್ಲಾ ಪ್ರವಾಸಿ ಸೌಲಭ್ಯಗಳನ್ನು ಕಲ್ಪಿಸುವ ಉದ್ದೇಶದಿಂದ ಮೈಸೂರು, ವಿಜಯಪುರ ಹಾಗೂ ಕಾರವಾರಗಳಲ್ಲಿ ಪ್ರವಾಸಿ ಪ್ಲಾಜಾಗಳನ್ನು ನಿರ್ಮಿಸಲು ೨೦೧೫-೧೬ನೇ ಸಾಲಿನಲ್ಲಿ ಮಂಜೂರಾತಿ ನೀಡಲಾಗಿದೆ. ಈ ಯೋಜನೆಯಡಿಯಲ್ಲಿ ಉಪಹಾರ ಗೃಹ, ಕುಡಿಯುವ ನೀರು, ಶೌಚಾಲಯ ಸೌಲಭ್ಯ, ಪಾರ್ಕಿಂಗ್ ಸೌಲಭ್ಯ ಕರಕುಶಲ ಮಳಿಗೆ, ಮಕ್ಕಳ ಆಟದ ಸೌಲಭ್ಯ, ಷಟಲ್ ಬಸ್ ಸೇವೆ ಮುಂತಾದ ಎಲ್ಲಾ ಸೇವೆಗಳನ್ನು ಒದಗಿಸಲಾಗುವುದು.

**ನೂತನ ಬಸ್ಸುಗಳ ಖರೀದಿ:** ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮವು ಪ್ರವಾಸಿ ತಾಣಗಳಿಗೆ ಪ್ರವಾಸಿ ಪ್ಯಾಕೇಜ್‌ಗಳನ್ನು ನಡೆಸುತ್ತಿದ್ದು, ಈ ಸಂಬಂಧ ೨೦ ಹವಾನಿಯಂತ್ರಿತ ಡಿಲಕ್ಸ್ ಬಸ್ಸುಗಳನ್ನು ಖರೀದಿಸಲು ಇಲಾಖೆಯ ಪಾಲಾಗಿ ೭೫% ರಷ್ಟು ಅನುದಾನವನ್ನು ಅಂದರೆ ರೂ.೬೧೭.೭೪ ಲಕ್ಷಗಳನ್ನು ಸದರಿ ಸಂಸ್ಥೆಗೆ ಬಿಡುಗಡೆ ಮಾಡಲಾಗಿದೆ. ಕೆನೋಪಿ ವಾಕ್ ಸೌಲಭ್ಯ ನಿರ್ಮಾಣ: ಉತ್ತರ ಕನ್ನಡ ಜಿಲ್ಲೆಯ ಜೋಯಿಡಾ ತಾಲ್ಲೂಕಿನ ಕ್ಯಾಸಲ್ ರಾಕ್ ವನ್ಯ ಜೀವಿ ವಲಯದಲ್ಲಿ ಅರಣ್ಯ ಇಲಾಖೆಯ ಮೂಲಕ ರೂ. ೭೪.೦೦ ಲಕ್ಷಗಳ ವೆಚ್ಚದಲ್ಲಿ ೪೦೦ ಮೀಟರ್ ಉದ್ದದ ಕೆನೋಪಿ ವಾಕ್ ಸೌಲಭ್ಯವನ್ನು ನಿರ್ಮಿಸಲಾಗುತ್ತಿದೆ. ಈ ಸೌಲಭ್ಯವು ಇಡೀ ದೇಶದಲ್ಲಿಯೇ ಮೊದಲನೆಯದಾಗಿರುತ್ತದೆ.

* * * * *